# ದೇಹ

ಎ. ಪಿ. ಮಾಲತಿ



# ದೇವ

ಎ. ಪಿ. ಮಾಲತಿ

೧೯೯೭

ಕನ್ನಡ ಪ್ರಪಂಚ ಪ್ರಕಾಶನ
ಪುತ್ತೂರು - ೫೭೪ ೨೦೨, ದಕ್ಷಿಣ ಕನ್ನಡ

*DEVA- A social novel in Kannada*
*by A. P. Malathi, "Chethana", Aryapu Post*
*Puttur Taluk, Dakshina Kannada*

*Published by Kannada Prapancha Prakashana*
*Puttur - 574 202 (Dakshina Kannada)*

*First Impression : 1985*

*Second (Student) Edition : 1997*

*Pages : iv + ೧೨೦* *Price : Rs. 22*



ರಕ್ಷಾಕವಚ ವಿನ್ಯಾಸ : ಎಂ. ರಾಮಪ್ರಸಾದ್

ಬೆಲೆ : ರೂಪಾಯಿ ಇಪ್ಪತ್ತೆರಡು

ಮುದ್ರಕರು :

ರಾಜೇಶ್ ಪವರ್ ಪ್ರೆಸ್
ದರ್ಬೆ - 574 202, ಪುತ್ತೂರು, ದ. ಕ.
ದೂರವಾಣಿ : 21696, 21697 ಮತ್ತು 21698 (ನಿವಾಸ)

# ಕಾದಂಬರಿ ಓದುವ ಮೊದಲು

## (ಪ್ರಥಮ ಮುದ್ರಣಕ್ಕೆ ಮುನ್ನುಡಿ)

ಸುಮಾರು ಹನ್ನೆರಡು ವರ್ಷಗಳ ಹಿಂದೆ ರಚಿಸಿದ ನನ್ನ ಈ ಕಾದಂಬರಿ "ದೇವ" ಇಂದು ಪುಸ್ತಕರೂಪದಲ್ಲಿ ನಿಮ್ಮ ಮುಂದಿದೆ. ಈ ದೀರ್ಘ ಅವಧಿಯಲ್ಲಿ ಇದು ಪ್ರಕಟವಾಗದೆ ಅಜ್ಞಾತವಾಗಿ ಏಕೆ ಉಳಿಯಿತೆಂಬ ಅನುಮಾನದ ಪ್ರಶ್ನೆ ಬರುವುದು ಸಹಜ. ನಾನು ಕಾದಂಬರಿ ಕ್ಷೇತ್ರಕ್ಕೆ ಕಾಲಿರಿಸಿದ ಸಮಯದಲ್ಲಿ ಬರೆದ ಈ ಕಾದಂಬರಿ ಅಂದಿನ ಸುಪ್ರಸಿದ್ಧ ವಾರಪತ್ರಿಕೆಯಲ್ಲಿ ಧಾರಾವಾಹಿಗೆ ಸ್ವೀಕೃತವಾಗಿ ಪ್ರಕಟಣೆಗಾಗಿ ಕಾದು ಕುಳಿತಿತ್ತು. ದುರದೃಷ್ಟವೆಂಬಂತೆ ಆ ಪತ್ರಿಕೆ ಹಠಾತ್ತನೆ ನಿಂತುಹೋಯಿತು. ಆದರೆ ಅದರ ಸಹಸಂಪಾದಕರ ಬಳಿ ಕಾದಂಬರಿ ಜೋಪಾನವಾಗಿದ್ದು ಮುಂದೆ ೧೯೮೦ರಲ್ಲಿ ಅವರು ಹೊರಡಿಸಿದ 'ದೀನವಾಣಿ' ಎಂಬ ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಬೆಳಕುಕಂಡಿತು. ಅನಂತರ ಅದನ್ನು ಪುಸ್ತಕರೂಪದಲ್ಲಿ ಪ್ರಕಟಿಸಲು ಏಕೋ ನನಗೆ ಆಸಕ್ತಿ ಇಲ್ಲವಾಯಿತು.

ಕಥೆ-ವಸ್ತು-ತಂತ್ರಗಳ ದೃಷ್ಟಿಗಿಂತ ಇಲ್ಲಿ ಒಂದು ಸಮಸ್ಯೆಯ ಮುಖವನ್ನು ಚಿತ್ರಿಸಲು ಪ್ರಯತ್ನಿಸಿದ್ದೇನೆ. ಈ ಸಮಸ್ಯೆಯನ್ನು ಒಪ್ಪುವ, ಮೆಚ್ಚುವ, ಸ್ವೀಕರಿಸುವ ಮಂದಿ ಬಹಳ ಕಡಿಮೆ ಇರಬಹುದು. ಎಲ್ಲ ವರ್ಗಗಳ ಜನರ ಅಭಿಪ್ರಾಯಗಳಲ್ಲಿ ಭಿನ್ನತೆ ತೋರಬಹುದಾದರೂ ಅದರಲ್ಲೇ ಏಕತೆ ಸಾಧಿಸಿದರೆ ಸಮಸ್ಯೆಯ ನಿವಾರಣೆ ಸುಲಭಸಾಧ್ಯವಾದೀತು.

ಈ ಕಾದಂಬರಿಯಲ್ಲಿ ಬರುವ ಪಾತ್ರಗಳು, ಘಟನೆಗಳು ಕಾಲ್ಪನಿಕವಾದದ್ದು. ಕಾದಂಬರಿಯನ್ನು ಮೊದಲು ಧಾರಾವಾಹಿಯಾಗಿ ಪ್ರಕಟಿಸಿದ 'ದೀನವಾಣಿ' ಪತ್ರಿಕೆಯ ಸಂಪಾದಕರಾದ ಶ್ರೀ ಶಂಕರ ಪಾಟೀಲರಿಗೆ ನನ್ನ ಅನಂತ ಕೃತಜ್ಞತೆಗಳು. ಇದೀಗ ಪುಸ್ತಕರೂಪದಲ್ಲಿ ಪ್ರಕಟಿಸುತ್ತಿರುವ ಸಂತ ಫಿಲೋಮಿನಾ ಕಾಲೇಜಿನ ಕನ್ನಡ ಸಂಘದ ಸಂಚಾಲಕರಾದ ರೆ ಫಾ ಜೆ. ಬಿ. ಡಿ'ಸೋಜ ಅವರಿಗೂ ಮತ್ತು ಅಧ್ಯಕ್ಷರಾದ ಶ್ರೀ ವಿ. ಬಿ. ಮೊಳೆಯಾರ ಅವರಿಗೂ ನನ್ನ ವಂದನೆಗಳು. ಅಂದವಾಗಿ ಮುಖಚಿತ್ರ ಬಿಡಿಸಿದ ಕಲಾವಿದ ಶ್ರೀ ಎಂ. ರಾಮಪ್ರಸಾದ್ ಅವರಿಗೆ ನನ್ನ ಕೃತಜ್ಞತೆಗಳು. ಎಂದಿನಂತೆ ಸಹೃದಯಿ ಓದುಗರು ಈ ಕಾದಂಬರಿಯನ್ನು ಆದರದಿಂದ ಸ್ವಾಗತಿಸುವರೆಂದು ತಿಳಿಯುತ್ತೇನೆ.

ಆರ್ಯಾಪು, ದ. ಕ.
ತಾ. ೫-೨-೧೯೮೫

ಎ. ಪಿ. ಮಾಲತಿ

# ದ್ವಿತೀಯ ಮುದ್ರಣಕ್ಕೆ ಮೊದಲು

ಸಾಮಾಜಿಕ ಸಮಸ್ಯೆಯೊಂದರ ಬಗ್ಗೆ ನಾನು ಬರೆದ "ದೇವ" ಕಾದಂಬರಿ ಪುತ್ತೂರು ಸಂತ ಫಿಲೋಮಿನಾ ಕಾಲೇಜಿನ ಕನ್ನಡ ಸಂಘದ ಮೂಲಕ ಪ್ರಕಟವಾಗಿ ಹನ್ನೆರಡು ವರ್ಷಗಳು ಸಂದಿವೆ. ಈ ವರ್ಷ ಮಂಗಳೂರು ವಿಶ್ವವಿದ್ಯಾನಿಲಯದ ಪ್ರಥಮ ಪದವಿ ತರಗತಿಗಳಿಗೆ ಪಠ್ಯಪುಸ್ತಕವಾಗಿ ಆಯ್ಕೆಯಾಗಿದೆ. ವಿದ್ಯಾರ್ಥಿ ಸಮುದಾಯಕ್ಕೆ ಈ ಕಾದಂಬರಿಯ ವಸ್ತು, ಶೈಲಿ, ಚಿಂತನೆಗೆ ಗ್ರಾಸವಾದೀತು ಎಂಬ ನಂಬಿಕೆ ನನಗಿದೆ. ಪಠ್ಯಪುಸ್ತಕಕ್ಕೆ ಆಯ್ಕೆ ಮಾಡಿದ ಮಂಗಳೂರು ವಿಶ್ವವಿದ್ಯಾನಿಲಯದ ಪಠ್ಯಪುಸ್ತಕ ಸಮಿತಿಯ ಸದಸ್ಯರಿಗೆ ನನ್ನ ಕೃತಜ್ಞತೆಗಳು. ಕಾದಂಬರಿಯ ದ್ವಿತೀಯ ಮುದ್ರಣದ ಪ್ರಕಾಶಕರಾದ ಶ್ರೀ ಬೋಳಂತಕೋಡಿ ಈಶ್ವರ ಭಟ್ಟರಿಗೆ ನನ್ನ ವಂದನೆಗಳು.

ಆರ್ಯಾಪು, ದ. ಕ.
ಮೇ ೨೮, ೧೯೯೭

ಎ. ಪಿ. ಮಾಲತಿ

# ದೇವ

ಕಲ್ಯಾಣಪುರ ಹೊಳೆಯ ಎಡಭಾಗದಲ್ಲಿ ಕಾಣುವ ಹಸಿರು ಬಯಲನ್ನು ದಾಟಿ ಕೆಳಗಿಳಿದು ಮುಂದೆ ನಡೆದರೆ ದೊಡ್ಡ ಅಂಗಳದ ಮಧ್ಯೆ ಒಂದು ಸಣ್ಣ ಮನೆ ಕಾಣಸಿಗುತ್ತದೆ. ಹಳೆಕಾಲದ, ಈಗಿನ ಥಳಕು-ಬೆಳಕು ಒಂದನ್ನೂ ಕಾಣದ ಮಣ್ಣಿನ ಗೋಡೆಯ ತಕ್ಕಮಟ್ಟಿಗೆ ಸುಣ್ಣ ಬಣ್ಣ ಮೆತ್ತಿಕೊಂಡಿದ್ದ ಹಂಚು ಹೊದೆಯಿಸಿದ ಮನೆ. ಹೊರಬಾಗಿಲಿಗೆ ಎದುರುಬದುರಾಗಿರುವ ಮಣ್ಣಿನ ಕಟ್ಟೆಯ ಜಗಲಿ. ಹಳೆಕಾಲದ ಹೆಚ್ಚು ಎತ್ತರವಿಲ್ಲದ ಈ ಬಾಗಿಲಿನ ಮೂಲಕ ಒಳಗೆ ಹೋದರೆ ವಿಶಾಲವಿಲ್ಲದ ಕಡಿಮೆ ಗಾಳಿ-ಬೆಳಕನ್ನು ಹೊಂದಿರುವ ಕೋಣೆಗಳು. ಮಣ್ಣಿನ ನೆಲಗಳಿಗೆ ಹಿಂದೆ ಯಾವಾಗಲೋ ಸಿಮೆಂಟಿನ ಸಾರಣೆ ಮಾಡಿದ್ದರೂ ಈಗ ಅಲ್ಲಲ್ಲಿ ಎದ್ದುಹೋದ ಸಿಮೆಂಟಿನಿಂದಾಗಿ ನೆಲ ಇನ್ನಷ್ಟು ಅಸಹ್ಯ ಕಾಣಿಸುತ್ತಿದೆ. ಹೊರಗಿನ ಕೋಣೆಯಲ್ಲಿ ಒಂದು ಸಣ್ಣ ಪುಸ್ತಕದ ಕಪಾಟು. ಭಗವದ್ಗೀತೆ, ಉಪನಿಷತ್ತು, ಇತರ ಕೆಲವು ವೇದಾಂತ ಪುಸ್ತಕಗಳು ಅಲ್ಲಿವೆ. ಒಂದು ಬರೆಯುವ ಮೂಲೆ ತುಂಡಾದ ಮೇಜು, ಅದರ ಎದುರು ಎರಡು ಭಾರವಾದ ಮರದ ಕುರ್ಚಿಗಳು, ಮುರಿದ ಒಂದು ಸ್ಟೂಲು. ಇವಿಷ್ಟೇ ಹೊರಕೋಣೆಯಲ್ಲಿ ಕಾಣುವ ಬೆಲೆಬಾಳುವ ಸಾಮಾನುಗಳು!

ಮಳೆಗಾಲದ ದಿನಗಳಾದುದರಿಂದ ಹೊರಗಿನ ಗಾಳಿ ಮಳೆಯನ್ನು ತಡೆಯಲು, ಕೋಣೆಗಳನ್ನು ಬೆಚ್ಚಗಿಡಲು ಪ್ರತಿ ಕೋಣೆಯ ಕಿಟಕಿಗಳಿಗೆ ಗೋಣಿಯ ಪರದೆ ಕಟ್ಟಿದ್ದಾರೆ ಮನೆಯವರು. ಆದರೂ ಮಳೆಹನಿ, ಚಳಿಗಾಳಿ ರುಂಮ್ ಎಂದು ಬೀಸಿ ಬರುತ್ತಿದೆ ಒಳಗೆ. ಮೂರು ದಿನಗಳಿಂದಲೂ ಒಂದೇ ಶ್ರುತಿಯಲ್ಲಿ ಸುರಿಯುವ ಮಳೆ, ಬೋಂ-ಸೋಯ್ ಎಂದು ಬೀಸುವ ಬಿರುಗಾಳಿಯಿಂದ ಹೊರಗೆ ತಲೆ, ಕಾಲುಹಾಕಲು ಸಾಧ್ಯವಿಲ್ಲ. ಮನೆಯ ಪಶ್ಚಿಮ ಭಾಗದಲ್ಲಿರುವ ಸಮೃದ್ಧ ಕಾಡು ಮಳೆಯಿಂದ ಸಂಪೂರ್ಣ ಮುಚ್ಚಿಹೋಗಿದೆ. ಅಲ್ಲಲ್ಲಿ ಇರುವ ಸಣ್ಣ-ದೊಡ್ಡ ಕೊರಕಲಿನಿಂದ ಧಾರೆಯಂತೆ ನೀರು ಕೆಳಗಿಳಿದು ಅಂಗಳದ ಬದಿಯಿಂದ ಆಚೆಗೆ ಹರಿದುಹೋಗುತ್ತಿದೆ ರಭಸದಲ್ಲಿ. ಮನೆಯ ಬಲಪಾರ್ಶ್ವದ ಅಡಿಕೆತೋಟ ಮಳೆಯಲ್ಲಿ ಮಿಂದು ಬೀಸುವ ಗಾಳಿಗೆ ತಲೆದೂಗುತ್ತಿದೆ.

ಮನೆಯೆದುರಿನ ಜಗಲಿ ಮೇಲೆ ಸುಮಾರು ಐವತ್ತು ವರ್ಷದ ನೀಳಕಾಯನೊಬ್ಬ ಎಲೆಅಡಿಕೆ ತಟ್ಟೆಯನ್ನು ಕೈಯಿಂದ ಬಡಿಯುತ್ತ ಕುಳಿತಿದ್ದಾನೆ. ಅವನು ತಿಂದು ಉಗುಳಿದ ಎಲೆಅಡಿಕೆಯ ರಸ ರಕ್ತದಂತೆ ಕೆಂಪಾಗಿ ಆ ಮಳೆ ನೀರಿನಲ್ಲಿ ತೇಲುತ್ತಿದೆ. ಆಗಾಗ ಅವನ ಕಣ್ಣುಗಳು ಒಳಬಾಗಿಲಿನತ್ತ ನೋಡುತ್ತಿವೆ ಕುತೂಹಲದಲ್ಲಿ. ಒಳಕೋಣೆಯಲ್ಲಿ ಅದೇ ಆಗ ಬಂದು ಕುಳಿತಿದ್ದಾರೆ ವೃದ್ಧರೊಬ್ಬರು. ಸುಮಾರು ಅರ್ವತ್ತು ಮೀರಿದ ಪ್ರಾಯ. ಕ್ಷೀಣ ದೇಹ. ಮೈತುಂಬ ಹೊದೆದ ರಗ್ಗಿನ ಒಳಗೂ ನಡುಗುತ್ತಿದೆ ಅವರ ದೇಹ. ಒತ್ತರಿಸಿ ಬರುತ್ತಿರುವ ಕೆಮ್ಮನ್ನು ತಡೆದುಕೊಳ್ಳಲು ಪ್ರಯತ್ನಿಸಿದರೂ ಮಳೆಯ ಸದ್ದನ್ನು ಮೀರಿಸಿ ಕೆಮ್ಮುತ್ತಿದ್ದಾರೆ. ಇವತ್ತೆಲ್ಲ ಮಳೆ ಕಡಿಮೆಯಾಗುವ ಲಕ್ಷಣಗಳೂ ಇರಲಿಲ್ಲ. ಹೊರಗೆ ಬಾನಿನಲ್ಲಿ ದಟ್ಟೈಸಿಕೊಂಡಿದ್ದ ಕಪ್ಪು ಮೋಡಗಳ ದಂಡನ್ನು ನೋಡುವ ಇಚ್ಛೆಯಿಂದ ವೃದ್ಧರು ಸದ್ದಾಗದಂತೆ ಕಿಟಕಿಬಾಗಿಲು ತೆರೆದಿದ್ದಾರೆ.

"ಓ.... ಮತ್ತೆ ಕಿಟಕಿ ಹತ್ತಿರ ಬಂದು ಕುಳಿತಿದ್ದೀರಾ ಅಪ್ಪಾ, ರುಂಮ್ ಅಂತ ಚಳಿಗಾಳಿ ಬೀಸ್ತಾ ಇದೆ". ಬದಿಕೋಣೆಯಿಂದ ಬಂದ ಪ್ರಾಯದ ಯುವಕನೊಬ್ಬ ಅವರ ಹತ್ತಿರ ಸರಿದು ಕಿಟಕಿ ಬಾಗಿಲನ್ನು ಭದ್ರಪಡಿಸಿ ಗೋಣಿಪರದೆಯನ್ನೂ ಮುಚ್ಚಿದ, "ನಿಮ್ಮ ಕೋಣೆಗೆ ಹೋಗಿ ರಗ್ಗು ಹೊದೆದು ಸುಮ್ಮನೆ ಮಲಗಿಬಿಡಿ ಅಪ್ಪಾ. ಜ್ವರ ಇವತ್ತೆಲ್ಲ ಬಿಡಲೇ ಇಲ್ಲ ನಿಮ್ಮನ್ನು. ಔಷಧಿ ತೆಗೆದುಕೊಂಡಿರಲ್ಲ. ಕರಿಯನನ್ನು ಕಳುಹಿಸಿದ್ದೇನೆ ಇನ್ನೆರಡು ದಿನಗಳ ಔಷಧಿ ತರಲು".

"ಕಿಟಕಿಯನ್ನು ಸಂಪೂರ್ಣ ತೆಗೆದುಬಿಡು ದೇವ! ಹೊರಗಿರುವ ಅಷ್ಟಷ್ಟು ಬೆಳಕಾದರೂ ಒಳಗೆ ಬರಲಿ. ಆ ತಂಗಾಳಿಯಂತೂ ಬಹಳ ಖುಷಿ. ನನಗಿನ್ನು ಔಷಧಿ ಬೇಡ". ವೃದ್ಧ ಈಶ್ವರಯ್ಯ ತಮ್ಮ ತೋಳನ್ನು ಎತ್ತಿ ತೋರಿಸಿದರು. "ಇಂಜಕ್ಷನ್ ಕೊಟ್ಟು ಕೊಟ್ಟು ರಟ್ಟೆಯೆಲ್ಲ ನೋವು. ಆ ಡಾಕ್ಟರನಿಗೂ ಬುದ್ಧಿಯಿಲ್ಲ. ಕಫ ತುಂಬಿದೆ ಎದೆಯಲ್ಲಿ. ನ್ಯುಮೋನಿಯಾ ಆಗಿದೆ ಅಂತ ಅದೂ ಇದೂ ಸುಳ್ಳು ಬೊಗಳ್ತಾ ಇದ್ದಾನೆ. ಒಂದು ತಿಂಗಳಿನಿಂದ ಔಷಧಿಮಯ ಈ ದೇಹ. ಆಹ್, ಎಂತಹ ಸುಂದರ ಮಳೆಗಾಲ! ಈಗ ಹೀಗೇ ತಿನ್ನಲು ಚಕ್ಕುಲಿಯಿದೆಯೇ ಅಂತ ಕೇಳಿ ಬಾ ನಿನ್ನ ಅಮ್ಮನ ಹತ್ತಿರ".

"ಚಕ್ಕುಲಿಯೇ! ವಾಹ್, ಅದು ಕೆಮ್ಮಿಗೆ ರಾಮಬಾಣ!"

"ನಾಲಿಗೆಯೆಲ್ಲ ಕಹಿ. ಪಥ್ಯ ಮಾಡಿಮಾಡಿ ನಾನು ಸೋತುಹೋದೆ. ಇನ್ನೆಷ್ಟು ದಿನ ಇರ್ತೇನೆ ಹೇಳು, ಹೀಗೆ ಪಥ್ಯಮಾಡಲು? ಆಹಾ, ಈ ಮಳೆಗಾಲ ಎಷ್ಟು ಖುಷಿಕೊಡುತ್ತದೆ ಗೊತ್ತಾ? ವಿವರಿಸಲು ಸಾಧ್ಯವಿಲ್ಲ ನನ್ನಿಂದ. ಪ್ರತಿವರ್ಷವೂ ನೋಡುವ ನೋಟದಲ್ಲಿ ಒಂದಿನಿತೂ ಬದಲಾವಣೆಯಿಲ್ಲ. ಅದೇ ಸೂರ್ಯ, ಅದೇ ಚಂದ್ರ, ಅದೇ ಮಳೆಗಾಲ, ಚಳಿಗಾಲ, ಬೇಸಿಗೆಕಾಲ. ಮನುಷ್ಯ ಮಾತ್ರ ಹುಟ್ತಾನೆ, ಸಾಯ್ತಾನೆ. ಹೂಂ, ದೇವ, ಕಿಟಕಿ ತೆಗಿ, ಬಾಗಿಲು ತೆಗಿ, ಗಾಳಿಬರಲಿ ಒಳಗೆ. ಇನ್ನೂ ಯಾಕೆ ಎಲ್ಲಾ ಮುಚ್ಚಿಕೊಂಡಿದ್ದೇವೆ..."

ದೇವ ಮೌನವಾಗಿ ಇನ್ನೊಂದು ತಲೆದಿಂಬನ್ನು ತಂದು ಅವರಿಗೆ ಒರಗಿ ಕುಳಿತುಕೊಳ್ಳಲು ಸಹಾಯಮಾಡಿದ.

"ಮಳೆಗಾಲವೆಂದರೆ ನನಗಂತೂ ಎಲ್ಲಿಲ್ಲದ ಹಿಗ್ಗು. ಜ್ವರವಿದ್ದರೂ ಮಳೆಗೆ ತಲೆ ಒಡ್ಡೋಣ ಎನಿಸುತ್ತದೆ. ಆಮೇಲೆ ದೇವ, ನಿನಗೊಂದು ಹಾಡು ಗೊತ್ತಿದೆಯೇ?

*"ಹೊರಗೆಲ್ಲಾ ಮಳೆ ಮಳೆ, ಮೈಯೊಳಗೆಲ್ಲಾ ಚಳಿಚಳಿ,*
*ಬಿಸಿಬಿಸಿ ಒಲೆಯ ಮುಂದೆ, ಬೆಚ್ಚನೆಯ ಮಡದಿ*
*ಪಕ್ಕದಲ್ಲಿ! ಚಕ್ಕುಲಿ! ಕೋಡುಬಳೆ ಬಾಯಲ್ಲಿ..."*

ದೇವ ತಾನೂ ಹಾಡನ್ನು ಗುಣುಗುಣಿಸುತ್ತ ನಗುತ್ತಿದ್ದಂತೆ ನಾಗಮ್ಮ ಕೈಯ್ಯಲ್ಲೊಂದು ಸಿಹಿತಿಂಡಿಯ ತಟ್ಟೆ ಹಿಡಿದುಕೊಂಡು ಬಂದರು.

"ಹೋ... ದೇವನಿಗೆ ಎರಡನೇ ಬಾರಿ ಗಂಡುಮಗುವಾಯಿತೆಂದು ಏನು ವಿಶೇಷ ಮಾಡಿದೆ ನಾಗೂ?" ಈಶ್ವರಯ್ಯ ಮಗುವಿನಂತೆ ತಮ್ಮ ಕೈ ಚಾಚಿ ತಟ್ಟೆಯಿಂದ ತಿಂಡಿಯ ತುಂಡು ತೆಗೆದು ಬಾಯಿ ಅಗಲಿಸಿದರು. "ಬಾಳೆಹಣ್ಣಿನ ಹಲ್ವ! ಎಷ್ಟು ರುಚಿಯಾಗಿದೆಯಲ್ಲೇ ಇದು! ದೇವನಿಗೂ ಒಂದಷ್ಟು ಕೊಡು, ತಿನ್ನು ತಿನ್ನು. ಏನೋ, ಎರಡು ಗಂಡುಮಕ್ಕಳ ಹೆಮ್ಮೆಯ ತಂದೆ ನೀನೀಗ. ಹಾಂ, ಅರೆ ಕೃಷ್ಣ, ನೀನೂ ತಿನ್ತಾ ಇದ್ದೀಯ?"

ಮೂರು ವರ್ಷದ ಕೃಷ್ಣ ಚಂಗನೆ ಹಾರಿ ಅಜ್ಜನ ತೊಡೆಯನ್ನೇರಿ ಜೊಲ್ಲಿನ ಮುಖದಲ್ಲೇ ಅವರನ್ನು ಮುತ್ತಿಟ್ಟು ಕಿಲಕಿಲನೆ ನಕ್ಕ. ತುಂಬ ಹಿತವಾಗಿತ್ತು ಆ ನಗೆ. ನಾಗಮ್ಮ ಹೊರಗೆ ಕುಳಿತ ತಮ್ಮ ತಮ್ಮನಾದ ಸದಾನಂದನಿಗೂ ಎರಡು ತುಂಡು ಹಲ್ವ ಕೊಟ್ಟು, "ದೇವನಿಗೆ ಎರಡನೇ ಬಾರಿಯೂ ಗಂಡುಮಗು. ಬಾಯಿ ಸಿಹಿ ಮಾಡಿಕೋ" ಎಂದರು ಪ್ರೀತಿಯಲ್ಲಿ.

"ಹಾಗೋ, ಆಸ್ತಿಗೆ ಎರಡನೇ ವಾರಸುದಾರನ ಆಗಮನ!" ಎಲೆ ಅಡಿಕೆ ರಸವನ್ನು ಜೋರಾಗಿ ಉಗುಳಿ ನಕ್ಕ. "ಇನ್ನೇನು, ಕೃಷ್ಣನಿಗೆ ಆಡಲು, ಜಗಳ ಕಾಯಲು ಇನ್ನೊಬ್ಬ ಹುಟ್ಟಿಬಂದ."

ನಾಗಮ್ಮನ ಹರ್ಷದ ಓಡಾಟ, ನಗೆಯಲ್ಲಿ ತುಂಬಿಹೋಗಿದೆ ಮನೆಯೆಲ್ಲ. ಮೂರು ವರ್ಷದ ಹಿಂದೆ ಕೃಷ್ಣ ಹುಟ್ಟಿದಾಗಲೂ ಅವರು ಇಷ್ಟು ಸಂಭ್ರಮ ಪಟ್ಟಿರಲಾರರು. ಈಗ ಆ ಸಂಭ್ರಮಕ್ಕೆ ಇನ್ನೊಂದು ಕುಚ್ಚು ಸೇರಿದೆ. ಮಕ್ಕಳನ್ನು ಕಾಣದ ಆ ಮನೆಯಲ್ಲಿ ಈಗ ಎರಡು ಮಕ್ಕಳು. ಅವರ ಹೃದಯ ಬಿರಿದುಹೋಗುತ್ತಿದೆ ಸಂತೋಷದಲ್ಲಿ. ಎಲ್ಲಿಯ ಸಂಬಂಧವೋ, ಯಾವ ಋಣವೋ. ಎಂತಹ ಮುತ್ತು ದೊರೆತಿದೆ ತಮಗೆ. ಆದರೆ ಇದು ಬರಿಯ ಮುತ್ತಲ್ಲ, ತಮ್ಮ ಪಾಲಿಗೆ ಅಮೂಲ್ಯ ಸೊತ್ತು. ಇವನನ್ನು ಕಂಡು ಕರುಣೆಯಿಲ್ಲದೆ ಈರ್ಷ್ಯೆಪಟ್ಟು ಹಿಂದಿನಿಂದ ಗೇಲಿಮಾಡಿ ನಕ್ಕವರು ಎಷ್ಟೋ ಜನರು. ಆಸ್ತಿಗಾಗಿ ಹೊಂಚುಹಾಕಿ ಅನಂತರ ಇವನ ಆಗಮನದಿಂದ ನಿರಾಶೆಪಟ್ಟವರು ಅನೇಕರು. ಪಾಪ, ನಿಷ್ಕಳಂಕದ ಈ ಹುಡುಗ ತಮಗಲ್ಲದೆ ಇನ್ನಾರಿಗೂ ಬೆದರುವವನಲ್ಲ. ಇವನಿಂದಲ್ಲವೇ ಈ ಮನೆ ನಂದನವನವಾದದ್ದು.

ಯೋಚಿಸುತ್ತ ನಾಗಮ್ಮ ತುಂಬು ಅಭಿಮಾನ, ಪ್ರೀತಿಯಿಂದ ನೋಡಿದರು ದೇವನನ್ನು. ಆ ಹದಿಹರೆಯದ ಹುಡುಗನೂ ಸಂತೋಷದಲ್ಲಿ ನಗುತ್ತ ಮೈಮರೆತಿದ್ದಾನೆ.

ಪತಿಯತ್ತ ನೋಡಿದರೆ ಅವರು ಕೃಷ್ಣನನ್ನು ತಬ್ಬಿಕೊಂಡು, "ಆಡಿಸಿದಳು ಯಶೋದಾ, ಜಗದೋದ್ಧಾರನಾ..." ಎನ್ನುತ್ತಿದ್ದಾರೆ ತಾಳಹಾಕುತ್ತ. ಅವರೂ ಅದೇ ಹಾಡನ್ನು ಗುನುಗುತ್ತ ಹಲ್ವದ ತಟ್ಟೆಯನ್ನು ದೇವನ ಮುಂದಿರಿಸಿ ಅವನ ಬದಿಯಲ್ಲೇ ಬಂದು ಕುಳಿತರು.

"ಹೋಗಿ ಮಗು ಬಾಣಂತಿಯನ್ನು ನೋಡಿಕೊಂಡು ಬಾ. ನನಗೆ ಇವರನ್ನು ಈ ಜ್ವರದ ಸ್ಥಿತಿಯಲ್ಲಿ ಬಿಟ್ಟು ಬರಲು ಸಾಧ್ಯವಿಲ್ಲ."

"ಅಯ್ಯಮ್ಮಾ." ವೀಳ್ಯದೆಲೆ ತಟ್ಟೆಯೊಂದಿಗೆ ಒಳಗೆ ಬಂದ ಸದಾನಂದ, "ವಾಸುದೇವನ ಸಂಗಡ ನೀನೂ ಹೋಗಿ ಬಾ ಅಕ್ಕ. ಭಾವನನ್ನು ನೋಡಿಕೊಳ್ಳಲು ಇಲ್ಲಿ ನಾನಿದ್ದೇನೆ. ಅಬ್ಬಬ್ಬ, ಎಂತಹ ವ್ಯಾಮೋಹ ಇದು. ಯಾವ ಸಂಬಂಧವಿಲ್ಲದಿದ್ದರೂ ಅವನು ನಿನಗೆ ಮಗ, ಅವನ ಮಗ ನಿನಗೆ ಮೊಮ್ಮಗ! ಹೋಗಿ ನೋಡಿಕೊಂಡು ಬಾ ನಿನ್ನ ಮೊಮ್ಮಗನನ್ನು."

ಈಶ್ವರಯ್ಯ ಮಗನ ಬೆನ್ನು ಚಪ್ಪರಿಸಿ ತಮ್ಮಲ್ಲೇ ನಕ್ಕರು.

*"ಮಗನಿವನೆ ಅಮ್ಮಯ್ಯ ಮಗನಿವನೆ ನನ್ನ*
*ತಡೆಯಲಾರೆನಿವನ ಬಲುಚೇಷ್ಟೆ ನೋಡೆ*
*ಏನೇನು ಕಂಡೆ ಸವಿಗನಸು ಇವನಲ್ಲಿ*
*ಎಲ್ಲ ನಡೆಸಿದನಲ್ಲೆ ಏನು ಹೇಳಲಿ ಮೋಡಿ!"*

"ಆಹಾಹಾ ಸದಾನಂದ, ಹೆಚ್ಚಿಗೆ ಅಸೂಯೆಪಡಬೇಡ. ನಮ್ಮ ದೇವ ಯಾರಿಗೆ ಕಡಿಮೆಯಾಗಿದ್ದಾನೆ? ಏನು ಕೊರತೆ ನೋಡಿದೆ ಇವನಲ್ಲಿ? ಹ್ಹ ಹ್ಹ... ಇವನನ್ನು ಯಾರಿಗೂ ಹೋಲಿಸಲು ಸಾಧ್ಯವಿಲ್ಲ. ಇದು ನಿಶ್ಚಯ."

"ಅವರವರ ಹೋಲಿಕೆ ಅವರವರಿಗೆ ಇದ್ದದ್ದೇ." ಮುಖ ತಿರುವಿದ ಸದಾನಂದ, "ನಿಮ್ಮಂತಹ ತಂದೆತಾಯಿ ದೊರೆತದ್ದು ಅವನ ಪೂರ್ವಪುಣ್ಯ. ಅಲ್ಲವೇನೋ ವಾಸುದೇವ, ನಿಜವಾಗಿಯೂ ನೀನು ಅದೃಷ್ಟವಂತ."

"ಅದೃಷ್ಟವಂತನೇ ಅವನು. ಅನುಮಾನ ಯಾಕೆ? ಇಂತಹ ಒಳ್ಳೆಯ ಮಗ ನಮ್ಮ ಕಡೆ ಯಾರಿದ್ದಾರೆ? ಒಬ್ಬರನ್ನಾದರೂ ತೋರಿಸು."

"ಬೇಕಾದಷ್ಟು ಜನರಿದ್ದಾರೆ. ಹೆತ್ತವರಿಗೆ ಹೆಗ್ಗಣ ಮುದ್ದು, ಸಾಕಿದವರಿಗೆ ಕೋಡಂಗಿಯೂ ಮುದ್ದು."

"ನನ್ನ ದೇವನನ್ನು ಕೋಡಂಗಿ ಅಂದೆಯಾ? ಛೀಛೀ, ಅವನನ್ನು ವಿಮರ್ಶೆ ಮಾಡೋದಕ್ಕೆ ನಿನಗೆಲ್ಲಿದೆ ಯೋಗ್ಯತೆ? ಅಲ್ಲವೇನೋ ಮಗನೇ. ಆಹಾ, ಇವನಾದರೆ ನಿಜವಾದ ದೇವ..."

ದೇವನಿಗೆ ಇಂತಹ ಮಾತುಗಳಿಲ್ಲಿ ಆಸಕ್ತಿಯಿರಲಿಲ್ಲ. ಅಲ್ಲಿಂದೇಳುತ್ತ ಇನ್ನೊಂದು ತುಂಡು ಹಲ್ವವನ್ನು ಬಾಯಿಗೆಸೆದುಕೊಂಡು, "ಅಪ್ಪ, ಕಿಟಕಿ ಬಾಗಿಲು ತೆಗೀಬೇಡಿ. ಇನ್ನೇನು ಸ್ವಲ್ಪ ಹೊತ್ತಿನಲ್ಲಿ ಕರಿಯ ಔಷಧಿ ತರ್ತಾನೆ. ಅಮ್ಮಾ, ನನಗೂ ಈಗಲೇ ಉಪ್ಪಿನಂಗಡಿಗೆ ಹೋಗಲು ಅವಸರವಿಲ್ಲ. ಅಪ್ಪನ ಜ್ವರ ಕಡಿಮೆಯಾದ್ಮೇಲೆ ಇಬ್ಬರೂ ಒಟ್ಟಿಗೆ ಹೋಗಿಬರೋಣ. ಈಗ ಗದ್ದೆ ಹತ್ರ ಒಮ್ಮೆ ಸುತ್ತಿ ಬರ್ತೇನೆ" ಎನ್ನುತ್ತ ಹೊರಮೂಲೆಯಲ್ಲಿದ್ದ ಕೊಡೆ ಬಿಡಿಸಿ ಅಂಗಳಕ್ಕಿಳಿದ.

ಮೊದಲಿನಿಂದಲೂ ದೇವನಿಗೆ ಸದಾನಂದನನ್ನು ಕಂಡರೆ ಮಾರುದೂರ. ತನಗೆ ಯಾವ ಸಂಬಂಧವಿರದಿದ್ದರೂ ತಾಯಿಯ ತಮ್ಮನೆಂಬ ಗೌರವದಲ್ಲಿ ಅವನನ್ನು ಆದರಿಸಬೇಕು, ಉಪಚರಿಸಬೇಕು. ಇದು ಅವನ ಮನಸ್ಸಿಗೆ ವಿರೋಧವಾಗಿ ನೋವು ತಂದರೂ ತಾಯಿ ನೊಂದುಕೊಳ್ಳಬಾರದೆಂದು ಸದಾನಂದ ಮನೆಗೆ ಬಂದರೆ ಆತ್ಮೀಯವಾಗಿ ವರ್ತಿಸುತ್ತಾನೆ. ಕ್ಷೀಣ ಶರೀರದ, ಬಾಗಿದ ಬೆನ್ನಿನ ಆದರೆ ಚುರುಕು ಕಣ್ಣಿನ ಸದಾನಂದ ಪಾಣೆಮಂಗಳೂರಿನಲ್ಲಿ ಸರಕಾರಿ ಪ್ರಾಥಮಿಕ ಶಾಲೆಯ ಉಪಾಧ್ಯಾಯ. ನಾಲ್ಕು ಗಂಡು, ಒಂದು ಹೆಣ್ಣುಮಗುವಿನ ತಂದೆ. ಸ್ವಂತದ್ದಾಗಲಿ, ಪಿತ್ರಾರ್ಜಿತವಾಗಲಿ ಒಂದು ತುಂಡು ಭೂಮಿಯಿಲ್ಲ. ಅವನ ತಂದೆ ಸಂಸ್ಕೃತ ಪಂಡಿತರಾಗಿ ಬದುಕಿರುವಷ್ಟು ದಿನವೂ ಪಾಣೆಮಂಗಳೂರಿನ ಸುತ್ತ-ಮುತ್ತ ಹೆಸರು ಪಡೆದವರು.

ವರ್ಷಕ್ಕೆರಡು ಬಾರಿ ನಾಗಮ್ಮ ತಂದೆ ಮನೆಗೆ ಹೋಗುವಾಗ ಜೊತೆಯಲ್ಲಿ ದೇವನನ್ನು ಕರೆದೊಯ್ಯುವುದು ವಾಡಿಕೆ. ಸುಂದರವಾದ, ಯಾವಾಗಲೂ ಬಣ್ಣದ ಕಾಮನಬಿಲ್ಲುಗಳು ಕಾಣಿಸುವ ಆ ಮುಗ್ಧ ಬಾಲ್ಯದ ದಿನಗಳಲ್ಲಿ ದೇವನಿಗೂ ಅಲ್ಲಿಗೆ ಹೋಗಲು ಎಲ್ಲಿಲ್ಲದ ಸಂಭ್ರಮ. ಅವನ ಸಮವಯಸ್ಕರು ಸದಾನಂದನ ಹಿರಿಯ ಇಬ್ಬರು ಗಂಡು ಮಕ್ಕಳು. ಶಶಿಧರ ಮತ್ತು ವಿಶ್ವಂಭರ ಅವನಿಗಿಂತ ಚಿಕ್ಕವರು. ಅವರೊಡನೆ ಆಟ, ತಿರುಗಾಟ, ಹೊಳೆಯಲ್ಲಿ ಈಜು ಎಲ್ಲವೂ ಅವನಿಗೆ ಇಷ್ಟ. ಬಾಲ್ಯದ ತೆರೆ ಸರಿಯುತ್ತ ಬಂದಂತೆ ಅಲ್ಲಿಯ ವಾತಾವರಣ, ನಂಜಿನ ನುಡಿಗಳು, ವ್ಯಂಗ್ಯೋಕ್ತಿಗಳು ಅವನ ಗಮನಕ್ಕೆ ಬಂದು ಅವರೆಲ್ಲ ತನ್ನನ್ನು ಯಾಕೆ ಹೀಗೆ ನೋಡಿಕೊಳ್ಳುತ್ತಿದ್ದಾರೆ ಎಂಬ ಸ್ಪಷ್ಟ ಅರಿವು ಮೂಡಿ ತನ್ನಲ್ಲೇ ನೊಂದು-ಬೆಂದು ಅಲ್ಲಿಗೆ ಹೋಗುವುದನ್ನು ನಿಲ್ಲಿಸಿಬಿಟ್ಟ. ಚೆಲ್ಲಾಟದ ಹುಡುಗ ಗಂಭೀರನಾದ. ಅಸಹನೀಯ ವೇದನೆಯೆನಿಸತೊಡಗಿತು ಸದಾನಂದನ ಮನೆಯವರು ಯಾರೇ ಬಂದರು. ಅವರೊಂದಿಗೆ ಮಾತೂ ಬೇಡವಾಗಿತ್ತು.

"ಯಾರೇನು ಹೇಳಿದರೂ ನೀನು ತಾಳ್ಮೆಯಿಂದಿರು. ಅವರೇನು ನಿನ್ನನ್ನು ಸಾಕಿ ದೊಡ್ಡವನನ್ನಾಗಿ ಮಾಡಿಲ್ಲವಲ್ಲ" ಈಶ್ವರಯ್ಯ ಸಮಾಧಾನಪಡಿಸಿದರೆ ರೇಗುತ್ತಿದ್ದ.

"ಮಾವ, ಅತ್ತೆ ಏನೋ ಹಿರಿಯರು. ಆದರೆ ಚೋಟುದ್ದ, ಗೇಣುದ್ದ ಪೋರರೂ ನನ್ನನ್ನು 'ಬೀದಿಯಲ್ಲಿ ಬಿದ್ದ ಭಿಕಾರಿ ನೀನು, ಯಾರೋ ನಿನ್ನ ಅಪ್ಪ, ಅಮ್ಮ? ಯಾರಿಗೆ ಹುಟ್ಟಿದ ನಾಯಿಕುನ್ನಿ ನೀನು?' ಎನ್ನುತ್ತಾರೆ ಅಪ್ಪ. ನನಗಂತೂ ಕೇಳಿ ಕೇಳಿ ಸಾಕಾಗಿ ಹೋಗಿದೆ. ಇನ್ನು ಮೇಲೆ ಅಲ್ಲಿಗೆ ಹೋಗುವುದೇ ಇಲ್ಲ."

"ಕುಬೇರನಂತಹ ಆಸ್ತಿ ಸಿಕ್ಕಿದೆ ಅವನಿಗೆ. ಇನ್ನು ನಮ್ಮಲ್ಲಿಗೆ ಬಾರದಿದ್ದರೂ ನಡೆಯುತ್ತದೆ ಬಿಡು" ಸದಾನಂದ ಹೇಳಿದ್ದ ಎಲ್ಲರೆದುರು.

ಅವನ ಸಂಜಿನ ನುಡಿಗಳ ಹಿಂದಿರುವ ಮರ್ಮ ತನಗೆ ಮಾತ್ರ ತಿಳಿದಿದೆ. ಮನೆಯಿಂದ ಹೊರಬಿದ್ದ ದೇವ ತನ್ನ ತಲೆ ಮುತ್ತಿದ್ದ ಆಲೋಚನೆಗಳನ್ನು ಹಿಂದಕ್ಕೆ ತಳ್ಳಲು ಯತ್ನಿಸಿದ.

ಮನೆ ಅಂಗಳದ ಬಲಭಾಗಕ್ಕೆ ದನದ ಕೊಟ್ಟಿಗೆ. ಅಲ್ಲಿ ಊರ ದನಗಳಲ್ಲದೆ ಜರ್ಸಿ, ಸಿಂಧಿ ಜಾತಿಯ ದನಗಳು, ನಾಲ್ಕು ಎಮ್ಮೆಗಳು, ಒಂದು ಬೀಜದ ಹೋರಿ, ಗದ್ದೆ ಹೂಡುವ ಎತ್ತುಗಳು, ಕೋಣಗಳು, ಸಣ್ಣ ಸಣ್ಣ ಕರುಗಳು- ಹೀಗೆ ಕೊಟ್ಟಿಗೆ ತುಂಬಿದೆ. ಬಾಲ್ಯದಿಂದಲೂ ದೇವನಿಗೆ ಕೃಷಿಯಷ್ಟೇ ಜಾನುವಾರುಗಳ ಸಾಕಣೆಯಲ್ಲಿ ಆಸಕ್ತಿ. ಕೆಲವು ವರ್ಷಗಳಿಂದ ಉತ್ತಮ ತಳಿಯ ಹಾಲು ಕರೆಯುವ ದನಗಳನ್ನು ತಂದು ಹಾಲಿನ ಉತ್ಪಾದನೆ ಹೆಚ್ಚಿಸಿಕೊಂಡಿದ್ದಾನೆ. ಇವನು ಕೊಡುವ ನೀರು ಬೆರೆಸದ ತಾಜಾ ಹಾಲಿಗೆ ಕಲ್ಯಾಣಪುರದ ಪೇಟೆಯಲ್ಲಿ ಅಪಾರ ಬೇಡಿಕೆ. ಎಷ್ಟಿದ್ದರೂ ಹಾಲು ಬೇಕು. ಒಂದು ವಾರದ ಹಿಂದೆ ಎರಡು ದನಗಳು ಕರುಹಾಕಿದ್ದು ಮೂರು ಹೊತ್ತು ಅವುಗಳ ಹಾಲು ಕರೆಯಬೇಕು.

ಈಗ ಸಾಯಂಕಾಲ ಮೂರನೇ ಬಾರಿ ಹಾಲು ಕರೆಯುತ್ತಿರುವ ಕೆಲಸದವನನ್ನು ಒಮ್ಮೆ ವಿಚಾರಿಸಿ ಕತ್ತಿ ಹಿಡಿದುಕೊಂಡು ನಡೆದ ಗದ್ದೆಯತ್ತ. ಮಳೆ ಹನಿಯುತ್ತಿತ್ತು ಈಗಲೂ. ಬೇಸಾಯದ ಸಮಯ ಗದ್ದೆಗೆ ಗೊಬ್ಬರ ಹಾಕಲೆಂದು ಎಂಟು ಆಳುಗಳನ್ನು ಬರಹೇಳಿದ್ದರೂ ಇವತ್ತು ಮಳೆಯ ನಿಮಿತ್ತ ಅವರಿಗೆಲ್ಲ ರಜೆ.

ಕಲ್ಯಾಣಪುರದ ಹೊಳೆಯ ಬದಿಯಲ್ಲಿ ದೇವನ ಸೊಗಸಾದ ತೆಂಗಿನ ತೋಟ. ಅದರಿಂದಾಚೆ ಹೊಸ ಫಲ ಬರುವ ಅಡಿಕೆತೋಟ, ಭತ್ತದ ಗದ್ದೆಗಳು. ನಡು ಬೇಸಿಗೆಯಲ್ಲಿಯೂ ನೀರಿನ ಕೊರತೆ ಕಾಣದ ಆಸ್ತಿಯ ಮೈ ಯಾವಾಗಲೂ ಹಸಿರು. ಇತ್ತೀಚೆಗೆ ಕಾಡನ್ನು ಕಡಿದು ಒಂದೂವರೆ ಎಕರೆಯಷ್ಟು ಗದ್ದೆಯನ್ನು ಮಾಡಿಸಿದ್ದು ಅದರಲ್ಲಿ ಪ್ರಥಮ ಬೇಸಾಯ. ತನ್ನ ಸಣ್ಣ ಆಸ್ತಿಯಲ್ಲಿ ಏನೆಲ್ಲ ಬೆಳೆಯಬೇಕೆಂಬ ಹಲವು ಯೋಚನೆ, ಯೋಜನೆಗಳು.

ಅಷ್ಟರಲ್ಲಿ ಸದಾನಂದನೂ ಬಂದ ಅಲ್ಲಿಗೆ. ಅವನ ಚುರುಕು ಕಣ್ಣುಗಳು ಸೂಕ್ಷ್ಮವಾಗಿ ನೋಡುತ್ತಿವೆ ಸುತ್ತಲೂ. ಹೊಸದಾಗಿ ಕಡಿದು ಮಾಡಿಸಿದ ಕೆಂಪು ಗದ್ದೆ ಆಕರ್ಷಿಸಿತು ಅವನನ್ನು. ಅದರಾಚೆ ತಲೆ ಎತ್ತಿ ನಿಂತ ಬಾಳೆತೋಟ. ಕ್ರಮವಾಗಿ ಸಾಲುಗುಂಡಿಗಳನ್ನು ತೆಗೆದು ನೆಟ್ಟ ಬಾಳೆಗಿಡಗಳಲ್ಲಿ ಹೆಚ್ಚಿನವು ಫಲಹೊತ್ತು ನಿಂತಿವೆ. ಕೆಲವಂತೂ ಆಳೆತ್ತರದ ಗೊನೆಗಳು. ಸದಾನಂದ ಬಾಳೆತೋಟದಲ್ಲಿ ಅತ್ತಿತ್ತ ತಿರುಗಿ ಗೊನೆಗಳನ್ನು ಕೈಯಿಂದ ಮುಟ್ಟಿ ಮುಟ್ಟಿ ಮನದಣಿದ. "ಮಳೆಗಾಲದಲ್ಲಿಯೂ ಹೇಗೆ ಕಾಯಿ ಬಿಟ್ಟಿವೆ. ಅಯ್ಯಮ್ಮೋ, ನನ್ನ ದೃಷ್ಟಿ ಮುಟ್ಟುತ್ತಲ್ಲ" ಎಂದು ತನ್ನ ಕೈಬೆರಳನ್ನು ಕಚ್ಚಿಕೊಂಡ.

"ಒಂದು ಬೆರ್ಚಪ್ಪನನ್ನು ತಂದು ನಿಲ್ಲಿಸು" ಎಂದೂ ಸಲಹೆ ಕೊಟ್ಟ. ತೆಂಗಿನ ಮರಗಳನ್ನು ನೋಡಿದವನ ಬಾಯಿ ಅಗಲವಾಗಿ ಹೋಯಿತು.

"ಎಷ್ಟೊಂದು ತೆಂಗುಗಳು! ಏನು ಚೆಂದ. ನಮ್ಮಲ್ಲಿ ಎರಡು ರೂಪಾಯಿಗೆ ಒಂದು ತೆಂಗಿನಕಾಯಿ ಕ್ರಯಕ್ಕೆ ತೆಗೆದು ಉಣ್ಣಬೇಕು. ನಿಂಗೇನಪ್ಪ ಹೇಗೆ ಬೇಕಾದರೂ ಉಪಯೋಗಿಸಬಹುದು. ಸರಕಾರ ಕೊಡುವ ಸಹಾಯಧನದಲ್ಲಿ ಗದ್ದೆ ಕಡಿಸಿದ್ದಿ. ಅಪ್ಪನ ಹಣ ನೀರಿನಂತೆ ಖರ್ಚುಮಾಡಿ ಬೇಸಾಯ, ಕೃಷಿ ಮಾಡಿಸಿದ್ದಿ. ಮೆಚ್ಚಬೇಕು ನಿನ್ನನ್ನು."

"ಸರಕಾರದ ಸಹಾಯಧನ ಬಹಳವಾಯ್ತು. ಒಂದು ಎಕರೆ ಗದ್ದೆ ಕಡಿಸಿದರೆ ಐವತ್ತು ರೂಪಾಯಿಗಳಂತೆ ಐದು ವರ್ಷದ ಕಂತಿನಲ್ಲಿ ಬೇಸಾಯಗಾರನಿಗೆ ಸರಕಾರ ಸಾಲ ಕೊಡುತ್ತದೆ. ಸಾಕೇ ಇಷ್ಟು?" ದೇವ ಕೆರಳಿ ನುಡಿದ. "ಇಡೀ ದಿನವೆಲ್ಲ ಕೆಲಸದವರ ಜೊತೆ ಇದ್ದು ಗದ್ದೆ ಕಡಿಸಿದ ನನ್ನ ಶ್ರಮಕ್ಕೆ ಬೆಲೆಯಿಲ್ಲ. ಅಲ್ನೋಡಿ, ಆ ಭಾಗ ಇನ್ನೂ ಸಮತಟ್ಟು ಆಗಿಲ್ಲ. ಕಣ ತೆಗೆದಿಲ್ಲ. ಮೊದಲ ಬೇಸಾಯದಲ್ಲಿ ಎಷ್ಟು ಗೊಬ್ಬರ ಹಾಕಿದರೂ ಸಾಲದು."

ಸದಾನಂದನ ಲಕ್ಷ್ಯ ಹೊಳೆಯ ಪೂರ್ವಭಾಗದ ಕಾಡಿನತ್ತ ಹರಿಯಿತು. ಇತ್ತೀಚೆಗೆ ಅಲ್ಲಿ ಹೊಸ ಗೇರುಕೃಷಿ ಮಾಡಿಸಿದ್ದಾನೆ. ಕೆಲವು ಕಾಡುಮರಗಳಿಗೆ ಒಳ್ಳೆಮೆಣಸಿನ (ಕರಿಮೆಣಸು) ಬಳ್ಳಿ ನೆಡಿಸಿದ್ದಾನೆ. ಉತ್ತಮ ಜಾತಿಯ ಮಾವಿನ ಮರಗಳೂ ಕಣ್ಣು ಕುಕ್ಕಿದವು. ದೇವನ ಕೃಷಿದಾಹ ಮೆಚ್ಚುವಂತಹದು. ಇವನದೇ ಪ್ರಾಯದ ತನ್ನ ಇಬ್ಬರು ಗಂಡುಮಕ್ಕಳಿಗೆ, ಶಶಿಧರನಿಗೆ ಈ ಬುದ್ಧಿ ಇಲ್ಲ. ಕೃಷಿಗೆ ಹಣವೊಂದೇ ಸಾಲದು, ಅಲ್ಲಿ ದುಡಿಯುವ ಉತ್ಸಾಹವೂ ಬೇಕು. ದೇವನಿಗಿರುವ ಉತ್ಸಾಹ ತನಗೂ ಇಲ್ಲ.

"ಏನಪ್ಪ ನಿನ್ನ ಅದೃಷ್ಟ. ಈಶ್ವರಭಾವ ಮಾಡಿದ ಹಣ, ಚಿನ್ನದಂತಹ ಭೂಮಿ ಸಿಕ್ಕಿದೆ. ಇಲ್ಲಿ ಮರದ ಕೊರಡು ಚಿಗುರಿ ಬೆಳೆ ಬೆಳೆಯಬಲ್ಲದು."

"ಹಾಗೆಂದು ಕೂತಿರ್‍ತೇನೆ ತಣ್ಣಗೆ. ಭೂಮಿತಾಯಿ ಚಿನ್ನ ಕೊಡಲಿ ನೋಡೋಣ. ಹಗಲು ರಾತ್ರೆ ಕೆಲಸದವರ ಸಂಗಡ ನಾವೂ ದುಡೀಬೇಕು ಕತ್ತೆ ಹಾಗೆ. ಬೆಳೆದುದರಲ್ಲಿ ಮುಕ್ಕಾಲು ಪಾಲು ಕೆಲಸದವರಿಗೆ ಸಂಬಳ ಹಂಚಲು ಬೇಕು. ನಿಮಗೆ ವಾರಕ್ಕೊಂದು ದಿನ ರಜೆಯಿದೆ, ನಮಗೆ ಅದೂ ಇಲ್ಲ."

ಪುನಃ ಮಳೆಹನಿಗಳು ದೊಡ್ಡದಾಗಿ ಬೀಳಲಾರಂಭಿಸಿದವು. "ನಾನಂತೂ ಪಟ್ಟಣ ದವನು. ನೌಕರಿಯಿಂದ ಬರುವ ಸಂಬಳದಲ್ಲಿ ಒಂದು ಚೂರೂ ಆಸ್ತಿ ಮಾಡಲು ನನಗಾಗಲಿಲ್ಲ. ಶಶಿಧರ, ವಿಶ್ವಂಭರರು ಶುದ್ಧ ಸೋಂಬೇರಿಗಳು. ನಿನ್ನ ಹಾಗೆ ಕೃಷಿಕ ರಾದರೆ ಹೇಗೆ ಅಂತ ನನ್ನ ಆಲೋಚನೆ."

"ಬೇಡ ಮಾವ, ಈ ಹಳ್ಳಿಗಾಡು, ಕೆಸರು ಗದ್ದೆ, ಕೆಲಸದವರ ಸಂಗಡ ಒರಟುತನ, ಮೂರು ಹೊತ್ತೂ ಕೆಲಸ ಇವೆಲ್ಲ ಯಾಕೆ? ಚೆನ್ನಾಗಿ ಓದಿಸಿ. ಎಲ್ಲಿಯಾದರೂ ನೌಕರಿ ಸಿಕ್ಕೀತು."

"ನೀನು ಹೇಳಿದ್ದು ನಿಜ. ಹಿರಿಯವರಿಬ್ಬರ ಚಿಂತೆ ನನಗಿಲ್ಲ. ಒಬ್ಬ ದಿಲ್ಲಿಯಲ್ಲಿ, ಇನ್ನೊಬ್ಬ ಇಲ್ಲೇ ಮಂಗಳೂರಿನಲ್ಲಿ ದೊಡ್ಡ ಕೆಲಸದಲ್ಲಿದ್ದಾರೆ. ಇಬ್ಬರೂ ರ್‍ಯಾಂಕ್ ವಿದ್ಯಾರ್ಥಿಗಳು. ಆದರೆ ಕಿರಿಯವರಿಬ್ಬರಿದ್ದಾರಲ್ಲ ಮಂದಬುದ್ಧಿಯವು. ನಿನ್ನಂತಹದೇ ಆಸ್ತಿಯನ್ನು ಅವರಿಗೋಸ್ಕರ ಹುಡುಕ್ತಾ ಇದ್ದೇನೆ ಎಷ್ಟೋ ವರ್ಷಗಳಿಂದ."

"ಆಸ್ತಿಗಳಿಗೇನು ಬರಗಾಲವಿಲ್ಲ, ಸಿಕ್ಕೀತು."

"ಹೀಗೆ ನೀರಿನ ಆಶ್ರಯವಿರುವ ಭೂಮಿ ಸಿಗಬೇಕಲ್ಲ. ವಾಸುದೇವ, ನೀನೆಂದರೆ ನನಗೆ ಮೊದಲಿನಿಂದಲೂ ಅಕ್ಕರೆ. ಶ್ರಮಜೀವಿಯಾದ ನೀನು ಅದೆಷ್ಟು ಕೆಲಸ ಮಾಡಿಸಿದ್ದಿ ಭಾವನ ಈ ಭೂಮಿಯಲ್ಲಿ. ಅವರು ನಿನ್ನ ಮೇಲೆ ಎಂತಹ ವಿಶ್ವಾಸವಿರಿಸಿದ್ದರೋ ನಾನರಿಯೆ. ಹಸುಬುದ್ಧಿಯ ಹುಡುಗ ನೀನು." ಸದಾನಂದ ಭುಜ ಹಾರಿಸಿ ಪಿಸುಧ್ವನಿ ತೆಗೆದ, "ಒಂದು ವಿಷಯ ಕೇಳಲೇ? ಭಾವ ಈ ಎಲ್ಲ ಭೂಮಿಯನ್ನು ಯಾರ ಹೆಸರಿಗೆ ಬರೆದಿದ್ದಾರಂತೆ?"

ಪ್ರಶ್ನೆ ಬಂದತ್ತ ತಲೆ ಎತ್ತಿ ಆ ತೀಕ್ಷ್ಣ ಕಣ್ಣುಗಳನ್ನು ದಿಟ್ಟಿಸಿದ. ಇವತ್ತೇಕೆ ಬಂದಿತು ಈ ಪ್ರಶ್ನೆ? ಕೊಂಕು ಬುದ್ಧಿಯವ.

"ನನಗಂತೂ ಭಾವನ ಮೇಲೆ ನಂಬಿಕೆಯಿಲ್ಲ. ಅವರು ನಿನ್ನನ್ನು ಮುದ್ದಿನ ಮಗ ಅಂತ ಮೊದ್ದಾಗಿ ಸಾಕಿರಬಹುದು. ಹಾಗೆಂದು ಸಂಪೂರ್ಣ ಆಸ್ತಿಯನ್ನು ನಿನಗೇ ಬರೆದು ಹಾಕುವಷ್ಟು ಹುಚ್ಚರಲ್ಲ. ಪಾಪ, ನೀನು ಇವೆಲ್ಲ ನಿನ್ನದೆಂದು ತಿಳಿದು ರಾತ್ರೆ ಹಗಲು ಕಷ್ಟಪಡುತ್ತಿದ್ದೀಯ. ಇದರಲ್ಲಿ ನಿನಗೊಂದು ತುಣುಕು ಭೂಮಿ ಸಿಗದೆ ಹೋದರೆ ಏನ್ಮಾಡ್ತಿ?"

"ಅಪ್ಪ ಈ ವಿಷಯದಲ್ಲಿ ಏನಾದರೂ ನಿಮ್ಮ ಹತ್ತಿರ ಹೇಳಿದರೇನು? ಅಥವಾ ಇದು ನಿಮ್ಮ ಸ್ವಂತ ಸೃಷ್ಟಿಯ ಮಾತೋ?" ಕಣ್ಣಿನ ತುದಿಯಲ್ಲಿ ಸದಾನಂದನನ್ನು ನೋಡುತ್ತ ಅವನೆಂದ, "ಅಪ್ಪನನ್ನು ನಿಮಗಿಂತ ಚೆನ್ನಾಗಿ ನಾನು ಬಲ್ಲೆ. ಅವರಿಗೆ ತಮ್ಮ ಬಾಂಧವರ ಮೇಲೆ ವಿಶ್ವಾಸ ಅಷ್ಟಕ್ಕಷ್ಟೇ".

"ಅಬ್ಬ, ಅಹಂಕಾರದ ಮಾತೇನು ನಿನ್ನದು?"

"ಅಹಂಕಾರ ಎಂದುಕೊಳ್ಳಿ. ಅಪ್ಪ ನನಗೆ ಸೂಜಿಮೊನೆಯಷ್ಟು ಭೂಮಿ ಕೊಡದಿದ್ದರೂ ಬೇಸರವಿಲ್ಲ ಬಿಡಿ. ಋಣವಿರುವ ತನಕ ನಾನು ಇಲ್ಲಿರುವವನು. ನಾನು ಮಾತ್ರವಲ್ಲ, ನೀವೂ ಈ ಭೂಮಿಯ ಋಣವಿರುವ ತನಕ ಇರ್ತೀರ. ನನ್ನದೆಂಬ ತೃಪ್ತಿಯಲ್ಲಿ ಇಲ್ಲಿದ್ದೇನೆ. ಇನ್ನು ಮುಂದಕ್ಕೂ ಹೀಗೇ ಇರಬಲ್ಲೆ."

"ಆದರೂ ಆಸ್ತಿ ವಿಷಯದಲ್ಲಿ ನನಗ್ಯಾಕೋ ಅನುಮಾನ."

"ಯಾಕೆ ಹಾಗೊಂದು ಬಡಕೊಳ್ತಾ ಇದ್ದೀರಿ. ನನಗೇ ಅದರ ಚಿಂತೆಯಿಲ್ಲ. ಇನ್ನು ನಿಮಗ್ಯಾಕೆ ವ್ಯಥೆ? ಆದರೆ ಈ ಭೂಮಿ ನಿಮಗೆ ಸಿಗುತ್ತದೆ, ಸಿಕ್ಕೀತು ಎಂಬ ಹಗಲುಗನಸು ಮಾತ್ರ ಬೇಡ."

ದೇವನ ಮುಖದಲ್ಲಿ ಉಕ್ಕಿಬಂದ ಕೋಪವನ್ನು ನೋಡಿದ ಸದಾನಂದ ಮಾತು ನಿಲ್ಲಿಸಿದ. "ಹೋಗಲಿ ಬಿಡು ಆ ವಿಷಯ. ಏಯ್... ನಿನ್ನ ಆಳುಗಳ ಹತ್ತಿರ ಹೇಳಿ ನಾಲ್ಕು ಸೀಯಾಳ ತೆಗಿಸಿ ಹಾಕ್ಸೋ ನನಗಾಗಿ. ಇಲ್ಲಿಯ ಮರಗಳನ್ನು ನೋಡಿದರೆ ಹೊಟ್ಟೆಯಲ್ಲಿ ಏನೋ ಒಂದು ತರಹ..."

"ಸಂಕಟವಾಗುತ್ತದೆ ಅಲ್ಲ." ಮೃದುವಾಗಿ ನಕ್ಕ ದೇವ. "ಮಳೆಯಲ್ಲಿ ತೆಂಗಿನ ಮರವೇರಿ ಕಾಯಿಕೀಳುವುದು ಸುಲಭವಲ್ಲ. ಮಳೆ ಕಡಿಮೆಯಾದರೆ ತೆಗೆಸೋಣ. ಪಾಪ, ಬಿಸಿಲಿನ ಬೇಗೆಯಲ್ಲವೇ? ಕುಡಿದುಕೊಳ್ಳಿ ಬೇಕಾದಷ್ಟು."

## ೨

"ಶಾಂತಾಕಾರಂ ಭುಜಗಶಯನಂ, ಪದ್ಮನಾಭಂ ಸುರೇಶಂ" ದೇವರ ಕೋಣೆಯಿಂದ ಕೃಷ್ಣನ ಸ್ವರ ಕೇಳಿಸಿತು.

ಈಶ್ವರಯ್ಯನವರಿಗೆ ಔಷಧಿ ಮತ್ತು ಮಾತ್ರೆ ಕೊಟ್ಟು ತಾನೇ ಅವರ ಎದೆಗೆ ಶಾಖ ಕೊಡುತ್ತ ಅವರ ಬದಿಯಲ್ಲಿ ಕುಳಿತಿದ್ದ ದೇವ. ಅವನ ಮನಸ್ಸು ಸಾಯಂಕಾಲ ಸದಾನಂದ ಹೇಳಿದ ವಿಷಯ ಮೆಲುಕುಹಾಕುತ್ತಿತ್ತು. ಈ ವರೆಗೂ ಆಸ್ತಿಯ ವಿಷಯದಲ್ಲಿ ಒಂದಿನಿತಾದರೂ ಅನುಮಾನ ಬಂದಿಲ್ಲ. ಈ ಮನೆ, ಮಣ್ಣು, ನೀರು ಇಲ್ಲಿಯ ಕಣಕಣಗಳಲ್ಲಿ ಬೆರೆತುಹೋಗಿದೆ ಅವನ ಜೀವ. ಪ್ರತಿಯೊಂದು ಹಸಿರುಗಿಡ, ಫಲಪುಷ್ಪಗಳಿಗೂ ಅವನು ಚಿರಪರಿಚಿತ. ಇವೆಲ್ಲ ತನ್ನದು, ತಾನೊಬ್ಬನೇ ಇದರ ಉತ್ತರಾಧಿಕಾರಿ ಎಂದು ಅವನಿಗೆಂದೋ ತಿಳಿದಿದೆ. ಆದರೆ ಸದಾನಂದನಿಗೇಕೆ ಇಂತಹ ಅನುಮಾನ ಬಂದಿತು? ಅಪ್ಪ ಎಲ್ಲೋ ತನಗೆ ತಿಳಿಯದಂತೆ ಆಸ್ತಿಯ ರಿಕಾರ್ಡನ್ನು ತಿದ್ದಿರಬೇಕು. ತನ್ನ ಈ ಅನುಮಾನವನ್ನು ಅವರ ಇಂದಿನ ಅನಾರೋಗ್ಯದ ಸ್ಥಿತಿಯಲ್ಲಿ ಕೇಳುವುದಾದರೂ ಹೇಗೆ?

ಕಣ್ಣುಮುಚ್ಚಿ ಮಲಗಿದ ಈಶ್ವರಯ್ಯನವರಿಗೆ ಅವನ ಮನಸ್ಸು ಅರಿವಾಗಿರಬೇಕು, "ಕಪಾಟಿನಲ್ಲಿ ನನ್ನ ಆಸ್ತಿಯ ರಿಕಾರ್ಡು ಇದೆ. ಅದನ್ನೊಮ್ಮೆ ನೀನು ನೋಡಿಬಿಡು. ನನ್ನೆಲ್ಲ ಆಸ್ತಿಯನ್ನು ನಿನ್ನ ಹೆಸರಿಗೆ ಬರೆದುಹಾಕಿದ್ದೇನೆ. ಅನುಮಾನ ಪಡಬೇಡ" ಎಂದರು ಕೆಮ್ಮುತ್ತ.

ನಾಚಿಕೆಯಿಂದ ಕುಗ್ಗಿಹೋಯಿತು ದೇವನ ಶರೀರ. ಈಶ್ವರಯ್ಯ ಅವನನ್ನು ತಮ್ಮತ್ತ ಎಳೆದುಕೊಳ್ಳುತ್ತ ಮೆಲ್ಲನೆ ನಕ್ಕರು. "ದೇವ, ನಿಜ ಹೇಳಬೇಕೆಂದರೆ ನಾನೊಬ್ಬ ಮುಠ್ಠಾಳ. ನಾಗುವಿಗೂ ನನ್ನ ವಿಷಯ, ಅಲ್ಲಲ್ಲ.... ನಿನ್ನ ವಿಷಯ ತಿಳಿದಿಲ್ಲ. ನಾನೇ ಹೇಳಿಲ್ಲ. ಇಷ್ಟು ವರ್ಷಗಳಿಂದಲೂ ನನ್ನ ಹೃದಯದಲ್ಲಿ ಅಡಗಿಹೋದ ಬಹುದೊಡ್ಡ ವಿಷಯ."

"ನನಗೆ ಗೊತ್ತು. ಅಮ್ಮ ಆಸ್ತಿ ವಿಷಯದಲ್ಲಿ ತಕರಾರು ಮಾಡಿರಬೇಕು. ಮೊದಲೇ ಹೇಳಿಬಿಡ್ತೇನೆ ಅಪ್ಪಾ, ಅಮ್ಮನ ಮನಸ್ಸು ಎಂದಿಗೂ ನೋಯಬಾರದು."

"ಅವಳಿಗೆ ನಿನ್ನ ಮೇಲೆ ವಿಶ್ವಾಸವಿದೆ. ನಿನ್ನನ್ನೇ ನಂಬಿದ್ದಾಳೆ. ಆದರೆ ಸದಾನಂದ ಅವಳ ಕಿವಿಯಲ್ಲಿ ಒಂದೇ ಮಂತ್ರದ ಶಿದಿ ಊದ್ತಾ ಇದ್ದಾನೆ ಅಂತ ಕಾಣುತ್ತದೆ. ಅವನಿಗೆ ನಮ್ಮ ಆಸ್ತಿ ಮೇಲೆ ಕಣ್ಣು."

ದೇವನಿಗೆ ಎಂದೋ ತಿಳಿದ ವಿಷಯ. "ಮಗ ಅಂತ ವಾಸುದೇವನನ್ನು ಹೆಚ್ಚಿಗೆ ತಲೆಮೇಲೆ ಹೊರಬೇಡ ಅಕ್ಕ" ಸದಾನಂದ ಸಮಯ ಸಿಕ್ಕಿದಾಗಲೆಲ್ಲ ಹೇಳುವ ಮಾತು, "ಎಲ್ಲಾ ಅವನ ಹೆಸರಿಗೆ ಬರೆದುಹಾಕಬೇಡಿ. ನಾಳೆ ಮದುವೆ ಆದಾಕ್ಷಣ ಅವನು ನಿಮ್ಮಿಂದ ಬೇರೆ ಆಗಬಲ್ಲ. ನಾನು ಹೀಗೆ ಹೇಳಿದೆ ಅಂತ ಬೇಸರಿಸಬೇಡ. ಅವನು ನಿನಗ್ಯಾವ ರಕ್ತಸಂಬಂಧಿ? ನಿಮ್ಮದೇ ಆದ ಸ್ವಂತ ಭೂಮಿ, ನಗದು ಹಣ ನಿಮ್ಮ ಹತ್ತಿರ ಇಟ್ಟುಕೊಳ್ಳುವುದೇ ಕ್ಷೇಮಕರ."

"ನಮಗಿನ್ನೇನು ಬೇಕು ಮುದಿಪ್ರಾಯದಲ್ಲಿ? ಅವನು, ಅವನ ಮಕ್ಕಳೇ ನಮಗೆ ಗತಿ."

"ಹಸುಬುದ್ಧಿಯ ನಿನಗೆ ಎಲ್ಲರೂ ಒಳ್ಳೆಯವರೇ. ಈ ಒಳ್ಳೆತನವೇ ನಿನಗೆ ಮುಳ್ಳಾದೀತು. ಎಲ್ಲಾ ಅವನ ಹೆಸರಿಗೆ ಬರೆದುಹಾಕಿ ನೀನೂ, ಭಾವನೂ ಭಿಕಾರಿಗಳಾಗ ಬಾರದಲ್ಲ."

"ಅದಕ್ಕಾಗಿ ನಿನಗೇಕೆ ಚಿಂತೆ?" ಏಕಾಂತದಲ್ಲಿ ನಾಗಮ್ಮನನ್ನು ಸಮಾಧಾನ ಪಡಿಸಿದ್ದರು ಈಶ್ವರಯ್ಯ. "ತಮ್ಮನ ಮಾತಿಗೆ ಕಿವಿಕೊಡಬೇಡ. ಯಾರು ಹೇಗಿದ್ದಾರೆ, ಯಾವ ಬಣ್ಣದವರು ಎಂದು ನನಗೆ ಚೆನ್ನಾಗಿ ಗೊತ್ತು."

ಈಗ ನಾಲ್ಕು ವರ್ಷಗಳಿಂದೀಚೆಗೆ ಈಶ್ವರಯ್ಯ ತಮಗಾಗಿ ಸ್ವಲ್ಪ ಭೂಮಿ ಇಟ್ಟು ಉಳಿದುದನ್ನೆಲ್ಲ ದೇವನ ಹೆಸರಿಗೆ ಬರೆದುಹಾಕಿದ್ದಾರೆ. ಆಮೇಲೆ ಅವರೆಂದೂ ಆ ರಿಕಾರ್ಡನ್ನು ತಿದ್ದಲಿಲ್ಲ. ರಿಕಾರ್ಡು ಬರೆದಿರಿಸುವಾಗ, ಕೆಲವೊಮ್ಮೆ ಏಕಾಂತದಲ್ಲಿ ಮೌನ ವಾಗಿ ಕುಳಿತಾಗ ತಾವು ದೇವನಿಗೆ ತಿಳಿಸಲಿರುವ ಮಹತ್ವದ ವಿಷಯವೊಂದನ್ನು ಬರೆದಿಡ ಬೇಕು ಎಂದೆನಿಸಿತ್ತು. ಹಾಗೆ ಬರೆದಿಟ್ಟರೂ ದೇವ ನಂಬಲಾರ ಎನ್ನುವುದೂ ತಿಳಿದಿದೆ ಅವರಿಗೆ.

ಮಗನ ಬಲಹಸ್ತವನ್ನು ತಮ್ಮ ಹಸ್ತದ ಮೇಲಿರಿಸಿಕೊಳ್ಳುತ್ತ ಲಾಟನ್‌ನ ಮಂದ ಪ್ರಕಾಶದಲ್ಲಿ ಅವನ ಮುಖ ದಿಟ್ಟಿಸಿದರು. "ಮೂರು ತಿಂಗಳ ಮಗುವಿರುವಾಗಲೇ ಈ ಮನೆ ತುಂಬಿದ ನೀನು ಇದೀಗ ಮೂವತ್ತೆರಡರ ತರುಣ. ನನಗೇ ಅಚ್ಚರಿಯಾಗುತ್ತಿದೆ ದೇವ! ಪ್ರಕೃತಿಯನ್ನು ನೋಡಲಿರುವ ನಿನ್ನ ಕಣ್ಣುಗಳಿಗೆ ಅಂದು ಎಲ್ಲವೂ ಹೊಸದು. ನನಗೂ ಅಷ್ಟೇ. ಹೊಸ ವಿಧದ ಅನುಭವ. ಯಾರೂ ಮಾಡದಿರುವುದನ್ನು ನಾನು ಮಾಡಿದ್ದೇನೆಂಬ ಹೆಮ್ಮೆ." ಕೆಮ್ಮುತ್ತ ನಕ್ಕರು ಅವರು. "ನನ್ನ ಪ್ರೀತಿಯ ಆಸರೆ, ನೆರಳಿನಲ್ಲಿ ಬೆಳೆದ ಮುಗ್ಧ ಯುವಕ ನೀನು. ಯಾವ ದೃಷ್ಟಿಯಿರಿಸಿ ನಾನು ನಿನ್ನನ್ನು ಬೆಳೆಸಿದೆನೋ ಅದರಲ್ಲಿ ಒಂದಿನಿತೂ ಲೋಪ ಬರಲಿಲ್ಲ. ಯಾರಿಗೂ ಅನುಮಾನ

ಬಂದಿಲ್ಲ. ಒಂದು ಸುಗಂಧಭರಿತ ರಾಜ್ಯಕ್ಕೆ ವಲಸೆಬಂದ ನೀನು ಕೇವಲ ವಾಸುದೇವನಲ್ಲ, 'ದೇವ'ರಿಗೆ ಸಮಾನ!"

ಈಶ್ವರಯ್ಯನವರ ಕಣ್ಣುಗಳು ಬೆಳಗಿದವು. "ಪ್ರತಿಯೋರ್ವನೂ ಪೂರ್ವಜನ್ಮದ ಕರ್ಮಫಲದಿಂದ ಈ ಜನ್ಮದಲ್ಲಿ ಉತ್ತಮ ತಂದೆ-ತಾಯಿಯ ಹೊಟ್ಟೆಯಲ್ಲಿ ಹುಟ್ಟುತ್ತಾನಂತೆ. ಕೇವಲ ಹುಟ್ಟಿದರೆ ಸಾಲದು, ಉತ್ತಮ ಪರಿಸರ, ಸಂಸ್ಕಾರ, ಗುಣನಡತೆಗಳೂ ಬೇಕು. ಆಗ ಅವನ ಜೀವನ ಪುಟಕ್ಕಿಟ್ಟ ಚಿನ್ನ!"

ಬಿಸಿನೀರಿನ ಚೀಲ ಬದಿಗಿರಿಸಿದ ದೇವನಿಗೆ ಈ ಮಾತುಗಳೆಲ್ಲ ಹಿಂದೆಯೇ ಕೇಳಿಕೇಳಿ ಹಳಸಿಹೋದವು. ಯಾವ ಸ್ವಾರಸ್ಯವೂ ಅದರಲ್ಲಿಲ್ಲ. ತನ್ನನ್ನೇ ಶ್ಲಾಘಿಸಿಕೊಳ್ಳುವ ಅವರ ಬಗ್ಗೆ ಕೆಲವೊಮ್ಮೆ ಬೇಸರ ಬರುತ್ತಿತ್ತು, ಕೆಲವೊಮ್ಮೆ ಸಿಟ್ಟು. ಆದರೆ ಅದನ್ನು ತೋರ್ಪಡಿಸದ ಸ್ಥಿತಪ್ರಜ್ಞ ಅವನು. ಈಗಲೂ ಕೇಳುತ್ತ ಹೋದ.

"ಬ್ರಾಹ್ಮಣ ಸಂಸ್ಕಾರದಲ್ಲಿ ಉತ್ತಮ ಗುಣ-ನಡತೆಗಳನ್ನು ಬೆಳೆಯಿಸಿಕೊಂಡ ನಿನ್ನನ್ನು ನೋಡಿದರೆ ಅಚ್ಚರಿಯಾಗುತ್ತಿದೆ. ಈಗನಿಸುತ್ತದೆ, ಕಳೆದ ಜನ್ಮದಲ್ಲಿ ನೀನೆಲ್ಲೋ ದೊಡ್ಡ ಮಹರ್ಷಿಯಾಗಿರಬೇಕು. ಇಲ್ಲವಾದರೆ ನೀನು ಇಲ್ಲಿಗೆ ಹೇಗೆ ಬರುತ್ತಿದ್ದಿ? ಕೆಸರಿನಲ್ಲಿ ಹುಟ್ಟಿದ ಕಮಲ ನೀನು. ನನ್ನ ಅಂಗೈ ಮೇಲೆ ಬೆಳೆದ ಹೂವಿನ್ಹಾಗೆ. ನನ್ನ ಆದರ್ಶ ನಿನಗೂ ಆದರ್ಶವಾಯಿತು. ನನ್ನ ಗುಣ, ನಡೆ-ನುಡಿ ಎಲ್ಲವೂ ನಿನ್ನಲ್ಲಿ ಹಾಸುಹೊಕ್ಕಾಯಿತು. 'ಈಶ್ವರಯ್ಯನವರಿಗೆ ಹೇಳಿದ ಮಗ ಇವನು' ಎನ್ನುವುದಿಲ್ಲವೇ ನೋಡಿದವರು. 'ಹೂಂ, ತಂದರು ಯಾವನೋ ಒಬ್ಬನನ್ನು. ಎಲ್ಲಾ ಹಾಳುಗೆಡವಿದ, ದುಷ್ಟ ಬುದ್ಧಿಯವ' ಎಂದಿದ್ದಾರೆಯೇ? ನನ್ನ ನಿನ್ನ ಬಾಂಧವ್ಯ... ನನಗನಿಸುತ್ತದೆ ಇಂದು ನಿನ್ನೆಯದಲ್ಲ, ಜನ್ಮಜನ್ಮಾಂತರಗಳಿಂದಲೂ ಬೆಳೆದುಬಂದಿರಬೇಕು. ಖಂಡಿತ ಹೇಳ್ತೇನೆ, ಮುಂದಿನ ಜನ್ಮದಲ್ಲಿಯೂ ನೀನೇ ನನ್ನ ಮಗನಾಗಿ ಹುಟ್ತಿಯಾ..."

ದೇವ ನಿಜವೆಂಬಂತೆ ತಲೆಯಲ್ಲಾಡಿಸಿದ. ತನ್ನ ಮೇಲೆ ನಂಬಿಕೆಯಿರಿಸಿದ, ಪ್ರೀತಿ-ವಾತ್ಸಲ್ಯದ ಧಾರೆಯೆರೆದ ಅವರ ಭಾವನೆಗಳಿಗೆ ತಾನೂ ಬೆಂಬಲ ನೀಡಿದ. ಅದು ಅನಿವಾರ್ಯವಾಗಿತ್ತು ಅವನಿಗೆ. ಎಷ್ಟೋ ಬಾರಿ ಈ ಮಾನವ ಸಂಬಂಧಗಳ ಅರ್ಥವೇನು, ವ್ಯಾಪ್ತಿಯೇನು ಎಂದೂ ಚಿಂತಿಸಿದ್ದಾನೆ. ಅವನಿಗೆ ತಿಳಿದಿದೆ, ತಾನು ಈಶ್ವರಯ್ಯನವರ ದತ್ತುಪುತ್ರ. ತನಗೆ ನಿಜವಾದ ತಂದೆ-ತಾಯಿ ಯಾರೂ ಇಲ್ಲ. ಎಲ್ಲಿಯೋ ಅನಾಥನಾಗಿದ್ದ ತನ್ನನ್ನು ಮಗನಾಗಿ ಸ್ವೀಕರಿಸಿದ್ದಾರೆ. ಸರಿ, ಆಮೇಲೆ ಅದರ ಆಳ ಕೆದಕುವ ಗೋಜಿಗೆ ಹೋದವನಲ್ಲ. ಯಾವ ಭಾವವಿಟ್ಟು ಈಶ್ವರಯ್ಯ ಬೆಳೆಸಿದರೋ ಆ ಭಾವಗಳ ರಾಗ ಮಿಡಿಯುತ್ತ ಈ ಮನೆ ಬೆಳಗಿಸಿದ್ದಾನೆ ಎನ್ನುವುದು ಸತ್ಯ.

ದೇವನನ್ನು ತಮ್ಮ ಬಳಿ ಎಳೆದುಕೊಳ್ಳುತ್ತ ಅವರು ಮೃದುವಾಗಿ ಅಂದರು, "ನಮ್ಮಿಬ್ಬರ ನಂಟು ವಿಶೇಷವಾದುದರಿಂದ ನೀನು ಈ ಮನೆಗೆ ಮಗನಾದಿ, ಬೆಳಕಾದಿ. ನಿನಗೆ ಬುದ್ಧಿ ಬಂದ ಮೇಲೆ ನೀನು ಎರಡು ಬಾರಿ ನಿನ್ನ ಹುಟ್ಟು, ಕುಲಗೋತ್ರ, ತಾಯಿ ತಂದೆ ಎಲ್ಲಾ ತಿಳಿಯಲು ಕುತೂಹಲಪಟ್ಟೆ. ಆದರೆ ನಾನೇ ಅವಕಾಶ ಕೊಡದೆ

ಬಾಯಿಮುಚ್ಚಿಸಿದ್ದೆ. ನಿಜವೇ?... ಈಗನಿಸುತ್ತದೆ, ನಿನಗೆ ನಾನು ಎಲ್ಲವನ್ನೂ ಹೇಳಬೇಕಿತ್ತು. ನಿನ್ನಿಂದ ಏನನ್ನೂ ಮುಚ್ಚಿಡಬಾರದಿತ್ತು ಅಲ್ಲವೇ."

ದೇವನ ಕಿವಿಗಳು ಚುರುಕಾದವು. ಕುತೂಹಲ ಮೇರೆಮೀರಿ ಮೈ ರೋಮಾಂಚನಗೊಂಡಿತು. ತಂದೆ ಹೇಳಲಿರುವ ವಿಷಯವಾದರೂ ಏನು?

"ಇವತ್ತೋ ನಾಳೆಯೋ ನಾನು ಕಣ್ಣುಮುಚ್ಚಿದರೆ ಸತ್ಯ ಸಂಗತಿ ನನ್ನಲ್ಲೇ ಮುಚ್ಚಿಹೋಗುತ್ತದೆ ನಿಜ. ಆದರೆ ಯಾಕೋ ಮನಸ್ಸು 'ನೀನು ವಂಚನೆ ಮಾಡುತ್ತಿದ್ದಿಯಾ' ಎನ್ನುತ್ತಿದೆ. ನಿನ್ನ ಅಮ್ಮನಿಗೆ ತಿಳಿಸದೆ, ಬೇರೆ ಯಾರಿಗೂ ಹೇಳದೆ ಈ ತನಕ ಬಚ್ಚಿಟ್ಟುಕೊಂಡ ವಿಷಯ ಇವತ್ತು ನಿನಗೆ ಹೇಳದೆ ನನ್ನ ಮನಸ್ಸಿಗೆ ನೆಮ್ಮದಿಯಿಲ್ಲ. ನಾನು ಸತ್ತರೂ ಈ ಆತ್ಮಕ್ಕೆ ಶಾಂತಿಯಿಲ್ಲ. ನಿನಗೆ ತಿಳಿಸಿಯೇ ನಾನು ಕಣ್ಣುಮುಚ್ಚಬೇಕು..."

ಅವರ ಮಾತುಗಳು ಇದ್ದಕ್ಕಿದ್ದಂತೆ ನಿಂತು ಕೆಮ್ಮು ಒತ್ತರಿಸಿ ಬಂದಿತು. ಮನಸ್ಸು ನೆಗೆಯಿತು ಗತವರ್ಷಗಳ ಸುರುಳಿ ಬಿಚ್ಚುತ್ತ.

* * * * *

ಈಶ್ವರಯ್ಯನವರ ದತ್ತುಪುತ್ರ ಈ ವಾಸುದೇವ. 'ದೇವ' ಎಂಬ ಹೆಸರಿನಲ್ಲಿ ಈಗ ಊರಿಗೆಲ್ಲ ಚಿರಪರಿಚಿತ. ಅವನು ದತ್ತುಪುತ್ರನಾಗಿ ಸ್ವೀಕಾರವಾದ ಕೆಲವು ತಿಂಗಳುಗಳ ತನಕ ಬಂಧುಬಾಂಧವರಿಗೆ, ಪರಿಚಿತರಿಗೆ, ನೆರೆಹೊರೆಯ ಜನರಿಗೆ ನೂರು ಅನುಮಾನ. ಒಬ್ಬೊಬ್ಬರದು ಒಂದೊಂದು ಸಲಹೆ, ಒಂದೊಂದು ಅನುಮಾನ. ಆದರೆ ಈಶ್ವರಯ್ಯನವರು ಬಂಡೆಯಂತೆ ಅಚಲರಾಗಿದ್ದರು.

ಕುಲಗೋತ್ರಗಳನ್ನು ವಿಚಾರಿಸದೆ ಎಲ್ಲಿಂದಲೋ ಮೂರು ತಿಂಗಳ ಮಗುವನ್ನು ತಂದು ನಾಗಮ್ಮನ ಬರಿದಾದ ಮಡಿಲನ್ನು ತುಂಬಿದಾಗ ಹೌಹಾರಿದ್ದರು ನಾಗಮ್ಮ. ಎಣ್ಣೆಗಪ್ಪು ಬಣ್ಣದ, ತುಂಬಿದ ಕೆನ್ನೆಯ ಮುದ್ದಾದ ಮಗುವನ್ನು ನೋಡಿ ಮುಖ ಅರಳುವ ಬದಲು ಸಿಂಡರಿಸಿ ಕೂಗಾಡಿದ್ದರು ಗಂಡನ ಮೇಲೆ. ಮಕ್ಕಳಿಲ್ಲ ಎಂಬ ಕೊರಗಿನೊಂದಿಗೆ ಅವರ ಮನ ಬಯಸಿದ್ದೇ ಬೇರೆ. ಅವರಿಗೆ ತವರಿನ ವ್ಯಾಮೋಹ ಅಧಿಕ. ತಮ್ಮ ಸದಾನಂದನ ಮಕ್ಕಳಲ್ಲಿ ಪ್ರೀತಿಯ ಸಲಿಗೆ. ಅವರಲ್ಲೇ ಒಬ್ಬನನ್ನು ತಮ್ಮ ಬಳಿ ಇರಿಸಿಕೊಳ್ಳುವ ಇಚ್ಛೆಯಿತ್ತು. ಆದರೆ ಈಶ್ವರಯ್ಯನವರಿಗೆ ತಮ್ಮ ತಂಗಿ ಮಕ್ಕಳಲ್ಲಿ ಒಬ್ಬನನ್ನು ಸಾಕಿಕೊಳ್ಳುವ ಬಯಕೆ. ತಂಗಿ ಒಪ್ಪಿಗೆ ಕೊಟ್ಟಿದ್ದರೂ, "ಹೆತ್ತ ಕರುಳಿಗೆ ಮಕ್ಕಳು ಹೆಚ್ಚಲ್ಲ ಅಣ್ಣಯ್ಯ. ಆಗಾಗ ನಿನ್ನ ಮನೆಗೆ ಕಳುಹಿಸ್ತಾ ಇರ್ತೇನೆ. ಆದರೆ ದತ್ತುಕಕ್ಕೆ ಕೊಡಲಾರೆ" ಎಂದಳು ಸ್ಪಷ್ಟವಾಗಿ.

ದುಃಖಿತರಾದ ಈಶ್ವರಯ್ಯನವರಿಗೆ ಅನಿರೀಕ್ಷಿತವಾಗಿ ಸಿಕ್ಕಿಹೋಯಿತು ಈ ನಿಧಿ. "ಇವನು ಕಪ್ಪು ಎಂದು ಬೇಸರಿಸಬೇಡ. ಇವನನ್ನು ನೇರವಾದ ಹಾದಿಯಲ್ಲಿ ಬೆಳೆಸುವುದು ನಮ್ಮ ಕರ್ತವ್ಯ. ಇನ್ಮೇಲೆ ಇವನ ತಂದೆ ತಾಯಿ ನಾವು!"

"ಇವನಿಗೆ ನಾನಂತೂ ತಾಯಿಯಾಗಲಾರೆ. ನನಗೆ ಈ ಮಗು ಬೇಡವೇ ಬೇಡ. ಸರಿಯಾದ ರೀತಿ, ಸಂಸ್ಕೃತಿಯಿರುವ ಮನೆಗಳಿಂದ ಮಗುವನ್ನು ತರಬೇಕಲ್ಲದೆ ಕುಲ ಗೋತ್ರಗಳಿಲ್ಲದ ಇದನ್ನಲ್ಲ!"

"ನಿನ್ನ ಕುಲ-ಗೋತ್ರ ಎಲ್ಲಾ ಆಚೆಗೆ ತಳ್ಳು. ಇನ್ನು ಮುಂದೆ ನಮ್ಮದೇ ಸಂಸ್ಕಾರ ಈ ಮಗುವಿಗೆ."

ನಾಗಮ್ಮ ಸಂಶಯದಿಂದ ನೋಡಿದರು ಪತಿಯನ್ನು. ತಮ್ಮ ಇಳಿ ಪ್ರಾಯದಲ್ಲಿ ಆಸರೆಗೆ ಒಂದು ಊರುಗೋಲು ಬೇಕು, ಮರಣಾನಂತರ ಕೈನೀರು ಕೊಡಲು ಒಬ್ಬ ಮಗ ಬೇಕು, ಮನೆದೀಪ ಬೆಳಗಿಸಲು ಸೊಸೆ ಬೇಕು ಎಂದು ಆಶಿಸಿದ್ದು ನಿಜ. ಹಾಗೆಂದು ಹಿಂದು-ಮುಂದು ನೋಡದೆ ಯಾವುದೋ ಒಂದು ಮಗುವನ್ನು ಸಾಕಿಕೊಳ್ಳುವುದು ಧರ್ಮವಾದೀತೇ? ಕಲ್ಯಾಣಪುರದ ಸುತ್ತಮುತ್ತಲೂ ಅನೇಕ ಗ್ರಾಮಗಳಿಗೆ ಈಶ್ವರಯ್ಯ ನವರ ಹೆಸರು ಚಿರಪರಿಚಿತ. ದೀನದಲಿತರ ಸೇವೆಗೆ ಮುಡಿಪಾಗಿರಿಸಿದ ಜೀವ ಅವರದು. ಅವರ ದೃಷ್ಟಿಯಲ್ಲಿ ಎಲ್ಲರೂ ಸರಿಸಮಾನರು. ಆದರೆ ಆಸ್ತಿಗೆ ವಾರಸುದಾರನಾಗಿ, ತಮ್ಮ ಬದುಕಿಗೆ ಆಸರೆಯಾಗಿ ಅನಾಥ ಮಗುವನ್ನು ಸ್ವೀಕರಿಸುವಷ್ಟು ದೊಡ್ಡ ಗುಣ ಇವರಲ್ಲಿದೆಯೇ?

ನಾಗಮ್ಮ ಕ್ರೋಧದಿಂದ ಮಗುವನ್ನು ದೂರ ತಳ್ಳಿದರು. "ನನಗೆ ಈ ಮಗು ಬೇಡವೇ ಬೇಡ. ಎಲ್ಲಿಂದ ಇದನ್ನು ತಂದಿರೋ ಅಲ್ಲೇ ಬಿಟ್ಟು ಬನ್ನಿ."

ವಿಷಯ ತಿಳಿದ ಸದಾನಂದ ಓಡಿಬಂದ ಕಲ್ಯಾಣಪುರಕ್ಕೆ. ಮಗುವಿನ ಮುಖ ನೋಡಿ ತನ್ನ ಮುಖ ತಿರುಗಿಸಿದ. "ಯಾರ ಕರ್ಮದ ಪಿಂಡವೋ ಇದು, ಯಾಕೆ ಇದನ್ನು ಸಾಕುವ ಕರ್ಮ ಬಡೀತು ನಿಮಗೆ? ಅಕ್ಕ, ನನ್ನ ಮಕ್ಕಳಿರಲಿಲ್ಲವೇ?"

"ಅವರ ಅಗತ್ಯ ನನಗಿಲ್ಲ" ಭುಸುಗುಟ್ಟಿದರು ಈಶ್ವರಯ್ಯ, "ನಮ್ಮ ವಿಷಯದಲ್ಲಿ ನಿನ್ನ ಅಧಿಕಪ್ರಸಂಗ ಬೇಡ. ಬಾಯಿಮುಚ್ಚಿರು."

ಮಗು ಮನೆತುಂಬಿತು. ನಾಗಮ್ಮನ ಮನವನ್ನಲ್ಲ. ಅವರ ಕ್ರೋಧದ ಜ್ವಾಲೆ ದಿನೇ ದಿನೇ ಹೆಚ್ಚಿದಷ್ಟೂ ಈಶ್ವರಯ್ಯನವರ ಛಲವೂ ಹೆಚ್ಚಿತು. ಅನಾಥ ಮಗು ಎಂಥವನೇ ಇರಲಿ, ತನ್ನ ಮಗನಂತೆ ಬೆಳೆಯಲಾರನೇ? ಬೆಳೆಸುವುದು ತನಗೆ ತಿಳಿಯದೇ? ಅವರೊಬ್ಬರೇ ಆದರು ಮಗುವಿನ ತಂದೆ-ತಾಯಿ. ಜೊಲ್ಲು ಸುರಿಸುವ ಮಗು ಕೇಕೆಹಾಕಿ ನಕ್ಕಾಗ ಎತ್ತಿ ಮುದ್ದಾಡಿದವರೂ ಅವರೇ. ಹೇಲು ಉಚ್ಚೆಯಲ್ಲಿ ಮಲಗಿ ಕಾಲುಗಳನ್ನು ಪಟಪಟ ಹೊಡೆದುಕೊಳ್ಳುತ್ತ ಅಳುವಾಗ ಎತ್ತಿ ಮೈ ತೊಳೆಯಿಸುವುದೂ ಅವರೇ. ಕೆಲಸ ದವಳು ಸ್ನಾನ ಮಾತ್ರ ಮಾಡಿಸುತ್ತಾಳೆ. ಅನಂತರ ಬಾಟ್ಲಿ ಹಾಲು ಕುಡಿಸುವುದು, ಮಲಗಿಸುವುದು, ಉಳಿದ ಆರೈಕೆ ಎಲ್ಲಾ ಅವರ ಪಾಲಿಗೆ. ಅವರ ತೊಡೆಯ ಮೇಲೆ ಆಡಿ ಬೆಳೆಯುತ್ತಿರುವ ಮಗುವನ್ನು ಕಣ್ಣೆತ್ತಿಯೂ ನೋಡಲಿಲ್ಲ ನಾಗಮ್ಮ. ಮಮತೆ, ವಾತ್ಸಲ್ಯದ ಸೇತುವೆ ಕಟ್ಟುವುದು ಸುಲಭವಲ್ಲ. ಒಂದುದಿನವಂತೂ ಮಗು ಅತ್ತುಅತ್ತು

ಉಸಿರು ಮೇಲೆ ಹೋದಾಗ ಓಡಿಬಂದ ಈಶ್ವರಯ್ಯನವರು ಅದನ್ನೆತ್ತಿ ಸಮಾಧಾನ ಪಡಿಸುತ್ತ ಬದಿಯಲ್ಲೇ ನಿಂತ ಹೆಂಡತಿಯನ್ನು ಗದರಿಕೊಂಡರು.

"ಕಟುಕಳು ನೀನು. ಪ್ರಾಣ ಹೋದರೂ ಮಗುವನ್ನು ಎತ್ತಿಕೊಳ್ಳಬೇಕು ಎನಿಸುವು ದಿಲ್ಲವೇ? ಎಂತಹ ಹೃದಯ ನಿನ್ನದು."

ಹೆಂಡತಿಯ ಅಸಹಕಾರ, ಅಸಹನೆ, ನಿರ್ಲಕ್ಷ್ಯದ ಕೋಪ ಅವರನ್ನು ತೀರಾ ಬೇಸರದ ಅಂಚಿಗೆ ತಳ್ಳಿದ್ದರೂ ಎಂಟು ತಿಂಗಳ ನಂತರ ಹಿಂದೂ ಧರ್ಮಶಾಸ್ತ್ರದ ಪದ್ಧತಿಯಲ್ಲಿ ಹೋಮ, ಹವನ ಮಾಡಿಸಿ ರಕ್ಷೆಕಟ್ಟಿ ಮಗುವನ್ನು ದತ್ತುಪುತ್ರನನ್ನಾಗಿ ಸ್ವೀಕರಿಸಿ "ವಾಸುದೇವ" ಎಂದು ನಾಮಕರಣ ಮಾಡಿದರು. ನೆರೆದ ಬಂಧುವರ್ಗದ ಕುಹಕದ ನೂರೆಂಟು ಮಾತುಗಳಿಗೆ ಇವರ ಕಿವಿಗಳು ಮುಚ್ಚಿದ್ದವು.

ಅನಂತರದ ದಿನಗಳಲ್ಲಿ... ವರ್ಷಗಳು ಕಳೆದಂತೆ ನಾಗಮ್ಮನಿಗೂ ಮಗುವಿನ ಮೇಲೆ ಒಂದು ವಿಧದ ಮೋಹ ಆವರಿಸಿಕೊಂಡಿತು. ಅದು ಮೋಹವೋ, ಕರುಣೆಯೋ ಅರಿಯ ಲಾಗಲಿಲ್ಲ. ಅಂಬೆಗಾಲಿಟ್ಟು ಎದ್ದುನಿಲ್ಲುವ ಮಗುವಿನ ತುಂಟ ಕಣ್ಣುಗಳಲ್ಲಿ ಏನಿದು ಕೋಲ್ಮಿಂಚಿನ ಸೆಳೆತ! ಅವರನ್ನೇ ನೋಡುತ್ತ 'ಅಮ್ಮಾ' ಎಂಬ ತೊದಲ್ನುಡಿಯ ಕರೆಯಲ್ಲಿ ಎಂತಹ ಕರುಣೆಯ ಪಾಶ! ಜೊಲ್ಲು ಸುರಿಸುತ್ತ ಅವರನ್ನು ಹಿಂಬಾಲಿಸಿ ತಪ್ಪು ಹೆಜ್ಜೆ ಗಳಲ್ಲಿ ಏಳುತ್ತ ಬೀಳುತ್ತ ಸೆರಗು ಹಿಡಿದೆಳೆದಾಗ, ಅಡಿಗೆಯಲ್ಲಿ ರಗಳೆ ಕೊಡುವಾಗ, ಮಲಗಿದಲ್ಲೇ ಕೂದಲು ಕಿತ್ತಿಟ್ಟಾಗ, ಊಟ ತಿಂಡಿಗೆ ಹಠ ಮಾಡಿ ಅನ್ನ ಚೆಲ್ಲಿ ರಂಪ ಮಾಡಿದಾಗ ಮೈಮನದಲ್ಲಿ ಏನಿದು ಪುಳಕ! ಮಗು ಹೆಚ್ಚು ಹೆಚ್ಚು ಹತ್ತಿರ ಬಂದಂತೆ ಅವರಿಗೆ ಇಚ್ಛೆಯಿಲ್ಲದಿದ್ದರೂ ಯಾವುದೋ ವ್ಯಾಮೋಹದ ಪಾಶ ಅವರಿಗರಿವಿಲ್ಲದಂತೆ ಮಗುವಿನತ್ತ ಸೆಳೆಯಲ್ಪಟ್ಟಿತು. ಪ್ರತಿದಿನ ಸಾಯಂಕಾಲ ಈಶ್ವರಯ್ಯ ಮಗುವನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ದೇವರ ಭಜನೆ ಹೇಳಿಕೊಡುವಾಗ ನಾಗಮ್ಮನಿಗೆ ಅನ್ನಿಸಿತು, "ಇದು ಈ ಮನೆಯ ಮಗು."

ಅಂದು ನಾಗಮ್ಮ ಅಡಿಗೆಕೋಣೆಯಲ್ಲಿ ಇಲ್ಲದ ಹೊತ್ತಿನಲ್ಲಿ ತಪ್ಪು ಹೆಜ್ಜೆಯಿಡುತ್ತ ಒಳಗೆ ಬಂದ ಮಗು ಕೆಳಗಿಟ್ಟ ಮೊಸರಿನ ಭರಣಿಗೆ ಎರಡೂ ಕೈಗಳನ್ನು ಅದ್ದಿ ಮೊಸರನ್ನು ಬಾಚಿ ಮುಖ ತುಂಬಾ ಮೆತ್ತಿಕೊಂಡಿತು. ನಾಗಮ್ಮ ಅಡಿಗೆ ಕೋಣೆಗೆ ಹಿಂದಿರುಗಿದಾಗ ಮಗುವಿನ ಮೈಯೆಲ್ಲ ಮೊಸರಿನ ಅಭಿಷೇಕ. ಅವರ ಕಣ್ಣುಗಳು ಕ್ರೋಧದಿಂದ ಕಿಡಿಕಾರುತ್ತ ಹೊಡೆಯಲೆಂದು ಮೊಸರು ಕಡೆಯುವ ಹಗ್ಗ ಎತ್ತಿಕೊಳ್ಳುತ್ತಿದ್ದಂತೆ ಆ ಪುಟ್ಟ ಪೋರ ಕಿಲಿಕಿಲಿ ನಗುತ್ತ, "ನಿಂಗೂ ಬೇಕಾ, ಬಾ" ಎನ್ನಬೇಕೇ? ಆ ನಗೆಯಲ್ಲಿ ಸಾಕ್ಷಾತ್ ಶ್ರೀಕೃಷ್ಣನನ್ನು ಕಂಡಂತಾಯಿತು. ಹಿಂದೆಂದೂ ಕಾಣದ ವಾತ್ಸಲ್ಯದಲ್ಲಿ ಕರಗಿ ತಟ್ಟನೆ ಮಗುವಿನತ್ತ ಬಗ್ಗಿ ಎರಡೂ ಕೈಗಳಿಂದ ಎತ್ತಿ ಲೊಚಲೊಚನೆ ಮುದ್ದಿಟ್ಟರು.

ಅನಂತರದ ದಿನಗಳಲ್ಲಿ ಮಗುವಿನ ಆರೈಕೆ, ಪಾಲನೆ ಎಲ್ಲಾ ನಾಗಮ್ಮನ ಪಾಲಿಗೆ. ಅವನ ಆಟ-ಪಾಠಗಳಲ್ಲಿ, ಅವನ ನೋವು-ನಲಿವಿನಲ್ಲಿ ತಾಯ್ತನದ ನೈಜ ಸುಖವನ್ನು

ಪಡೆಯಲು ಇಚ್ಛಿಸಿದರು. ಮನದ ಬೇಸರ ಮಾಯವಾಗಿ ಉದಯಿಸಿತು ಹೊಸತನ. ಒಂದು ದಿನ ಅವನಿಗೆ ಅಸುಖವಾದರೂ ಅವರಿಗೆ ಸಂಕಟ, ಚಿಂತೆ.

ನಿಜವಾಗಿಯೂ ತೃಪ್ತರಾದರು ಈಶ್ವರಯ್ಯ. ಅವರ ಮನ ಬಯಸಿದ್ದೂ ಇದನ್ನೇ. "ನಾಗೂ, ಇನ್ನು ನಾನು ಗೆದ್ದೆ! ನನ್ನ ಮಾತಿನಲ್ಲಿ ನಂಬಿಕೆಯಿಡು. ಈ ಮಗು ಹಿಂದಿನ ಜನ್ಮದಲ್ಲಿ ನಮಗೆ ಮಗನಾಗಿರಬೇಕು. ಈ ಜನ್ಮದಲ್ಲಿ ಮಕ್ಕಳಿಲ್ಲದಾಗಲೂ ನಮಗೆ ಸಿಕ್ಕಿದ್ದಾನೆ. ನಮ್ಮ ಈ ವಾಸುದೇವ 'ದೇವ'ರಿಗೆ ಸಮಾನ."

* * * * *

"ಏನು ಯೋಚನೆ ಮಾಡ್ತಾ ಇದ್ದೀ?" ಕ್ಷೀಣವಾಗಿ ನಗೆ ನಕ್ಕು ಕೇಳಿದರು ಈಶ್ವರಯ್ಯ.

"ನೀವೇ ಆಗಿನಿಂದಲೂ ಏನೋ ಹೇಳ್ತೀನೆ ಅಂತ ಸುಮ್ಮನೆ ಕಣ್ಣುಮುಚ್ಚಿ ಮಲಗಿದ್ದೀರಲ್ಲ ಅಪ್ಪ. ಏನು ಯೋಚನೆ? ಏನು ಚಿಂತೆ ಮಾಡ್ತಾ ಇದ್ದೀರಿ?"

"ಯಾರು ಮಾಡಿದ ಪುಣ್ಯದಿಂದಲೋ ಏನೋ ನೀನು ಬೆಳಕಾದೆ ಈ ಮನೆಗೆ. ನೀನಾರು ಎನ್ನುವುದು ನನಗೊಬ್ಬನಿಗೇ ಗೊತ್ತು. ನಿನ್ನ ಜೀವನ ಒಡೆದ ಹಾಲಾಗಬಾರದು, ಬಂಗಾರದಂತಿರಬೇಕು. ಅದಕ್ಕೆಂದೇ ಈ ನಿಧಿಯ ಮೇಲೆ ನನಗೆ ಅಪಾರ ಜಾಗ್ರತೆ. ನಿನ್ನ ಹೆತ್ತ ತಾಯಿಗೆ ಕೊಟ್ಟ ಮಾತನ್ನು ತಪ್ಪದೆ ನಡೆಸಿಕೊಂಡು ಬಂದಿದ್ದೇನೆ ಗೊತ್ತೇ?"

ಅವರ ಕಣ್ಣುಗಳು ನಕ್ಕವು. ಅಲ್ಲಿ ಒಂದು ದೃಢಭಾವವಿತ್ತು. ಈವರೆಗೂ ಹೇಳಲಾಗದೆ ಉಳಿದುಹೋದ ಸತ್ಯಸಂಗತಿ ದೇವನಿಗೆ ಅಪ್ರಿಯವಾದರೂ ತಮಗೆ ಈ ಲೋಕದ ಋಣ ತೀರುವ ಮೊದಲೇ ಎಲ್ಲವನ್ನೂ ಹೇಳಿಬಿಡಬೇಕೆಂದು ಅವರ ಮನದ ಸಂಕಲ್ಪ. ಯೋಚನೆಯ ಗುಂಗಿನಲ್ಲಿದ್ದವರು ಹಾಸಿಗೆಗೆ ಒರಗಿದರು. ದೇವ ಮತ್ತಷ್ಟು ಕಾತರದಿಂದ ಬಗ್ಗಿದ ಅವರತ್ತ.

ಈಶ್ವರಯ್ಯನವರಿಗೆ ಈಗಲೂ ನೆನಪಿಗೆ ಬರುತ್ತವೆ ಆ ದಿನಗಳು. ಮಕ್ಕಳಿಲ್ಲದ ಕೊರಗಿನಲ್ಲಿ ತಮಗೆ ಅನುಕೂಲವಾದ ಮಗು ಯಾವುದಾದರೂ ಅನಾಥಾಶ್ರಮದಲ್ಲಿ ದೊರೆಯಬಹುದೇ ಎಂದು ಅನ್ವೇಷಣೆಯಲ್ಲಿದ್ದ ಸಮಯ. ಒಮ್ಮೆ ಸುಧಾ ಅನಾಥಾಶ್ರಮ ದಲ್ಲಿ ಮಕ್ಕಳನ್ನು ನೋಡಲೆಂದು ಅವರೊಬ್ಬರೇ ಹೋದವರು ಅಲ್ಲಿಂದ ಹೊರಗೆ ಬರುತ್ತಿದ್ದಾಗ ಬಾಗಿಲಲ್ಲಿ ಭೇಟಿಯಾಗಿದ್ದಳು ಆ ಹೆಂಗಸು. ಇನ್ನೂ ಮೂವತ್ತರ ಅಂಚನ್ನು ಮೀರದ ಲಕ್ಷಣವಾದ ರೂಪ, ಬಣ್ಣ, ಉಡುಪಿನಿಂದ ಅವಳು ಹರಿಜನ ಸ್ತ್ರೀ ಎನ್ನುವುದ ರಲ್ಲಿ ಸಂದೇಹವಿಲ್ಲ. ಅವಳ ಕೈಯಲ್ಲಿ ಅವಳದೇ ರೂಪ ಹೊತ್ತ ಮೂರು ತಿಂಗಳ ಗಂಡುಮಗು. ಪತಿಯ ಅಕಾಲ ಮರಣದಿಂದ ನೊಂದ ಅವಳಿಗೆ ಕೂಲಿಯಿಂದ ಜೀವನ ಸಾಗಬೇಕು. ಅದರಲ್ಲಿಯೂ ಜೀತದ ಬದುಕು. ತನ್ನಿಂದ ಮಗುವನ್ನು ಸಾಕಲು ಅಸಾಧ್ಯ ವೆಂದರಿತು ಅನಾಥಾಶ್ರಮದಲ್ಲಿ ಬಿಟ್ಟುಹೋಗಲು ಬಂದಿದ್ದಾಳೆ. ಬಡತನದ ಕರಾಳ

ಛಾಯೆಯಲ್ಲಿ ಆ ಮಾತೃಹೃದಯ ಕರುಳ ಕುಡಿಯ ಅಗಲಿಕೆಯ ನೋವನ್ನು ಸಹಿಸಲು ಸಿದ್ಧವಾಗಿತ್ತು.

ಈಶ್ವರಯ್ಯ ಮಗುವಿನುದ್ದಕ್ಕೂ ದೃಷ್ಟಿ ಚೆಲ್ಲಿದರು. ಆರೋಗ್ಯವಾಗಿ ಮೈ ಕೈ ತುಂಬಿಕೊಂಡು ಮುದ್ದಾಗಿತ್ತು ಮಗು. ನೋಡುತ್ತ ಹೋದಂತೆ ಹುಚ್ಚು ಆದರ್ಶ ಜಿಗಿದೆದ್ದು ಚುರುಕಾಯಿತು ಅವರ ಬುದ್ಧಿ. ಮಗುವಿನ ಜಾತಿ ಹೇಗೇ ಇರಲಿ, ತಾಯಿ ಯಾರೇ ಆಗಿರಲಿ. ಉತ್ತಮ ಪರಿಸರ, ಗುಣನಡತೆ, ವಿದ್ಯೆ ಸಂಸ್ಕಾರಗಳಿಂದ ಈ ಮಗುವನ್ನು ಬೆಳೆಸಲು ತಮ್ಮಿಂದ ಸಾಧ್ಯವಿಲ್ಲವೇ? ಸಾಧ್ಯವಿದೆಯೆಂದು ತಾವು ಸಾಧಿಸಿ ತೋರಿಸಬೇಕು. ಅನಾಥಾಶ್ರಮ ಸೇರಲು ಬಂದ ಮಗುವನ್ನು ತಾವೇ ಸ್ವೀಕರಿಸಲು ಮುಂದಾದರು. ಆದರೆ ಹಿಂಜರಿದಳು ಆ ತಾಯಿ.

"ಅಯ್ಯ, ನಾನು ಹರಿಜನ ಹೆಂಗಸು. ಕೂಲಿನಾಲಿಯಿಂದ ಜೀವಿಸುವವಳು. ನಿಮ್ಮಂತಹವರು ಇದನ್ನು ಹ್ಯಾಗೆ ಸ್ವೀಕರಿಸುತ್ತೀರಿ?" ಕೇಳಿದಳು ಅನುಮಾನದಲ್ಲಿ.

"ಜಾತಿಮತಗಳ ಪ್ರಶ್ನೆ ನನ್ನಲ್ಲಿಲ್ಲ. ನನಗೆ ಮೆಚ್ಚಿಗೆಯಾದ ಒಂದು ಮಗು ಬೇಕು. ನಿನ್ನ ಮಗುವನ್ನು ನನ್ನ ಮಗನಂತೆ ಸಾಕಬಲ್ಲೆ."

"ಸಾಕಿದರೆ ಸಾಲದು ಅಯ್ಯ. ನಾಳೆ ಇವನೂ ದೊಡ್ಡವನಾದ್ಮೇಲೆ ನೀವೂ ಜೀತದಾಳನ್ನಾಗಿ ಮಾಡಬಾರದಲ್ಲ. ನಾನಿದ್ದ ಹಳ್ಳಿಯಲ್ಲಿ ಮಗುವಿಗೆ ಮುಂದೆ ಈ ಸ್ಥಿತಿ ಬರಬಾರದೆಂದೇ ಆಶ್ರಮಕ್ಕೆ ಗುಟ್ಟಾಗಿ ತಂದಿದ್ದೇನೆ."

"ಹೇಳಿದೆನಲ್ಲ, ನಿನ್ನ ಮಗುವನ್ನು ನನ್ನ ಮಗನಂತೆ ಬೆಳೆಸುತ್ತೇನೆಂದು. ಸೂರ್ಯ-ಚಂದ್ರರ ಸಾಕ್ಷಿಯಾಗಿ ಮಾತು ಕೊಡ್ತೇನೆ. ಆದರೆ ಈ ವಿಷಯ ನೀನು ಯಾರಿಗೂ ತಿಳಿಸಬಾರದು" ಎಂದರು ಭರವಸೆಯ ಧ್ವನಿಯಲ್ಲಿ.

ಅವಳು ಮತ್ತೆ ಚಿಂತಿಸಲಿಲ್ಲ. ಅವಳ ಅಂಗೈ ತುಂಬಿದವು ಅವರು ನೀಡಿದ ರೂಪಾಯಿ ನೋಟುಗಳಿಂದ. ಅದಕ್ಕೆ ಪ್ರತಿಯಾಗಿ ಅವರ ಮಡಿಲು ತುಂಬಿತು ಮುದ್ದಾದ ಮಗು.

"ಆ ಮಗುವೇ ನೀನು!" ಈಶ್ವರಯ್ಯ ಜೋರಾಗಿ ಕೆಮ್ಮುತ್ತ ದೇವನನ್ನು ತಮ್ಮತ್ತ ಎಳೆದುಕೊಳ್ಳುತ್ತ ಹಣೆಗೆ ಮುತ್ತಿಟ್ಟರು.

ಇಷ್ಟು ವರ್ಷಗಳು ಯಾರಿಗೂ ಹೇಳದೆ ಗೌಪ್ಯವಾಗಿರಿಸಿದ ವಿಷಯ ಇದೆಯೇ? ವಿಸ್ಮಯದಿಂದ ಮೂಕನಾದ ದೇವನ ಶರೀರ ನಡುಗಿತು ಮೆಲ್ಲನೆ. ತಾನೊಬ್ಬ ಅನಾಥ ಮಗುವೆಂದು ಅವನಿಗೆಂದೋ ತಿಳಿದಿತ್ತು. ಆದರೆ ಈಗ ಕೇಳಿದ್ದು ನಂಬಲಿರುವ ವಿಷಯವಲ್ಲ. ಛೀ, ಇರಲಾರದು. ಎಲ್ಲೋ ಜ್ವರದ ಅಮಲಿನಲ್ಲಿ ಬಡಬಡಿಸಿದ್ದಾರೆ. ಇದಕ್ಕೆಲ್ಲ ಅರ್ಥವಿಲ್ಲ. ಅವರ ಮೈ ಮುಟ್ಟಿನೋಡಿದರೆ ಜ್ವರ ಕೆಂಡದಂತೆ ಸುಡುತ್ತಿದೆ.

"ಸುಮ್ಮನೆ ಮಲಗಿ ಅಪ್ಪಾ. ಜ್ವರದ ಅಮಲಿನಲ್ಲಿ ಏನೇನೋ ಬಡಬಡಿಸುತ್ತಾ ಇದ್ದೀರಿ."

"ಯಾರಿಗೆ ಜ್ವರ? ಸುಡಲಿ ಬಿಡು. ನಾನೀಗ ಹೇಳಿದ ಎಲ್ಲ ವಿಷಯಗಳೂ ಸತ್ಯವಾಕ್ಯಗಳು. ನನ್ನ ಮನಸ್ಸಿನ ಮಡಿವಂತಿಕೆಯ ಭಾವನೆಗಳನ್ನು ಕಿತ್ತೆಸೆದು ನಿನ್ನನ್ನು ಸಾಕಿದೆ. ನಿನ್ನೆಲ್ಲ ದುರ್ಗುಣಗಳ ಬೇರನ್ನು ಕಿತ್ತು ಬಿಸಾಡಿದ್ದೇನೆ. ನೀನೀಗ ಯಾರಿಗೆ ಕಡಿಮೆಯಾಗಿದ್ದಿ.... ಓ.... ನಿಜವಾಗಿಯೂ ನೀನು ನನ್ನ ಮಗನೇ."

ಅವರ ಕಣ್ಣುಗಳು ತುಂಬಿ ಬಂದಂತೆ ಕೆಮ್ಮು ಒತ್ತರಿಸಿ ಬಂದಿತು. ಉಸಿರು ನಿಂತು ಹೋಗುವಂತಹ ಕೆಮ್ಮು. ದೇವ ಅವರ ಬೆನ್ನಿಗೆ ತನ್ನ ಕೈ ಆಸರೆ ಕೊಟ್ಟು ನಿಧಾನವಾಗಿ ಎದೆ ನೀವುತ್ತ ಹಾಸಿಗೆಯ ಮೇಲೆ ಒರಗಿಸಿದ. ದೀಪವೂ ನಿಧಾನವಾಗಿ ನಂದಿತು.

೩

ನಸುಕಿನಲ್ಲಿ ಎದ್ದ ಸದಾನಂದ ಅಂಗಳದಲ್ಲಿ ಚದುರಿ ಬಿದ್ದ ನಾಲ್ಕು ತೆಂಗಿನಕಾಯಿಗಳನ್ನು ಆರಿಸಿ ಸುಲಿದು ಚೀಲಕ್ಕೆ ತುಂಬಿಸಿಕೊಂಡು "ಮುಂದಿನ ಶನಿವಾರ ಬರ್ತೇನೆ ಅಕ್ಕ" ಎಂದು ನಾಗಮ್ಮನಿಗೆ ಮಾತ್ರ ತಿಳಿಸಿ ಹೊರಟುಹೋದ.

ಇವತ್ತೆಲ್ಲ ಬೆಳಗಿನಿಂದ ಅದೆಂತಹ ಹಿತವಾದ ಬಿಸಿಲು! ಪ್ರಕೃತಿ ಬಹಳ ವಿಚಿತ್ರ. ಮೂರು ದಿನಗಳಿಂದಲೂ ಘೋರವೃಷ್ಟಿ ಸುರಿಸಿ ಈಗ ಇದ್ದಕ್ಕಿದ್ದಂತೆ ಮೈ ತೊಳೆದುಕೊಂಡಂತೆ ಸೂರ್ಯನ ಹೊಂಬಿಸಿಲನ್ನು ಎರೆದುಕೊಂಡಿತು ತನ್ನ ಮೇಲೆ. ಪೂರ್ವದಿಕ್ಕಿನ ನೇಸರಿನ ಕಿರಣಗಳು ಅಡಿಕೆ ತೋಟದ ಮಧ್ಯೆ ರಂಗವಲ್ಲಿಯೆಳೆಯುತ್ತ ಈ ಸಣ್ಣ ಮನೆಯ ಮೇಲೆ ಹಾದುಹೋಯಿತು. ಕಾಡಿನಲ್ಲಿ ಮಳೆಗಾಳಿಗೆ ಉರುಳಿ ಬಿದ್ದ ಮರಗಳೆಷ್ಟೋ. ಎಳೆಬಿಸಿಲಿಗೆ ಮಿಂದ ಕಾಡಿನಿಂದ ಹೊರಬಂದ ಬಣ್ಣಬಣ್ಣದ ಚಿಟ್ಟೆಗಳ ದಂಡು ಹಾರುತ್ತಿವೆ ಸುತ್ತಲೂ. ಹಕ್ಕಿಗಳ ಇಂಚರ ಎಂದಿಗಿಂತಲೂ ಮಧುರ. ಹೊಳೆಯ ನೀರು ಸಾಕಷ್ಟು ಇಳಿದು 'ಬೋಂ' ಎಂಬ ಸದ್ದಿನೊಂದಿಗೆ ಪ್ರವಾಹದಂತೆ ಹರಿಯುತ್ತಿದೆ ಈಗಲೂ. ಅದಕ್ಕೆ ಏತರ ಗಮನ? ಅಕ್ಕಪಕ್ಕದ ತೆಂಗಿನ ಮರಗಳೂ ಪೂರ್ತಿಯಾಗಿ ಹೊಳೆಯುತ್ತ ಬಗ್ಗಿದಂತೆ ಅವುಗಳ ಗರಿಗಳನ್ನು ಚುಂಬಿಸುತ್ತ ಸಾಗಿದೆ ಹೊಳೆ ನೀರು.

ನೇಸರಿನ ಕಿರಣಗಳಲ್ಲಿ ತನ್ನ ದೇಹ ನೋಡಿಕೊಂಡ ದೇವನಿಗೆ ಮನದೊಳಗೆ ಭೀತಿ. ಈ ವರೆಗೂ ಅವನು ತನ್ನ ದೇಹಕ್ಕೆ ವಿಶೇಷ ಪ್ರಾಮುಖ್ಯತೆ ಕೊಟ್ಟವನಲ್ಲ. ಆದರೆ ಇಂದು ಅದೇ ದೇಹದಲ್ಲಿ ಏನೋ ಒಂದು ಬದಲಾವಣೆ. ಕಟ್ಟುಮಸ್ತಾದ ಆಳು ಅವನು. ಗರಡಿ ಸಾಧನೆಯಲ್ಲಿ ಪಳಗಿರದಿದ್ದರೂ ಅದೇ ವಿಧದ ಮೈಕಟ್ಟು. ಎಣ್ಣೆಗಪ್ಪು ಬಣ್ಣ, ರೋಮ ತುಂಬಿದ ತೊಡೆಗಳು, ಒರಟಾದ ಗುಂಗುರು ಕೂದಲು, ತನ್ನ ಮುಖದ ಮೇಲೆ ಕೈಯ್ಯಾಡಿಸಿಕೊಂಡ, ಹಸ್ತ-ಚಿವುಟಿಕೊಂಡ ಎರಡು ಬಾರಿ. ನಿನ್ನೆ ರಾತ್ರೆ ಈಶ್ವರಯ್ಯ ಹೇಳಿದ ಮಾತುಗಳು ಬುಗುರಿಯಂತೆ ಸುತ್ತಿದವು ಮನದಲ್ಲಿ. ತಾನು ಹರಿಜನ ಜನಾಂಗದವನಂತೆ. ತನ್ನ ತಂದೆ ನೋಡಲು ತನ್ನಂತೆ ಇರಬಹುದೇ? ಕೂಲಿಯಾಳಾಗಿ ದುಡಿಯುತ್ತ

ಕೊನೆಯುಸಿರು ಎಳೆದಿರಬೇಕು. ತಾಯಿಗೆ ತಾನು ಬೇಡವಾಗಿತ್ತಂತೆ. ಹಾಗೆಂದು ಈ ಮನೆ ಬೆಳಗುವ ದೀಪವಾದೆನೇ ನಾನು?

"ಅಯ್ಯ" ಕರಿಯ ಕರೆದಾಗ ಎಚ್ಚತ್ತು ಹೊರಳಿದ ಅವನತ್ತ. ಬರಿಯ ಒಂದು ಪಂಚೆ ಸುತ್ತಿಕೊಂಡು ಸೊಂಟಪಟ್ಟಿಯಲ್ಲಿ ಬೆನ್ನ ಹಿಂದೆ ಜೋತು ಬಿದ್ದಿರುವ ಕತ್ತಿ, ಬರಿಮೈ ಕಪ್ಪಾಗಿ ಬಿಸಿಲಿಗೆ ಮಿಂಚುತ್ತಿದೆ. ಅರೆ! ಇವನ ಜನಾಂಗದವನೇ ತಾನು? ಯಾಕೋ ನಂಬಿಕೆ ಬರುತ್ತಿಲ್ಲ...

ಅವನು ಸೀದಾ ಒಳಕೋಣೆಗೆ ಬಂದಾಗ ಈಶ್ವರಯ್ಯ ತಮ್ಮ ಹಾಸಿಗೆಯಲ್ಲಿ ಕುಳಿತು ಬಿಸಿ ಕಾಫಿಯ ಲೋಟಕ್ಕೆ ತುಟಿಹಚ್ಚಿದ್ದರು.

"ಈಗ ಹೇಗಿದೆ ಅಪ್ಪಾ?"

"ಉಸಿರಾಡಲು ಸಾಧ್ಯವಾಗುತ್ತಿಲ್ಲ. ವಿಪರೀತ ಎದೆನೋವು. ನನಗಿನ್ನು ಔಷಧಿ ಬೇಡ, ಮಣ್ಣು ಬೇಡ. ಚಕ್ಕುಲಿ, ಉಂಡ್ಲುಕಾಳು ಇದ್ದರೆ ಬೇಕಿತ್ತು. ಇದೇನು ನಿನ್ನ ಮುಖ ಬಾಡಿದೆ? ರಾತ್ರೆ ನಿದ್ರೆ ಮಾಡಲಿಲ್ಲವೇ?"

"ಇಲ್ಲ, ನೀವು ಹೇಳಿದ ವಿಷಯ ನಂಬುವುದೂ ಅಸಾಧ್ಯ. ಹೀಗಾಗಲು ಸಾಧ್ಯವೇ?" ಅವರ ಹಾಸಿಗೆಯ ತುದಿಯಲ್ಲಿ ಕುಳಿತ ದೇವ ಅನುಮಾನದ ನೋಟ ಚೆಲ್ಲಿದ.

"ಸಾಧ್ಯವೆಂದು ತೋರಿಸಿದ್ದೇನಲ್ಲ ನಾನು!"

"ಏನು ಹುಡುಗಾಟ ನಿಮ್ಮದು. ಇಷ್ಟು ದೊಡ್ಡ ತಪ್ಪು ಮಾಡಿದರೂ ನೀವು ಪಶ್ಚಾತ್ತಾಪ ಪಡುತ್ತಿಲ್ಲವೇ?"

"ತಪ್ಪು ಮಾಡಿದೆನೆಂದು ನನಗ್ಯಾವತ್ತೂ ಅನಿಸಿಲ್ಲ" ದೇವನ ಭುಜದ ಮೇಲೆ ಕೈಯಿರಿಸಿ ನಕ್ಕರು ಆತ್ಮೀಯವಾಗಿ. "ನಿಜ ಹೇಳಬೇಕೆಂದರೆ ನಿನ್ನ ಮೇಲೆ ಮೊದಲು ನನಗೆ ನಂಬಿಕೆಯಿರಲಿಲ್ಲ. ಈಗ ನೀನು ಹೀಗೊಂದು ರೀತಿಯಲ್ಲಿ ಇದ್ದೀಯಾ ಅನ್ನುವುದೂ ನಂಬಿಕೆಯಾಗ್ತಾ ಇಲ್ಲ."

"ಆದರೆ ಅಪ್ಪಾ" ಚಾದರದ ನೂಲನ್ನು ಕಿತ್ತೆಳೆಯುತ್ತ ಅವನೆಂದ, "ನೀವು ತಪ್ಪು ಮಾಡಿದಿರಿ. ನಿಮ್ಮ ಸಮಾಜ ನನ್ನನ್ನು ಸ್ವೀಕರಿಸುತ್ತದೆಯೇ? ನಿಮ್ಮ ಜನರು ನನ್ನನ್ನು ಒಪ್ಪಿಕೊಳ್ತಾರೆಯೇ?"

"ಈಗ ಯಾರಿಗೆ ಅನುಮಾನ ಬಂದಿದೆ ನಿನ್ನ ಮೇಲೆ? ನಾಗೂ ನಿನ್ನನ್ನು ಸ್ವಂತದ ಮಗ ಎಂದುಕೊಂಡಿದ್ದಾಳೆ. ನಮ್ಮ ಹಿಂದಿನ ಋಷಿಗಳ ವಿಷಯ ಓದಿ ನೋಡು. ಋಷಿಗಳ ಮೂಲ ನೋಡಬಾರದಪ್ಪ. ಅದೇಕೆ, ನಮ್ಮ ಜನರೆಲ್ಲ ಒಂದೇ ಮೂಲದವರೇ ಎಂದೂ ಕೆದಕಿನೋಡು. ಅಲ್ಲಲ್ಲಿ ಯಾವ ಯಾವ ಜಾತಿ ಬೆರಕೆಯಾಗಿದೆಯೋ, ಯಾರ ಯಾರ ಶಕ್ತಿ ಯಾವ ಯಾವ ಅನೀತಿಯ ಸಂಪರ್ಕದೊಂದಿಗೆ ಬೆರೆತುಹೋಗಿದೆಯೋ, ಅವನ್ನೆಲ್ಲ ಯೋಚಿಸಬಾರದು. ಯಾಕೆ ಮುಖ ತಗ್ಗಿಸಿದೆ?"

ದೇವ ಅವರನ್ನು ದುರುಗುಟ್ಟಿ ನೋಡುತ್ತ ಅಲ್ಲಿಂದ ಎದ್ದುಬಿಟ್ಟ. ನಿಜವಾಗಿಯೂ ನಿನ್ನೆ ರಾತ್ರೆ ತನ್ನ ವಿಷಯದಲ್ಲಿ ಎಲ್ಲವೂ ತಿಳಿದಾಗ ಒಂದು ವಿಧದ ಅಚ್ಚರಿ, ವಿಸ್ಮಯ ವಾಗಿತ್ತು. ಸಾಕುತಂದೆಯ ವಿಶಾಲ ಮನೋಭಾವಕ್ಕೆ, ಕಳಕಳಿಯ ಅಂತಃಕರಣಕ್ಕೆ ನಮೋನಮಃ ಎಂದಿದ್ದ. ಆದರೆ ತನ್ನ ನೈಜಸ್ಥಿತಿಯ ಚಿಂತನೆ ಹೆಚ್ಚಿದಷ್ಟು ಕಗ್ಗಂಟಿನಲ್ಲಿ ಸಿಲುಕಿದ ಅನುಭವ. ತಾನಿರುವ ಪರಿಸರ, ಬೆಳೆದ ಸ್ಥಿತಿ, ತನ್ನ ಹೆಂಡತಿ, ಮಕ್ಕಳು ಇವನ್ನೆಲ್ಲ ಚಿಂತಿಸುತ್ತಿದ್ದಂತೆ ಒಳಗೊಳಗೆ ಅಳುಕಿನ ಭೀತಿ. ದೀನದಲಿತರಾದ ಹರಿಜನರ ಮೇಲೆ ಅವನಿಗೆಂದೂ ನಿಕೃಷ್ಟ ಭಾವನೆಯಿಲ್ಲ. ತಂದೆಯಂತೆ ಪ್ರೇಮ, ಕರುಣೆ ತುಂಬಿದ್ದು ಅವರನ್ನು ಮೇಲುಜಾತಿಯವರು ಹೀನಾಯವಾಗಿ ನೋಡಿಕೊಳ್ಳುವುದನ್ನು ದೂಷಿಸುವವ. ಅವರ ಏಳ್ಗೆಗಾಗಿ ಹಲವು ವಿಧದಲ್ಲಿ ದುಡಿದವ. ಈಶ್ವರಯ್ಯ ಕಟ್ಟಿಸಿದ ಹರಿಜನ ಸಂಘದಲ್ಲಿ ಆದರ್ಶದ ದೀವಿಗೆ ಎತ್ತಿಹಿಡಿದು "ಹರಿಜನರಿಗೆ ಮಾನ್ಯತೆ ಕೊಡಿ. ಅವರನ್ನು ಉದ್ಧರಿಸಿ" ಎಂದೂ ಕೂಗುವವ. ಕಲ್ಯಾಣಪುರದ ಸುತ್ತಲೂ ಅನೇಕ ಗ್ರಾಮಗಳ ಹರಿಜನರಲ್ಲಿ ಹೊಸ ಆಸೆಯ ದೀಪ ಹೊತ್ತಿಸಿದ ಉತ್ಸಾಹೀ ಯುವಕ.

ಆದರೆ ತಾನೂ ಸ್ವತಃ ಅವರಂತೆ ಎಂದು ತಿಳಿದಾಗ ಅದೇಕೋ ಅವನ ಮನಸ್ಸು ಸುಲಭವಾಗಿ ಒಪ್ಪಿಕೊಳ್ಳಲಿಲ್ಲ ಈ ವಿಷಯವನ್ನು. ಅದು ಅವನಿಗೆ ಇಷ್ಟವೂ ಇಲ್ಲ! ಆದರೆ ಇದು ಕಟು ಸತ್ಯ. ತಂದೆ ಯೋಚಿಸಿದ್ದು ತನ್ನ ಒಳಿತಿಗಿರಬಹುದು. ತನ್ನ ಹುಟ್ಟು ಆದದ್ದೇ ಒಂದು ವಿಧದಲ್ಲಿ. ಬೆಳವಣಿಗೆ ಇನ್ನೊಂದು ವಿದದಲ್ಲಿ. ಇನ್ನು ಮುಂದಿನ ಜೀವನವೂ ಭಿನ್ನವಾಗಬಹುದೇ ಎಂಬ ಆತಂಕ.

ಮಧ್ಯಾಹ್ನ ಮಡಿಯುಟ್ಟು ಪೂಜೆಗೆ ಕುಳಿತು ಗಂಟೆ ಬಾರಿಸುವಾಗ ಅವನ ಮೈಯಲ್ಲಿ ಲಘುಕಂಪನ. ಬೇಡವೆಂದರೂ ಎಲ್ಲೆಲ್ಲೋ ಸುತ್ತುತ್ತಿರುವ ಮನಸ್ಸಿನಲ್ಲಿ ಪೂಜೆ ಮುಗಿಸಿ ಎದ್ದು ಬಂದ ಹೊರಗೆ.

"ಅಮ್ಮಾ, ಈಗ ನಾನು ಹೇಗೆ ಕಾಣಿಸುತ್ತೇನೆ ಹೇಳು" ಕೇಳಿದ ಅಡಿಗೆಕೋಣೆಯ ಬಾಗಿಲಲ್ಲಿ ನಿಂತು.

ಅಡಿಗೆ ಕೆಲಸದಲ್ಲಿದ್ದ ನಾಗಮ್ಮ ಹೊರಳಲಿಲ್ಲ ಅವನತ್ತ, "ರಾಜ ಮಹಾರಾಜನಂತೆ ಕಾಣಿಸುತ್ತಿ ಬಿಡು. ಆದರೆ ಇಲ್ಲಿ ಸುನೀತಿ ಇಲ್ಲವಲ್ಲೋ."

"ನನ್ನನ್ನು ನೋಡು, ನಾನೀಗ ಯಾರ ಹಾಗೆ ಕಾಣಿಸುತ್ತಿದ್ದೇನೆ. ನನ್ನನ್ನು ನೋಡಿದರೆ ನಿನಗೆ ಯಾರ ನೆನಪಾಗುತ್ತೆ ಹೇಳ್ತಿಯಾ?"

ಈ ಸಲ ಅವನತ್ತ ಹೊರಳಿದ ನಾಗಮ್ಮ ಸೆರಗಿಗೆ ಬಾಯಿಹಚ್ಚಿ ಬಿದ್ದುಬಿದ್ದು ನಕ್ಕರು. "ದೇವರ ಕೋಣೆಯಲ್ಲಿದ್ದ ವಿಭೂತಿಯನ್ನೆಲ್ಲ ಒಂದೇ ಸಲಕ್ಕೆ ಹಣೆ, ಮೈಗೆ ಬಳಿದುಕೊಂಡಿದ್ದೀಯಲ್ಲ. ನೋಡಿಕೋ ಕನ್ನಡಿಯಲ್ಲಿ. ಅರೆ! ಇಷ್ಟು ಬೇಗ ಪೂಜೆ ಮುಗಿಯಿತೇ? ಮಂತ್ರಗಿಂತ್ರ ಕೇಳಲೇ ಇಲ್ಲವಲ್ಲ."

ದೇವ ನಾಗಮ್ಮನ ಎದುರಿನಲ್ಲೇ ಬಂದು ನಿಂತು ಮತ್ತೊಮ್ಮೆ ಕೇಳಿದ ಪ್ರಶ್ನೆಯನ್ನೇ ಕೇಳುತ್ತ ಮಗುವಿನಂತೆ ಗೊಣಗುಟ್ಟಿದ. ಅವನ ತುಟಿ ನಡುಗುತ್ತಿತ್ತು ಸೂಕ್ಷ್ಮವಾಗಿ. ನಾಗಮ್ಮ ಇನ್ನೂ ನಗುತ್ತ ಅವನ ಮುಖ ನೋಡಿ ನಿಟಿಕೆ ತೆಗೆದರು ಬೆರಳಿನಿಂದ.

''ಹೀಗೊಂದು ವಿಭೂತಿ ಬಳಿದುಕೊಂಡು ಸಾಕ್ಷಾತ್ ನೀಲಕಂಠನ ಹಾಗೆ ಕಾಣ್ತಾ ಇದ್ದೀಯ, ದೃಷ್ಟಿ ಮುಟ್ಟೀತು ನಿನಗೆ. ಆಗಿನಿಂದಲೂ ಅವರು ನಿನ್ನನ್ನು ಕರೀತಾ ಇದ್ದಾರೆ. ಮಧ್ಯಾಹ್ನದ ಊಟಕ್ಕೆ ಬದನೆಪಲ್ಯ, ಸಾರು, ನೀರುಳ್ಳಿಗೊಜ್ಜು ಮಾಡಿದ್ದೇನೆ'' ಅವರ ಮಾತಿನಲ್ಲಿ ಉಕ್ಕಿತ್ತು ಪ್ರೀತಿ, ವಾತ್ಸಲ್ಯ.

ಈಶ್ವರಯ್ಯನವರ ಹತ್ತಿರ ಬಂದು ಕುಳಿತಾಗ ದೇವನ ಹೃದಯದಲ್ಲಿ ತಡೆಯಲಾರದ ನೋವು. ತನ್ನ ತಾಯಿ ಎಲ್ಲಿದ್ದಾಳೆ? ತನ್ನ ತಂದೆಯ ಬಳಗ ಎಲ್ಲಿದೆ? ಅವರೆಲ್ಲ ಹೇಗಿದ್ದಾರೆ? ಅವರನ್ನೊಮ್ಮೆ ನೋಡಬೇಡವೇ ಎಂದೆಲ್ಲ ಕುತೂಹಲವಾದರೂ ತಂದೆ ಯೊಡನೆ ಕೇಳುವ ಧೈರ್ಯ ಬರಲಿಲ್ಲ. ಹೇಗೂ ತಾನು ಅನಾಥಾಶ್ರಮ ಸೇರಲು ಬಂದವನು. ಅನೀತಿಯಿಂದ ಹುಟ್ಟಿದ ಮಕ್ಕಳು, ತಿನ್ನುಣ್ಣಲು ಇಲ್ಲದ ನಿರ್ಗತಿಕರಾದ ಮಕ್ಕಳೇ ಹೆಚ್ಚಿರುವ ಅನಾಥಾಶ್ರಮದಿಂದ ಮಕ್ಕಳಿಲ್ಲದವರು ತಮಗಿಷ್ಟ ಬಂದ ಮಗು ವನ್ನು ಆಯ್ಕೆ ಮಾಡಬಹುದು. ಅಲ್ಲಿ ಕುಲಗೋತ್ರ, ಜಾತಿ-ಮತಗಳ ಪ್ರಶ್ನೆಯಿಲ್ಲ. ಆದರೆ ತನ್ನ ತಾಯಿಯನ್ನು ನೋಡಿ ವಿವರ ಕೇಳಿ ತಿಳಿದು ತಾನು ಎಂಥವನೆಂದೂ ತಂದೆ ಅರಿತಿದ್ದಾರಲ್ಲವೇ.

''ಮಕ್ಕಳಿಲ್ಲವೆಂದು ಹರಿಜನ ಮಗುವನ್ನು ತಂದು ಸಾಕಿ ನೀವು ಏನನ್ನು ಸಾಧಿಸಿದಿರಿ ಅಪ್ಪಾ...'' ಗದ್ಗದಿತನಾಗಿದ್ದ ದೇವ, ''ನಿಮ್ಮ ಮಗನಾಗಿ ಇರುವ ಯೋಗ್ಯತೆ ನನಗಿಲ್ಲ. ಕಾಡಿನಲ್ಲಿ ಕಣ್ಣುಕಟ್ಟಿ ಬಿಟ್ಟಂತಾಗಿದೆ ನನ್ನ ಸ್ಥಿತಿ.''

''ಹುಚ್ಚಪ್ಪಾ. ಏನಿದು ನಿನ್ನ ಮಾತು?'' ಹತ್ತಿರ ಕುಳಿತ ಮಗನನ್ನು ಮನತುಂಬಿ ನೋಡಿದರು ಈಶ್ವರಯ್ಯ. ''ನೀನು ಉತ್ತಮರಲ್ಲಿ ಉತ್ತಮನಾಗಿ, ಸುಸಂಸ್ಕೃತನಾಗಿ ಬಾಳಬಲ್ಲೆ ಎಂದು ತೋರಿಸಲಿಲ್ಲವೇ ನಾನು?''

''ಅದು ನಿಮ್ಮ ಭ್ರಮೆ, ಹುಚ್ಚು ಆದರ್ಶ ಅನ್ನಿ. ಆದರೆ ಅಪ್ಪ, ನಾನು ಸುನೀತಿ ಯನ್ನು ಮದುವೆಯಾಗುವ ಮೊದಲು ಈ ವಿಷಯ ನನಗೆ ಹೇಳಬಾರದಿತ್ತೇ? ಅವಳಿಗೆ ಈಗ ನನ್ನ ವಿಷಯ ತಿಳಿದರೆ...''

''ಇದೇನು ಬಹುದೊಡ್ಡ ಸಮಸ್ಯೆಯಲ್ಲ. ನಿನ್ನ ಹುಟ್ಟನ್ನು ಮರೆತುಬಿಡು. ನೀನು ಬೆಳೆದ ಪರಿಸರ ನೋಡು, ನಿನಗೆ ನಾನಿತ್ತ ಸಂಸ್ಕಾರಗಳನ್ನು ಗಮನಿಸು, ನಿನ್ನ ಆಚಾರ-ವಿಚಾರದತ್ತ ಆಲೋಚಿಸು. ನಿನ್ನ ಈ ದೇಹ...'' ಅವರು ಮೃದುವಾಗಿ ಸವರಿದರು ಅವನ ತೋಳನ್ನು. ''ಯಾರಿಂದಲೇ ಪಡೆದಿರಲಿ, ಯಾವ ತಾಯಿ ನಿನಗೆ ಜನ್ಮಕೊಟ್ಟಿಳೋ ಅದನ್ನೆಲ್ಲ ಚಿಂತಿಸಬೇಡ. ನೀನು ನನ್ನ ನೆರಳಿನಲ್ಲಿ ಬೆಳೆದ ಕೂಸು. ಸುನೀತಿಗೆ ತಕ್ಕವನಾದ ಗಂಡಸು.''

"ಆದರೂ ಅಪ್ಪ, ಇದೊಂದು ಸಂದಿಗ್ಧ ಪರಿಸ್ಥಿತಿ. ನನ್ನ ವಿಷಯ ಬಯಲಾದರೆ ನನ್ನ ಭವಿಷ್ಯವೂ ಕಗ್ಗಂಟಾಗಬಹುದು."

"ಗೊತ್ತು ನನಗೆ. ನನ್ನ ಆದರ್ಶ ಒಪ್ಪುವ ಜನರು ಕಡಿಮೆ. ಸಮಾಜದ ಹಲವು ರೀತಿ-ನೀತಿಗಳು ತೀರ ಸಂಕುಚಿತವಾದವು. ಅವುಗಳೊಂದಿಗೆ ಧೀರ ಹೆಜ್ಜೆಯಿಡುವುದು ಕಷ್ಟಕರ. ಅದಕ್ಕೆಂದೇ ಈಗಲೂ ಹೇಳ್ತೇನೆ, ನಿನಗೆ ನೆಮ್ಮದಿಯಾಗಿ ಬದುಕಬೇಕಿದ್ದರೆ ನಾನು ಹೇಳಿದ ವಿಷಯ ನಿನ್ನಲ್ಲೇ ಇರಲಿ!"

ಎದೆನೋವಿನಿಂದ ಉಸಿರಾಡಲು ಕಷ್ಟವಾದರೂ ದೇವನ ಮನಸ್ಸನ್ನು ಪ್ರಸನ್ನ ಗೊಳಿಸಲು ಪ್ರಯತ್ನಿಸಿದರು ಈಶ್ವರಯ್ಯ.

ಎರಡು ದಿನಗಳು ಸರಿದವು. ದೇವನ ಮನಸ್ಸು ಅಲ್ಲೋಲಕಲ್ಲೋಲ. ತಂದೆ ಹೇಳಿದುದನ್ನು ಮರೆಯಲು ಯತ್ನಿಸಿದ. ಪದೇ ಪದೇ ಕನ್ನಡಿಯೆದುರು ನಿಂತು ಮೈಮುಖ ನೋಡಿಕೊಂಡ. ತನ್ನಲ್ಲಿ ಕೆಲಸಕ್ಕೆ ಬರುವ ಹರಿಜನರೊಡನೆ ತನ್ನನ್ನು ಹೋಲಿಸಿಕೊಳ್ಳುತ್ತ, "ಇರಲಾರದು, ನಾನು ಎಲ್ಲರಿಗಿಂತಲೂ ಪ್ರತ್ಯೇಕ" ಎಂದುಕೊಂಡ ನಿಶ್ಚಿತ ಸ್ವರದಲ್ಲಿ. ಈಶ್ವರಯ್ಯನವರನ್ನು ಮತ್ತೆ ಮತ್ತೆ ಕೇಳುತ್ತ ಹಲವು ಹತ್ತು ವಿಷಯಗಳ ಚರ್ಚೆ. "ನಾನೇ ಎಲ್ಲಿಯಾದರೂ ಹೋಗುತ್ತೇನೆ" ಎಂದೂ ಕೂಗಾಡಿದ. ಮಕ್ಕಳಂತೆ ಅತ್ತ. ಅವರೆದುರು ಬೈದು ಹಂಗಿಸಿದ, ಬೊಬ್ಬೆಯಿಟ್ಟ.

ಈಶ್ವರಯ್ಯ ಹಲವು ವಿಧದಲ್ಲಿ ಸಮಾಧಾನಪಡಿಸಿದರು ಅವನನ್ನು. "ನನ್ನ ಸಮಸ್ತ ಆಸ್ತಿಗೂ ಹಕ್ಕುದಾರನಾದ ನಿನಗೆ ಚಿಂತೆ ಯಾಕೆ? ನಿನ್ನ ಅಂತರಂಗದ ರೂಪಕ್ಕೆ ಬೆಲೆ ಕಟ್ಟು, ದೇಹಕ್ಕಲ್ಲ. ನಿನ್ನೊಳಗಿನ ದೇವ ಎಂತಹವನೆಂದು ಎಲ್ಲರಿಗೂ ಗೊತ್ತು."

ದೇವನಿಗೆ ಸಮಾಧಾನವಿಲ್ಲ ಈ ಮಾತುಗಳಿಂದ. ಅವನು ಅನಾವಶ್ಯಕವಾಗಿ ಹರಿಜನರ ಅನೇಕ ಗುಡಿಸಲುಗಳಿಗೆ ಹೋಗಿಬಂದ, ಅಲ್ಲೇ ಓಡಾಡಿದ. ಅವರ ಆಚಾರ, ರೀತಿ-ನೀತಿಗಳು ತನಗಿಂತ ಭಿನ್ನವಾಗಿವೆ ಎಂದು ಅರಿತಾಗ ದಿಗ್ಭ್ರಮೆ. ಹರಿಜನ ಸಂಘದಲ್ಲಿ ನಡೆಯುವ ಭಜನೆಗೆ ಸೇರುವ ಜನರನ್ನು ನೋಡಿದಾಗ 'ಅಯ್ಯೋ ಇವರೆಲ್ಲ ನನ್ನವರೇ?' ಎಂಬ ಅನಿಸಿಕೆ ಬಂದು ಮೈಯೆಲ್ಲ ಕಾವೇರಿ ಮೂರ್ಛೆಬಂದಂತೆ ತಳಮಳ. ವೆಂಕಟರಮಣ ದೇವಸ್ಥಾನದತ್ತ ಕಾಲುಗಳು ಚಲಿಸಿದರೂ ಒಳಗೆ ಹೋಗಲು ಹೆದರಿಕೆ.

ಈಶ್ವರಯ್ಯನವರ ಎದೆನೋವು, ಜ್ವರ ಇನ್ನೂ ಉಲ್ಬಣಿಸಿ ಔಷಧಿ, ಇಂಜಕ್ಷನ್ ಯಾವುದೂ ಪ್ರಯೋಜನಕಾರಿಯಾಗಲಿಲ್ಲ. ಉಸಿರಾಟವೂ ಕಷ್ಟಕರ. ಹಗಲು-ರಾತ್ರೆ ದೇವ ಅವರ ಆರೈಕೆ ಮಾಡುತ್ತಿದ್ದರೂ ಮನಸ್ಸು ಇನ್ನೆಲ್ಲೋ. ತಂದೆ ತನ್ನನ್ನು ಸಾಕಿದ ಮೇಲೆ ಒಂದು ದಿನವೂ ಪಶ್ಚಾತ್ತಾಪ ಪಡಲಿಲ್ಲವಂತೆ. ನಿಜ, ಅವರು ತನ್ನ ಮೇಲಿರಿಸಿದ ವಿಶ್ವಾಸ ಅಪಾರ. ಈಗ ಯಾರೊಂದಿಗೆ ತಾನು ಮನದ ತುಮುಲ ಹೇಳಿಕೊಳ್ಳಲಿ?

ಅವನ ಅನ್ಯಮನಸ್ಕತೆ ಗಮನಿಸಿದ ಈಶ್ವರಯ್ಯ ಗದರಿಕೊಂಡರು, "ಚಿಂತೆ ಮಾಡುವುದಕ್ಕೂ ಅರ್ಥವಿರಬೇಕು. ಮರಣಕಾಲಕ್ಕೆ ಸತ್ಯ ಸಂಗತಿ ಮುಚ್ಚಿಡಬಾರದೆಂದು ನಿನಗೆ ಹೇಳಿದ್ದೆ. ಆದರೆ ನೀನು ಹೀಗೆ ನೊಂದುಕೊಳ್ಳುತ್ತಿ ಎಂದುಕೊಂಡಿರಲಿಲ್ಲ."

"ಜಾತೀಯತೆ ತೊಲಗಿ ಜನರಲ್ಲಿ ಹೊಸ ಕ್ರಾಂತಿ ಆಗಬೇಕು ಎನ್ನುತ್ತಾರೆ ಎಲ್ಲರೂ. ಪ್ರಯತ್ನಿಸಿದರೆ ಇವೆಲ್ಲ ಸಾಧ್ಯವೆಂದು ಸಾಧಿಸಿ ತೋರಿಸಿದ ನಿಮ್ಮ ಧೈರ್ಯ ಮೆಚ್ಚತಕ್ಕದ್ದು."

"ಹಾಗೆ ಒಪ್ಪಿಕೋ! ನಾನು ಕಣ್ಣುಮುಚ್ಚಿದರೂ ಹರಿಜನ ಸಂಘದ ಕೈಬಿಡಬೇಡ. ನನ್ನ ಮುಂದಿನ ಎಲ್ಲ ಕರ್ಮಾಂತರಗಳನ್ನೂ ನೀನೇ ಮಾಡಬೇಕು."

ಈಶ್ವರಯ್ಯ ಕಟ್ಟುನಿಟ್ಟಾಗಿ ಅಪ್ಪಣೆ ಮಾಡಿದಾಗ ದೇವ ಆರ್ಭಟಿಸಿದ, "ಅದೊಂದು ಸಾಧ್ಯವಿಲ್ಲ. ಪುಣ್ಯಾತ್ಮನಾದ ನಿಮ್ಮ ಶ್ರಾದ್ಧ, ಕರ್ಮಗಳನ್ನು ಮಾಡಲು ನಾನು ಯೋಗ್ಯನಲ್ಲ. ನೆನಪಿರಲಿ, ನಾನು ಯಾರು, ಎಂಥವನು ಎಂದು. ನಿಮ್ಮ ಮೂರ್ಖತನಕ್ಕೆ ಪಶ್ಚಾತ್ತಾಪ ಪಡಿ."

"ಯೋಗ್ಯತೆ, ಅಯೋಗ್ಯತೆಯನ್ನು ತಕ್ಕಡಿಯಲ್ಲಿಟ್ಟು ತೂಗುವುದು ಸಾಧ್ಯವಿಲ್ಲ. ನಿನ್ನಿಂದ ನಾನಂತೂ ನರಕ ಸೇರಲಾರೆ. ಸ್ವರ್ಗ, ನರಕವಿರುವುದು ಮನುಷ್ಯಕಲ್ಪಿತವಾದ ಈ ಭೂಮಿಯಲ್ಲಿ. ಸತ್ತ ನಂತರ ನಮ್ಮ ಆತ್ಮ ಎಲ್ಲಿಗೆ ಪ್ರಯಾಣ ಮಾಡುತ್ತದೋ ಯಾರು ನೋಡಿದ್ದಾರೆ? ಅವಿನಾಶಿಯಾದ ಆತ್ಮನ ಪೂಜೆ ಯಾರು ಮಾಡಿದರೂ ಒಂದೇ!" ಮಗನ ಕೈಮೇಲೆ ತಮ್ಮ ಕ್ಷೀಣಹಸ್ತವಿರಿಸಿದ ಈಶ್ವರಯ್ಯನವರ ಕಣ್ಣುಗಳು ಬೆಳಗಿದವು.

ಅವರ ಯಾವ ಮಾತುಗಳೂ ಸಮಾಧಾನವೀಯಲಿಲ್ಲ ಅವನಿಗೆ. ಈ ಸುದ್ದಿ ತನಗೆ ತಿಳಿಯದಿದ್ದರೆ ಚೆನ್ನಾಗಿರುತ್ತಿತ್ತು. ತಾನು ಇಲ್ಲಿ ಇನ್ನು ಹೇಗಿರಬಲ್ಲೆ? ಎಷ್ಟು ಯೋಚಿಸಿದರೂ ತನ್ನ ಹುಟ್ಟು-ಬೆಳವಣಿಗೆ ಅವನಿಗೊಂದು ಸಮಸ್ಯೆಯಾಗಿ ಕೊನೆಗೊಮ್ಮೆ ಅನಿಸಿತು, 'ಸುನೀತಿಗೆ ಎಲ್ಲವನ್ನೂ ತಿಳಿಸಿ ಅವಳ ಅಭಿಪ್ರಾಯ ಕೇಳಿಬರುತ್ತೇನೆ.'

ಮತ್ತೆ ತಡಮಾಡಲಿಲ್ಲ. ಅದೇ ದಿನ ಹೊರಟುಬಿಟ್ಟ ಉಪ್ಪಿನಂಗಡಿಗೆ. ಎಡೆಬಿಡದೆ ಸುರಿಯುತ್ತಿರುವ ಮಳೆಯನ್ನೂ ಲೆಕ್ಕಿಸದೆ, ಕೆಲಸಕಾರ್ಯಗಳನ್ನು ಬದಿಗೊತ್ತಿ, ಈಶ್ವರಯ್ಯನವರ ತೀವ್ರ ಅಸೌಖ್ಯವನ್ನೂ ಅಲಕ್ಷಿಸಿ ಹೊರಟುನಿಂತಾಗ ಅವನನ್ನು ತಡೆದ ನಾಗಮ್ಮ ಅಂಗಲಾಚಿದರು.

"ಇವತ್ತು ಅವರ ದೇಹಸ್ಥಿತಿ ನೋಡಿದರೆ ಗಾಬರಿಯಾಗುತ್ತಿದೆ. ಹೋಗಬೇಡ."

"ನಾನಿಲ್ಲದಾಗ ಮನೆ ಮುಳುಗಿಹೋಗುವುದಿಲ್ಲ. ನನಗೆ ಇವತ್ತು ಹೋಗಿಬರಲೇಬೇಕು." ಒರಟಾಗಿ ಉತ್ತರಿಸಿ ಈಶ್ವರಯ್ಯನವರ ಕೋಣೆಗೆ ಬಂದ. ಉಸಿರಾಡಲು ಕಷ್ಟಪಡುತ್ತ ನಿರ್ಜೀವದಂತೆ ಮಲಗಿದ್ದ ಅವರನ್ನು ನೋಡಿ ಕನಿಕರ ಉಕ್ಕುವ ಬದಲು ಕ್ರೋಧವುಕ್ಕಿತು. ಅದೇಕೋ ಅವನು ಅರಿಯದಾದ.

ಎದೆಸೆಟೆದು ತಮ್ಮ ಹತ್ತಿರ ನಿಂತವನನ್ನು ಅರೆತೆರೆದ ಕಣ್ಣುಗಳಿಂದ ನೋಡಿದ ಈಶ್ವರಯ್ಯ ತಮ್ಮ ಕೈಚಾಚಿದರು ಅವನತ್ತ. ಆದರೆ ದೇವ ಹಿಂದಕ್ಕೆ ಕಟ್ಟಿದ ಕೈಗಳನ್ನು ಚಾಚಲಿಲ್ಲ ಮುಂದಕ್ಕೆ.

"ನಿಮ್ಮ ಹಾಗೆ ಮುಚ್ಚುಮರೆ ನನಗೆ ತಿಳಿಯದು ಅಪ್ಪಾ. ನಾನೀಗಲೇ ಹೋಗಿ ಸುನೀತಿಗೆ ಎಲ್ಲಾ ಹೇಳಿಬರುತ್ತೇನೆ" ಎಂದವನೇ ಅವರ ಉತ್ತರ ನಿರೀಕ್ಷಿಸದೆ ದಪ್‌ದಪ್ ಹೆಜ್ಜೆಬಡಿಯುತ್ತ ಹೊರಟುಹೋದ.

೪

ಆದರೆ ಹದಿನೈದು ದಿನಗಳ ಹಸಿಮೈ ಬಾಣಂತಿ. ನಕ್ಕುನಲಿದು ಸಂತೋಷವಾಗಿದ್ದ ಅವಳ ತಂದೆತಾಯಿ, ಏನೂ ಅರಿಯದ ಮುಗ್ಧ ಹಸುಳೆ ಇವರನ್ನೆಲ್ಲ ನೋಡಿದಾಗ ದೇವ ತನ್ನನ್ನೇ ಪೂರ್ತಿಯಾಗಿ ಮರೆತುಹೋದ. "ಏನಯ್ಯ, ಮಗುವನ್ನು ನೋಡಲು ಬಂದೆಯ? ಅಥವಾ ಹೆಂಡತಿಯನ್ನೋ?" ಎಂದು ತಮಾಷೆ ಮಾಡಿದ ಮಾವನತ್ತ ನಗುಬೀರಿದ.

ಅವನ ಗುಳಿಬಿದ್ದ ಕಣ್ಣುಗಳು, ಕೆದರಿದ ತಲೆಗೂದಲು, ಕ್ಷೌರ ಮಾಡದ ನಿಸ್ತೇಜ ಮುಖ ಕಂಡು ಹೌಹಾರಿಹೋದಳು ಸುನೀತಿ. ತಾನಿಲ್ಲದೆ ತುಂಬ ಸೊರಗಿದ್ದಾನೆ ಎಂಬ ಕಳಕಳಿಯಲ್ಲಿ ವಿಚಾರಿಸಿಕೊಂಡಳು. ನಲ್ಮೆಯ ಮಾತುಗಳಲ್ಲಿ ರಂಜಿಸಿದಳು ಅವನನ್ನು. ಪುಟ್ಟ ಮಗು ತುಂಬಾ ಮುದ್ದಾಗಿತ್ತು. "ಥೇಟ್ ನಿಮ್ಮ ಹಾಗೆ!" ಎಂದಳು ಮಗುವನ್ನು ಅವನ ಕೈಗೆ ಕೊಡುತ್ತ.

ದೇವ ಮಗುವನ್ನು ಮೃದುವಾಗಿ ಮುದ್ದಿಸಿ ಸುನೀತಿಯನ್ನೇ ದಿಟ್ಟಿಸಿದ. ಸಂಪ್ರದಾಯ ಗಳ ಹಳೆ ಹಾದಿ ತುಳಿಯುತ್ತಿರುವ ಅವಳಿಗೆ ಥಕ್ಕನೆ ತೆರೆದ ಬಾಯಿಗೆ ಹೇಳುವುದೂ ಸಲ್ಲದು. ಹೇಗೂ ಎರಡು ತಿಂಗಳು ಕಳೆದ ಮೇಲೆ ಮನೆಗೆ ಬಂದಾಗ ಅಲ್ಲೇ ಸಮಯ ನೋಡಿ ತಿಳಿಸಿದರೆ ಇಬ್ಬರಿಗೂ ಕ್ಷೇಮ ಎಂದೆನಿಸಿತು.

ಮರುದಿನವೆಲ್ಲ ಅಲ್ಲಿಯೇ ಉಳಿದುಕೊಂಡ ದೇವ. ಹೀಗೆ ಅಳಿಯ ಉಳಿಯುವುದೂ ಅಪರೂಪವಾದುದರಿಂದ ಅಲ್ಲಿ ಅವನಿಗೆ ರಾಜೋಪಚಾರ. ದೇವನಿಗೆ ಇಷ್ಟವಾದ ಅಡಿಗೆ, ತಿಂಡಿಯ ಸಮಾರಾಧನೆ. ಆದರೆ ಅವನಿಗೆ ಈ ಯಾವ ಉಪಚಾರಗಳೂ ಬೇಕಿರಲಿಲ್ಲ. ತನ್ನ ವಿಷಯ ಇವರಿಗೆಲ್ಲಾ ತಿಳಿದರೆ ತನ್ನನ್ನು ಹೀಗೆ ನೋಡಿಕೊಳ್ಳಬಲ್ಲರೇ ಎಂದೂ ನೊಂದು ಕೊಂಡ ಮನದಲ್ಲಿ.

ಮೂರನೇ ದಿನ ನಸುಕಿನಲ್ಲಿಯೇ ಹೊರಟುಬಿಟ್ಟ. ದಾರಿಯುದ್ದಕ್ಕೂ ಯೋಚನೆಯ ಬಿರುಗಾಳಿಯಲ್ಲಿ ತಿರುಗಿದ. ಈಶ್ವರಯ್ಯನವರೊಬ್ಬರೇ ಅರಿತುಕೊಂಡ ಸತ್ಯಸಂಗತಿ ಕೆಲವೇ ದಿನಗಳ ಹಿಂದೆ ತಿಳಿದಿದ್ದರೂ ಅದಕ್ಕಾಗಿ ವ್ಯಥೆಪಟ್ಟರೆ ಮನಸ್ಸಿಗೆ ಇನ್ನಷ್ಟು ಕ್ಲೇಶ. ಅವರ ಆದರ್ಶಗಳನ್ನು ನಿಜಕ್ಕೂ ಮೆಚ್ಚಬೇಕು. ಕೇವಲ ಭಾಷಣಬಿಗಿದಂತೆ ಅಲ್ಲ, ಕಾರ್ಯದಲ್ಲಿ ಮಾಡಿತೋರಿಸಿದ್ದಾರೆ!

ದೇವನಿಗೆ ಅವರ ಉದಾತ್ತಗುಣ, ಕಠೋರ ವರ್ತನೆಗಳೂ ನೆನಪಿಗೆ ಬಂದು ಹಿಂದೆಂದೂ ಇಲ್ಲದ ಅಭಿಮಾನ ಉಕ್ಕಿತು ಅವರ ಮೇಲೆ. ಅವರ ಆಸ್ತಿಗಾಗಿ ಹೊಂಚು

ಹಾಕುತ್ತಿದ್ದ ಸದಾನಂದ ಮತ್ತು ಅವರ ತಂಗಿ ಮಕ್ಕಳು, ಅವರಿಗಿದ್ದ ದ್ವೇಷ ದೇವನಿಗೆ ಹೊಸತಲ್ಲ. "ಮಕ್ಕಳಿಲ್ಲದ ಪುಣ್ಯಾತ್ಮ ಬೇಗ ಸಾಯಬಾರದಿತ್ತೇ" ಎಂದಿದ್ದರಂತೆ. "ನನ್ನ ಮರಣದ ನಂತರ ಸದಾನಂದ ಈ ಮನೆಯಲ್ಲೇ ಸುತ್ತುತ್ತಾ ಇರುತ್ತಾನೆ" ಎಚ್ಚರಿಸಿದ್ದರು ಈಶ್ವರಯ್ಯ. "ನಾಗುವಿಗೆ ತನ್ನ ತಮ್ಮನ ಮಕ್ಕಳ ಮೇಲಿರುವ ವ್ಯಾಮೋಹ ಹೋಗಿಲ್ಲ ಇನ್ನೂ. ಏನೇ ಆಗಲಿ, ಬಂಧುವರ್ಗದಲ್ಲಿ ಅತಿಸಲುಗೆ ಬೇಡ, ದೂರವಿದ್ದಷ್ಟು ಒಳ್ಳೆಯದು."

ಕೃಷ್ಣ ಹುಟ್ಟಿದಾಗ ಕೊಪ್ಪರಿಗೆ ನಿಧಿ ಸಿಕ್ಕಿದಷ್ಟು ಸಂತೋಷವಾಗಿತ್ತು ಅವರಿಗೆ. ಸಿಹಿತಿಂಡಿ ಹಂಚಿದ್ದರು ಬಡಬಗ್ಗರಿಗೆ. ಸುನೀತಿಯ ರೂಪ ಹೊತ್ತ ಮಗು ದಿನವೆಲ್ಲ ಅವರ ತೊಡೆ ಮೇಲೆ. "ಆಡಿಸಿದಳು ಯಶೋದಾ, ಜಗದೋದ್ಧಾರನಾ" ಎನ್ನುವರು. ಕೃಷ್ಣ ನಂತೆ ಕರಿಯ, ತುಕ್ರ, ತ್ಯಾಂಪ ಗೌಡನ ಮಕ್ಕಳನ್ನೂ ಭೇದಭಾವವಿಲ್ಲದೆ ಮುದ್ದಾಡಿದ್ದಾರೆ. ಆಗೆಲ್ಲ ದೇವನಿಗೆ ತಮಗಿಂತ ಕೆಳಮಟ್ಟದಲ್ಲಿರುವ ಬಡ ಮಕ್ಕಳ ಮೇಲೆ ಅಸಹ್ಯಭಾವ. ಆದರೆ ತಂದೆಯೆದುರು ತೋರ್ಪಡಿಸಲು ಹೆದರಿಕೆ. ನಾಗಮ್ಮ ಗುರುಗುಡುತ್ತ "ಮೈಲಿಗೆ ತೊಳ್ಕೊಂಡು ಬನ್ನಿ" ಎನ್ನುತ್ತಿದ್ದರು. ನಾಗಮ್ಮನಿಗೆ ಪತಿ ಕಟ್ಟಿದ ಹರಿಜನ ಸಂಘದ ಮೇಲೆ ಆಸ್ಥೆಯಾಗಲಿ, ಹರಿಜನೋದ್ಧಾರದ ಉತ್ಸಾಹವಾಗಲಿ ಇಲ್ಲ. ದೇವನೂ ಪತಿಯ ಹಾದಿಯಲ್ಲಿ ಹೆಜ್ಜೆಯಿರಿಸಿದಾಗ "ಅಪ್ಪನಿಗೆ ತಕ್ಕ ಮಗ ಹೌದು ನೀನು" ಎಂದಿದ್ದರು.

"ಯಾಕೆ? ಅಮ್ಮನಿಗೆ ತಕ್ಕ ಮಗನಲ್ಲವೇ ನಾನು?" ಕೇಳುತ್ತಿದ್ದ ಕೆಣಕುವ ನಗೆಯಲ್ಲಿ. ಅವನು ಬಾಲ್ಯದಿಂದಲೂ ತಾಯಿಯ ಪ್ರತಿಯೊಂದು ಕೆಲಸಕಾರ್ಯಗಳಲ್ಲಿ ಬಲಗೈ. ಹೆಣ್ಣಿನಂತೆ ಮನೆಕೆಲಸ, ಅಡಿಗೆಕೆಲಸ ಮಾಡುವ ಜಾಣ್ಮೆ ಅವನಲ್ಲಿದೆ. ತಾಯಿ-ತಂದೆಯ ಮನವರಿತು ನಡೆಯುವ ಈ ಹುಡುಗ ಅವರ ಸಮಸ್ತ ಚಿಂತೆ, ದುಃಖವನ್ನು ಧೂಳೀಪಟ ಮಾಡಿ ಅಲ್ಲಿ ಆನಂದದ ಹೊನಲು ಹರಿಸಿದ್ದಾನೆ. ಅದು ಇನ್ನೆಂದಿಗೂ ಬತ್ತಬಾರದು.

ಮನೆಬಿಟ್ಟು ಎರಡು ದಿನಗಳು ಕಳೆದುಹೋಗಿವೆ. ತಂದೆ ಉಸಿರಾಡಲು ಕಷ್ಟಪಡುವುದನ್ನು ನೋಡಿಯೂ ತಾನು ತನ್ನದೇ ಚಿಂತೆಯಲ್ಲಿ ಹೊರಟುಬಂದು ಎಂತಹ ಮೂರ್ಖನಾದೆ. ಸತ್ಯಸಂಗತಿ ಯಾವಾಗಲೂ ಕಠೋರವಾಗಿರುತ್ತದೆಯೇ? ಇಲ್ಲ, ಅದು ತನಗೆ ಪ್ರಿಯವಾಗಲಿ. ಇನ್ನು ಮುಂದೆ ಅವರನ್ನೆಂದೂ ನೋಯಿಸದೆ ಪ್ರೀತಿಯಿಂದ ನೋಡಿಕೊಳ್ಳಬೇಕು.

ಮಂಗಳೂರಿನಲ್ಲಿ ಬಸ್ಸು ಬದಲಾಯಿಸಿ ಬೇರೆ ಬಸ್ಸಿನಲ್ಲಿ ಕಲ್ಯಾಣಪುರಕ್ಕೆ ಬಂದಿಳಿದಾಗಲೆ ಬರಸಿಡಿಲಿನಂತೆ ಬಂದಪ್ಪಳಿಸಿತು ಹೊಸ ಸುದ್ದಿ. ಧಾವಿಸಿಕೊಂಡು ಮನೆ ಸೇರಿದಾಗ ಅಲ್ಲಿ ಆಗಲೇ ಜಾತ್ರೆಯಂತೆ ಸೇರಿದೆ ಜನರ ಗುಂಪು. ಹಿಂಬದಿಯ ಕಾಡಿನಲ್ಲಿ ಏನದು ಬೆಂಕಿ? ಎಲ್ಲಾ ಆಗಿಹೋಯಿತೇ? ದೇವ ಚೀತ್ಕರಿಸಿದ ಒಂದು ಬಾರಿ. ನೆರೆದ ಜನರೆಲ್ಲರೂ ತಲೆತಗ್ಗಿಸಿ ದಾರಿಬಿಟ್ಟರು ಅವನಿಗೆ.

"ಈಗ ಬಂದೆಯಾ ವಾಸುದೇವ. ಎಲ್ಲಾ ಆಗಿಹೋಯಿತಲ್ಲ ನಮ್ಮಪ್ಪ" ಒಳಗಿನಿಂದ ಹೊರಗೆ ಬಂದ ಸದಾನಂದ. ಜೊತೆಯಲ್ಲಿ ಕೇಳಿಬಂದಿತು ನಾಗಮ್ಮನ ರೋದನ. ಎರಡೇ

ಎರಡು ದಿನಗಳಲ್ಲಿ ಎಲ್ಲವೂ ಬದಲಾಗಿ ಹೋಯಿತೇ? ದೇವ ಸರ್ರನೆ ಓಡಿದ ಈಶ್ವರಯ್ಯ ನವರ ಕೋಣೆಗೆ. ಅಲ್ಲಿ ಖಾಲಿಯಾದ ಮಂಚ ಅಣಕಿಸಿತು ಅವನನ್ನು. ಆಗಲೇ ಅವರು ಚಿತೆಯೇರಿದ್ದಾರೆ ಎಂದು ತಿಳಿದು ಮುಷ್ಟಿಬಿಗಿದು ಹುಬ್ಬುಗಂಟಿಕ್ಕಿದ.

"ಅಪ್ಪ ಎಲ್ಲಿದ್ದಾರೆ?"

ಸದಾನಂದನ ತೋರಬೆರಳು ಹಿಂಬದಿಯ ಕಾಡನ್ನು ತೋರಿಸಿತು. ದೇವ ಬಿರುಗಾಳಿ ಯಂತೆ ಓಡಿದ ಕಾಡಿಗೆ. ಅಲ್ಲಿ ನಿಗಿನಿಗಿಸುವ ಕೆಂಡಗಳ ಹೊರತಾಗಿ ಇನ್ನೇನೂ ಇರಲಿಲ್ಲ. ತನಗಾಗಿ ಎಲ್ಲವನ್ನೂ ತ್ಯಾಗಮಾಡಿದ ತಂದೆಯನ್ನು ಇಷ್ಟು ಬೇಗ ಕಳೆದುಕೊಂಡೆನೇ ತಾನು? ಕೊನೆಗಳಿಗೆಯನ್ನೂ ಅವರೊಡನೆ ಕಳೆಯಲಾರದ ತಾನೊಬ್ಬ ಪಾಪಿ.

ನೆಲಕ್ಕೆ ಬಗ್ಗಿ ಒಂದು ಮುಷ್ಟಿ ಒದ್ದೆ ಮಣ್ಣನ್ನೆತ್ತಿ ಬಿಸಾಡಿದ ಚಿತೆಗೆ. ಮನೆಗೆ ಬಂದಾಗ ಅವನ ದುಃಖ ಸದಾನಂದನ ಮೇಲೆ ತಿರುಗಿತು. ನಿನ್ನೆ ರಾತ್ರೆ ಜೀವ ಹೋಯಿತಂತೆ. ಸಾಯುವ ಕೊನೆಗಳಿಗೆಯಲ್ಲೂ ದೇವನ ಹೆಸರು ಕರೆಯುತ್ತಿದ್ದರಂತೆ. ದೇವ ಇನ್ನೂ ಕಣ್ಣೀರಿಟ್ಟ ಈ ಮಾತು ಕೇಳಿ. ತಾನು ಬರುವ ತನಕ ಹೆಣವನ್ನು ಕಾದಿರಿಸಬಾರದಿತ್ತೇ, ನಿನ್ನೆ ದಿನ ತನಗೆ ಟೆಲಿಗ್ರಾಂ ಕೊಡಬಾರದಿತ್ತೇ.

"ನಿನ್ನ ತಂದೆ ಇಲ್ಲಿ ನರಳ್ತಾ ಇದ್ದರೂ ಹದಿನೈದು ದಿನಗಳಿಗೆ ಹೆಂಡತಿಯ ಮಗ್ಗುಲಲ್ಲಿ ಮಲಗಲು ಹೋದವನು ನೀನು" ವ್ಯಂಗ್ಯವಾಗಿ ನಕ್ಕ ಸದಾನಂದ, "ಟೆಲಿಗ್ರಾಂ ಕೊಡು ಎಂದಿದ್ದಳು ಅಕ್ಕ. ಆದರೆ ನೀನು ನಿನ್ನೆ ಬಂದೇ ಬರುತ್ತೀಯಾ ಎಂದುಕೊಂಡಿದ್ದೆ. ರಾತ್ರಿ ಯೆಲ್ಲ ಏನು ಮಳೆ... ಇವತ್ತು ನಸುಕು ನಾಲ್ಕು ಗಂಟೆಗೆ ಮಳೆ ನಿಂತ ಮೇಲೆ ಚಿತೆ ಏರಿಸಿದೆವು. ನಾನೇ ಬೆಂಕಿ ಕೊಟ್ಟದ್ದು."

"ಸಾಕು ನಿಲ್ಲಿಸಿ ನಿಮ್ಮ ಪುರಾಣ" ದೇವ ಕಿವಿಮುಚ್ಚಿಕೊಂಡ. "ನನಗಾಗಿ ಕಾಯುವ ತಾಳ್ಮೆ, ಮನಸ್ಸು ಇರಲಿಲ್ಲ ಎನ್ನಿ. ಒಂದೇ ಒಂದು ಬಾರಿ ಅವರ ಕಾಲು ಮುಟ್ಟಿ ನಮಸ್ಕಾರ ಮಾಡ್ತಾ ಇದ್ದೆನಲ್ಲ..." ಅವನು ಅಲ್ಲೇ ಕುಸಿದುಕುಳಿತು ಹಣೆಗೆ ಕೈ ಇರಿಸಿದ.

ಸೂತಕದ ಮನೆ. ಮಾಡುವ ಕೆಲಸಗಳು ಬಹಳಷ್ಟಿವೆ. ಯಾರು ಯಾರೋ ಬಂದು ಹೋಗುತ್ತಿದ್ದಾರೆ. ದುಃಖಿತರಿಗೆ ಎರಡು ಸಮಾಧಾನದ ನುಡಿ ಹೇಳಲು. ಒಲೆ ಹೊತ್ತಿಸು ವುದೂ ಬೇಡವಾಗಿದೆ ಯಾರಿಗೂ. ನಾಗಮ್ಮ ಹಣೆ ಜಜ್ಜಿಕೊಳ್ಳುತ್ತ ಮೂಲೆಸೇರಿದ್ದಾರೆ. ಮಧ್ಯಾಹ್ನ ದೇವಸ್ಥಾನದ ಅರ್ಚಕರು ಒಂದಷ್ಟು ಫಲಾಹಾರ ಮಾಡಿ ತಂದುಕೊಟ್ಟರು ಅವರಿಗೆಲ್ಲ. ಅಂದು ದಿನವೆಲ್ಲ ಹರಿಜನ ಸಂಘದಲ್ಲಿ ಭಜನೆಯೇ ಭಜನೆ.

ಸದಾನಂದ ಅಗತ್ಯವಿಲ್ಲದಿದ್ದರೂ ಅಕ್ಕನಿಗೆ ಸಹಾಯಮಾಡುವ ನೆಪದಲ್ಲಿ ಹದಿನೈದು ದಿನ ಶಾಲೆಗೆ ರಜೆ ಬರೆದು ಹಾಕಿದ. ಅವನಿಗೆ ಇಲ್ಲಿನ್ನು ಯಾರ ದಾಕ್ಷಿಣ್ಯವಿಲ್ಲ. ಭೀತಿ ಮೊದಲೇ ಇಲ್ಲ. ನಿಜವಾಗಿಯೂ ಭೀತಿಯಾದದ್ದು ದೇವನಿಗೆ. ಈಶ್ವರಯ್ಯನವರು ಸಾಯುವ ಮೊದಲು "ನೀನೇ ನನ್ನ ಕರ್ಮಾಂತರಗಳನ್ನು ಮಾಡಬೇಕು" ಎಂದಿದ್ದರೂ ಅವನಿಗೆ ಅದೇಕೋ ಧೈರ್ಯ ಬರಲಿಲ್ಲ. ಮನೆಯಲ್ಲಿರುವ ಅನೇಕ ಹಳೆಯ

ಪುಸ್ತಕಗಳನ್ನು, ಅಪ್ಪ ಸಂಗ್ರಹಿಸಿದ ಅನೇಕ ಉಪನಿಷತ್ತು, ಶಾಸ್ತ್ರ ಪುರಾಣಗಳನ್ನು ತೆಗೆದು ನೋಡಿದ, ಪರಿಹಾರ ಸಿಗಲಿಲ್ಲ. ಊರ ಹಿರಿಯರನ್ನೋ, ಜೋಯಿಸರನ್ನೋ ಕೇಳಿದರೆ ಈ ಸಮಯದಲ್ಲಿ ದೊಡ್ಡ ಗಲಾಟೆಯಾದೀತು. ತಾನು ಅನಾಥಾಶ್ರಮದಿಂದ ತಂದ ಯಾರದೋ ಅನಾಥ ಮಗುವೆಂದು ತಿಳಿದಿದ್ದರೂ ತನಗೆ ಈ ಚಿಂತೆಯಿರಲಿಲ್ಲ.

ಏಳನೇ ದಿನ ನಾಲ್ಕು ಜನ ಪುರೋಹಿತರು ಬಂದು ಸೇರಿದರು ಮನೆಯಲ್ಲಿ. ದೇವನಿಗೆ "ಮಡಿಯುಟ್ಟು ಬಾ" ಎಂದಾಕ್ಷಣ ಅವನು ನಡುಗಿಹೋದ. ಅನುಮಾನದಿಂದ ನೋಡಿದ ಎಲ್ಲರನ್ನೂ. ಕಾಲುಗಳು ಸ್ವಾಧೀನ ತಪ್ಪಿದವು, ಮುಖ ಬಿಳುಚಿಕೊಂಡಿತು. ತಾನಂತೂ ಈ ಪುಣ್ಯಾತ್ಮನ ಕೆಲಸ ಮಾಡಲಾರೆ. ದೊನ್ನೆ ಕಟ್ಟುತ್ತ ಕುಳಿತ ಸದಾನಂದನನ್ನು ಬದಿಗೆ ಕರೆದು,

"ಮಾವ, ಅಪ್ಪನ ಕುಟುಂಬಸ್ಥರು ಯಾರಾದರೂ ಇದ್ದರೆ ಕರೆಯಿಸಿ. ಅವರ ಹತ್ತಿರ ಈ ಕೆಲಸ ಮಾಡಿಸೋಣ" ಎಂದ.

"ಇವೆಲ್ಲ ನಿನ್ನ ಹಕ್ಕಿನದು. ನೀನು ಮಾಡಲೇ ಬೇಕು."

"ಅಪ್ಪನಿಗೂ ನನಗೂ ಯಾವ ಸಂಬಂಧವೂ ಇಲ್ಲ. ನಾನಂತೂ ಈ ಕೆಲಸ ಮಾಡಲಾರೆ. ದಯವಿಟ್ಟು ನನ್ನ ಮಾತು ಕೇಳಿ."

ಸದಾನಂದನ ಮೂಗಿನ ಹೊಳ್ಳೆಗಳು ಉಬ್ಬಿಕೊಂಡವು. ಎಷ್ಟಿದ್ದರೂ ಪರದೇಶಿ ಹುಡುಗ. "ಏನೋ, ಆಸ್ತಿಯೆಲ್ಲ ಸಿಕ್ತು ಅಂತ ಅಹಂಕಾರ ಬಂತೇನು ನಿನಗೆ? ಕರ್ಮಾಂತರ ಮಾಡುವಾಗ ಎಲ್ಲಿ ಹಣ ಖರ್ಚಾಗುತ್ತದೆ ಎಂದು ಹೆದರಿಕೆ ಅಲ್ಲವೇ?"

"ಏನು?" ಮುಖ ತಿರುಗಿಸಿದ ದೇವ, "ಸಾವಿರ ಬ್ರಾಹ್ಮಣರು ಬೇಕಾದರೆ ಬರಲಿ, ಇಡೀ ಊರಿಗೇ ಅನ್ನಸಂತರ್ಪಣೆ ಮಾಡಿಸಬಲ್ಲೆ. ಹಣಕ್ಕಾಗಿ ಹಿಂದೆ ಮುಂದೆ ನೋಡುವವನಲ್ಲ ಈ ದೇವ. ಯಾರು ಬೇಕಾದರೂ ಮುಂದಾಗಿ ಕಾರ್ಯ ಮಾಡಲಿ. ನಾನು ಹಿಂದಿನಿಂದ ಸಹಾಯ ಕೊಡ್ತೇನೆ."

"ಗಂಡುಮಗ ಬೇಕೆಂದು ನಿನ್ನನ್ನು ಸಾಕಿದ್ದು ಯಾಕೆ ಮತ್ತೆ?" ಒಳಬಾಗಿಲಿನಿಂದ ಕೇಳಿಸಿತು ನಾಗಮ್ಮನ ಸ್ವರ, "ಹೋಗಿ ಮಡಿಯುಟ್ಟು ಬಾ."

"...ಅಮ್ಮಾ..." ಸರ್ರನೆ ಒಳಗೆ ಬಂದ, "ನಾನು ಎಂಥವನು, ಯಾರು ಎನ್ನುವುದು ಗೊತ್ತೇ ನಿನಗೆ?"

"ಅದರ ಆವಶ್ಯಕತೆ ನಮಗಿಲ್ಲ ಇಲ್ಲಿ. ಹೋಗು, ಸ್ನಾನ ಮುಗಿಸಿ ಮಡಿಯುಟ್ಟು ಬಾ. ಆಗಲೇ ಹೊತ್ತಾಯಿತು."

ದೇವನ ಮನಸ್ಸು ತೂಗುಯ್ಯಾಲೆಯಾಡಿತು. ತಪ್ಪು-ಒಪ್ಪುಗಳನ್ನು ನಿರ್ಣಯಿಸಲಾರದಾದ ಅವನು. ಇವರುಗಳೆಲ್ಲ ನಡೆದುಕೊಂಡು ಬಂದ ಕ್ರಮ, ಆಚಾರಗಳಿಗೆ ಇದು ದ್ರೋಹ, ಅನ್ಯಾಯ, ಮೋಸ! ಎಲ್ಲೋ ಹಾನಿಯೋ ಕೆಡುಕೋ ಸಂಭವಿಸಲಿದೆ ತನಗೆ.

ಅಪ್ಪನೂ ತನ್ನಿಂದ ಶಾಂತಿ ಹೊಂದಲಾರರು. ತಾನೇಕೆ ಅವರ ಶಿಷ್ಟಾಚಾರಗಳಿಗೆ ದ್ರೋಹ ಬಗೆಯಲಿ? ಎಲ್ಲವನ್ನೂ ತಿಳಿಸಿ ಹೊರಟುಹೋಗುತ್ತೇನೆ ಇಲ್ಲಿಂದ.

ಯಾರೋ ಹಿಂದಿನಿಂದ ಗಹಗಹಿಸಿ ನಕ್ಕರು. ಸೈತಾನ! ನೋಡುತ್ತಾನೆ, ಮನೆಯವರೆಲ್ಲರೂ ಇದ್ದಕ್ಕಿದ್ದಂತೆ ಕ್ರೂರ ಮೃಗಗಳಾಗಿ ಅವರೆಲ್ಲರ ಬೀಭತ್ಸ ಕಣ್ಣುಗಳು ಬೆಂಕಿ ಕಾರುತ್ತ ಎರಗುತ್ತವೆ ಅವನತ್ತ. "ಏಯ್, ಹುಡುಗಾ, ಈ ಮನೆಗೆ ಬಾ ಎಂದು ಯಾರು ಹೇಳಿದರು ನಿನಗೆ? ಯಾರು ಅಧಿಕಾರ ಕೊಟ್ಟರು ಇಲ್ಲಿ? ನಡಿ, ನಡಿ ಹೊರಗೆ." ಬೆಂಕಿಯಂತಹ ಸಹಸ್ರ ಕೈಗಳು ಕುತ್ತಿಗೆ ಹಿಡಿದು ಹೊರಗೆ ನೂಕುತ್ತಿವೆ. ಆಗ ಅವನೆಲ್ಲೋ ಮುಳ್ಳುಬೇಲಿಯಿಂದ ಸುತ್ತುವರಿದ ಆಳವಾದ ಕೆಸರಿನಲ್ಲಿ ಹೂತುಹೋಗಿದ್ದಾನೆ. ಏನಾಯಿತು ಇದೆಲ್ಲ? ಮೇಲಿನಿಂದ ಗಹಗಹಿಸುವ ನಗೆ. ಎಲ್ಲರೂ ಒಂದೇ ಹಾಗೆ ತುಳಿದು ದಬ್ಬುತ್ತಿದ್ದಾರೆ ಕೆಳಗೆ. 'ಬಿಡಿ ನನ್ನನ್ನು. ಈ ಶೃಂಖಲೆಯಿಂದ ಬಿಡಿಸಿ' ಎಂದೂ ಕೂಗುತ್ತಿದ್ದಾನೆ ಆರ್ತನಾಗಿ. ಆಮೇಲೆ ನೋಡುತ್ತಾನೆ, ಏನಾಶ್ಚರ್ಯ, ನಾಯಿಕೊಡೆಗಳಂತೆ ಸಹಸ್ರಾರು ತಲೆಗಳು ಮುಳ್ಳುಬೇಲಿಯ ಒಳಗೆ ಕೆಸರಿನಲ್ಲಿ ಎದ್ದುನಿಂತು ವೇದನೆ, ಕರುಣೆಯ ನೋಟದಲ್ಲಿ ನೋಡುತ್ತಿವೆ. ಅಗೋ, ಈಗಲ್ಲಿ ಯಾರೂ ಇಲ್ಲ. ಎಲ್ಲೋ ದೂರದಲ್ಲಿ ಅನೇಕ ಕಂಠಗಳ ವಿಚಿತ್ರ ನಗು...

"ಹ್ಹಹ್ಹ...ಹ್ಹಾ ವಾಸುದೇವ" ಸದಾನಂದ ಜೋರಾಗಿ ನಗುತ್ತಿದ್ದಾನೆ. "ಎಲ್ಲಿ ನಿನ್ನ ಯೋಚನೆ? ಒಂದು ಕೈ ನೀರು ಹಾಕಲಾರದಷ್ಟು ಅಯೋಗ್ಯನೇ ನೀನು? ದಾರಿಯಲ್ಲೆಲ್ಲೋ ಬಿದ್ದವನೆ..."

"ನಿಲ್ಲಿಸಿ ನಿಮ್ಮ ಮಾತು" ಕೆರಳಿದ ದೇವ. ಯಾವುದೋ ಭ್ರಮೆಯಲ್ಲಿ ಮುಳುಗಿದವನಿಗೆ ಹಠಾತ್ತನೆ ಉಕ್ಕಿತು ಕೋಪ. "ನನ್ನ ವಿಷಯದಲ್ಲಿ ನಿಮ್ಮ ನಾಲಿಗೆ ಇನ್ನು ಉದ್ದವಾಯಿತು ಅಂದರೆ ಏನ್ಮಾಡ್ತೇನೆ ನೋಡಿಕೊಳ್ಳಿ. ಅಮ್ಮ... ಕೆಲಸ ಮುಂದುವರಿಯಲಿ". ಆವೇಶದಿಂದ ತಂತಿಯ ಮೇಲಿರುವ ಬಟ್ಟೆ ಎಳೆದುಕೊಂಡು, "ಭಟ್ಟರೇ, ಕಾರ್ಯ ಪ್ರಾರಂಭವಾಗಲಿ. ಇದೋ ಈಗಲೇ ಸ್ನಾನ ಮಾಡಿ ಬಂದೆ" ಎಂದವನೇ ಕೈ ಬೀಸುತ್ತ ನಡೆದ ಬಚ್ಚಲುಮನೆಗೆ.

ತಲೆಯ ಮೇಲಿದೋ ತಣ್ಣೀರಿನ ಅಭಿಷೇಕ. ಇದೆಂತಹ ಸಂದಿಗ್ಧ ಪರಿಸ್ಥಿತಿ. ಕೃಷ್ಣ ಕೃಷ್ಣಾ... ಅಪ್ಪ ಎಲ್ಲವನ್ನೂ ಯೋಚಿಸಿ ಮಾಡಿದ್ದರೂ ತಾನೇಕೆ ಹಿಂದೇಟು ಹಾಕುತ್ತಿದ್ದೇನೆ. ಸ್ನಾನಮಾಡುತ್ತಿದ್ದಂತೆ ಅವನ ಕೈ ಪವಿತ್ರ ಜನಿವಾರವನ್ನು ಸವರಿಕೊಂಡಿತು. ಮೈಯೆಲ್ಲ ರೋಮಾಂಚನ. ಇದೇ ಮನೆಯೆದುರು ಹಾಕಿದ ದೊಡ್ಡ ಚಪ್ಪರದಲ್ಲಿ ಸಕಲ ಬಂಧು ಪರಿವಾರದ ಶುಭಹಾರೈಕೆಯ ಮಧ್ಯೆ ನಡೆದಿತ್ತು ಅವನ ಉಪನಯನ. ಇದೇ ಬಚ್ಚಲಿನಲ್ಲಿ ಉದಕಶಾಂತಿಯ ದಿನ ಸ್ವತಃ ನಾಗಮ್ಮನೇ ಅವನ ತಲೆಗೆ ನೀರೆರೆದಿದ್ದರು. ತಂದೆ ಮೈ ಒರಸಿದ್ದರು. ಆಗಿನ್ನೂ ಅವನಿಗೆ ಒಂಬತ್ತನೇ ವರ್ಷ. ಪೂರ್ಣ ಬೋಳಿಸಿದ ತಲೆ, ಜರಿಪಂಚೆ ಸುತ್ತಿದ ಮೈ, ಕೈಯ್ಯಲ್ಲೊಂದು ಕೋಲು, ಏನೋ ವಿಚಿತ್ರವಾಗಿ ಕಾಣುತ್ತಿತ್ತು. ಇದೇ ವೇಷದಲ್ಲಿ ತಾಯಿಯೆದುರು ನಿಂತು ಮೊದಲ ಭಿಕ್ಷೆ. "ಭವತಿ ಭಿಕ್ಷಾಂ

ದೇಹಿ!" ತಾಯಿ ಅವನಿಗೆ ಭಿಕ್ಷೆ ನೀಡುತ್ತ ಹನಿದುಂಬಿದ ಕಣ್ಣುಗಳಲ್ಲಿ "ನೂರುಕಾಲ ಬಾಳು" ಎಂದಿದ್ದರು. ಅನಂತರ ತುಂಬಿದ ಸಭೆಯಲ್ಲಿ ಗಾಯತ್ರಿ ಮಂತ್ರೋಪದೇಶ. ಇಂದು ಅವನು ಮತ್ತೊಮ್ಮೆ ಹುಟ್ಟಿ "ದ್ವಿಜ"ನಾಗುವ ಸಂಭ್ರಮದ ಸಡಗರ.

ಯೋಚಿಸುತ್ತ ದೇವನ ಮೈ ಹೂವಿನಂತೆ ಹಗುರವಾಗಿ ಪುಳಕಿತಗೊಂಡಿತು. ಈ ತನಕ ಯಾವ ಕರ್ಮದಲ್ಲಿಯೂ ಲೋಪವಿಲ್ಲದಂತೆ ನಡೆದುಕೊಂಡು ಬಂದಿದ್ದೇನೆ. ಕೆಸರಿನಲ್ಲಿ ತಾವರೆ ಹುಟ್ಟಿದಂತೆ ನನ್ನ ಬದುಕೆಲ್ಲ ಬ್ರಾಹ್ಮಣರ ಆಚಾರ, ವಿಚಾರ, ಒಡನಾಟದಲ್ಲಿ ಸಾಗಿಬಂದಿದೆ. ಅವರಿಗಿಂತ ನಾನೇನು ಕಡಿಮೆ? ಅಪ್ಪ ಅಂದಿದ್ದರು, "ನಿನ್ನ ಹುಟ್ಟನ್ನು ಮರೆತುಬಿಡು. ನೀನು ಬೆಳೆದ ಪರಿಸರ ನೋಡು" ಎಂದು. ಸರಿ, ಇನ್ನೇಕೆ ಬೂದಿ ಕೆದರಿದಂತೆ ಸಣ್ಣ ವಿಷಯಕ್ಕಾಗಿ ಚಿಂತೆ? ಸದಾನಂದನ ತಲೆ ತಗ್ಗಬೇಕು ಇಲ್ಲಿ. ಮನೆ ಯಜಮಾನ ನಾನು. ಅವನ ಅಧಿಕಾರವಿರಬಾರದು.

ಒದ್ದೆ ಪಂಚೆಯುಟ್ಟು ಹೊರಗೆ ಬಂದು ಮಡಿಯುಟ್ಟು ಪುರೋಹಿತರು ತೋರಿದ ಸ್ಥಳದಲ್ಲಿ ಕುಳಿತಾಗ ಅರೆಗಳಿಗೆ ಹೃದಯಬಡಿತ ನಿಂತ ಅನುಭವ. ಕಣ್ಣುಗಳನ್ನು ಮುಚ್ಚಿಕೊಂಡ. "ನಿಮಗೆಲ್ಲವೂ ತಿಳಿದಿದೆ ಅಪ್ಪ. ಯಾವುದೋ ಋಣಾನುಬಂಧದಿಂದ ನಾನು ನಿಮ್ಮ ಮಗನಾಗಿ ಬೆಳೆದೆ. ಈಗ ಈ ಸ್ಥಾನದಲ್ಲಿ ಕುಳಿತು ನಿಮ್ಮ ಉತ್ತರಕ್ರಿಯೆ ನಡೆಸುತ್ತಿದ್ದೇನೆ. ಇದು ಅಪರಾಧವಾದರೂ ನಿಮ್ಮ ಆಶೀರ್ವಾದ ನನ್ನ ಮೇಲಿರಲಿ" ಬೇಡಿಕೊಂಡಿತು ಅವನ ಹೃದಯ.

* * * * *

ಎಲ್ಲಿಯೂ ಯಾವ ಲೋಪವೂ ಬಾರದಂತೆ ಈಶ್ವರಯ್ಯನವರ ಕರ್ಮಾಂತರ ಮುಗಿಯಿತು. ಆ ಮೂರು ದಿನಗಳೂ ಹರಿಜನರಿಗೆ ಪಾಯಸದೂಟ. ಮನೆಕೆಲಸಕ್ಕೆ ಬರುವ ಇತರ ಜಾತಿಯವರಿಗೂ ಬಡಿಸಿದ. ಹೊರಜನರಿಗೆ ಅಷ್ಟಷ್ಟು ರಾಶಿ ಅನ್ನ ಮಾಡಿ ಬಡಿಸುವುದೆಂದರೆ ಸದಾನಂದನಿಗೆ ಆಗದು. ಅವನ ಕಣ್ಣುಗಳು ಕೆಂಪಾದವು. "ಬಂಧು ವರ್ಗಕ್ಕೆ ತೃಪ್ತಿಯಾದರೆ ದೇವತೆಗಳಿಗೆ ತೃಪ್ತಿಯಾದಂತೆ. ಇವನೊಬ್ಬ ಊರಿಗೆಲ್ಲ ಬಡಿಸುವ ಅನ್ನದಾನಿ" ಎಂದ ಕ್ರೋಧದಲ್ಲಿ.

"ಅಪ್ಪನಿಗೆ ಬಂಧುವರ್ಗದ ಮೇಲೆ ಯಾವತ್ತೂ ವಿಶೇಷ ಆಸ್ಥೆ ಇರಲಿಲ್ಲ. ಅವರು ಜೀವ ತೇಯ್ದದ್ದು ದುರ್ಬಲವರ್ಗದ ಜನರಿಗಾಗಿ. ಹರಿಜನರ ಏಳ್ಗೆಗಾಗಿ. ಅವರನ್ನು ತೃಪ್ತಿಪಡಿಸದ ಹೊರತು ಅಪ್ಪನ ಆತ್ಮಕ್ಕೆ ತೃಪ್ತಿಯಿಲ್ಲ" ಎಂದ ದೇವ ಶಾಂತನಾಗಿ.

ಕೆಲಸಕಾರ್ಯಗಳು ನಿರ್ವಿಘ್ನವಾಗಿ ನೆರವೇರಿ ಬಂದ ಅತಿಥಿಗಳು ಹೊರಟುಹೋದ ಮೇಲೆ ಎಂದಿನಂತೆ ಶಾಂತವಾಯಿತು ಮನೆ. ಈಶ್ವರಯ್ಯನವರು ಇಲ್ಲದಿರುವ ಕೊರತೆ ಸ್ಪಷ್ಟವಾಗಿತ್ತು. ಕೃಷ್ಣ ದಿನವೆಲ್ಲ 'ಅಜ್ಜ ಎಲ್ಲಿ?' ಎಂದೂ ಹಠಹಿಡಿಯುತ್ತಿದ್ದ.

ಈ ಮಧ್ಯೆ ಸದಾನಂದನಿಗೆ ಆಸ್ತಿ ಹೇಗಿದೆ ಎಂಬ ಕುತೂಹಲ ಅಧಿಕಗೊಂಡಿತ್ತು. ದಾಕ್ಷಿಣ್ಯ, ಯಾರ ಅಳುಕೂ ಇಲ್ಲದ ಅವನು ಅಕ್ಕನಿಂದಲೇ ಆಸ್ತಿ ರಿಕಾರ್ಡನ್ನು

ತರಿಸಿಕೊಂಡು ಕನ್ನಡಕ ಮೂಗಿಗೇರಿಸಿ ಪರಿಶೀಲಿಸಿದ. ಫಲವತ್ತಾದ ನಾಲ್ಕು ಎಕರೆ ಅಡಿಕೆ ತೋಟ, ಹೊಳೆ ಬದಿಯ ತೆಂಗಿನ ತೋಟ, ನಾಲ್ಕೂವರೆ ಎಕರೆ ಎರಡು ಬೆಳೆ ತೆಗೆಯುವ ಗದ್ದೆ ಮತ್ತು ಸಮೃದ್ಧ ಕಾಡು ದೇವನ ಹೆಸರಿನಲ್ಲಿ! ಈಶ್ವರಯ್ಯ ತಮಗಾಗಿ ಏನನ್ನೂ ಇಟ್ಟುಕೊಂಡಿಲ್ಲ. ಹೊಳೆಯ ಉತ್ತರಭಾಗದ ಬೆಳೆ ಬೆಳೆಯದ ಕೆಲವೇ ಮುದಿ ತೆಂಗಿನ ಮರಗಳಿರುವ ಪದುವಿನಂತಹ ಕಲ್ಲು ಭಾಗ ನಾಗಮ್ಮನ ಹೆಸರಿನಲ್ಲಿದೆ. ಇದೆಂತಹ ಅನ್ಯಾಯ. ನಾಗಮ್ಮನ ಹೆಸರಿನಲ್ಲಿ ತೋಟ ಗದ್ದೆ ಯಾಕೆ ಬರೆಯಲಿಲ್ಲ. ಬ್ಯಾಂಕ್ ನಲ್ಲಿರುವ ಅಷ್ಟಿಷ್ಟು ಪುಡಿಗಾಸು ದೇವನದು.

ಸದಾನಂದನ ಆಸೆಗೆ ತಣ್ಣೀರೆರಚಿದಂತಾಯಿತು. ಅವನು ಅಂದುಕೊಂಡಿದ್ದ, ಹೇಗೂ ಅಕ್ಕನಿಗೆ ತಾನೆಂದರೆ ಇಷ್ಟ. ಅಕ್ಕನ ಪಾಲಿನ ಭೂಮಿಯಲ್ಲಿ ತನ್ನ ಒಬ್ಬ ಮಗನನ್ನು ಕುಳ್ಳಿರಿಸಿದರೆ ಆಮೇಲೆ ನಿಶ್ಚಿಂತೆ. ಈಗ ನೋಡಿದರೆ ಎಣಿಸಿದಷ್ಟು ಸುಲಭವಿರಲಿಲ್ಲ ಈ ಮಾರ್ಗ. ಈಶ್ವರಯ್ಯನವರು ಇರುವಾಗ ಆಸ್ತಿ ವಿಷಯದಲ್ಲಿ ಕೇಳುವ ಎದೆಗಾರಿಕೆ ಅವನಿಗೆಲ್ಲಿ ಇತ್ತು? ಎಂದೋ ಒಮ್ಮೆ ಕೇಳಿದಾಗ, "ನಿನಗೇಕೆ ನಮ್ಮ ವಿಷಯದಲ್ಲಿ ಮೂಗು ತುರುಕಿಸುವ ಕೆಲಸ?" ಎಂದು ರಪ್ಪನೆ ಬಾಯಿಮುಚ್ಚಿಸಿದ್ದರು.

ಅವನು ಅಸಮಾಧಾನದಲ್ಲಿ ಗೊಣಗಿದ, "ನ್ಯಾಯವಾಗಿ ಭಾವ ನಿನ್ನ ಹೆಸರಿಗೆ ಫಲಬರುವ ತೋಟ, ಗದ್ದೆ ಬರೆದುಹಾಕಬೇಕಿತ್ತು ಅಕ್ಕ. ನೀನ್ಯಾಕೆ ಮೊದಲೇ ಕೇಳಿ ಕೊಳ್ಳಲಿಲ್ಲ? ವಾಸುದೇವನಿಗೇನು, ಪೂರ್ಣ ಆಸ್ತಿ ಸಿಕ್ಕಿದೆ. ನಿನ್ನ ಚಿಂತೆ ಯಾಕೆ?"

"ಬುದ್ಧಿ ಎಲ್ಲಿಟ್ಟಿದ್ದೀರಿ ಮಾವಾ?" ದೇವ ಹುಬ್ಬೇರಿಸಿದ. "ಅಮ್ಮನ ಹೆಸರಿಗೆ ಆಸ್ತಿ ಬರೆದುಹಾಕಲು, ಸಮ ಅರ್ಧಪಾಲು ಕೊಡಲು ನಾನೇನು ಹೊರಗಿನವನೇ? ಮನೆ ಯವನಾದ ನಾನಲ್ಲದೆ ಅಮ್ಮನನ್ನು ಇನ್ಯಾರು ನೋಡಿಕೊಳ್ತಾರಂತೆ?"

"ಸರಿಯಾಗಿ ಹೇಳಿದಿ ದೇವ" ನಾಗಮ್ಮ ಅಂದರು, "ಈ ಮುದುಕಿಗೆ ಇಳಿವಯಸ್ಸಿ ನಲ್ಲಿ ಇನ್ನೇನು ಬೇಕು? ಒಂದು ಮುಷ್ಟಿ ಗಂಜಿ."

"ಗಂಜಿ ಯಾರು ಬೇಕಾದರೂ ಹಾಕ್ತಾರೆ, ಅದೇನು ಮಹಾ ಅಲ್ಲ ಬಿಡು" ಕನ್ನಡಕ ಕೆಳಗಿಳಿಸುತ್ತ ಹೇಳಿದ ಸದಾನಂದ, "ಈಗಿನ ಕಾಲದಲ್ಲಿ ಯಾರನ್ನೂ ನಂಬಬಾರದು."

"ಹ್ಹೋ ಹ್ಹೊ... ಹ್ಹೋ..." ಜೋರಾಗಿ ನಕ್ಕ ದೇವ, "ನಿಮ್ಮ ಮಾತು ನೂರರಷ್ಟು ಸತ್ಯ. ನಾನೂ ನಿಮ್ಮನ್ನು ನಂಬಲಾರೆ ಗೊತ್ತೇ?"

ಸದಾನಂದನ ತಲೆಯಲ್ಲಿ ಇನ್ನೂ ಏನೇನೋ ಆಲೋಚನೆಗಳು. ಅಕ್ಕನ ಹೆಸರಿ ನಲ್ಲಿರುವ ಖಾಲಿ ಪ್ರದೇಶವಾದರೂ ಸರಿಯೆ, ಕಲ್ಲು ಮಣ್ಣು ತುಂಬಿರುವ ಭೂಮಿ ಯಾದರೂ ಸರಿಯೆ, ತನ್ನ ಮಕ್ಕಳಿಂದ ಅಲ್ಲಿ ಕೃಷಿ ಮಾಡಿಸಬೇಕು. ನಾಗಮ್ಮ ಹಿಂದೊಮ್ಮೆ ಹೇಳಿದ್ದರು, "ನನ್ನ ಹೆಸರಿನಲ್ಲಿರುವ ಸ್ವಲ್ಪ ಭೂಮಿಯನ್ನು ನಿನ್ನ ಮಕ್ಕಳಲ್ಲಿ ಒಬ್ಬನಿಗೆ ಬರೆದುಹಾಕ್ತೇನೆ." ಈ ಮಾತಿನ ಭರವಸೆಯಲ್ಲಿ ಧೈರ್ಯದಿಂದ ಯಾರಿಗೂ ತಿಳಿಯದಂತೆ ಹೊಳೆಯ ಉತ್ತರ ಭಾಗವನ್ನೆಲ್ಲ ತಿರುಗಾಡಿ ಬಂದ. ಎರಡು ಹೊಲೆಯರ ದಟ್ಟಿಗೆಗಳು,

ಒಂದು ಮುಸ್ಲಿಂ ಕುಟುಂಬವಿರುವ ಆ ಸ್ಥಳ, ಅದರಾಚೆ ಕಾಡು ಅವನು ತಿಳಿದಿರುವುದಕ್ಕಿಂತಲೂ ಅತ್ಯಲ್ಪವಾಗಿದೆ. ಕಾಡಿನಾಚೆಯ ಭಾಗ ಸರಕಾರದ್ದು. ಇಲ್ಲಿ ಬೇಸಾಯ ಮಾಡುವುದಾದರೂ ಏನನ್ನು? ಹೇಗೆ?

ಅಕ್ಕನಲ್ಲಿ ಗುಟ್ಟಾಗಿ ಹೇಳಿಕೊಂಡ, "ಸರಕಾರಿ ಭೂಮಿಯನ್ನು ನನ್ನ ಅಥವಾ ಮಗನ ಹೆಸರಿಗೆ ದರಕಾಸ್ತು ಮಾಡಿಕೊಂಡರೆ ಚೆನ್ನಾಗಿ ಕೃಷಿ ಮಾಡಬಹುದು. ದೇವನಿಗೆ ಹೇಳಿನೋಡು ಅಕ್ಕ."

"ಆದರೆ ಆ ಭೂಮಿಯನ್ನು ಹರಿಜನರಿಗೆ ದರಖಾಸ್ತು ಮಾಡಿಸಬೇಕೆಂದು ಒಂದು ವರ್ಷದಿಂದ ಪ್ರಯತ್ನಪಡ್ತಾ ಇದ್ದಾನೆ ದೇವ. ನೀನೇ ಅವನನ್ನು ಕೇಳಿನೋಡು. ಅವನು ತಾನೇ ಈ ಮನೆ ಯಜಮಾನ?"

"ಶಶಿಧರ ಯಾವ ಕೆಲಸವಿಲ್ಲದೆ ಮನೆಯಲ್ಲಿದ್ದಾನೆ. ಅವನನ್ನು ಕಳುಹಿಸಲಾ ಇಲ್ಲಿಗೆ? ನಿನ್ನ ಭೂಮಿಯಲ್ಲಿ ಅವನಿಗಿಷ್ಟವಾದ ಕೃಷಿ ಬೆಳೆದುಕೊಳ್ಳಲಿ."

ನಾಗಮ್ಮ ಬೇಡವೆನ್ನಲಿಲ್ಲ. ನಿರಾಸೆಯಲ್ಲಿ ಸ್ವಲ್ಪ ಆಸೆ ಹೊತ್ತು ಸದ್ಯಕ್ಕೆ ಇಲ್ಲಿ ಯಾವ ಮಾತುಗಳೂ ಬೇಡ, ಕಾಲ ಬಂದಾಗ ನೋಡಿಕೊಳ್ಳೋಣ ಎಂದುಕೊಂಡ ಸದಾನಂದ.

೫

ಮಳೆಗಾಲ ಮುಗಿಯುತ್ತಿದ್ದಂತೆ ಒಂದು ಶುಭ ಮುಹೂರ್ತದಲ್ಲಿ ದೇವ ಸುನೀತಿಯನ್ನೂ, ಎರಡು ತಿಂಗಳ ಮಗು ವಿಷ್ಣುವನ್ನೂ ಕರೆದುಕೊಂಡು ಬಂದ. ಅವರ ಜೊತೆ ಸುನೀತಿಯ ತಂಗಿ ಸುಜಾತೆ ಮತ್ತು ಅವಳ ಒಂದು ವರ್ಷದ ಮಗುವೂ ಬಂದರು.

ಸುನೀತಿಗಿಂತ ಎರಡು ವರ್ಷ ಕಿರಿಯವಳಾದ ಸುಜಾತೆಯ ಗಂಡ ಹುಬ್ಬಳ್ಳಿಯಲ್ಲಿ ಪ್ರಸಿದ್ಧ ಜವುಳಿ ವ್ಯಾಪಾರಿ. ನಾಲ್ಕು ದಿನಗಳಿಗಾಗಿ ತಂದೆ ಮನೆಗೆ ಬಂದ ಸುಜಾತೆ ದೇವ ಹೇಳಿದಾಕ್ಷಣ ಬರಲು ಸಿದ್ಧಳಾಗಿದ್ದಳು. ಇನ್ನು ಹದಿನೈದು ದಿನಗಳಲ್ಲಿ ಹುಬ್ಬಳ್ಳಿಯಲ್ಲಿ ನಡೆಯಲಿರುವ ಅವಳ ಮಗುವಿನ ಹುಟ್ಟುಹಬ್ಬಕ್ಕೆ ದೇವ ಬರಬೇಕೆಂದು ಅವಳ ವಾಗ್ದಾನ. ಸರಿ, ತಾನೇ ಅವಳನ್ನು ಹುಬ್ಬಳ್ಳಿಗೆ ಕರೆದೊಯ್ಯುತ್ತೇನೆಂದೂ ತಿಳಿಸಿದ್ದಾನೆ.

ಕಲ್ಯಾಣಪುರಕ್ಕೆ ಬಂದ ಮರುದಿನವೇ ಊರ ಹಿರಿಯರನೇಕರು ದೇವನ ಮನೆಯಲ್ಲಿ ಬಂದು ಸೇರಿದರು. ಅವರೆಲ್ಲ ಹಾಗೆ ಸೇರಲು ಕಾರಣ ಇಲ್ಲದಿಲ್ಲ. ಈವರೆಗೂ ವೆಂಕಟರಮಣ ದೇವಸ್ಥಾನದ ಮೊಕ್ತೇಸರರಾಗಿದ್ದ ಈಶ್ವರಯ್ಯನವರ ಕೆಲಸಕಾರ್ಯಗಳನ್ನು ಅವರ ಸಾಕುಮಗನೇ ವಹಿಸಿಕೊಳ್ಳಬೇಕೆಂದು ಅವರ ಹೇಳಿಕೆ.

ಈಶ್ವರಯ್ಯನವರಿಗೆ 'ಹರಿಜನ ಬಂಧು'ಪೆಂದು ಬಿರುದು. ತಮ್ಮ ಆಯುಷ್ಯವನ್ನೆಲ್ಲ ಅವರ ಸಾನ್ನಿಧ್ಯದಲ್ಲಿ ಕಳೆದ ಅವರು ಹರಿಜನಸರಿಗಾಗಿ ಒಂದು ಸಂಘ ಕಟ್ಟಿದ್ದರು. ಇದು ಅನೇಕರಿಗೆ ಒಪ್ಪದ ವಿಷಯ. ಅನೇಕರಿಗೆ ಕೋಪ. ಆದರೆ ಈಶ್ವರಯ್ಯನವರು ಯಾರ ಮಾತಿಗೂ ಸೊಪ್ಪು ಹಾಕಿದವರಲ್ಲ. 'ನಮ್ಮೆಲ್ಲರ ರಕ್ತ ಒಂದೇ. ನಾವೆಲ್ಲರೂ ಅಣ್ಣ ತಮ್ಮಂದಿರು' ಎನ್ನುವ ಕಳಕಳಿ. ಕಾಡಿನ ಮಧ್ಯೆ ವಿಶಾಲವಾದ ಸಮತಟ್ಟು ಪ್ರದೇಶದಲ್ಲಿ ಅವರ ಕಲ್ಯಾಣಕ್ಕಾಗಿ ಕಟ್ಟಿದ ಸಂಘ. ಅಲ್ಲಿ ಹರಿಜನರಿಗೆ ಪ್ರತಿನಿತ್ಯ ಅಕ್ಷರಾಭ್ಯಾಸ, ಆಗಾಗ ಉಚಿತ ಔಷಧಿ, ವಸ್ತ್ರದಾನ. ಆಗಾಗ ಅನ್ನಸಂತರ್ಪಣೆ. ಸಂಘ ಪ್ರಾರಂಭವಾದದ್ದು ಕೆಲವೇ ಜನ ಹರಿಜನರಿಂದ. ಅನಂತರ ಅದು ಇನ್ನೂ ಬೆಳೆಯಿತು. ಪಶುಗಳಂತೆ ಬದುಕುತ್ತಿದ್ದ, ಸಮಾಜದಲ್ಲಿ ಯಾವ ಸ್ಥಾನಮಾನವೂ ಇಲ್ಲದ ಅವರನ್ನು ತಮ್ಮ ಮಾತು, ಕೃತಿಗಳಿಂದ ಒಲಿಸಿಕೊಂಡು 'ಸಮಾಜದಲ್ಲಿ ಮೇಲಕ್ಕೆ ಬನ್ನಿ. ಎಲ್ಲರೊಂದಿಗೆ ಬೆರೆಯಿರಿ' ಎಂದು ಬೋಧಿಸಿದ್ದಾರೆ. ಹಗಲೆಲ್ಲ ದುಡಿದು ಸಂಜೆ ಹೆಂಡದಂಗಡಿಗೆ ತೆರಳುವ ಅವರನ್ನು ಸಂಘಕ್ಕೆ ಎಳೆದು ತಂದು ಭಜನೆ, ಓದು ಬರೆಹ, ಮಾತುಗಳಿಂದ ಬುದ್ಧಿವಿಕಾಸಗೊಳ್ಳಲು ಪ್ರಯತ್ನಿಸಿದ್ದಾರೆ. ಸ್ವಚ್ಛತೆ ಅರಿಯದ, ತಮ್ಮ ಮನೆ ಮತ್ತು ಪರಿಸರಗಳನ್ನು ನಿರ್ಮಲ ವಾಗಿರಿಸಿಕೊಳ್ಳಲು ತಿಳಿಯದ ಅನೇಕರ ಮನೆಗೆ ತೆರಳಿ ಸ್ವತಃ ತಾವೇ ಅವರಿಗೆ ಹೇಗಿರ ಬೇಕೆಂದು ತೋರಿಸುವಾಗ ನಿಜಕ್ಕೂ ನಾಚಿಕೆಯಾಗಿತ್ತು ಅನೇಕರಿಗೆ. ಅವರಿಗಾಗಿ ಹಂಚಿನ ಮನೆಗಳೂ ಸಿದ್ಧವಾದಾಗ ಗಣ್ಯಮಹನೀಯರು ಬೆರಳುಕಚ್ಚಿದ್ದರು.

ಹೀಗೂ ಉಂಟೇ? ಯಾರ್‍ಯಾರ ಕೈಕೆಳಗೆ ಜೀತದಾಳಾಗಿ ದುಡಿಯುವ ಅಸ್ಪೃಶ್ಯರಿಗೆ ಶಿಕ್ಷಣವೇ? ಮನೆಯೇ? ಸದ್ವರ್ತನೆಯ ಬೋಧನೆಯೇ? ಜಪವೇ, ನಿಯಮವೇ? ಅವರನ್ನು ಮೇಲಕ್ಕೆತ್ತುವುದೇಕೆ? ಅವರಲ್ಲೇ ಹಂಚಿಹೋದ ಹಲವು ಪಂಗಡಗಳನ್ನು ಒಂದುಗೂಡಿಸಿ ಒಬ್ಬ ವ್ಯಕ್ತಿ ತನ್ನೊಬ್ಬನದೇ ಸಾಮರ್ಥ್ಯದಿಂದ ಎಷ್ಟು ತಾನೇ ಮೇಲೆತ್ತ ಬಲ್ಲ? ಈಶ್ವರಯ್ಯನವರ ನಿರ್ಧಾರ ಅಚಲ. ಗಾಂಧೀಜಿಯ ಪರಮಭಕ್ತ. ತನ್ನಂತಹವರು ದೇಶದಲ್ಲಿ ಅಲ್ಲಲ್ಲಿ ಒಂದೊಂದು ಸೊಡರು ಹೊತ್ತಿಸಿದರೆ ಸಾಕು ಅವರ ಉದ್ಧಾರವಾಗ ಬಲ್ಲದೆಂಬ ಆಸೆ. ಕೇವಲ ಹರಿಜನರಿಗಾಗಿ ಮಾತ್ರ ಅವರ ಆದರ್ಶ ಸೀಮಿತವಾಗಿಲ್ಲ. ಇತರ ಜಾತಿಯವರೂ ಅವರ ದೃಷ್ಟಿಯಲ್ಲಿ ಒಂದೇ. ಮನುಷ್ಯಕುಲದಲ್ಲಿ ಮೇಲುಕೀಳು ಗಳಿಲ್ಲ. ಜಾತಿ ಭೇದವಿಲ್ಲ. ತಮ್ಮ ತೋಟದಲ್ಲಿ ದುಡಿಯುವ ಸೋಜಾ ಪುರ್ಬು, ಹುಸೇನ್ ಬ್ಯಾರಿಗೂ ಮನೆ ಕಟ್ಟಿಸಿಕೊಟ್ಟಾಗ ಕಲ್ಯಾಣಪುರದಲ್ಲಿ ಅವರ ಘನತೆ ಇನ್ನಷ್ಟು ಎತ್ತರಕ್ಕೇರಿತು.

ಈ ವ್ಯಕ್ತಿಯನ್ನೇ ಊರ ಹಿರಿಯರು ವೆಂಕಟರಮಣ ದೇವಸ್ಥಾನದ ಮೊಕ್ತೇಸರ ನನ್ನಾಗಿ ಮಾಡಿ ಅವರ ಮಾತಿಗೆ ಬೆಲೆ ಕೊಡುತ್ತ ಬಂದಿದ್ದಾರೆ. ಅವರ ನಂತರ ಆ ಸ್ಥಾನಕ್ಕೆ ಅರ್ಹನಾದವನು ಅವರ ಗರಡಿಯಲ್ಲಿ ಪಳಗಿದ ಅವರಿಗಿಂತ ಒಂದು ಕೈ ಹೆಚ್ಚಾಗಿಯೇ ದಾನಕ್ಕೆ ಹೆಸರಾದ, ತೀರಾ ಕರುಣಾಮಯಿಯಾದ ಅವರ ಸಾಕುಮಗ ಒಬ್ಬನೇ!

ಆದರೆ ದೇವ ಒಂದೇ ಮಾತಿನಲ್ಲಿ ನಿರಾಕರಿಸಿಬಿಟ್ಟ ಊರ ಹಿರಿಯರ ಮಾತನ್ನು. ಅಪ್ಪ ಏರಿದ ಎತ್ತರಕ್ಕೆ ತಾನೆಂದೂ ಏರಲಾರೆ ಎಂದು ಸ್ಪಷ್ಟವಾಗಿ ಎಲ್ಲರನ್ನೂ ಕಳುಹಿಸಿದ.

ನಾಗಮ್ಮನಿಗೂ ಅಸಮಾಧಾನ. ಗೌರವ ಕೊಟ್ಟು ಬಂದ ಹಿರಿಯರನ್ನು ನೋಯಿಸಿ ಕಳುಹಿಸಿದನಲ್ಲ.

"ಆ ಸಣ್ಣ ದೇವಸ್ಥಾನಕ್ಕೆ ಅರ್ಚಕರು ಇರುವಾಗ ನಾನೇಕೆ? ನಮ್ಮ ಕೆಲಸವೇ ಬೇಕಾದಷ್ಟಿದೆ ಇಲ್ಲಿ" ಎಂದ ದೇವ ನಿರ್ಲಿಪ್ತನಂತೆ.

ಸುನೀತಿ ಈ ವಿಷಯದಲ್ಲಿ ತನ್ನ ಸಲಹೆ ಹೇಳಲು ಬಂದಾಗ ಸಿಡುಕಿದ, "ನನ್ನ ಸ್ವಾತಂತ್ರ್ಯ ನನಗಿದೆ. ಇನ್ನೊಬ್ಬರ ಉಪದೇಶ ಬೇಕಿಲ್ಲ".

ಸುನೀತಿಗೆ ಏನೋ ಅನುಮಾನ. ದೇವ ಯಾಕೋ ಮೊದಲಿನಂತಿಲ್ಲ. ಈಶ್ವರಯ್ಯನವರ ಮರಣ ಅವನನ್ನು ಘಾಸಿಗೊಳಿಸಿದೆಯೇ? ಅವನಂತೆ ತನಗೂ ಮಾವನವರಿಲ್ಲದೆ ದುಃಖವಾಗಿಲ್ಲವೇ. ಮನುಷ್ಯಜೀವನ ಶಾಶ್ವತವಲ್ಲ. ವಯಸ್ಸಾದ ಜೀವ ಹೋಯಿತು. ಅದಕ್ಕಿಷ್ಟು ಬೇಸರವೇ? ಅವಳು ಕಾರಣ ಅರಿಯದಾದಳು. ಸುಜಾತೆಯೊಂದಿಗೆ ಹೇಳಿಕೊಂಡಾಗ,

"ಆ ಸಣ್ಣ ಗೌರವದ ಪದವಿ ಬೇಡ ಎಂದಾಕ್ಷಣ ನೀನು ಇಲ್ಲಸಲ್ಲದ ಆಲೋಚನೆ ಪ್ರಾರಂಭ ಮಾಡಿದಿಯಲ್ಲ" ಎಂದಳು ನಗುತ್ತ.

ಸುಜಾತೆಗೆ ಯಾವುದೋ ಹಸಿರು ವನಕ್ಕೆ ಬಂದಷ್ಟು ಸಂತಸ. ತೆನೆ ಬಿಡಲು ಸಿದ್ಧವಾದ ಭತ್ತದ ಗದ್ದೆಗಳು, ವಿವಿಧ ಮರ, ತರುಲತೆಗಳನ್ನು ಹೊತ್ತು ನಿಂತು ಮುಂಜಾವಿನಲ್ಲಿ ಇಬ್ಬನಿಯಿಂದ ತೋಯ್ದು, ಮಧ್ಯಾಹ್ನ ಬಿಸಿಲು ಕಿರಣಗಳಿಂದ ಮುಚ್ಚಿ ಇಳಿಹೊತ್ತಿನಲ್ಲಿ ತಣ್ಣಗಿನ ಗಾಳಿ ಹೊತ್ತು ತರುವ ಎದುರಿನ ಕಾಡು; ಜುಳುಜುಳು ನಾದದೊಂದಿಗೆ ಹರಿಯುವ ಕಲ್ಯಾಣಪುರದ ಹೊಳೆ ಅವಳ ಮನಸ್ಸನ್ನು ಸೆಳೆದವು. ದೇವನ ಜೊತೆಯಲ್ಲಿ ತೋಟ, ಗದ್ದೆ, ಕಾಡನ್ನು ತಿರುಗಿದಳು. ಪ್ರತಿದಿನ ಹರಿಜನ ಸಂಘದಲ್ಲಿ ನಡೆಯುವ ಭಜನೆಯಲ್ಲಿ ತಾನು ಪಾಲುಗೊಂಡಳು. "ಸಾಂಬ ಸದಾಶಿವ, ಸಾಂಬ ಸದಾಶಿವ" ಎಂಬ ಒಕ್ಕೊರಲಿನ ಭಜನೆ ಅವಳನ್ನು ಬೇರೆ ಪ್ರಪಂಚಕ್ಕೆ ಎಳೆಯಿತು. ಅವರನ್ನು ಸುಧಾರಿಸಲು ತಂದೆ, ಮಗ ಮಾಡಿದ ಕೆಲಸ ಶ್ಲಾಘನೀಯ. ದುಡಿ ಬಾರಿಸುವ ಅವರ ಕೈಗಳಲ್ಲಿ ತಾಳ!

ರಾತ್ರಿ ಶಾಲೆಯಲ್ಲಿ ಹತ್ತು ವರ್ಷದ ಮಕ್ಕಳಿಂದ ಮುದುಕರವರೆಗೆ ಓದುಬರಹ ಕಲಿಯುತ್ತಿದ್ದಾರೆ. ದಿನಪತ್ರಿಕೆಯ ಮುಖ್ಯಾಂಶದ ಸುದ್ದಿಗಳನ್ನು ದೇವ ಬಿತ್ತರಿಸುತ್ತಾನೆ. ಆಗಾಗ ರೇಡಿಯೋ ತಂದಿಟ್ಟು "ಗ್ರಾಮಸ್ಥರಿಗಾಗಿ" ಮತ್ತು ಇತರ ಒಳ್ಳೆಯ ಕಾರ್ಯಕ್ರಮ ಕೇಳಿಸುತ್ತಾನೆ. ಸುನೀತಿಗೆ ಇವೆಲ್ಲ ಇಷ್ಟವಿಲ್ಲ. ಆದರೆ ಸುಜಾತೆ ಬಹಳವಾಗಿ ಮೆಚ್ಚಿದಳು. ಅಂದು ಹಮೀದನ ಐದು ವರ್ಷದ ಮಗು ತೊಡೆಕುರುವಿನಿಂದ ಸಂಕಟಪಡುತ್ತಿದ್ದಾಗ ದೇವ ತಾನೇ ಪರೀಕ್ಷಿಸಿ ಕುರುವನ್ನು ಕೈಯಿಂದ ಹಿಚುಕಿ ರಸಿಗೆ ತೆಗೆದು ಬ್ಯಾಂಡೇಜ್ ಮಾಡಿ, "ಈ ಮಾತ್ರೆ ತೆಗೆದುಕೊಳ್ಳಲಿ. ನಾಳೆಯೂ ನನ್ನಲ್ಲಿಗೆ ಬಂದು ಬ್ಯಾಂಡೇಜ್ ಕಟ್ಟಿಸಿಕೊಳ್ಳಲಿ" ಎಂದ. ನೋಡುತ್ತಿದ್ದ ಸುಜಾತೆ, "ನೀವು ಡಾಕ್ಟರರಾಗಿದ್ದರೆ ಚೆನ್ನಾಗಿರ್‍ತಿತ್ತು" ಎಂದಳು ದಿಙ್ಮೂಢಳಾಗಿ.

"ಈ ಪ್ರಕೃತಿಯ ಸ್ವತಂತ್ರ ಜೀವನದೆದುರು ಪಟ್ಟಣದ ಜೀವನ ಕೃತಕ ಎನಿಸುತ್ತದೆ ನನಗೆ. ಇಂತಹದೇ ಆಸ್ತಿ ಸಿದ್ಧಾಪುರದ ಹತ್ತಿರ ನಮಗೂ ಇತ್ತಂತೆ. ನನ್ನ ಮದುವೆಗೆ ಮುಂಚೆ ಎಲ್ಲಾ ಮಾರಿದ್ದಾರೆ."

ದೇವನಿಗೂ ತಿಳಿದಿದೆ ಈ ವಿಷಯ. ಸುಜಾತೆಯ ಗಂಡ ಮುರಳೀಧರ ವಿಲಾಸಿ ಮನುಷ್ಯ. ತಂದೆ ತಾಯಿಗೆ ಒಬ್ಬನೇ ಮಗ. ಅಂಗೈ ಮೇಲೆ ಬೆಳೆದ ಅರಗಿಣಿ. ತಂದೆ ತೀರಿಹೋದ ಮೇಲೆ ಹಳ್ಳಿ ಇಷ್ಟವಾಗದೇ ಹುಬ್ಬಳ್ಳಿಯತ್ತ ಮುಖತಿರುಗಿಸಿದಾಗ ಇನ್ನೂ ಸುಜಾತೆಯೊಡನೆ ಅವನ ಮದುವೆ ಆಗಿರಲಿಲ್ಲ. ತಾಯಿಗೆ ಮಣ್ಣಿನ ವ್ಯಾಮೋಹ ಅಧಿಕ. ತಮ್ಮ ಆಸ್ತಿಯನ್ನು ಕ್ರಯಕ್ಕೆ ಪಡೆದವರ ಮನೆಯ ಒಂದು ಪಾರ್ಶ್ವದಲ್ಲಿ ಅವರೊಬ್ಬರೆ ಉಳಿದಿದ್ದಾರೆ. ಸುಜಾತೆಗೆ ಅತ್ತೆಯನ್ನು ಕರೆಯಿಸಿಕೊಳ್ಳುವ ಆಸೆ. ಅವರು ಬರುವುದಿಲ್ಲ ವೆಂದೇ ವರ್ಷಕ್ಕೆ ಅನೇಕ ಬಾರಿ ಅಲ್ಲಿಗೆ ಹೋಗಿಬರುತ್ತಾಳೆ, ಆಶೀರ್ವಾದ ಪಡೆಯುತ್ತಾಳೆ.

"ಕಳೆದ ವರ್ಷ ಅತ್ತೆ ತೀರಿಹೋದರು" ಸುಜಾತೆ ಅಂದಳು, "ಇನ್ನೀಗ ನಮ್ಮದು ಸಂಪೂರ್ಣ ಪಟ್ಟಣದ ಜೀವನ. ಎಲ್ಲವೂ ಯಾಂತ್ರಿಕತೆ. ಹುಬ್ಬಳ್ಳಿಯಲ್ಲಿ ಮನೆ ಕಟ್ಟಿದರೂ ಈ ಹಸಿರು ಪ್ರಕೃತಿ, ಹೊಳೆ ದಡ ಎಲ್ಲಿ ಸಿಗುತ್ತದೆ ಹೇಳಿ? ನಿಜಕ್ಕೂ ನನಗೆ ಹಳ್ಳಿಯೇ ಇಷ್ಟ."

"ನಿನ್ನ ಅಕ್ಕನಿಗೂ ಹಳ್ಳಿ ಇಷ್ಟವಾಗಿದೆ. ಆದರೆ ನನ್ನ ಕಾರುಭಾರ ಇಷ್ಟವಿಲ್ಲ ಅಲ್ಲವೇ?"

"ಹಾಗೇನಿಲ್ಲ ಭಾವ. ಅವಳು ನಿಮ್ಮನ್ನು ಎಷ್ಟು ಆರಾಧಿಸುತ್ತಾಳೆ... ಎನ್ನುವುದು ಸ್ವತಃ ನಿಮಗೇ ತಿಳಿದಿಲ್ಲ."

ದೇವನಿಗೆ ಹೆಮ್ಮೆಯೆನಿಸಿದರೂ ಎಲ್ಲೋ ಅಳುಕಿನ ಪ್ರಜ್ಞೆ. ಸುನೀತಿಗೆ ಎಲ್ಲ ವಿಷಯ ಹೇಳಬೇಕೆಂದು ಯೋಚಿಸಿದ್ದರೂ ಅವಳನ್ನು ನೋಡಿದಾಗ, ಅವಳು ಹತ್ತಿರ ಬಂದಾಗ ಹಿಂದೆ ಸರಿಯುತ್ತದೆ ಮನಸ್ಸು. ಅವಳಿಂದ ಬರುವ ಪ್ರತಿಕ್ರಿಯೆಯನ್ನು ಅವನಾಗಲೆ ಊಹಿಸಿಕೊಂಡಿದ್ದಾನೆ. ಮೊದಲ ಬಾರಿ ತಂದೆಯಿಂದ ವಿಷಯ ಅರಿತಾಗ ಅವನಿಗೇ ನಡುಕ ವುಂಟಾಗಿದೆ. ಇನ್ನು ಸುನೀತಿ ಸಹಿಸಬಲ್ಲಳೇ? ತಂದೆ ಬದುಕಿದ್ದರೆ ಅವರಾಗಿಯೇ ಎಲ್ಲವನ್ನೂ ಸುನೀತಿಗೆ ತಿಳಿಸಿ ತಾವೇ ಸಮಾಧಾನ ಹೇಳುತ್ತಿದ್ದರು. ಅವರ ಮಾತೆಂದರೆ ಅವಳಿಗೂ ಗೌರವ. ಸಮಾಜ ಯಾವ ದೃಷ್ಟಿಯಿಂದ ಅವರನ್ನು ನೋಡಬಯಸುತ್ತಿತ್ತೋ ಅದಕ್ಕೆ ತಕ್ಕಂತೆ ಹೊಂದಿಕೊಳ್ಳಬಹುದಿತ್ತು. ಆದರೇನು.... ಈಗ ಅವನಿಗೆ ಯಾವುದನ್ನೂ ಹೇಳಲಾಗದೆ ನಾಲಿಗೆ ಕಟ್ಟಿದೆ. ಹೊಸ ಸಮಸ್ಯೆ ತಾಳೆಯಾಕಾರದಲ್ಲಿ ಬೆಳೆದುಕೊಳ್ಳುತ್ತ ನಡುಗಿಸುತ್ತಿದೆ ಅವನನ್ನೇ.

* * * * *

ಅಂದಿನ ದಿನಪತ್ರಿಕೆ ಕೈಗೆತ್ತಿಕೊಂಡ ದೇವನನ್ನು ಒಳಪುಟದಲ್ಲಿ ಒಂದು ಫೋಟೋ ಮತ್ತು ಅದರ ಕೆಳಗಿರುವ ಬರೆಹ ಬಹಳವಾಗಿ ಆಕರ್ಷಿಸಿತು.

"ಹರಿಜನ ಯುವತಿಯೊಡನೆ ಉತ್ತಮ ಕುಲದವನ ಮದುವೆ. ಅನೇಕ ಗಣ್ಯ ಮಹನೀಯರು, ಮಂತ್ರಿಗಳು ಮದುವೆ ಸಮಾರಂಭದಲ್ಲಿ ಪಾಲ್ಗೊಂಡು ತಮ್ಮ ಶುಭಾಶಯ ಅರ್ಪಿಸಿದರು. ಅವರ ನೂತನ ಸಂಸಾರಕ್ಕೆ ಬೇಕಾಗುವ ಮನೆಸಾಮಾನು ಗಳನ್ನೂ ಕೊಟ್ಟು ವರನ ಆದರ್ಶ ಗುಣಗಳನ್ನು ಹೊಗಳಿ ಇಂತಹ ಮದುವೆ ಇನ್ನಷ್ಟು ನಡೆಯಲಿ ಎಂದು ಎಲ್ಲ ಹಿರಿಯರೂ ಹರಸಿದರು. ನಮ್ಮಲ್ಲಿರುವ ಜಾತೀಯತೆ ತೊಲಗಿ ಅಂತರ್ಜಾತೀಯ ವಿವಾಹ ಅಧಿಕ ಸಂಖ್ಯೆಯಲ್ಲಿ ನಡೆಯಬೇಕೆಂದು ಪ್ರೋತ್ಸಾಹಿಸುತ್ತಿರುವ ಸರಕಾರದಿಂದ ನೂತನ ದಂಪತಿಗಳಿಗೆ ಐದು ಸಾವಿರ ರೂಪಾಯಿ ನಗದು ಹಣವನ್ನೂ ನೀಡಲಾಯಿತು!"

ಕಣ್ಣರಳಿಸಿ ಸುದ್ದಿ ಓದಿದ ದೇವ "ಹುರ್ರೇ" ಎನ್ನುತ್ತ ಚಂಗನೆ ಹಾರಿ ಬಂದ ಅಡಿಗೆಕೋಣೆಗೆ. ಅಡಿಗೆ ಕೆಲಸದಲ್ಲಿ ಮಗ್ನರಾದ ಅಕ್ಕತಂಗಿಯರಿಗೆ ದಿನಪತ್ರಿಕೆಯ ಸುದ್ದಿ ತಿಳಿಸುತ್ತ "ಇದಾದರೆ ಒಳ್ಳೆಯ ಕೆಲಸ. ನೋಡಿದಿರಾ?" ಎಂದ ಉತ್ಸಾಹದಿಂದ.

"ಈಗೆಲ್ಲ ಇಂತಹ ಮದುವೆಗಳಿಗೆ ವಿಶೇಷ ಪ್ರೋತ್ಸಾಹ" ದಿನಪತ್ರಿಕೆಯತ್ತ ದೃಷ್ಟಿಹಾಯಿಸಿದಳು ಸುಜಾತೆ.

"ಇಷ್ಟೆಲ್ಲ ಹಣ, ಸಾಮಾನು ಕೊಡ್ತಾರೆ ಎಂದ್ಮೇಲೆ ನನಗೂ ಇನ್ನೊಂದು ಮದುವೆ ಆಗೋಣ ಎನ್ನಿಸಿದೆ" ದೇವ ನಗುವಿನ ಪಟಾಕಿ ಎಸೆದ, "ಆಗಲಾ ಸುನೀತಿ?"

"ಮದುವೆಯಾದರೆ ಸಾಲದು. ಅವರೊಂದಿಗೆ ಜೀವನ ನಡೆಸಬೇಕಲ್ಲ" ಕಾಫಿ ತಯಾರಿಸಿ ದೇವನ ಕೈಗಿತ್ತ ಸುನೀತಿ ಅಂದಳು, "ಇದೊಂದು ಆದರ್ಶದ ಹುಚ್ಚು. ಪ್ರೇಮದ ಹುಚ್ಚು. ಜನರಿಗೆ ಹೇಳಲು, ಪ್ರೋತ್ಸಾಹ ಕೊಡಲು ಏನಂತೆ..."

"ನಿಜ. ಆಚರಣೆ ಯಾವಾಗಲೂ ಕಷ್ಟ" ತಂಗಿಯಿಂದ ಬಂದಿತು ಉತ್ತರ. "ಮದುವೆ ಯಾದಾಕ್ಷಣ ಮುಂದಿನ ಸಮಸ್ಯೆಗಳು ಇನ್ನೂ ಜಟಿಲವಾಗುತ್ತವೆ. ಅವರಿಂದ ಹುಟ್ಟುವ ಮಕ್ಕಳು ಇನ್ನಷ್ಟು ಸಮಸ್ಯೆಗಳನ್ನು ಎದುರಿಸುತ್ತಾರೆ."

"ಸಮಸ್ಯೆ ಎಲ್ಲಿದೆ ಈಗ?" ಕಾಫಿ ಗುಟುಕರಿಸುತ್ತ ಅಂದ ದೇವ, "ಮೊದಲಿನಂತೆ ಹರಿಜನರನ್ನು ದೂರವಿಡುವ ಕಾಲ ಎಂದೋ ಹೊರಟುಹೋಗಿದೆ. ಸಭೆ-ಸಮಾರಂಭ, ದೇವಸ್ಥಾನ, ಬಸ್ಸುಗಳಲ್ಲಿ ಅವರಿಗೆ ಗೌರವದ ಸ್ಥಾನವಿದೆ. ಎಲ್ಲರೂ ಒಂದೇ. ನಿಜ ಹೇಳ್ತೇನೆ... ಎಲ್ಲರೂ ಒಂದೇ ಅಲ್ಲವೇ. ಮತ್ತೇನಿದೆ ಸಮಸ್ಯೆ?"

"ನಿಮ್ಮ ಮಾತು ನಿಜ... ಭಾವಾ, ಹರಿಜನರನ್ನು ದೂರವಿರಿಸಿದ್ದು ಜನರು. ಈಗ ಅವರನ್ನು ಹತ್ತಿರ ಕರೆಯಿಸಿಕೊಳ್ಳುವುದು ಜನರೇ. ಅಂತೂ ಬದಲಾವಣೆ ಆಗುತ್ತಲೇ ಇರುತ್ತದೆ."

"ಬದಲಾವಣೆ ಆಗಬೇಕಾದದ್ದು ಮನುಷ್ಯ ಸ್ವಭಾವದಲ್ಲಿ. ನಾವೆಲ್ಲರೂ ಒಂದೇ ಎನ್ನುವ ಭಾವ ಬೆಳೆಯಬೇಕು. ನಮ್ಮ ಮೈಮೇಲಿರುವ" ದೇವ ತನ್ನ ಮೊಣಕೈ

ಸವರಿಕೊಂಡ. "ಈ ಕಪ್ಪು, ಕಂದು ಅಥವಾ ಬಿಳಿಬಣ್ಣದ ತ್ವಚೆಯಿರುವುದು ಕೇವಲ ನೀರುಳ್ಳಿ ಸಿಪ್ಪೆಯಷ್ಟು ತೆಳ್ಳಗೆ. ಅದನ್ನು ಸುಲಿದರೆ ಎಲ್ಲರ ಬಣ್ಣವೂ ಒಂದೇ. ರಕ್ತ ಒಂದೇ, ಮಾಂಸ ಒಂದೇ. ನಿಜ ತಾನೇ?"

ಹೇಳುತ್ತಿದ್ದಂತೆ ಅವನಿಗೆ ಥಕ್ಕನೆ ಆರೇಳು ವರ್ಷಗಳ ಹಿಂದೆ ಇದೇ ಊರಿನಲ್ಲಿ ನಡೆದ ಒಂದು ಘಟನೆ ನೆನಪಾಯಿತು. ಪ್ರಾಥಮಿಕ ಶಾಲೆಯ ವಾರ್ಷಿಕೋತ್ಸವದ ದಿನ ನಡೆದ ಆ ಕಹಿಪ್ರಸಂಗ. ಅವನಿನ್ನೂ ಮರೆತಿಲ್ಲ. ಹಿಂದೊಮ್ಮೆ ಸುನೀತಿಗೆ ಹೇಳಿದ್ದ. ಈಗ ಅದನ್ನೇ ಸುಜಾತೆಗೆ ಹೇಳಲು ಪ್ರಾರಂಭಿಸಿದಾಗ ಕುಡಿಯುತ್ತಿದ್ದ ಕಾಫಿ ಕಹಿಯೆನಿಸಿ ಹಾಗೇ ಕೆಳಗಿರಿಸಿದ.

ಆವತ್ತು ಶಾಲಾ ವಾರ್ಷಿಕೋತ್ಸವ. ಅದ್ದೂರಿಯಿಂದ ನಡೆಯಬೇಕಾದ ವಾರ್ಷಿಕೋತ್ಸವ ಅಂದೇ ಕೊನೆಯದಾಯ್ತು. ಅನಂತರದ ವರ್ಷಗಳಲ್ಲಿ ವಾರ್ಷಿಕೋತ್ಸವ ನೆರವೇರಿಸಲು ಯಾರೂ ಮುಂದೆ ಬರಲಿಲ್ಲ. ಆ ದಿನ ಒಂದು ಸಣ್ಣ ಪ್ರಸಂಗ ವಿಪರೀತಕ್ಕೆ ಹೋಗಿ ಬಹುದೊಡ್ಡ ಗಲಾಟೆಯಾಗಿ ಊರ ಹಿರಿಯರ ಮನಸ್ಸು ನೊಂದಿತ್ತು. ಆ ಗಾಯ ಮಾಸಲು ಅನೇಕ ದಿನಗಳು ಬೇಕಾದವು.

ಹೇಳುತ್ತ ದೇವನ ಮನಸ್ಸು ಕಲುಕಿಹೋಯಿತು. ಅಂದು ನಡೆದದ್ದು ಯಾರೂ ನಿರೀಕ್ಷಿಸದ ಗಲಾಟೆ. ಶಾಲೆಯ ವಾರ್ಷಿಕೋತ್ಸವದ ದಿನ ಮಧ್ಯಾಹ್ನ ಊರಿನ ಬಡಬಗ್ಗರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಹರಿಜನರಲ್ಲದೆ ಇತರ ಯಾವ ಜಾತಿಯ ಬಡವನಾದರೂ ಬರಬಹುದು. ಈಶ್ವರಯ್ಯನವರಿಗೆ ಒಂದು ವಾರದಿಂದಲೂ ಬಿಡುವಿಲ್ಲದಷ್ಟು ಕೆಲಸ. ಶಾಲೆಯ ಮನೋರಂಜನೆಯ ಕಾರ್ಯಕ್ರಮಗಳ ಉದ್ಘಾಟನೆ ಮತ್ತು ಅಧ್ಯಕ್ಷ ಸ್ಥಾನಕ್ಕೆ ಹಿರಿಯ ಅಧಿಕಾರಿಯೊಬ್ಬರಿಗೆ ಆಮಂತ್ರಣ.

ಸಾಯಂಕಾಲ ಬರಬೇಕಿದ್ದ ಆ ಹಿರಿಯ ಅಧಿಕಾರಿಗಳು ಅಂದು ಮಧ್ಯಾಹ್ನ ಹನ್ನೊಂದು ಗಂಟೆಗೇ ಆಗಮಿಸಿದ್ದರು. ಅವರ ಜೊತೆ ನಾಲ್ಕಾರು ಜನ ಇಪ್ಪತ್ತೈದು ವರ್ಷದೊಳಗಿನ ಬಿಸಿರಕ್ತದ ತರುಣರು. ಅನಿರೀಕ್ಷಿತವಾಗಿ ಹೀಗೆ ಬಂದ ಅಧಿಕಾರಿಗಳಿಗೆ ಅವಸರದಲ್ಲಿ ಉಪಚಾರ ನಡೆಯಿತು. ಈಶ್ವರಯ್ಯನವರ ಹರಿಜನ ಸಂಘಕ್ಕೆ ಮೊದಲು ಅವರ ಭೇಟಿ. ಅಲ್ಲಿ ನಡೆಯುವ ಭಜನೆ, ಹರಿಜನರು ಮದ್ಯ ನಿಷೇಧಿಸುವಂತೆ ಮನವೊಲಿಸುವ ಕ್ರಮ ಕೇಳಿಕೊಂಡರು. ಅವರಿಗಾಗಿ ಕಟ್ಟಿಸಿದ ಎರಡು ಕೋಣೆಗಳ ಹಂಚಿನ ಮನೆಯನ್ನೂ ಶ್ಲಾಘಿಸಿದರು.

"ಈ ಸಲ ಹರಿಜನನೊಬ್ಬನಿಂದ ಶಾಲಾಧ್ವಜ ಏರಿಸಬೇಕು ಎಂದು ನನ್ನ ಅಪೇಕ್ಷೆಯಾಗಿತ್ತು. ಆದರೆ ಯಾವ ಮಹನೀಯನೂ ಒಪ್ಪಿಕೊಳ್ಳಲಿಲ್ಲ. ನನ್ನ ಆದರ್ಶ ಮೆಚ್ಚುವ ಊರ ಜನರೂ ಹರಿಜನರ ಏಳ್ಗೆಯನ್ನು ಸಹಿಸುವುದಿಲ್ಲ" ಎಂದರು ಈಶ್ವರಯ್ಯ ವಿಷಾದದಲ್ಲಿ.

ಅಷ್ಟರಲ್ಲಿ ಊರಿನವರೇ ಒಬ್ಬರು ಮೆಚ್ಚುಗೆಯಿಂದ ಸ್ವರ ಏರಿಸಿದರು, "ನಮ್ಮ ಈಶ್ವರಯ್ಯನವರು ಮಹಾತ್ಮಾಗಾಂಧಿಯಂತೆ!"

"ಹಾಗೋ" ಒಬ್ಬ ಯುವಕ ತಿವರತ್ತ ಹೊರಳಿದ, "ಹರಿಜನರು ಬಡಿಸಿದ ಅನ್ನವನ್ನು ನೀವು ಉಣ್ಣಲು ಸಿದ್ಧರಿದ್ದೀರಾ?"

"ಓಹೋ, ಅವರು ಮಾಡಿದ ಅಡಿಗೆಯನ್ನೂ ಉಣ್ಣಬಲ್ಲೆ. ಅವರು ಬೇರೆ ನಾನು ಬೇರೆ ಎಂದು ನಾನೆಂದೂ ಯೋಚಿಸಿದವನಲ್ಲ!"

ಬಂದ ಯುವಕರು ತಮ್ಮೊಳಗೆ ಮಾತನಾಡಿಕೊಂಡು ಈಶ್ವರಯ್ಯನವರಿಗೆ ಅಂದರು, "ಇವತ್ತು ಹೇಗಿದ್ದರೂ ಅನ್ನಸಂತರ್ಪಣೆ ಇಟ್ಟುಕೊಂಡಿದ್ದೀರಿ. ನಿಮ್ಮ ಜನರನ್ನೂ ಕರೆಯಿರಿ. ಸಹಭೋಜನ ಮಾಡೋಣ."

ಈಶ್ವರಯ್ಯನವರ ಉತ್ಸಾಹ ಗರಿಗೆದರಿತು. ತಮ್ಮ ಮನೆಯಲ್ಲಿ ತಯಾರಿಸಿದ ಅನ್ನ, ಪಾಯಸ, ಸಿಹಿಭಕ್ಷ್ಯಗಳಲ್ಲಿ ಮುಕ್ಕಾಲು ಭಾಗ ಶಾಲೆಯ ವಠಾರಕ್ಕೆ ಹೊತ್ತು ತರಲಾಯಿತು. ಹಿರಿಯ ಅಧಿಕಾರಿಗಳನ್ನು ನೋಡಲೆಂದು ಬಂದ ಊರ ಪ್ರತಿಷ್ಠಿತರನ್ನೂ, ಅನೇಕ ಉಚ್ಚ ಕುಲದವರನ್ನೂ ಮಧ್ಯಾಹ್ನದ ಊಟಕ್ಕೆ ನಿಲ್ಲಿಸಿಕೊಳ್ಳಲಾಯಿತು. ಹೇಗೂ ಈಶ್ವರಯ್ಯನವರು ಕೊಡುವ ಗೌರವದ ಔತಣ ಹೀಗೆ ಅಧಿಕಾರಿಗಳೊಡನೆ ಉಣ್ಣುವ ಸೌಭಾಗ್ಯ ಇನ್ನೆಲ್ಲಿ ಸಿಗುತ್ತದೆ? ಎಂದವರೇ ಶಾಲೆಯ ಒಳಗೆ ಹಾಕಲಾದ ಎಲೆಗಳ ಮುಂದೆ ಭರ್ಜರಿಯಾಗಿ ಊಟಕ್ಕೆ ಕುಳಿತುಬಿಟ್ಟರು. ಆದರೆ ಆಮೇಲೆ ಅವರಿಗೆಲ್ಲ ತಿಳಿಯಿತು, ಇದು ಹರಿಜನ ಮತ್ತು ಇತರ ಜಾತಿಯವರೊಡನೆ ಸಹಭೋಜನ ಎಂದು. ಬಡಿಸುವವರೂ ಹರಿಜನರು! ಕುಳಿತವರು ಮುಖ ಕಹಿಮಾಡಿಕೊಂಡು ಏಳುತ್ತಿದ್ದಂತೆ ಬಂದ ಯುವಕರು ಬಲಾತ್ಕಾರವಾಗಿ ತಡೆದರು ಅವರನ್ನೆಲ್ಲ, "ಯಾಕೆ ಹಿಂಜರೀತೀರಿ, ಕುಳಿತುಕೊಳ್ಳಿ ಎಲ್ಲರೂ."

ಹಿರಿಯ ಅಧಿಕಾರಿಗಳು, ಈಶ್ವರಯ್ಯ, ಯುವಕರು ಹರಿಜನರ ಮಧ್ಯೆ ಅಲ್ಲಲ್ಲಿ ಕುಳಿತುಕೊಳ್ಳುತ್ತಿದ್ದಂತೆ ಕರಿಯನ ತಂದೆ ಮತ್ತು ಮೋಣು ಹೆದರುತ್ತ ಅನ್ನದ ಬುಟ್ಟಿ ಹಿಡಿದು ಪಂಕ್ತಿಯತ್ತ ಬಂದರು. ಆ ಗಳಿಗೆಯಲ್ಲಿ ಕುಳಿತವರಲ್ಲಿ ಅನೇಕರು ಎದ್ದುಬಿಟ್ಟರು. ಯುವಕರು ಅವರನ್ನು ತಡೆಯುತ್ತಿದ್ದಂತೆ ಗಲಾಟೆ ಎದ್ದಿತು, ಚರ್ಚೆ ಪ್ರಾರಂಭವಾಯಿತು. ಈಶ್ವರಯ್ಯನವರೇ ಸಹಾಯಕ್ಕೆ ಬಂದರು.

"ಮನಸ್ಸಿಲ್ಲದವರನ್ನು ಒತ್ತಾಯಿಸಬೇಡಿ. ಅವರವರ ಸಂಪ್ರದಾಯಗಳನ್ನು ನಾವ್ಯಾಕೆ ಮುರೀಬೇಕು?"

"ಈ ಮೌಢ್ಯ, ಸಂಪ್ರದಾಯಗಳು ಅಳಿಯಲೇ ಬೇಕು."

ದೇವನಿಗೆ ರೇಗಿಹೋಯಿತು ಈ ಮಾತಿನಿಂದ. ಅವನಿಗೂ ಈ ರೀತಿ ಸಹಭೋಜನ ಇಷ್ಟವಿರಲಿಲ್ಲ. ಪ್ರತಿಷ್ಠಿತರೆನಿಸಿದ ಅನೇಕ ಹಿರಿಯರ ಮುಖಗಳು ವಿಕಾರವಾದದ್ದು ಕಂಡು 'ಅಯ್ಯೋ' ಎಂದುಕೊಂಡ. ಇಂಥ ಸಹಭೋಜನದಿಂದ ಪ್ರಯೋಜನ ಏನೇನೂ ಇಲ್ಲ. ವೃಥಾ ಮನಸ್ತಾಪ.

"ಊಟ ಬೇಡವಾದವರು ಹೊರಟು ಹೋಗಲಿ" ದೃಢಸ್ವರದಲ್ಲಿ ಹೇಳಿದ ಅವನು ಯುವಕರತ್ತ ಹೊರಳಿದ, "ಯಾಕೆ ಹಿಂಸೆ ಕೊಡ್ತೀರಿ? ಹರಿಜನರಲ್ಲಿಯೂ ಮೇಲು-ಕೀಳು ಇಲ್ಲವೇ? ತಾವೇ ಶ್ರೇಷ್ಠವೆಂದು ಅವರವರಲ್ಲೇ ಸಹಭೋಜನ, ಜೊತೆಯಾಗಿ ಬೆರೆಯುವುದು, ಕೊಡು-ತೆಗೆದುಕೊಳ್ಳುವುದೂ ಇಲ್ಲ. ಮೊದಲು ಅವರನ್ನು ತಿದ್ದಿ, ಆಮೇಲೆ ಊರ ಹಿರಿಯರನ್ನು ಪ್ರಶ್ನಿಸುವುದಕ್ಕೆ ಹೋಗಿ!"

ಈ ಚರ್ಚೆ, ಮಾತಿನ ಗೊಂದಲದ ಮಧ್ಯೆ ಅನೇಕ ಹಿರಿಯರು ಸದ್ದಿಲ್ಲದಂತೆ ಜಾರಿಕೊಂಡು ಮನೆಸೇರಿದರು. ಇಷ್ಟವಿರುವವರು ಕುಳಿತರು ಊಟಕ್ಕೆ. ಎಲ್ಲರಿಗೂ ಹೆದರಿ ಒತ್ತಾಯದಿಂದ ಬಡಿಸಲು ಬಂದ ಕರಿಯನ ತಂದೆ ಇಡೀ ಪಾತ್ರೆಯ ಹುಳಿಯನ್ನು ಮಧ್ಯದಲ್ಲಿ ಚೆಲ್ಲಿ, "ನನ್ನಿಂದ ಸಾಧ್ಯವಿಲ್ಲಪ್ಪೋ, ನೀವೇ ಯಾರಾದರೂ ಬಡಿಸಿ" ಎನ್ನುತ್ತ ಓಡಿಹೋದ ಹೊರಗೆ. ಎರಡು ತುತ್ತು ಮಾತ್ರ ತಿಂದು ಚಡಪಡಿಸುತ್ತಿದ್ದ ದೇವ ಕೂಡಲೆ ಎದ್ದು ಕೈತೊಳೆದು ತಾನೇ ಸವುಟನ್ನು ಕೈಗೆತ್ತಿಕೊಂಡು ಹೇಗೋ ಸುಧಾರಿಸಿದ ಉಳಿದ ಬಡಿಸುವಿಕೆಯನ್ನು.

ಸಾಯಂಕಾಲ ಮನರಂಜನೆಯ ಕಾರ್ಯಕ್ರಮಕ್ಕೆ ಊರಿನ ಪ್ರತಿಷ್ಠಿತರೊಬ್ಬರೂ ಬರಲಿಲ್ಲ. ಹಿರಿಯ ಅಧಿಕಾರಿ ಧ್ವನಿವರ್ಧಕದಲ್ಲಿ ಮಾಡುತ್ತಿದ್ದ ಭಾಷಣವನ್ನು ಕೇಳಲಾಗದೆ ಕಿವಿಮುಚ್ಚಿಕೊಂಡರು ಎಷ್ಟೋ ಮಂದಿ. ಎಲ್ಲರೂ ತೆಗಳುವವರೇ. ಊರಿನಲ್ಲೆಲ್ಲ ಅಶಾಂತಿಯ ವಾತಾವರಣ. ಅಂದು ಮೊದಲಬಾರಿ ದೇವ ವಿರೋಧಿಸಿದ ತಂದೆಯನ್ನು.

"ನಿಮ್ಮ ಆದರ್ಶವೇನಿದ್ದರೂ ನಿಮ್ಮ ಹತ್ತಿರವೇ ಇಟ್ಟುಕೊಳ್ಳಿ. ಉಳಿದವರನ್ನು ಅವರ ಪಾಡಿಗೆ ಬಿಟ್ಟುಬಿಡಿ. ಜನರನ್ನು ಒತ್ತಾಯಿಸಿ, ಮನ ನೋಯಿಸಿ ಉದ್ಧಾರ ಕಾರ್ಯಕ್ಕೆ ಹೊರಡುವುದು ಮೂರ್ಖತನದ ಕೆಲಸ. ಜನರು ತಮ್ಮನ್ನು ತಾವೇ ತಿದ್ದಿಕೊಳ್ಳಲಿ."

"ಯಾಕೆ? ನೀನೂ ಈಗ ಪೂರಾ ಬದಲಾಗಿಹೋದೆಯಾ?"

"ಮತ್ತಿನ್ನೇನು? ಉಣ್ಣುವ, ತಿನ್ನುವ, ಬಡಿಸುವುದರಲ್ಲೂ ಒಂದು ಕ್ರಮವಿದೆ. ಶುಚಿಯಾಗಿ ರುಚಿಯಾಗಿದ್ದರೆ, ಆಚಾರ-ಕ್ರಮಗಳು ಸರಿಯಾಗಿದ್ದರೆ ಎಲ್ಲರಿಗೂ ಒಗ್ಗುತ್ತದೆ ಅಪ್ಪಾ. ಹರಿಜನರ ರೀತಿ, ನೀತಿ, ಕ್ರಮಗಳು ಅವರಿಗೇ ಇರಲಿ, ನಮ್ಮದು ನಮಗಿರಲಿ."

"ಇಲ್ಲಿ ತಾನು 'ಶ್ರೇಷ್ಠ' ಎಂಬ ಅಹಂ ಯಾಕೆ ನಿನಗೆ?"

"ನಾನು ಶ್ರೇಷ್ಠ ಎಂದು ಹೆಮ್ಮೆಪಡಲಿಲ್ಲ. ಅವರ ಮೇಲೆ ಸಹಾನುಭೂತಿ, ಗೌರವ ತೋರಿಸೋಣ. ಸಮಾಜದಲ್ಲಿ ಅವರ ಏಳ್ಗೆಗಾಗಿ ಪ್ರಯತ್ನಿಸೋಣ. ಆದರೆ ನಮ್ಮಿಂದ ಇನ್ನೊಬ್ಬರಿಗೆ ಹಿಂಸೆಯಾಗಬಾರದು ಅಷ್ಟೇ!"

ಮರುದಿನ ಪೇಪರಿನಲ್ಲಿ "ಕಲ್ಯಾಣಪುರದಲ್ಲಿ ಹರಿಜನರೊಡನೆ ಸಹಭೋಜನ" ಎಂಬ ಶೀರ್ಷಿಕೆಯೊಂದಿಗೆ ವಿವರವಾಗಿ ಪ್ರಕಟವಾಗಿತ್ತು ಸುದ್ದಿ.

"ನಾನು ಆ ಪೇಪರನ್ನು ಹರಿದು ಚೂರುಚೂರು ಮಾಡಿ ಬಿಸಾಡಿದ್ದೆ. ಅಪ್ಪನಿಗೂ ನನಗೂ ಆ ದಿನ ಜಗಳವಾಗಿ ನಾಲ್ಕು ದಿನ ಮಾತು ನಿಂತುಹೋಗಿತ್ತು". ದೇವ ಹೇಳಿ ಮುಗಿಸುತ್ತಿದ್ದಂತೆ ಅಲ್ಲೇ ನಿಂತು ಕೇಳುತ್ತಿದ್ದ ನಾಗಮ್ಮ ಅಂದರು,

"ಕಾಲ ಕೆಟ್ಹೋಯ್ತು. ಜಾತಿ-ಗೀತಿ, ಮಡಿ-ಮೈಲಿಗೆ ಬಿಟ್ಟರೆ ಊರು ಉದ್ಧಾರವಾದ್ಹಾಗೆ. ನಾನಂತೂ ಆವತ್ತು ಇವನ ಜನಿವಾರ ಕಳಚಿ ಪಂಚಗವ್ಯ ಕೊಟ್ಟು ಶುದ್ಧಿ ಮಾಡಿಸಿದ್ದೇನೆ. ಆ ಜನರ ಸಹವಾಸ ಬೇಡವೆಂದು ಬಡಕೊಂಡರೆ ಎಲ್ಲಿ ಕೇಳಿದ್ದ ಇವನು?"

ದೇವ ನಕ್ಕುಬಿಟ್ಟ, "ಅಮ್ಮ ಹೇಳಿದಂತೆ ಅವರ ಸಹವಾಸದಲ್ಲಿ ನಾನಿದ್ದರೂ ಅವರ ಜೊತೆ ಸಹಭೋಜನ ನನಗಿಷ್ಟವಿರಲಿಲ್ಲ. ಈಗ ಈ ಭಾವನೆಗಳನ್ನೂ ಕಳಚಿ ಅವರನ್ನೆಲ್ಲ ಅಣ್ಣತಮ್ಮಂದಿರಂತೆ ನೋಡಿಕೊಳ್ತಾ ಇದ್ದೇನೆ."

"ನಿಮ್ಮ ಬುದ್ಧಿ ಯಾವಾಗಲೂ ಹೀಗೆ" ಸಿಡಿಗುಂಡಿನಂತೆ ಕೇಳಿಸಿತು ಸುನೀತಿಯ ಸ್ವರ, "ನೋಡಿಕೊಳ್ತಾರಂತೆ ಅಣ್ಣತಮ್ಮಂದಿರಂತೆ. ಎಲ್ಲೋ ಹುಚ್ಚು ಭ್ರಮೆ."

"ಭ್ರಮೆ ಅನ್ನಬೇಡ ಅಕ್ಕಾ" ಸುಜಾತೆ ಅಂದಳು, "ಪರಧರ್ಮೀಯರಾದ ಕ್ರೈಸ್ತರು, ಮುಸ್ಲಿಮರು ನಮಗೆ ತೀರ ಹತ್ತಿರದವರಾಗ್ತಾರೆ. ಆದರೆ ನಮ್ಮವರೇ ಆದ ಹರಿಜನರು ನಮ್ಮಿಂದ ಎಷ್ಟು ದೂರವಾಗಿದ್ದಾರೆ ಅಲ್ಲವೇ."

"ಏನೇ, ನಿನಗೂ ಈ ಮನೆ ಗಾಳಿ ಬೀಸಿತೇ?" ಚಕಿತರಾದರು, ನಾಗಮ್ಮ.

ದೇವನಿಗೆ ಆ ಗಳಿಗೆಯಲ್ಲಿ ಎಲ್ಲರ ಮನದಲ್ಲಿ ಕೋಲಾಹಲ ಎಬ್ಬಿಸಿಬಿಡೋಣ ಎಂದೆನಿಸಿದರೂ ನಾಗಮ್ಮನ ಮುಖನೋಡಿ ನಾಲಿಗೆ ಬಿಗಿಹಿಡಿದು ನಿಧಾನವಾಗಿ ಹೊರಗೆ ನಡೆದ.

* * * * *

ಹಳ್ಳಿಯಲ್ಲಿ ದಿನಗಳು ಹೇಗೆ ಸರಿದವೆಂದು ತಿಳಿಯಲಿಲ್ಲ ಸುಜಾತೆಗೆ. ಹುಬ್ಬಳ್ಳಿಯಂತೆ ಇಲ್ಲಿ ಸಿನಿಮಾ, ಲೈಬ್ರರಿ, ಕ್ಲಬ್ಬು, ಝಗಝಗಿಸುವ ವಿದ್ಯುದ್ದೀಪ ಯಾವುದೂ ಇಲ್ಲ. ನೀರವ ಕತ್ತಲೆಯಲ್ಲಿ, ಗಂಭೀರ ರಾತ್ರಿಯಲ್ಲಿ ಝಿಂಗುಡುವ ಝೀರುಂಡೆಯ ಸದ್ದು, ಹಳೆಗಾಲ ಮುಗಿದಿಲ್ಲವೆಂದು ನೆನಪು ಮಾಡಿಕೊಡಲು ಜೀರ್ಣಾವಸ್ಥೆಗಿಳಿದ ಮನೆಯಲ್ಲಿ ಚಿಮಣಿ ದೀಪಗಳ ಕತ್ತಲೆಯ ಬೆಳಕು, ಬೆಳಗಾಯಿತೆಂದರೆ ಹಕ್ಕಿಗಳ ಕಲರವದ ಗಾನ, ಹೊಳೆ ನೀರಿನ ಸೊಬಗು ಇವಿಷ್ಟೇ ಇಲ್ಲಿಯ ವೈಶಿಷ್ಟ್ಯ. ಆದರೂ ಸುಜಾತೆ ತನ್ನ ಅಕ್ಕ ಮತ್ತು ಭಾವನ ಆತ್ಮೀಯ ಉಪಚಾರದಲ್ಲಿ ತನ್ನನ್ನೇ ಮರೆತಳು. ಇನ್ನೊಮ್ಮೆ ತನ್ನ ಗೆಳತಿಯರನ್ನು ಕರೆತರುವ ಆಸೆ ವ್ಯಕ್ತಪಡಿಸಿದಳು.

"ಮನೆ ಹಳೆಯದಾದರೂ ಇರಲಿ ಹಾಗೆ. ವಿದ್ಯುದ್ದೀಪ ಹಾಕಿಸಿಬಿಡಿ" ಎಂದಳು ಸಲುಗೆಯಲ್ಲಿ.

"ನಮ್ಮ ಗ್ರಾಮಕ್ಕೆ ತಂತಿ ಕಂಬಗಳು ಬಂದುದನ್ನು, ಅನೇಕರು ಹಾಕಿಸಿಕೊಂಡದ್ದನ್ನು ನೋಡಿಲ್ಲವೇ ನೀನು? ಒಂದು ಸಾವಿರ ಚೆಲ್ಲಿದರೆ ನಮಗೂ ಹಾಕಿಸಬಹುದು. ಆದರೆ ನಮ್ಮ ಸುತ್ತ ಮುತ್ತ ಎಲ್ಲಾ ಬಡವರು, ತಿನ್ನುಣ್ಣಲು ಇಲ್ಲದವರು. ಅವರೆದುರು..."

"ಆಗೇ ಹೋಯ್ತು" ಜೋರಾಗಿ ನಕ್ಕಳು ಸುಜಾತೆ. "ಎಂತಹ ಕರುಣೆ ನಮ್ಮ ಭಾವನಿಗೆ. ಆದರೆ ನಿಮಗ್ಯಾಕೆ ಇಷ್ಟು ದೊಡ್ಡ ಮನೆ? ಬಡವರಿಗೂ ನಿಮ್ಮ ಮನೆಯಲ್ಲಿ ಸ್ಥಳ ಕೊಡಬಾರದೇ?"

"ತಮಾಷೆ ಮಾಡಬೇಡ. ಈ ವರ್ಷ ಮನೆ ರಿಪೇರಿ ಅಥವಾ ಹೊಸದಾಗಿ ಕಟ್ಟಿಸುವಿಕೆ ಎಲ್ಲಾ ಸುನೀತಿ ಹೇಳಿದ್ಹಾಗೆ. ಇಲ್ಲದಿದ್ದರೆ ಅವಳು ಸಿಟ್ಟಿಗೇಳ್ತಾಳಲ್ಲ."

"ನನ್ನ ಸಿಟ್ಟಿಗಿಷ್ಟು ಓಟ್ಟು ಹಾಕಿ. ಎಷ್ಟು ಹಣವಿದ್ದರೂ ನನಗೆ ಈ ಮುರುಕು ಮನೆಯೇ ಗತಿ. ಅನುಭವಿಸುವುದಕ್ಕೂ ಬೇಕು ಯೋಗ" ಸ್ವರ ಎಳೆದಳು ಸುನೀತಿ.

ಅವಳು ತಂಗಿಗೋಸ್ಕರ ಬಾಳೆಗೊನೆ, ತೆಂಗು, ಹಣ್ಣು, ತುಪ್ಪ, ತರಕಾರಿ ಇತ್ಯಾದಿ ಕಟ್ಟಿಟ್ಟಳು. ದೇವ ತಾನು ಮಾಡಿದ ವಾಗ್ದಾನದಂತೆ ಸುಜಾತೆ ಮತ್ತು ಮಗುವನ್ನು ಹುಬ್ಬಳ್ಳಿಗೆ ಕರೆದೊಯ್ಯಲು ಸಿದ್ಧನಾದ. ಅವನದೇನು ಮಹಾ ತಯಾರಿಯಿಲ್ಲ. ಉಡುಪು ಎಂದರೆ ಒಂದು ಪಂಚೆ, ಒಂದು ಬಿಳಿ ಅಂಗಿ ಅಷ್ಟೇ. ಸುನೀತಿ ಯಾವಾಗಲೂ "ಒಂದು ಪ್ಯಾಂಟ್ ಹೊಲಿಸಿ" ಎನ್ನುತ್ತಿದ್ದರೂ ಅವನಿಗದು ಇಷ್ಟವಿರಲಿಲ್ಲ. ಈಗ ಸುಜಾತೆಯೂ ಅವನು ಬರಿ ಪಂಚೆಯಲ್ಲಿ ಪ್ರಯಾಣಕ್ಕೆ ಸಿದ್ಧನಾದಾಗ ಅವನ ಸರಳತೆಗೆ ಮಾರುಹೋಗಿ ಮಿಕಿಮಿಕಿ ನೋಡಲಾರಂಭಿಸಿದಳು.

"ಏನೇ, ನನ್ನ ಉಡುಪು ನಿನ್ನ ಪಟ್ಟಣಕ್ಕೆ ಸಾಕೇನು?"

"ಪಂಚೆ, ಧೋತಿಯಲ್ಲಿ ಬರ್ತೀರಾ ಹುಬ್ಬಳ್ಳಿಗೆ?"

"ಹೂಂ, ನಾನು ಎಷ್ಟಾದರೂ ಹಳ್ಳಿಮುಕ್ಕ. ಸುನೀತಿ ಹೇಳ್ತಾ ಇರ್ತಾಳೆ, ಪಂಚೆ ಉಟ್ಟವರನ್ನು ನಿಮ್ಮೂರಿನಲ್ಲಿ ಹೋಟೇಲ್ ಮಾಣಿ ಎನ್ನಾರಂತೆ, ತಮಾಷೆ ಮಾಡ್ತಾರಂತೆ. ಮಾಡಲಿ ಬಿಡು. ನಿನ್ನ ಜೊತೆ ಒಬ್ಬ ಹೋಟೇಲ್ ಮಾಣಿ ಬಂದಿದ್ದಾನೆ ಅಂತ ತಿಳಿ."

ಹಾಗೆ ಹೇಳುತ್ತ ದೇವ ಜೋರಾಗಿ ನಗಲಾರಂಭಿಸಿದ. ಅವನ ನಗು ನೋಡಿ ಅಲ್ಲಿಯೇ ಇದ್ದ ಕೃಷ್ಣನೂ ನಗತೊಡಗಿದ.

"ಆ ಕೋಟು, ಸೂಟಿನ ವಿಷಯ ನೆನಪಿಗೆ ಬಂದಿತೇ?" ಕೇಳಿದಳು ಸುನೀತಿ ನಗು ಅರ್ಥವಾದವಳಂತೆ.

"ಹೂಂ, ಅದೇ ವಿಷಯ" ನಗುತ್ತಿದ್ದವ ಸುಜಾತೆಯತ್ತ ಹೊರಳಿದ, "ಎಷ್ಟು ಸ್ವಾರಸ್ಯಕರ ಕಥೆ ಅಂತೀಯಾ. ಎಷ್ಟೋ ವರ್ಷಗಳ ಮೊದಲು... ಆಗಿನ್ನೂ ಅಪ್ಪ ತುಂಬ ಸಣ್ಣವರಂತೆ. ಕಲ್ಯಾಣಪುರ ತೀರ ಕಗ್ಗಾಡು. ಎಲ್ಲೋ ಕೆಲವು ಮನೆಗಳು ಮಾತ್ರ ಇದ್ದವು. ಆಗ ಈ ಮನೆಗೆ ಅಪ್ಪನ ಬಂಧುಗಳೊಬ್ಬರು ಬಂದಿದ್ದರಂತೆ ದೂರದೂರಿನಿಂದ. ಅವರು ಧರಿಸಿದ ಮಿರಿಮಿರಿ ಮಿಂಚುವ ಕೋಟು, ಸೂಟು ನೋಡಿ ಯಾರೋ ದೊರೆಗಳು ಬಂದಿದ್ದಾರೆ ಎಂದುಕೊಂಡು ಊರ ಜನರೆಲ್ಲ ಸೇರಿದರಂತೆ. ಅವರ ಉಡುಪು ನೋಡಿ

ಬೆರಗಾದರಂತೆ. ಎಲ್ಲರಿಗೂ ಸೂಟು-ಕೋಟಿನ ಆಕರ್ಷಣೆ. ಇವರೂ ಮೀಸೆ ಮೇಲೆ ಕೈಯ್ಯಾಡಿಸುತ್ತ ತಮ್ಮ ಸೂಟು-ಕೋಟನ್ನು ಒಂದು ಕೋಲಿನಲ್ಲಿ ಎತ್ತಿಹಿಡಿದು ನೆರೆದ ಜನರಿಗೆ ತೋರಿಸುತ್ತ, "ನೋಡಿದಿರೇನ್ರೋ, ಇದಕ್ಕೆ ಅಂತಾರೆ ಸೂಟು! ಇದಕ್ಕೆ ಅಂತಾರೆ ಕೋಟು! ಇವುಗಳ ಬೆಲೆ ಇನ್ನೂರೈವತ್ತು" ಎನ್ನುತ್ತಿದ್ದರಂತೆ. ಅವರು ಇಲ್ಲಿರುವ ತನಕ ಇದೇ ಜಗಲಿಯಲ್ಲಿ ಅವನ್ನು ತೂಗಿ ಹಾಕಿ ಬಂದವರಿಗೆ ವಿವರಣೆ ನೀಡುತ್ತಿದ್ದರಂತೆ. ಈ ಉಡುಪು ನೋಡಲು ದೂರದ ಗ್ರಾಮದಿಂದಲೂ ಜನ ಬಂದಿದ್ದರಂತೆ.

"ಈಗ ಅದೇ ಸೂಟು-ಕೋಟು-ಬೂಟನ್ನು ನಮ್ಮ ಕರಿಯನೂ ಹಾಕಿಕೊಳ್ಳಬಲ್ಲ. ಆದರೂ ಅದರ ಹೆಸರು ಕೇಳಿದಾಕ್ಷಣ 'ಇದಕ್ಕೇನಂತಾರೆ ಗೊತ್ತೇನ್ರೋ...' ಎನ್ನುವ ಮಾತು ನೆನಪಾಗುತ್ತದೆ. ಅಂದ್ಹಾಗೆ ಸೂಟು-ಕೋಟು ಇಲ್ಲದೆ ಬರಿಯ ಪಂಚೆಯಲ್ಲಿ ನಾನು ಯಾರ ಹಾಗೆ ಕಾಣಿಸುತ್ತೇನೆ?"

ಸುಜಾತೆ ಸಂದಿಗ್ಧಭಾವದಲ್ಲಿ ನೋಡಿದಳು ಅವನನ್ನು. ಯಾರ ಹಾಗೆ ಅವನು ಕಾಣಿಸುತ್ತಾನೆಂದು ಈ ವರೆಗೆ ವಿಮರ್ಶಿಸಿದವಳಲ್ಲ. ಹಾಲು ಬಿಳುಪಿನ ಮೈಯ್ಯ ಅವಳ ಮುರಳೀಧರ ಎತ್ತರವಾಗಿ ಆಕರ್ಷಕವಾಗಿದ್ದ. ಅವನೊಂದಿಗೆ ತನ್ನ ಭಾವನನ್ನು ಹೋಲಿಸಿದವಳೂ ಅಲ್ಲ.

"ಸದಾನಂದ ಇಲ್ಲಿಗೆ ಬಂದಾಗಲೆಲ್ಲ ನನ್ನ ಬಗ್ಗೆ ಏನೇನೋ ಹೇಳ್ತಾ ಇರ್ತಾನೆ. ನಾನು ನಮ್ಮ ಆಳು ಕರಿಯ ಇದ್ದಾನಲ್ಲ, ಅವನಂತೆ ಕಾಣಿಸುತ್ತೇನಂತೆ, ಹೌದೇ?" ಸುಳ್ಳಿನ ಬಾಣವೊಂದನ್ನು ಎಸೆದು ಅಕ್ಕ-ತಂಗಿಯರ ಮುಖ ನೋಡಿದ ಕಾತರದಿಂದ.

"ನಿಮ್ಮನ್ನು ಕರಿಯನಿಗೆ ಹೋಲಿಸಿದ ಸದಾನಂದನಿಗೆ ಬುದ್ಧಿ ಸರಿಯಿಲ್ಲ. ಯಾರು ಹೇಳ್ತಾರೆ ಭಾವಾ, ನಾನಂತೂ ರೂಪ, ಬಣ್ಣಕ್ಕೆ ಬೆಲೆ ಕೊಡುವವಳಲ್ಲ, ಗುಣಕ್ಕೆ ಮಾತ್ರ ಬೆಲೆ. ಇದು ಖಂಡಿತ."

ದೇವ ಎದೆಸೆಟೆದು ನಿಂತ, "ದಾರೀಲಿ ಬಿದ್ದವನು ಎಂದು ಸದಾನಂದ ತಮಾಷೆ ಮಾಡ್ತಾ ಇರ್ತಾನೆ" ನಾಗಮ್ಮನಿಗೆ ಕೇಳಿಸದಂತೆ ಪಿಸುಗುಟ್ಟಿದ, "ಅಪ್ಪ ಸತ್ತ ಮೇಲೆ ಅವನ ಕಾರುಭಾರ ಇಲ್ಲಿ ಹೆಚ್ತಾ ಇದೆ. ಸುಜಾತೆ, ಹಾಗಾದರೆ ನಾನು ಕರಿಯ, ತನಿಯ ಇವರ ಹಾಗೆ ಕಾಣಿಸುವುದಿಲ್ಲವಲ್ಲ. ಸಂತೋಷ, ಸಂತೋಷ."

"ಏನು?" ವಿಸ್ಮಯದಿಂದ ಅರಳಿದವು ಸುನೀತಿಯ ಕಣ್ಣುಗಳು, "ಅವರುಗಳ ಒಡನಾಟ ಹೆಚ್ಚಿದಂತೆ ಅವರ ಗಾಳಿಯೂ ನಿಮಗೆ ಬೀಸುತ್ತದೆ ಎಂದುಕೊಂಡಿರಾ?"

"ಭಾವಾ, ನಿಮ್ಮನ್ನು ನೋಡಿದರೆ ಸದಾನಂದನಿಗೆ ಹೊಟ್ಟೆ ಉರಿ. ತಾನೂ ಮಾಡ, ಪರರಿಗೂ ಬಿಡ. ನಿಮ್ಮ ಈ ಕೃಷಿ, ಕೆಲಸಗಳನ್ನು ಎಷ್ಟು ಹೊಗಳಿದರೂ ಸಾಲದು. ಇನ್ನೊಮ್ಮೆ ನಮ್ಮೂರಿನ ಕೆಲವರನ್ನು ಇಲ್ಲಿಗೆ ಕರೆದುಕೊಂಡು ಬಂದು ಇವನ್ನೆಲ್ಲ ತೋರಿಸ್ತೇನೆ. ನಿಮ್ಮ ಹಾಗೆ ಯಾರೂ ಇಲ್ಲ ಭಾವ. ಎಲ್ಲರದೂ ಬಾಯಿಬಡಾಯಿ ಒಂದೇ."

೬

ಸುಜಾತೆ ಮತ್ತು ಅವಳ ಮಗುವಿನೊಂದಿಗೆ ಹುಬ್ಬಳ್ಳಿಗೆ ಬಂದಿಳಿದ ದೇವನಿಗೆ ನಗರದ ಜನರನ್ನು, ವಾಹನಗಳನ್ನು ಕಂಡು ದಿಗ್ಭ್ರಮೆ. ಬಿಡುವಿಲ್ಲದ ಅವಸರದಲ್ಲಿ ಓಡಾಡುವ ಜನರು, ಟಾಂಗಾ, ಮಹಡಿ ಬಸ್ಸುಗಳು, ಉದ್ಯಾವನಗಳು, ವಿವಿಧ ಕಾಲೇಜುಗಳು ಅವನಿಗೆ ಮೋಡಿ ಬೀಸಿದವು. ಸುಜಾತೆಯ ಆಧುನಿಕ ಸೌಕರ್ಯವುಳ್ಳ ಸೊಗಸಾದ ಬಂಗಲೆ, ಅದರ ಎದುರಿನ ಹೂದೋಟ ನೋಡಿ ಅಚ್ಚರಿಪಟ್ಟ. ಹೂದೋಟದ ಮಧ್ಯೆ ಇರುವ ತೂಗುಯ್ಯಾಲೆಯಲ್ಲಿ ತಾನೂ ಕುಳಿತು ತೂಗಿ ಸಂಭ್ರಮಪಟ್ಟ.

ಮನೆಗೆ ಬಂದ ಈ ಅಪರೂಪದ ಅತಿಥಿಯನ್ನು ಮುರಳೀಧರ ಆತ್ಮೀಯತೆಯಿಂದ ನೋಡಿಕೊಂಡನಲ್ಲದೆ ತನ್ನ ಸ್ಕೂಟರ್‌ನ ಹಿಂದೆ ಕುಳ್ಳಿರಿಸಿ ಹುಬ್ಬಳ್ಳಿಯ ಅನೇಕ ಕಡೆಗಳಿಗೆ ಸುತ್ತಾಡಿಸಿದ. ವಾರಕ್ಕೊಮ್ಮೆ ತಾನು ಹೋಗುತ್ತಿದ್ದ ಕ್ಲಬ್‌ಗೆ ಕರೆದೊಯ್ದ. ಆದರೆ ಅಲ್ಲಿ ಅರೆನಗ್ನ ಯುವತಿಯರ ಕ್ಯಾಬರೆ ಕುಣಿತ ನೋಡಿದ ದೇವ ದಂಗಾಗಿ ಅಸಹ್ಯದಿಂದ ಮುಖ ತಿರುಗಿಸಿಬಿಟ್ಟ. ಹಳ್ಳಿ ಬೈರನ ದುಡಿಯ ಸದ್ದು, ಅವನ ಮೈ ಕುಲುಕುವಿಕೆ ಈ ಕ್ಯಾಬರೆಯಂತಿದೆ ಎಂದೆನಿಸಿ ಬಿದ್ದು ಬಿದ್ದು ನಕ್ಕ ತನ್ನಲ್ಲೇ. ಕ್ಲಬ್‌ನ ಆಟ, ಪಾನೀಯ ಒಂದೂ ಹಿಡಿಸಲಿಲ್ಲ ಅವನಿಗೆ.

ಅಬ್ಬಬ್ಬ, ಮುರಳೀಧರನ ರೂಪವೇನು... ನಡೆನುಡಿಯೇನು? ದೃಢಶರೀರದ, ಹೊಳೆಯುವ ಕಂಗಳ, ಗುಂಗುರು ಕೂದಲಿನ ಅವನು ನಿಜಕ್ಕೂ ಅದೃಷ್ಟಶಾಲಿ. ಅವನ ನಡೆ-ನುಡಿಯಲ್ಲಿ ರಾಜರ ಗತ್ತು. ಶ್ರೀಮಂತರ ಆಪ್ತ ಸ್ನೇಹಿತ. ಅವರೊಡನೆ ಅವನ ವ್ಯವಹಾರ. ತನಗಿಂತ ಕೆಳಗಿನವರೊಡನೆ ಮಾತನಾಡಲು ಇಚ್ಛಿಸದವ. ಕೋಮಲವಾದ ಹೂವಿನಂತೆ ಬೆಳೆದ ಅವನ ಪಾದಕ್ಕೆ ನೆಲದ ಮಣ್ಣು ಸೋಂಕದು. ಕೈಬೆರಳುಗಳ ಮೃದುತನಕ್ಕೆ ನಾಚಬೇಕು ಹುಡುಗಿಯರು.

ದೇವ ಹಾಗಿಲ್ಲ. ಹಳ್ಳಿಯ ನೀರನ್ನುಂಡ ಒರಟು ದೇಹ ಅವನದು. ಕಬ್ಬಿಣದಂತೆ ಗಟ್ಟಿಯಾದ ಮಾಂಸಖಂಡಗಳು, ರೋಮತುಂಬಿದ ಆನೆಯ ಕಸುವನ್ನು ಪಡೆದ ತುಂಬಿದ ತೊಡೆಗಳು. ಅಂಗೈ, ಅಂಗಾಲುಗಳು ಬಿರುಸು ಮತ್ತು ಅಲ್ಲಲ್ಲಿ ಒಡಕು. ಯಾವಾಗಲೂ ಕತ್ತಿ ಹಿಡಿಯುವ, ಹಾರೆ-ಗುದ್ದಲಿಗಳನ್ನೆತ್ತುವ ಎರಡೂ ಹಸ್ತಗಳು ಒರಟು. ಮುಖದಲ್ಲಿ ಗೆಲವು ತುಂಬಿದ್ದರೂ, ಕಣ್ಣುಗಳಲ್ಲಿ ಯೌವನದ ಹೊಸ ಛಾಯೆಯ ತೀಕ್ಷ್ಣ ಹೊಳಪಿದ್ದರೂ ಅವು ಒಂದು ರೀತಿಯ ಧಾರ್ಷ್ಟ್ಯದಿಂದ ಕೂಡಿವೆ. ಮುರಳೀಧರನ ಬದಿಯಲ್ಲಿ ಕುಳಿತುಕೊಳ್ಳುವಾಗಲೆಲ್ಲ ತಾನು ಬೇರೆಯೇ ಆಗಿದ್ದೇನೆಂಬ ನಾಚಿಕೆ, ಸಂಕೋಚದಿಂದ ಮುದುಡುತ್ತಾನೆ. ಯಾವುದೋ ಪ್ರತ್ಯೇಕ ಭಾವ. ಇನ್ನೇನೋ ಹೆದರಿಕೆ. ಕೈಗಳಲ್ಲೇಕೆ ಹೀಗೆ ನಡುಕ? ಮನದಲ್ಲೇಕೆ ಬೆದರಿಕೆ? ಯಾಕೆ ಈ ವಿಚಿತ್ರ ಗೊಂದಲ? ತನ್ನಲ್ಲೇ ಅಂತರ್ಮುಖಿಯಾದ ಅವನನ್ನು ಆಗಾಗ ಸುಜಾತೆ ಎಚ್ಚರಿಸುತ್ತ, "ನಿಮ್ಮನೆ ಅಂತ ತಿಳಿದು ಸಂಕೋಚವಿಲ್ಲದೆ ಇರಿ" ಎಂದಳು.

ಮಗುವಿನ ಹುಟ್ಟುಹಬ್ಬದ ದಿನ ಬಂದವರಲ್ಲಿ ಹೆಚ್ಚಿನವರು ಶ್ರೀಮಂತ ಅತಿಥಿಗಳು. ಬೆಲೆಬಾಳುವ ಬಟ್ಟೆ ತೊಟ್ಟು ಪುಟ್ಟ ಶ್ರೀಕೃಷ್ಣನಂತೆ ಕುಳಿತ ಮುದ್ದುಮಗುವಿಗೆ ನೀಡಿದ ಉಡುಗೊರೆಯ ರಾಶಿ ಅಸಂಖ್ಯ. ನಾನಾ ಬಗೆಯ ಭಕ್ಷ್ಯಗಳು, ರಂಗುರಂಗಿನ ಬೆಳಕಿನ ಸಡಗರ, ನಾನಾ ವಿಧದ ಜನರ ಅಲಂಕಾರಗಳು, ಮಾದಕ ಪಾನೀಯ ಸೇವನೆ, ಪಾಶ್ಚಾತ್ಯ ಸಂಗೀತ, ಫೋಟೋ ತೆಗೆಯುವ ಗಲಾಟೆ ಎಲ್ಲವೂ ಮದುವೆ ಸಮಾರಂಭಕ್ಕೆ ಸಮ.

ದೇವನ ಮುಖದಲ್ಲಿ ಕವಿಯಿತು ಚಿಂತೆಯ ಮೋಡ. ಕೃಷ್ಣನ ಹುಟ್ಟುಹಬ್ಬ ಆಚರಿಸ ಬೇಕೆಂದು ಸುನೀತಿ ಹೇಳುತ್ತಿದ್ದರೂ ಅವನೆಂದೂ ಮಹತ್ವ ಕೊಟ್ಟವನಲ್ಲ. ಆದರೆ ತನ್ನ ಸುತ್ತಲೂ ವಾಸಿಸುವ ಬಡ ಗುಡಿಸಲಿನಲ್ಲಿ ವರ್ಷಕ್ಕೊಂದು ಮಗುವಿನ ಜನನವಾದಾಗ ಅವರಿಗಾಗಿ ಮಿಡಿಯುತ್ತದೆ ಅವನ ಮನ. ಮೊದಲ ಮಗುವೆಂದು ಅಲ್ಲಿ ಸಂಭ್ರಮದ ಬೆಳಕಿಲ್ಲ. ಒಂದು ಆಟಿಗೆ, ಹೊಸ ಬಟ್ಟೆಯಿಲ್ಲ. ಈ ಶ್ರೀಮಂತ ಮಗುವಿನ ಹುಟ್ಟು ಹಬ್ಬದ ತೃಣದಷ್ಟು ಸಂತೋಷ ಆ ಮಕ್ಕಳ ಪಾಲಿಗಿಲ್ಲ ಎಂಬ ವ್ಯಥೆ ಅವನಿಗೆ.

ತನ್ನದೇ ಯೋಚನೆ, ತನ್ನದೇ ಸಾದಾ ಉಡುಪಿನಿಂದ ಯಾರ ಗಮನ ಸೆಳೆಯದ, ಯಾರೊಂದಿಗೂ ಬೆರೆಯದ ದೇವನನ್ನು ಕಳಕಳಿಯಲ್ಲಿ ವಿಚಾರಿಸಿದಳು ಸುಜಾತೆ,

"ಯಾಕೆ ಮಂಕಾಗಿದ್ದೀರಿ ಭಾವಾ, ಯಾರಾದರೂ ನಿಮ್ಮನ್ನು ಆಡಿಕೊಂಡು ಮನ ನೋಯಿಸಿದರೇ?"

"ಹಾಗೇನಿಲ್ಲ, ಏನೋ ಮನಕ್ಕೆ ಬೇಸರ."

"ಛೀ, ಯಾವುದಕ್ಕೂ ಬೇಸರಿಸಬೇಡಿ. ಈಗಿನ ಜನರು ಹೊಟ್ಟೆಗೆ ಏನೂ ಮಹತ್ವ ಕೊಡುವುದಿಲ್ಲ, ಎಲ್ಲಾ ಬಟ್ಟೆಗೆ. ನಮ್ಮ ಅಂಗಡಿಯಲ್ಲಿ ಫ್ಯಾಷನೇಬಲ್ ಬಟ್ಟೆಗಳು ಮಾರಾಟವಾಗುವಷ್ಟು ಜಿನಸಿ ಅಂಗಡಿಗಳಲ್ಲಿ ಜಿನಸು ಮಾರಾಟವಾಗುವುದಿಲ್ಲ. ಇವತ್ತು ಬಂದ ಅತಿಥಿಗಳನ್ನು ನೋಡಿದಿರಲ್ಲ, ಹೇಗೆ ಡ್ರೆಸ್ ಮಾಡಿಕೊಂಡಿದ್ದರು ಎಂದು. ಮೇಲೆಲ್ಲ ಥಳಕು, ಒಳಗೆಲ್ಲಾ ಗಿಲೀಟು!"

ಅಂತೂ ಅದ್ದೂರಿಯಿಂದ ಮುಗಿಯಿತು ಮಗುವಿನ ಹುಟ್ಟುಹಬ್ಬ. ಮರುದಿನ ಬೆಳಗ್ಗೆ ಮುರಳೀಧರನ ಬಟ್ಟೆ ಅಂಗಡಿಯಿಂದ ಕೆಲವು ಬಟ್ಟೆಗಳನ್ನು ಖರೀದಿಸಿದ. ಮನೆಗೆಲಸದ ಆಳಿಗೆ ಒಂದು ಪಂಚೆ, ಒಂದು ಕಂಬಳಿ, ಕರಿಯನಿಗೆ ಒಂದು ಅಂಗಿಬಟ್ಟೆ, ತನ್ನಲ್ಲಿ ಕೆಲಸಕ್ಕೆ ಬರುವವರ ಮಕ್ಕಳನ್ನು ನೆನಪಿಸಿಕೊಂಡು ಎಲ್ಲರಿಗೂ ತಲಾ ಒಂದೊಂದು ಜೊತೆ ಅಂಗಿ, ಚಡ್ಡಿಗಳು, ಹೊಲೆಯ ಮಾದನ ಹೆಂಡತಿ ಚಿಂದಿ ಸೀರೆ ಉಡುವುದು ನೆನಪಾಗಿ ಅವಳಿಗೊಂದು ಸೀರೆ ಆರಿಸಿದ. ಬಿಲ್ಲು ಏರಿತು ನಾನ್ನೂರೈವತ್ತರ ಮೇಲೆ.

ಆ ದೊಡ್ಡ ಅಂಗಡಿಯಲ್ಲಿ ಬೆಲೆಬಾಳುವ ಬಟ್ಟೆಗಳ ರಾಶಿಯಿದ್ದರೂ ಅವನು ಖರೀದಿಸಿದ್ದು ಕಡಿಮೆ ಕ್ರಯದ ಬಟ್ಟೆಗಳನ್ನು. ಇನ್ನಷ್ಟು ಕೊಳ್ಳುವ ಮನಸ್ಸಿತ್ತು, ಆದರೆ ಕಿಸೆ ಖಾಲಿ.

"ಮನೆಯಾಕೆಗೆ ಏನೂ ಬೇಡವೇ? ಒಳ್ಳೆಯ ಸೀರೆಗಳಿವೆ. ಧರ್ಮಾವರಂ, ಕಾಂಜೀವರಂ, ನೈಲಾನ್, ಪಾಲಿಸ್ಟರ್ ಯಾವುದು ಬೇಕು?" ಮುರಳೀಧರನ ಪಾರ್ಟನರ್‌ರೂ, ಸ್ನೇಹಿತರೂ ಆಗಿದ್ದ ಧೀರೇಂದ್ರ ಮೆಹತಾ ಸೀರೆಗಳ ರಾಶಿಯನ್ನೇ ಬಿಡಿಸಿಹಾಕಿದರು ಅವನ ಮುಂದೆ.

ಬೇಡವೆಂದು ದೇವ ತಲೆಯಲ್ಲಾಡಿಸಿದರೆ ಅವರು ಕೇಳಬೇಕಲ್ಲ. "ಒಂದು ಸೀರೆ ತಗೊಂಡು ಹೋಗಿ. ಮನೆಯಾಕೆಯನ್ನು ಮೆಚ್ಚಿಸಲು ಸೀರೆಯೊಂದಿದ್ದರೆ ಸಾಕು! ಸುಜಾತೆ ನಿಮ್ಮ ವಿಷಯದಲ್ಲಿ ಯಾವಾಗಲೂ ಹೇಳ್ತಾ ಇರ್ತಾರೆ. ನೀವು ಆದರ್ಶವಾದಿಯಂತೆ."

ದೇವ ನಕ್ಕುಬಿಟ್ಟ. ನಿನ್ನೆಯ ಸಮಾರಂಭದಲ್ಲಿ ತಾನು ಅವರನ್ನು ಗಮನಿಸಿದ್ದರೂ ಮಾತನಾಡಬಯಸಿದಾಗ ಅವರು ಕೇವಲ ನಗುವಿನಲ್ಲಿ ಮುಕ್ತಾಯಗೊಳಿಸಿದ್ದರು ಮಾತನ್ನು! ಈಗ ಇಲ್ಲಿ ಸ್ನೇಹದ ಉಪಚಾರ.

"ನಿಮ್ಮ ಹಳ್ಳಿ, ಕೃಷಿ ಎಲ್ಲಾ ನೋಡಬೇಕು ಎನಿಸಿದೆ. ಚಳಿಗಾಲದಲ್ಲಿ ಅಲ್ಲಿ ಹವೆ ಚೆನ್ನಾಗಿರುತ್ತದೆ ಅಲ್ಲವೇ?"

"ಯಾವ ಕಾಲದಲ್ಲಿ ಬಂದರೂ ನಮ್ಮ ಊರು ಚೆಂದ" ದೇವ ಅವರ ಕೈಕುಲುಕಿ ಆಹ್ವಾನಿಸಿದ.

ಅವನು ತಂದ ಬಟ್ಟೆಗಂಟನ್ನು ಬಿಚ್ಚಿನೋಡಿದ ಸುಜಾತೆ ಹುಬ್ಬೇರಿಸಿದಳು, "ಹೆಂಡತಿ ಮಕ್ಕಳಿಗೆ ಏನನ್ನೂ ತೆಗೆದುಕೊಳ್ಳದೆ ಮೂರನೆಯವರಾದ ಇನ್ಯಾರಿಗೋ ಬಟ್ಟೆಗಳನ್ನು ತೆಗೆದಿದ್ದೀರಲ್ಲ. ಅಕ್ಕ ಖಂಡಿತ ರೇಗ್ತಾಳೆ ನಿಮ್ಮ ಮೇಲೆ."

ಅದೇ ದಿನ ರಾತ್ರೆ ಬಸ್ಸಿಗೆ ಹುಬ್ಬಳ್ಳಿಯಿಂದ ಹೊರಟಾಗ ಮುರಳೀಧರ ದೊಡ್ಡ ದೊಂದು ಪ್ಯಾಕೆಟನ್ನು ದೇವನ ಕೈಯ್ಯಲ್ಲಿರಿಸಿದ, "ನಿಮಗಾಗಿ ಈ ಉಡುಗೊರೆ. ಇನ್ನೊಮ್ಮೆ ಬರುವಾಗ ಸೂಟುಧಾರಿಯಾಗಿ ಬನ್ನಿ."

ಸುಜಾತೆ ತಾನು ಒಂದು ಸಣ್ಣ ಪೊಟ್ಟಣವನ್ನು ಅವನ ಚೀಲದಲ್ಲಿಟ್ಟಳು. "ಅಕ್ಕನಿಗೊಂದು ಸೀರೆ, ಮಕ್ಕಳಿಗೆ ಬಟ್ಟೆ ಇವೆ. ಹಾಗೇ ಕೃಷ್ಣನಿಗೂ, ವಿಷ್ಣುವಿಗೂ ಉಲ್ಲನ್ ಕೋಟುಗಳಿವೆ."

ಅವರಿಬ್ಬರ ಆತ್ಮೀಯತೆಗೆ ಬೆರಗಾದ ದೇವ ಮುದುಡಿಹೋದ ಸಂಕೋಚದಿಂದ.

* * * * *

ಕಲ್ಯಾಣಪುರ ತಲುಪಿದ ಮೇಲೆ ದೊಡ್ಡ ಗಲಾಟೆ ಆಗಿಹೋಯಿತು. ಮನೆಯವರಿಗೆ ಏನನ್ನೂ ತಾರದೆ ಬಡಬಗ್ಗರಿಗೆ ಹೊತ್ತು ತಂದ ಬಟ್ಟೆಗಂಟಿನ ಮೇಲೆ ಹೆಂಗಸರಿಬ್ಬರ ಕ್ರೋಧ ತಿರುಗಿತು. ಅವನ ಉದಾರ ಬುದ್ಧಿಯನ್ನು ಹೀಗಳೆಯುತ್ತ ನಾಗಮ್ಮ, "ಅದ್ಯಾವ ಮುಹೂರ್ತದಲ್ಲಿ ನೀನು ಅವರ ಮಗನಾದೆಯೋ... ಥೇಟ್ ಅವರದೇ ಬುದ್ಧಿ ನಿನಗೂ" ಎಂದರು.

"ಈ ಬಟ್ಟೆಗಳೆಲ್ಲ ನಮ್ಮ ಸಂಸಾರಕ್ಕೆ ಒಂದು ವರ್ಷಕ್ಕೆ ಸಾಕು. ನಮಗೇ ಇರಲಿ. ನನಗೂ ಚಳಿಗೆ ಕಂಬಳಿ ಇಲ್ಲ ಅನ್ನಿದ್ದೆ."

"ನಿನಗೆ ಬೇರೆ ತೆಗೆಯೋಣ. ಇದನ್ನು ಮನೆಕೆಲಸದವನಿಗೆ ತಂದದ್ದು."

ರೇಗಿದ ಸುನೀತಿ ಬಟ್ಟೆಗಳನ್ನು ನೂಕಿದಳು ಅಷ್ಟು ದೂರಕ್ಕೆ. "ಮೂರು ಹೊತ್ತು ಕೆಲಸದವರ ಚಿಂತೆ. ನಿಮಗೂ ಅವರಿಗೂ ಯಾವ ಜನ್ಮದ ನಂಟೋ."

ಚಾಟಿಯೇಟನಂತೆ ನಾಟಿತು ಈ ನುಡಿ. ಹೌದು, ಅವನಿಗೂ ಅವರಿಗೂ ಎಲ್ಲಿಯ ನಂಟು? ಅದರಲ್ಲಿಯೂ ಹರಿಜನರ ಮೇಲೆ ಯಾಕಿಷ್ಟು ಕರುಣೆ? ಅವನ ಹೃದಯದಲ್ಲಿ ವೇದನೆಯ ಅಲೆಯೊಂದು ಎದ್ದು ತನ್ನಲ್ಲೇ ಅಧೀರನಾದ. ಅಬ್ಬ, ಎಷ್ಟು ಪ್ರಯತ್ನಿಸಿದರೂ ತನ್ನದೇ ದುರ್ಬಲತೆಯ ವರ್ತುಲದಲ್ಲಿ ಸುನೀತಿಗೆ ತನ್ನ ವಿಷಯ ಹೇಳಲು ಆಗುವುದೇ ಇಲ್ಲ. ಹುಬ್ಬಳ್ಳಿಯಲ್ಲಿದ್ದಾಗ ಸುಜಾತೆಗೆ ಹೇಳೋಣ ಎಂದುಕೊಂಡರೆ ಅಲ್ಲಿಯೂ ಸೋತಿದೆ ನಾಲಿಗೆ. ಯಾಕೆ ಹೀಗೆ? ಈಗಲೂ ಅವನ ಮುಖದ ರಕ್ತ ಹಿಂಗಿದಂತೆ ತಗ್ಗಿಸಿದ ತಲೆಯನ್ನು.

ಅವನ ಮ್ಲಾನಮುಖ ನೋಡಿದ ಸುನೀತಿ ಬಟ್ಟೆಗಳನ್ನು ಗಂಟುಕಟ್ಟಿ ಅವನ ಮುಂದಿರಿಸಿ, "ದುಡಿಯುವವರು ನೀವು, ಯಾರಿಗೆ ಬೇಕಾದರೂ ಕೊಡಿ" ಎನ್ನುತ್ತ ಅವನ ಹತ್ತಿರಕ್ಕೆ ಬಗ್ಗಿ ಬಹಳ ಮೆಲ್ಲನೆ ಅಂದಳು, "ಸದಾನಂದ ಅವರ ಮೂರನೇ ಮಗ ಶಶಿಧರನನ್ನು ಕರೆದುಕೊಂಡು ನಿನ್ನೆ ಬೆಳಗ್ಗೆಯೇ ಬಂದಿದ್ದಾರೆ."

"ಏನಂತೆ ವಿಷಯ?" ಕೇಳಿದ ಕಣ್ಸನ್ನೆಯಲ್ಲಿ.

"ವಿಷಯ ಏನೆಂದು ಸ್ಪಷ್ಟವಾಗಿ ತಿಳಿಯಲಿಲ್ಲ. ಶಶಿಧರ ಇನ್ಮೇಲೆ ಇಲ್ಲೇ ಉಳೀತಾನೆ. ಅತ್ತೆ ಪಾಲಿನ ಭೂಮಿಯಲ್ಲಿ ಕೃಷಿ ಮಾಡ್ತಾನಂತೆ. ನಿನ್ನೆ ತಂದೆ ಮಗ ಹೋಗಿದ್ದರು ಆ ಸ್ಥಳಕ್ಕೆ."

"ಇದ್ಹೇಗೆ ಸಾಧ್ಯ? ಅಮ್ಮ ಒಪ್ಪಿಕೊಂಡಿದ್ದಾಳಾ?"

"ಅತ್ತೆಗಂತೂ ಸಂತೋಷ. 'ನನ್ನ ಭೂಮಿಯಲ್ಲಿ ಶಶಿ ಹೇಗೆ ಬೇಕಾದರೂ ಕೃಷಿ ಮಾಡಿಸಲಿ' ಎಂದಿದ್ದಾರೆ. ಸದಾನಂದನಿಗೆ ಸ್ವರ್ಗಕ್ಕೆ ಮೂರೇ ಗೇಣು. ನಾನೊಬ್ಬಳು ಮನೇಲಿದ್ದೇನೆ ಎಂದು ನೋಡಲೇ ಇಲ್ಲ."

"ನಿನ್ನನ್ನು ಏನಾದರೂ ಆಡಿಕೊಂಡರೇ ಅವರು?"

"ಊಹೂಂ, ನಾನು ಅಷ್ಟೇ ಮುಖ ಬಿಗಿದುಕೊಂಡು ಓಡಾಡಿದೆ. ಕೃಷಿ ಹೇಗ್ಹೇಗೆ ಮಾಡಬೇಕೆಂದು ತಂದೆ-ಮಗ ರಾತ್ರೆಯೆಲ್ಲ ನಾಲ್ಕೆಂಟು ಕಾಗದಗಳಲ್ಲಿ ನಕ್ಷೆಬಿಡಿಸಿ ಗೀಚಿದ್ದೇ ಗೀಚಿದ್ದು."

ಅಷ್ಟರಲ್ಲಿ ಕೇಳಿಸಿತು ಸದಾನಂದನ ಧ್ವನಿ. ಎಂದಿನಂತೆ ಉಪಚಾರದ ಮಾತು, ನಗೆಯ ವಿನಿಮಯ. ಅಂದು ಸಂಜೆ ದೇವ ತಾನು ತಂದ ಬಟ್ಟೆಗಳನ್ನು ಕೆಲಸದವರಿಗೆ

ಹಂಚಿದ. ಸದಾನಂದನ ಕಣ್ಣುಗಳು ಕಿಡಿಕಾರಿದರೂ ಮೇಲಿನಿಂದ ನಕ್ಕು ದೇವನ ಭುಜ ತಟ್ಟಿದ.

"ಹೆಸರು ಪಡೀಬೇಕಾದರೆ ಹೀಗೆ ದಾನಧರ್ಮ ಮಾಡಬೇಕಪ್ಪ. ಕಲಿಯುಗದ ಕರ್ಣನೆಂದರೆ ನೀನೇ. ಆದರೆ ಮನೆಯವನಾದ ನನಗೆ ಏನೂ ತರಲಿಲ್ಲವೇ?"

"ದೊಡ್ಡ ಉಡುಗೊರೆ ತಂದಿದ್ದೇನೆ, ಹಿಡೀರಿ" ಬಟ್ಟೆಗಂಟು ಕಟ್ಟಿದ ಕಾಗದವನ್ನು ಅವನ ಕೈಗಿತ್ತು ನಕ್ಕ ಜೋರಾಗಿ.

'ಹರಿಜನ ಸಂಘ'ದಲ್ಲಿ ಭಜನೆ ಪ್ರಾರಂಭವಾದಾಗ ದೇವ ತನ್ನ ಪ್ರಯಾಣದ ಆಯಾಸ ಮರೆತು ಅವರೊಂದಿಗೆ ತಾನೂ ಸೇರಿಕೊಂಡ. ಭಜನೆ ಮುಗಿದು ದೊಡ್ಡವರಿಗೆ ಅಕ್ಷರಾಭ್ಯಾಸ ಪ್ರಾರಂಭವಾದಾಗ ಅಲ್ಲಿಂದ ಹೊರಟ ಮನೆಯತ್ತ. ಅಷ್ಟರಲ್ಲಿ ಕಣ್ಣೀರು ಸುರಿಸುತ್ತ ಅವನ ಕಾಲಿಗೆ ಅಡ್ಡಬಿದ್ದರು ಬೊಗ್ರ ಮತ್ತು ಚೋಮ.

ಕಲ್ಯಾಣಪುರ ಹೊಳೆಯ ಉತ್ತರಭಾಗದಲ್ಲಿ, ಈಗ ನಾಗಮ್ಮನ ಹೆಸರಿನಲ್ಲಿರುವ ಸ್ಥಳದಲ್ಲಿ ಅವರಿಬ್ಬರ ವಾಸ. ಸದಾನಂದ ನಾಳೆ ಬೆಳಗ್ಗೆ ಅವರಿಬ್ಬರ ಗುಡಿಸಲನ್ನು ಕೆಡವಿ ಅಲ್ಲಿ ಹೊಸ ಬೇಲಿ ಹಾಕಿಸುತ್ತೇನೆಂದು ತಿಳಿಸಿದ್ದಾನೆ. ಮಕ್ಕಳು ಮರಿಯೊಂದಿಗೆ ಎಲ್ಲಿಗೆ ಹೋಗುವುದೆಂದು ತಿಳಿಯದೆ ಅವರಿಬ್ಬರೂ ದೇವನ ನಿರೀಕ್ಷೆಯಲ್ಲಿದ್ದರು ಇಷ್ಟು ಹೊತ್ತು. ದೇವ ಇಬ್ಬರಿಗೂ ಧೈರ್ಯದ ಆಶ್ವಾಸನೆ ನೀಡಿ ಹೊರಟುಬಂದ ಮನೆಗೆ.

ಅಡಿಗೆಕೋಣೆಯಲ್ಲಿ ಅಕ್ಕ, ತಮ್ಮ ಹಾಗೂ ತಮ್ಮನ ಮಗ ಈಚೆಗಿನ ಪರಿವೆ ಇಲ್ಲದವರಂತೆ ಮುಳುಗಿಹೋಗಿದ್ದಾರೆ ಮಾತಿನ ಚರ್ಚೆಯಲ್ಲಿ. ಸದಾನಂದ ಕೃಷಿ ವಿವರಣೆ ನೀಡುತ್ತಿದ್ದರೆ ಶಶಿಧರ ಒಲೆಕಟ್ಟೆಯ ಬದಿಯಲ್ಲಿ ಹಪ್ಪಳ ಮುಕ್ಕುತ್ತ, "ನೋಡಿಕೋ ಅತ್ತೆ, ನಿನ್ನ ಭೂಮಿಯನ್ನು ಒಂದು ವರ್ಷದೊಳಗೆ ನಂದನವನವನ್ನಾಗಿ ಮಾಡ್ತೇನೆ" ಎನ್ನುತ್ತಿದ್ದಾನೆ.

ಇಪ್ಪತ್ತೆರಡರ ಕಿರುಮೀಸೆಯ, ಪೊದೆ ಕೂದಲನ್ನು ಹೊತ್ತ ಈ ಯುವಕನಲ್ಲಿ ಕೃಷಿಯ ಆಸಕ್ತಿಯಿರುವುದೂ ಅನುಮಾನವೇ ಸರಿ. ಇದುವರೆಗೆ ಅವನ ಅಂಗೈ ಅಂಗಾಲುಗಳಿಗೆ ಒದ್ದೆ ಮಣ್ಣು ಸೋಂಕಿರಲಾರದು. ಆದರೂ ಇಲ್ಲಿ ಬಾಯಿ ಬಡಾಯಿ ಬೇರೆ! ಸ್ವಾರಸ್ಯಕರ ಮಾತಿನ ಮಧ್ಯೆ ಸದಾನಂದ ಮುಖ ಹೊರಳಿಸಿದಾಗ ನಡುಬಾಗಿಲಿನಲ್ಲಿ ಭವ್ಯವಾಗಿ ನಿಂತ ದೇವನನ್ನು ಕಂಡು ಬೆಚ್ಚಿಬಿದ್ದ.

"ಬಾರಯ್ಯ ಬಾ ಒಳಗೆ" ಮುಖ ತುಂಬಾ ನಗೆ. "ನೀನು ಅತಿಥಿಯಲ್ಲ ಈ ಮನೆಗೆ. ಶಶೀ, ಆ ಮಣೆಯನ್ನು ಇತ್ತ ಸರಿಸು, ಅಕ್ಕ, ಅವನಿಗೂ ನಾಲ್ಕು ಹಪ್ಪಳ ಸುಟ್ಟುಕೊಡು!"

"ನಿಮ್ಮ ಉಪಚಾರ ಬೇಕಿಲ್ಲ. ಚೋಮ, ಬೊಗ್ರನಿಗೆ ಏನು ಹೇಳಿದ್ದೀರಿ?"

"ನಿನಗ್ಯಾಕೆ ಅವೆಲ್ಲ ಚಿಂತೆ? ನಿನ್ನ ಕೆಲಸ ನೀನು ನೋಡಿಕೋ. ಪಾಪ, ಒಬ್ಬನೇ ಎಷ್ಟಂತ ಓಡಾಡ್ತಿ ಹೇಳು. ಇವತ್ತು ಪ್ರಯಾಣದ ಆಯಾಸ, ಬಾಪ್ಪ, ಕೂತ್ಕೋ."

“ನನ್ನ ಮಾತಿಗೆ ಮೊದಲು ಉತ್ತರ ಕೊಡಿ. ಅವರಿಬ್ಬರ ಗುಡಿಸಲು ಕೆಡವಿ ಹಾಕ್ತೀರಂತೆ. ಏನು ನಿಮ್ಮ ಧೈರ್ಯ! ಯಾರನ್ನು ಕೇಳಿ ಈ ಕೆಲಸಕ್ಕೆ ಸಜ್ಜಾದಿರಿ?”

“ಕೇಳಲು ಇದೇನು ಮಹಾ ವಿಷಯವೇ? ಅಲ್ಲಿ ಏನು ಕೃಷಿ ಮಾಡಬೇಕು ಎಂದು ಯೋಜನೆ ಹಾಕಿದ್ದೇನೆ. ಅವರ ಗುಡಿಸಲು ಅಲ್ಲಿರುವುದೇ ದೊಡ್ಡ ಹರಗಣ.”

“ಸರಿ, ಆದರೆ ಅವರಿಬ್ಬರಿಗೂ ಬೇರೆ ಸ್ಥಳದಲ್ಲಿ ಗುಡಿಸಲು ಕಟ್ಟಿಕೊಡಿ. ಆಮೇಲೆ ಈಗಿರುವುದನ್ನು ಅಳಿದುಹಾಕಿ.”

“ಏನು? ಅವರಿಗೆ ನಾನು ಮನೆಕಟ್ಟಿಕೊಡಬೇಕೇ? ನಿನ್ನಂತೆ ನಾನು ಅಂತ ತಿಳಿದಿದ್ದಿಯೇನೋ ಹುಡುಗ.”

“ಹಾಗಾದರೆ ಅವರ ಗುಡಿಸಲಿಗೆ ಕೈ ಹಚ್ಚುವ ಹಕ್ಕು ನಿಮಗಿಲ್ಲ. ಈಗಲೇ ಹೇಳಿದ್ದೇನೆ ಮಾವಾ, ಅವರ ಗುಡಿಸಲಿನ ಒಂದು ಸೋಗೆ ಕೆಳಗುರುಳಿದರೆ ಸುಮ್ಮನಿರುವವನು ನಾನಲ್ಲ” ಎಂದವನೇ ತಾಯಿ ಅವನಿಗಾಗಿ ಹಪ್ಪಳ ತಂದರೂ ತೆಗೆದುಕೊಳ್ಳದೆ ಅಲ್ಲಿಂದ ನಡೆದ ಹೊರಗೆ.

ಸದಾನಂದ ಅಕ್ಕನ ಮುಖ ನೋಡಿದ. ಅಕ್ಕ ತಮ್ಮನನ್ನು ನೋಡಿದಳು. ರಾತ್ರೆ ದೇವ ತಾಯಿಯನ್ನು ಈ ವಿಷಯದಲ್ಲಿ ಕೇಳಿದಾಗ ಅವನಿಗೊಂದು ಸ್ಪಷ್ಟ ಅಭಿಪ್ರಾಯ ತಿಳಿದು ಹೋಯಿತು. ತಾಯಿಗೆ ಇನ್ನೂ ತವರಿನ ವ್ಯಾಮೋಹ ಬಿಟ್ಟಿಲ್ಲ. ಶಶಿಧರನನ್ನು ಉಳಿಸಿ ಕೊಳ್ಳುವ ಆಸೆ. ಸದಾನಂದನಿಗೆ ಎದುರಾಡಬಾರದು. ಹಾಗಾದರೆ ಏನೇ ಬಂದರೂ ತಾನೀಗ ಎದುರಿಸಲು ಸಿದ್ಧನಾಗಬೇಕು.

ಮರುದಿನ ಬೆಳಿಗ್ಗೆ ಅವನು ಹಾಲು ಕರೆದು ಮನೆಯೊಳಗೆ ಬರುತ್ತಿದ್ದಂತೆ ಸದಾನಂದ ಕತ್ತಿ ಮತ್ತು ಹಾರೆ ಹಿಡಿದು ಶಶಿಧರನೊಂದಿಗೆ ತೋಟದತ್ತ ಹೋಗುವುದು ಕಾಣಿಸಿತು. ಅದೇನು ಗೆಲವು ಅವನ ಮುಖದಲ್ಲಿ! ಮನೆಯ ಯಜಮಾನನತ್ತ ನಿರ್ಲಕ್ಷ್ಯ ನೋಟ. ಅರ್ಥವಾಯಿತು ದೇವನಿಗೆ. ಹಾಲಿನ ಪಾತ್ರೆಯನ್ನು ಅಡಿಗೆ ಕೋಣೆಯಲ್ಲಿರಿಸಿ “ಅಮ್ಮಾ...” ಎಂದ ಸ್ವರ ಏರಿಸಿ, “ಅಮ್ಮಾ, ಶಶಿ ಮತ್ತು ಮಾವ ಎಲ್ಲಿಗೆ ಹೋದದ್ದು?”

ಆಗತಾನೆ ಎದ್ದು ಬಂದ ನಾಗಮ್ಮ ನಡುಗಿದರು ಮಗನ ಸ್ವರ ಕೇಳಿ. ತನಗೇನೂ ತಿಳಿಯದು ಎಂದರು ಅವನತ್ತ ನೋಡದೆ.

“ತಿಳಿಯದು ಅಂದರೇನು? ನಿನ್ನ ಸಹಾಯವಿಲ್ಲದೆ ಮಾವ ಇಷ್ಟು ಧೈರ್ಯದಿಂದ ಮುಂದುವರಿಯಲಾರ. ನರಿ ಬುದ್ಧಿಯವ, ಇಲ್ಲಿ ಗಾಳ ಹಾಕ್ತಾ ಇದ್ದಾನೆ. ಅವನ ಗಾಳದಲ್ಲಿ ಸಿಲುಕುವ ಮೊದಲೇ ಎಚ್ಚರ ವಹಿಸಬೇಕು ನಾವು. ನಿನ್ನ ಆ ಖಾಲಿ ಸ್ಥಳದಲ್ಲಿ ಏನು ಬೆಳೀಬೇಕು ಅಂತ ಹೇಳು, ನಾನೇ ಎಲ್ಲಾ ಮಾಡಿಸ್ತೇನೆ.”

“ಅವನ ಮೇಲಿನ ಕನಿಕರದಿಂದ ‘ಹೂಂ’ ಎಂದಿದ್ದೆ.”

"ಕನಿಕರ ಪಡಬೇಕಾದ್ದು ನ್ಯಾಯವೇ. ಆದರೆ ಈ ಮನೇಲಿ ನಿನ್ನ ಮಗನಿರುವಾಗ ಅವನ ಮಗನ ಕೈಯಿಂದ ಕೃಷಿ ಮಾಡಿಸುವುದು ನ್ಯಾಯವಲ್ಲ. ಸುನೀತಿ, ಇವತ್ತು ನೀನೇ ಕೊಡುವವರಿಗೆಲ್ಲಾ ಹಾಲು ಅಳತೆ ಮಾಡಿಕೊಡು. ನಾನೀಗ ಬಂದೆ."

"ನಿಲ್ಲು ದೇವ, ನೀನಿನ್ನು ಜಗಳಕ್ಕೆ ಸಿದ್ಧನಾಗಿ ಹೋಗಬೇಡ", ನಾಗಮ್ಮ ತಡೆದರು, "ಏನು ಬೇಕಾದರೂ ಮಾಡಿಕೊಳ್ಳಲಿ ಅವನು."

"ಹಂ" ಕಾಲಪ್ಪಳಿಸಿದ ದೇವ, "ಈ ವಾಸುದೇವನನ್ನು ಬಳೆತೊಟ್ಟ ಹೆಂಗಸು ಎಂದು ಕೊಂಡಿದ್ದಾನೆ ನಿನ್ನ ತಮ್ಮ. ನಾನು ಹೆಂಗಸೋ? ಗಂಡಸೋ? ಎನ್ನುವುದನ್ನು ಈಗಲೇ ತೋರಿಸ್ತೇನೆ" ಎಂದವನೇ ಹೆಗಲ ಮೇಲೊಂದು ಟವೆಲ್ ಹಾಕಿ, ದೊಡ್ಡ ಬಿದಿರು ಕೋಲನ್ನೆತ್ತಿಕೊಂಡು ಹೊರಟೇಬಿಟ್ಟ.

* * * * *

ದೂರ ದಿಗಂತದಲ್ಲಿ ಮೂಡಿದ ಕೆಂಪು ವರ್ಣದ ಛಾಯೆ ಅಳಿದು ಹೊನ್ನ ಬಣ್ಣದ ಕಿರಣಗಳು ಕಾಡಿನ ಪ್ರದೇಶವನ್ನು ಬಹಳ ಮೆಲ್ಲನೆ ಆವರಿಸಿಕೊಳ್ಳುತ್ತ ಅದೇ ಆಗ ತೆನೆ ಬಿಡಲು ಸಿದ್ಧವಾದ ಭತ್ತದ ಗದ್ದೆಯನ್ನೆಲ್ಲ ಮುಚ್ಚಿಕೊಂಡುವು. ಹಕ್ಕಿಗಳ ಚಿಲಿಪಿಲಿ ಸ್ವರದಿಂದ ಇಡೀ ಕಾನನವೆ ಹೊಸರಾಗ ಹಾಡುವಂತಿದೆ. ಅದೆಲ್ಲಿಂದಲೋ ಎರಡು ಪುಟ್ಟ ಅಳಿಲುಗಳು ಟಣಪಣನೆ ಜಿಗಿದು ಕುಪ್ಪಳಿಸಿ ಭತ್ತದ ಗದ್ದೆಯಿಂದ ಬಾಳೆ ತೋಟದತ್ತ ಓಡಿದವು. ಏನು ಅವುಗಳ ಮೋಜು!

ಅವಸರದಲ್ಲಿ ಹೆಜ್ಜೆಹಾಕಿದ ದೇವ ಬಾಳೆತೋಟ ಹಾದು ಹೊಳೆ ನೀರು ಕಡಿಮೆ ಯಿರುವ ಸ್ಥಳದಲ್ಲಿಳಿದು ಹೊಳೆದಾಟಿ ಅಲ್ಲಿಂದ ಉತ್ತರಭಾಗದತ್ತ ಹೊರಳಿದ. ಕೇವಲ ಹುಲ್ಲಿನಿಂದ ತುಂಬಿದ್ದ ಆ ಪ್ರದೇಶ ಈ ತನಕ ಯಾವ ಮಹತ್ವ ಪಡೆದಿರಲಿಲ್ಲ. ಬೊಗ್ರ, ಚೋಮ ಮತ್ತು ಒಂದು ಮುಸ್ಲಿಂ ಕುಟುಂಬ ಪ್ರತ್ಯೇಕ ಗುಡಿಸಲಿನಲ್ಲಿ ವಾಸವಾಗಿದ್ದಾರೆ ಅನೇಕ ವರ್ಷಗಳಿಂದ. ದೇವ ಈ ಬದಿಗೆ ತಲೆಹಾಕಿದವನೂ ಅಲ್ಲ.

ಆಳೆತ್ತರಕ್ಕೆ ಬೆಳೆದ ಹುಲ್ಲಿನ ಮಧ್ಯೆ ಎಚ್ಚರಿಕೆಯಿಂದ ಹೆಜ್ಜೆಯಿರಿಸುತ್ತ ಚೋಮನ ಗುಡಿಸಲಿನ ಬಳಿ ಬಂದಾಗ ಸದಾನಂದ ಬೊಗ್ರನೊಡನೆ ವಾದಕ್ಕಿಳಿದಿದ್ದ. ದೂರದಲ್ಲಿರುವ ಇನ್ನೊಂದು ಗುಡಿಸಲಿನಿಂದ ನಾಲ್ಕಾರು ಮುಸ್ಲಿಂ ಮಕ್ಕಳು ಇತ್ತ ನೋಡುತ್ತಿವೆ ಕಾತರತೆ ಯಿಂದ. ತನ್ನ ಮೂವರು ಕೆಲಸದವರೂ ಅಲ್ಲಿರುವುದು ನೋಡಿ ಅರೆ, ತನ್ನನ್ನು ಕೇಳದೆ ಇವರೇಕೆ ಇಲ್ಲಿಗೆ ಬಂದರು? ಎಂದೆನಿಸದಿರಲಿಲ್ಲ. ದೊಣ್ಣೆಯನ್ನು ಸರಿಯಾಗಿ ಹೆಗಲ ಮೇಲೇರಿಸಿ ಇನ್ನೂ ಹತ್ತಿರಕ್ಕೆ ಬಂದ.

ತಮ್ಮ ಯಜಮಾನನನ್ನು ನೋಡಿದ ಬೊಗ್ರ, ಚೋಮ ಓಡಿಬಂದು ಅವನ ಕಾಲಿಗೆರಗಿದರು, "ರಕ್ಷಿಸಿ ಅಯ್ಯ... ರಕ್ಷಿಸಿ...."

ಅವರ ಧ್ವನಿ ತಟ್ಟಿತು ಹೃದಯವನ್ನು. ಕೋಪದ ಕಾವೇರಿತು ನರನರಗಳಲ್ಲಿ. "ಮಾವಾ, ನಿಮ್ಮ ಕೆಲಸ ನಿಲ್ಲಿಸಿ!"

ದೇವ ನಡೆದು ಬಂದ ರಭಸ, ದೊಣ್ಣೆ ಹಿಡಿದು ನಿಂತ ಠೀವಿ, ಅಗಲವಾದ ಮೈಕಟ್ಟು, ಕಣ್ಣುಗಳಲ್ಲಿ ಕಿಡಿಕಾರುವ ಕೋಪ ನೋಡಿ ಸದಾನಂದ ಹೆದರಿದರೂ ಅವನಂತೆ ಎದೆಸೆಟೆದು ನಿಂತ, ನಿನಗೆ ಹೆದರುವವನಲ್ಲ ಎಂಬಂತೆ ನಕ್ಕ.

"ಕೃಷಿ ಮಾಡಿಸಲು ಅಕ್ಕ ಒಪ್ಪಿಗೆ ಕೊಟ್ಟಿದ್ದಾಳೆ. ನಾನಿಲ್ಲಿ ಕೃಷಿ ಮಾಡಿಸ್ತೇನೆ."

"ಅಮ್ಮ ಹೇಳಿದ್ದು ನಿಮಗೆ ಹೆದರಿ. ಮನೆಯಲ್ಲಿ ಕೇಳುವವರು ಯಾರೂ ಇಲ್ಲ ಅಂದುಕೊಂಡಿರಾ?" ದೊಣ್ಣೆಯನ್ನು ನೆಲಕ್ಕೂರಿ ಹೂಂಕಾರ ಮಾಡಿದವನು ಎರಡು ಹೆಜ್ಜೆ ಮುಂದಿರಿಸಿದ, "ನನಗಿಂತ ಹಿರಿಯರಾದ ನಿಮಗೆ ನಾನು ಬುದ್ಧಿ ಹೇಳಬಾರದು. ನಿಮ್ಮ ಮಗನಿಗೆ ಸಮ ನಾನು. ಬುದ್ಧಿವಂತಿಕೆ, ವ್ಯವಹಾರಗಳನ್ನು ನಿಮಗೆ ಹೇಳಿಕೊಡಬೇಕೇ? ನಮ್ಮ ಮನೆ ವ್ಯವಹಾರಗಳಲ್ಲಿ ನೀವ್ಯಾಕೆ ಕೈಹಾಕ್ತೀರಿ?"

"ನಿನ್ನ ವ್ಯವಹಾರದಲ್ಲಿ ನಾನೆಲ್ಲಿ ಮೂಗು ತುರುಕಿದ್ದೇನೆ? ಅಕ್ಕನ ಭೂಮಿಯ ಹಕ್ಕು ನನಗೆ. ಹೊಳೆ ಬದಿಯಿಂದ ಈಚೆಗೆ ಬೇಲಿ ಹಾಕಿಸೋಣ."

"ಅದರ ಅಗತ್ಯ ನನಗಿಲ್ಲ. ಕತ್ತಿ, ಹಾರೆ ಕೆಳಗಿಟ್ಟು ನಿಮ್ಮ ಪಾಡಿಗೆ ಹೊರಟುಹೋಗಿ. ಮನೆ ಹಾಳು ಮಾಡುವ ಕೆಲಸ..."

ಸದಾನಂದ ದುರುಗುಟ್ಟಿ ನೋಡಿದ, "ಎಲೋ ಹಾದರದವಳಿಗೆ ಹುಟ್ಟಿದವನೇ! ನನ್ನ ಮಕ್ಕಳಿಗೆ ನ್ಯಾಯವಾಗಿ ಸಿಗಬೇಕಿತ್ತು ಈ ಸಮಸ್ತ ಆಸ್ತಿ. ಅವೆಲ್ಲ ನಿನಗೆ ಸಿಕ್ಕಿದೆಯೆಂದು ಏನು ನಿನ್ನ ದುರಹಂಕಾರ? ಅಕ್ಕ ಬಯಸಿದ್ದು ಒಂದು, ಆದದ್ದು ಇನ್ನೊಂದು. ಹೋಗಲಿ, ನಿನ್ನ ಭಾಗದ ಮಣ್ಣು ಮುಟ್ಟುವುದಿಲ್ಲ. ಆದರೆ ಇಲ್ಲಿ ಬೆಳೆಸ್ತೇವೆ ಹೊನ್ನು... ಹೊನ್ನು. ಎಲ್ಲೋ ನಾಯಿಜಾತೀದು... ನನ್ನ ಹತ್ತಿರ ಬಂದು ದರ್ಬಾರು ಮಾಡುತ್ತೆ..." ಉಗುಳಿದ ಅಷ್ಟು ದೂರಕ್ಕೆ.

"ನಾಲಿಗೆ ಬಿಗಿ ಹಿಡಿಯಿರಿ ಮಾವಾ..." ಮೈರಕ್ತ ಹೆಪ್ಪುಗಟ್ಟಿದಂತಾಗಿ ತನ್ನ ಬಗ್ಗೆ ದುಃಖವುಕ್ಕಿ ಅಲ್ಲೇ ಕುಸಿಯುವಂತಾದರೂ ಸಾವರಿಸಿಕೊಂಡು ಹೂಂಕರಿಸಿದ, "ನನ್ನ ಸಾಕುತಾಯಿಯ ತಮ್ಮ ನೀವೆಂದು ನಿಮಗೆ ಕೊಟ್ಟ ಮರ್ಯಾದೆ ಅತಿಯಾಯಿತು. ನನ್ನ ಒಳ್ಳೆಯತನದ ದುರುಪಯೋಗ ಮಾಡ್ತಾ ಇದ್ದೀರಿ. ಮಾಡಿಕೊಳ್ಳಿ, ಆದರೆ ಈ ಹರಿಜನರ ಗುಡಿಸಲಿಗೆ ಕೈಹಚ್ಚಿ ನೋಡೋಣ. ಅವರಿಗೆ ಬೇರೆ ಮನೆಯಿಲ್ಲದೆ ಅನಾಥರನ್ನಾಗಿ ಮಾಡಿದಿರೋ ನಾನಂತೂ ಸುಮ್ಮನಿರುವವನಲ್ಲ. ಈ ದೇವ ಎಂಥವನೆಂದು ಇವತ್ತೇ ಆಗಿಹೋಗಲಿ ಪರೀಕ್ಷೆ."

ಸರ್ರನೆ ಹೊರಳಿದ ತನ್ನ ಕೆಲಸದವರತ್ತ. ಅಲ್ಲಿಗೆ ಬಂದವರು ನಾರಾಯಣ, ಬಾಬು ಮತ್ತು ಸೋಂಪ. "ಏಯ್... ಎಲ್ಲರೂ ನನ್ನನ್ನು ಕೇಳದೆ ಇಲ್ಲಿಗ್ಯಾಕೆ ಬಂದಿರಿ? ನಡೀರಿ ಇಲ್ಲಿಂದ." ಅನಂತರ ಹರಿಜನರತ್ತ ತಿರುಗಿದ, "ನಿಮ್ಮ ಪಾಡಿಗೆ ಹಾಯಾಗಿರಿ. ಅದ್ಹೇಗೆ ಇವರು ನಿಮ್ಮ ಗುಡಿಸಲು ಅಳಿದುಹಾಕ್ತಾರೋ ನಾನೂ ನೋಡ್ತೇನೆ ಒಂದು ಕೈ!"

ದೊಣ್ಣೆ ಮತ್ತೆ ಏರಿತು ಹೆಗಲಮೇಲೆ. ಸದಾನಂದನ ಸಹಾಯಕ್ಕೆಂದು ಬಂದ ಮೂವರು ಕೆಲಸದವರನ್ನು ಕರೆದುಕೊಂಡು ರಾಜಗಾಂಭೀರ್ಯದಲ್ಲಿ, ಠೀವಿಯಲ್ಲಿ, ದೃಢ ಹೆಜ್ಜೆಗಳನ್ನಿರಿಸುತ್ತ ಹೊರಟುಹೋದ ದೇವ. ಸದಾನಂದ ಕತ್ತಿ, ಹಾರೆಯನ್ನು ನೆಲಕ್ಕೆಸೆದು ಕ್ಯಾಕರಿಸಿ ಉಗುಳಿದ. ಅವನು ಬೂದಿಮುಚ್ಚಿದ ಕೆಂಡ. ದೇವನ ಶಕ್ತಿ-ಸಾಮರ್ಥ್ಯದ ಎದುರು ತಾನು ಏನೂ ಅಲ್ಲ. ರಟ್ಟೆಯಲ್ಲಿ ಬಲವಿಲ್ಲದವ.

"ಮೂರ್ಖರೇ, ತೊಲಗಿಹೋಗುವುದಿಲ್ಲವೇ ಇಲ್ಲಿಂದ?"

"ಇಲ್ಲ, ಅಯ್ಯನವರ ಆಜ್ಞೆ ನಮಗೆ ನೆತ್ತಿಮೇಲೆ" ನೂರು ಆನೆಗಳ ಬಲಬಂದವರಂತೆ ಮುಖ ತಿರುಗಿಸಿದರು ಬೊಗ್ರ, ಚೋಮ.

"ಸತ್ತುಕೊಳ್ಳಿ ಇಲ್ಲೇ, ಮಣ್ಣು ಮುಕ್ಕಿ ಇಲ್ಲೇ." ಸದಾನಂದ ಶಶಿಧರನನ್ನು ಎಳೆದುಕೊಂಡೇ ಬಂದು ಅಕ್ಕನಲ್ಲಿ ದೂರುಕೊಟ್ಟ. ಅವರೇನು ಸಮಾಧಾನ ಹೇಳುತ್ತಾರೆ?

"ಕೋಪ ಬಂದರೆ ಅವನು ಶಿವನ ಎರಡನೇ ಅವತಾರ. ಶಶಿಗೆ ಕೃಷಿದಾಹವಿದ್ದರೆ ಬೇರೆಕಡೆ ಹೊಸ ಆಸ್ತಿ ನೋಡು" ಎಂದರು ನಾಗಮ್ಮ.

"ಒಂದೇ ಸಲಕ್ಕೆ ಹತ್ತಿಪ್ಪತ್ತು ಸಾವಿರ ಖರ್ಚುಮಾಡಲು ನನ್ನಿಂದ ಸಾಧ್ಯವಿಲ್ಲ. ಶಶಿಯನ್ನು ಇಲ್ಲಿ ಬಿಟ್ಟುಹೋಗ್ತೇನೆ. ದೇವನ ಜೊತೆಯಲ್ಲಿ ಸ್ವಲ್ಪ ಕೆಲಸ ಕಲಿಯಲಿ" ಎಂದ ಸದಾನಂದ ಮಗನ ಕಿವಿ ಹಿಂಡಿದ, "ಅಕ್ಕನ ಭೂಮಿ ನಮ್ಮದಾಗಬೇಕು. ದೇವನನ್ನು ಹೊಗಳಿಹೊಗಳಿ ನಿನ್ನ ಕೆಲಸ ಮಾಡಿಕೋ."

"ಅವನ ಮುಖ, ಒರಟು ಮಾತು ಕೇಳಿದರೆ ನಡುಕ ಬರ್‍ತದೆ ಮೈಯಲ್ಲಿ. ಇಲ್ಲಪ್ಪ, ನಾನಿರಲಾರೆ ಇಲ್ಲಿ. ನಿನ್ನ ಜೊತೆಯೇ ಬರ್‍ತೇನೆ."

ಮಗನ ತಲೆಗೊಂದು ಗುದ್ದಿದ ತಂದೆ, "ಬದುಕಲು ನೂರು ಮಾರ್ಗ ಬೇಕು. ನ್ಯಾಯ-ಧರ್ಮ ನೋಡ್ತಿದ್ದರೆ ಏನೂ ದಕ್ಕದು. ಕತ್ತೆ ಹಾಗೆ ಬೆಳೆದಿದ್ದೀಯಾ. ತಲೆಯಲ್ಲಿ ಜೇಡಿಮಣ್ಣು ತುಂಬಿರಬೇಕು" ಸದಾನಂದ ಹುಬ್ಬುಹಾರಿಸಿ ಕಣ್ಣು ಕಿರಿದುಗೊಳಿಸಿ ಮಗನ ಕಿವಿಯಲ್ಲಿ ಏನೋ ಪಿಸುಗುಟ್ಟಿದ.

ಮರುದಿನ ಅಲ್ಲಿಂದ ಹೊರಡುವಾಗ ದೇವನ ಹೆಗಲ ಮೇಲೆ ಆತ್ಮೀಯವಾಗಿ ಕೈ ಇರಿಸಿ ನಗುಮುಖವಾಡ ತಳೆದು ಅಂದ ಸದಾನಂದ.

"ಅಲ್ಲಯ್ಯ, ನಿನಗ್ಯಾಕೆ ಇಷ್ಟು ಕೋಪ? ನೀನು ಹೇಳಿದ್ದೆಲ್ಲ ನಿಜ. ನನಗ್ಯಾಕೆ ಬೇಕು ನಿಮ್ಮನೆ ವ್ಯವಹಾರ? ಆದರೂ ಶಶಿ ಬಹಳ ಆಸೆ ಇಟ್ಟುಕೊಂಡಿದ್ದಾನೆ. ನಿನ್ನ ಹಾಗೆ ಬಾಳೆತೋಟ ಮಾಡುವ ಕನಸು ಅವನಿಗೆ. ಮಾಡುವ ಸ್ವಾತಂತ್ರ್ಯ ನೀನು ಕೊಟ್ಟರೆ ಸಾಕು. 'ಹರಿಜನರ ಗುಡಿಸಲು ಮುಟ್ಟಬೇಡ, ದನಗಳು ಬಾರದಂತೆ ಬೇಲಿ ಮಾಡಿಕೋ' ಎಂದಿದ್ದೇನೆ. ಒಟ್ಟಿನಲ್ಲಿ ನಮ್ಮಿಂದ ನಿನಗೆ ಕಷ್ಟವಾಗಬಾರದಪ್ಪ!"

## ೭

ನಡೆದ ಘಟನೆ ಸಣ್ಣದಾಗಿದ್ದರೂ ದೇವನ ಮನಸ್ಸಿನಲ್ಲಿ ಒಂದು ವಿಧದ ವಿರಕ್ತಭಾವ ತುಂಬಿಕೊಂಡಿತು. ಸದಾನಂದ ಬಂದದ್ದು, ತನ್ನಿಂದ ಅವಮಾನಿತನಾದದ್ದು, ಶಶಿಧರ ಇಲ್ಲಿಯೇ ಉಳಿದದ್ದು ಎಲ್ಲವೂ ಅವನಿಗೆ ಕಿರಿಕಿರಿ. ನಾಗಮ್ಮ ಈ ಬಗ್ಗೆ ಚಕಾರ ಶಬ್ದವೆತ್ತಲಿಲ್ಲ. ಸದಾನಂದನನ್ನು ದೂರಲಿಲ್ಲ, ದೇವನನ್ನು ಖಂಡಿಸಲಿಲ್ಲ. ತನಗೆ ಸಂಬಂಧವಿಲ್ಲ ಎಂಬ ಧೋರಣೆ. ಪ್ರಾಪ್ತ ವಯಸ್ಕನಾದ ಶಶಿಧರ ಇಲ್ಲುಳಿದದ್ದು ಅವರಿಗೆ ಇಷ್ಟವಿದ್ದರೂ ನಾಳೆ ತಾನು ಅವನನ್ನು ಒಂದಲ್ಲ ಒಂದು ವಿಧದಲ್ಲಿ ಎದುರಿಸ ಬೇಕಾದೀತು. ಆಗ ನಾಗಮ್ಮನಿಗೆ ವಿರೋಧ ಮಾಡಿದಂತಲ್ಲವೇ ಎಂದೆನಿಸಿದರೂ ಮೌನ ತಳೆದ.

ಕಲ್ಯಾಣಪುರ ಹೊಳೆಯ ಉತ್ತರ ಭಾಗದ ಖಾಲಿ ಸ್ಥಳದ ಹುಲ್ಲು ಇನ್ನಷ್ಟು ಎತ್ತರಕ್ಕೆ ಬೆಳೆದು ಯಾರ್‍ಯಾರೋ ಬಂದು ಅವನ್ನು ಹೆರೆದುಕೊಂಡುಹೋದರು ದನಗಳ ಮೇವಿ ಗೋಸ್ಕರ. ತಗ್ಗು, ದಿನ್ನೆ, ಕಲ್ಲು ಮಣ್ಣುಗಳು ಉಳಿದವು ಹಾಗೇ. ಶಶಿಧರ ಅತ್ತ ನೋಡುವ ಸಾಹಸ ಮಾಡಲಿಲ್ಲ. ದಿನವೆಲ್ಲ ಕೆಲಸವಿರುವವನಂತೆ ಓಡಾಟ. ತಿಂದದ್ದು ಜೀರ್ಣವಾಗುವ ತನಕ ಹೊಳೆ ದಡದಲ್ಲಿ, ಕಾಡಿನ ತುದಿಯಲ್ಲಿ, ಮರದ ರೆಂಬೆಯಲ್ಲಿ ಕಳೆದುಹೋಗುತ್ತದೆ ಅವನ ಸಮಯ. ಅವನಿಗೊಂದು ಬಾಲ ಇಲ್ಲ ಎನ್ನುವುದೇ ಬಹು ದೊಡ್ಡ ಕೊರತೆ. ನಾಗಮ್ಮನಿಗೆ ಅವನೆಂದರೆ ಅತಿ ವ್ಯಾಮೋಹ. ಉಪಚಾರಗಳ ಸುರಿಮಳೆ. ಮಾಡುವ ಉಪಚಾರಗಳು ಅತಿಯಾದಂತೆ ಶಶಿಧರನ ಹೊಟ್ಟೆಯೂ ಬೆಳೆಯ ಲಾರಂಭಿಸಿತು.

ಮಳೆಗಾಲ ಕಳೆದು ಸುಗ್ಗಿ ಬೇಸಾಯ ಪ್ರಾರಂಭವಾದಂತೆ ಬೊಗ್ರ ಮತ್ತು ಚೋಮರ ಗುಡಿಸಲನ್ನು ಕೆಡವಿ ಅಲ್ಲಿ ಹಂಚಿನ ಸಣ್ಣಮನೆ ಕಟ್ಟಿಸುವ ಕಾರ್ಯಕ್ಕಿಳಿದ ದೇವ. ಇಂದೋ ನಾಳೆಯೋ ನೆಲಸಮವಾಗಲಿರುವ ಮನೆಗಳಿಗಾಗಿ ಇವನಿಗೇಕೆ ಒದ್ದಾಟ ಎಂದುಕೊಂಡ ಶಶಿಧರ. ಆದರೆ ದೇವ ಜೀವಂತವಾಗಿರುವ ತನಕ ಅವರ ಕೂದಲನ್ನೂ ಸೋಂಕಲು ಬಿಡಲಾರ ಎನ್ನುವುದು ತಿಳಿಯದೇ?

ಅದೊಂದು ಚಳಿಗಾಲದ ಬೆಳಗಿನ ಸಮಯ. ಇಬ್ಬನಿ ಮುಸುಕಿದ ಬಾಳೆತೋಟದಲ್ಲಿ ಅದೇ ಆಗ ಸೂರ್ಯದರ್ಶನವಾಗಿತ್ತು. ತೋಟದಲ್ಲಿ ಬೆಳೆದ ಬಾಳೆಗೊನೆಗಳನ್ನು ಕಡಿಯುವುದರಲ್ಲಿ ನಿರತರಾಗಿದ್ದರು ದೇವನ ಕೆಲಸದವರು. ಕೊಕ್ಕೋ ಮರದ ಹತ್ತಿರ ಒಂದು ಬೆಳೆದ ಗೊನೆ ಇರುವುದು ನೆನಪಾಗಿ ದೇವ ಅತ್ತ ಕಣ್ಣುಹಾಯಿಸಿದರೆ ಆ ಗೊನೆ ಇಂದು ನಾಪತ್ತೆ. ಯಾರೋ ಕಡಿದಿರುವುದು ಸ್ಪಷ್ಟ. ಅಪರೂಪಕ್ಕೆ ತೋಟ ಸುತ್ತಲು ಬಂದ ಶಶಿಧರನನ್ನು ಕೇಳಿದರೆ ಅವನಿಗೆ ಗೊನೆ ವಿಷಯವೇ ತಿಳಿಯದಂತೆ. ಕೆಲಸದವರನ್ನು ಪ್ರಶ್ನಿಸಿದರೆ ಎಲ್ಲರೂ ಗೊನೆ ನೋಡಿದ್ದು ನಿಜ, ಕಡಿದದ್ದು ಯಾರಿಗೂ ನೆನಪಿಲ್ಲ.

"ಈ ಸಣ್ಣ ತೋಟದಿಂದ ಆ ಪೀಚಲು ಕಾಯಿಯನ್ನು ಕದಿಯುವ ಭೂಪ ಯಾವ ನಿದ್ದಾನೆ?" ಶಶಿಧರ ಕೊಂಕುಧ್ವನಿ ತೆಗೆದಾಗ ದೇವ ಅನುಮಾನದಿಂದ ದಿಟ್ಟಿಸಿದ ಅವನನ್ನೇ.

ಅದೇ ಸಮಯದಲ್ಲಿ ಕಾಣಿಸಿಕೊಂಡ ತನಿಯ. ಎರಡು ದಿನಗಳಿಂದ ಅವನ ಕೊನೆಯ ಮಕ್ಕಳಿಬ್ಬರು ಜ್ವರಪೀಡಿತರಾಗಿ ಮಲಗಿದ್ದರಿಂದ ಕೆಲಸಕ್ಕೆ ಬಂದಿರಲಿಲ್ಲ. ಇವತ್ತು ಔಷಧಿಗೆಂದು ಹೊರಟಿದ್ದಾನೆ ಕಲ್ಯಾಣಪುರ ಪೇಟೆಗೆ. ಎಂಟು ಮಕ್ಕಳ ಈ ಬಡ ತಂದೆಗೆ ಔಷಧಿಗೆ ಸುರಿಯಲು ಸಾಕಷ್ಟು ಹಣವೂ ಇರಲಾರದು. ದೇವ ಅವನನ್ನು ಕಳಕಳಿಯಲ್ಲಿ ವಿಚಾರಿಸಿಕೊಳ್ಳುತ್ತ ತನ್ನಲ್ಲಿ ಜ್ವರದ ಔಷಧಿಯಿದೆಯೆಂದೂ ಹೇಳುತ್ತ, "ನನ್ನ ಜೊತೆ ಬಾ, ಔಷಧಿ ಕೊಡ್ತೇನೆ" ಎಂದ.

"ಶಶೀ, ಹೇಗಿದ್ದರೂ ನೀನು ತೋಟಕ್ಕೆ ಬಂದಿದ್ದೀಯ. ಈ ಗೊನೆಗಳನ್ನು ಲೆಕ್ಕಮಾಡಿ ಅಡಿಕೆ ಹಾಳೆಯ ಮೇಲಿರಿಸು. ನಾನೀಗ ಬಂದೆ. ಬಾ ತನಿಯ."

ತನಿಯನೊಡನೆ ಮನೆಗೆ ಬರುವ ಹಾದಿಯಲ್ಲಿ ಅವನ ಸುಖ-ದುಃಖ ವಿಚಾರಿಸುತ್ತ ಕೇಳಿದ ದೇವ, "ಈ ವರ್ಷ ಇನ್ನೇನು ವಿಶೇಷ? ಎಂಟರ ನಂತರ ಒಂಬತ್ತನೇಯದು?"

ತನಿಯ ನಗುತ್ತ ತಲೆಯಲ್ಲಾಡಿಸುತ್ತಿದ್ದಂತೆ ಅವನಿಗೆ ಕುಟುಂಬ ಯೋಜನೆಯ ವಿವರ ಹೇಳುತ್ತ, ಮದ್ಯಪಾನ ಮಾಡದಂತೆಯೂ ಉಪದೇಶಿಸಿ ಆಮೇಲೆ ಪ್ರಶ್ನಿಸಿದ.

"ಪ್ರತಿದಿನವೂ ದೇವರ ಪಟಕ್ಕೆ ಕೈ ಮುಗೀತಿಯಾ? ಭೂತಗಳ ನಾಥ ಶಿವ... ಅವನನ್ನು ಮರೆಯಬೇಡ."

ಕಳೆದ ವರ್ಷ ಅವನಿಗೊಂದು ಹಂಚಿನ ಮನೆ ಕಟ್ಟಿಸಿ ಒಂದು ಶಿವನ ಪಟವನ್ನೂ ಕೊಡಲಾಗಿತ್ತು. ತನಿಯ ಕೈತಿರುಗಿಸಿದ, "ಮರೆತೇನೇ ಅಯ್ಯ, ಪ್ರತಿದಿನ ದೀಪ ಉರಿಸಿ 'ಸಾಂಬ ಸದಾಶಿವ' ಎಂದು ನಾವೆಲ್ಲರೂ ಭಜನೆ ಮಾಡ್ತೇವೆ. ಮೊನ್ನೆ ನನ್ನ ಬಂಧುಗಳು ಬಂದವರು ನನ್ನ ಹಂಚಿನ ಮನೆ ಕಂಡು ನಿಮ್ಮನ್ನು ದೇವರು ಅಂತ ಹೊಗಳಿದರು ಅಯ್ಯ."

ತನಿಯನಿಗೆ ಬಾಟಲಿಯಲ್ಲಿ ಔಷಧಿ ಕೊಡುತ್ತ ಒಂದು ಲೋಟ ತುಂಬ ಹಾಲನ್ನೂ ತಂದುಕೊಟ್ಟ. "ನಾಳೆಯಿಂದ ಬೆಳಗ್ಗೆ ಪ್ರತಿದಿನ ಒಂದೊಂದು ಲೋಟ ಹಾಲು ಕೊಡ್ತೇನೆ, ಬಂದು ತೆಗೆದುಕೊಂಡು ಹೋಗು. ಸುಖವಿಲ್ಲದ ಮಕ್ಕಳಿಗೆ ಮಾತ್ರ ಕೊಡು. ನೀನೇ ಚಹ ಮಾಡಿ ಕುಡಿದಿಯಾ ಜಾಗ್ರತೆ."

ಕೃತಜ್ಞತೆಯಿಂದ ತನಿಯನ ಕಣ್ಣುಗಳು ತೇವವಾಗಿ, ನೆಲಮುಟ್ಟಿ ನಮಸ್ಕರಿಸಿ, ಔಷಧಿ ಮತ್ತು ಹಾಲಿನ ಸಂಗಡ ಹೊರಟುಹೋದ. ಅವನು ಅತ್ತ ಹೋದಾಕ್ಷಣ ಹೊರಬಂದಳು ಸುನೀತಿ.

''ಇದೇನು ಧರ್ಮಾಸ್ಪತ್ರೆ ಅಂದುಕೊಂಡಿರಾ? ಕೃಷ್ಣ-ವಿಷ್ಣುವಿಗೆ ಜ್ವರಕ್ಕೆಂದು ತಂದ ಔಷಧಿಯನ್ನೆಲ್ಲ ಕೊಟ್ಟುಬಿಟ್ಟಿರಲ್ಲ. ನೀವೇನು ಡಾಕ್ಟರರೇ?''

''ಡಾಕ್ಟರರು ಕೊಡುವುದೂ ಇದೇ ಔಷಧಿಯನ್ನು.''

''ಹಾಲು ಕೊಡ್ತೇನೆ ಎಂದಿರಲ್ಲ, ಯಾಕೆ?''

''ಎಂಟು ಮಕ್ಕಳ ತಂದೆ ಅವನು. ಮಕ್ಕಳಿಗೆ ಜ್ವರವಂತೆ. ಹೇಗೂ ಹಾಲಿದೆ, ತೆಗೆದುಕೊಂಡು ಹೋಗಲಿ.'' ದೇವ ಹೊರಟ ಅಲ್ಲಿಂದ.

''ನಿಲ್ಲಿ, ಊರಿಗೆಲ್ಲ ಕೊಡೆ ಹಿಡಿಯುವ ಇಚ್ಛೆಯೇ ನಿಮ್ಮದು? ನಾಳೆ ಒಂದು ಅನ್ನಛತ್ರ ಮಾಡಿಸಿಬಿಡಿ. ಆ ಬಡಮಕ್ಕಳಿಗೆಲ್ಲ ಹಾಲಂತೆ, ಹೈನವಂತೆ. ಕಾಡುಸೊಪ್ಪು ತೋಡುನೀರು ಸಾಕು! ಇನ್ನೇನಿಲ್ಲ, ಅವರ ಉದ್ಧಾರ ಎಂದುಕೊಂಡು ನಮ್ಮ ಕೈಗೆ ಒಡಕು ಮಡಕೆ ಮಾತ್ರ ಉಳಿಸ್ತೀರಿ ನೋಡಿ.''

ಆಶ್ಚರ್ಯದಿಂದ ಕಣ್ಣರಳಿಸಿದ ಎದುರು ನಿಂತವನು. ಓ... ಅದೆಷ್ಟು ಅಂತರ ತನಗೂ ಅವಳಿಗೂ. ತನ್ನೊಂದಿಗೆ ಯಾವ ವಿಧದಲ್ಲಿಯೂ ಸಹಕರಿಸುವವಳಲ್ಲ. ಈಶ್ವರಯ್ಯ ಇದ್ದಾಗಲೂ ಹರಿಜನ ಸಂಘವೆಂದರೆ ಅವಳಿಗೆ ಅಷ್ಟಕ್ಕಷ್ಟೇ. ಅಲ್ಲಿ ನಡೆಯುವ ಅನ್ನದಾನದ ದಿನವೆಲ್ಲ ಇವಳಿಗೆ ಮೋಡ. ಈಗಲೂ 'ಅವರುಗಳ ಸಂಗ ಬೇಡ, ನಮ್ಮ ಪಾಡಿಗೆ ಹಾಯಾಗಿರೋಣ' ಎನ್ನುತ್ತಾಳೆ. ಹರಿಜನರನ್ನು ಮುಟ್ಟಿಸಿಕೊಂಡರೆ ನಾಗಮ್ಮನಂತೆ ಅವಳು ದೂರಸರಿಯುವುದಿಲ್ಲ. ಹೊಲತಿಯರ ಸಂಗಡ ತೀರ ಹತ್ತಿರ ನಿಂತು ಮಾತ ನಾಡುತ್ತಾಳೆ. ಆಗೊಮ್ಮೆ ಈಗೊಮ್ಮೆ ಬಡಮಕ್ಕಳನ್ನು ಕರೆದು ತಂಗಳು ತಿನಿಸು ಕೊಡು ತ್ತಾಳೆ. ಆದರೆ ದೇವನೊಂದಿಗೆ ಗದ್ದೆ, ತೋಟ ಸುತ್ತಾಡಲು ಹೋದಾಗ ಕರಿಯ, ತನಿಯರ ಗುಡಿಸಲಿನತ್ತ ಹೋಗಿ ಬರೋಣವೇ ಎಂದು ಅವನು ಕೇಳಿದರೆ ಅವಳು ಅಷ್ಟೆತ್ತರ ಹಾರಿಬೀಳುತ್ತಾಳೆ.

ಇಂಥವಳು ತನ್ನನ್ನು ಕ್ಷಮಿಸುತ್ತಾಳೆಯೇ? ದೇವ ನೋಡಿದ ಅವಳತ್ತ. ಈವರೆಗೂ ತಾನಾರೆಂದು ಅವಳಿಗೆ ಹೇಳಲಾಗಲೇ ಇಲ್ಲ. ದಿನೇ ದಿನೇ ಸೋಲುತ್ತಿದ್ದೇನೆ ಯಾಕೆ ಹೀಗೆ?

''ನಾವೇ ಅವರ ಸ್ಥಾನದಲ್ಲಿದ್ದರೆ ಏನ್ಮಾಡ್ತಾ ಇದ್ದೆವು ಸುನೀತಿ?''

''ಹೀಗೆ ದಾನ ಮಾಡ್ತಾ ಇದ್ದರೆ ಒಂದು ದಿನ ಅವರ ಸ್ಥಾನಕ್ಕೆ ಬರ್ತೇವೆ. ನೆನಪಿಟ್ಟುಕೊಳ್ಳಿ ಈ ಮಾತನ್ನು.''

''ಅಯ್ಯೋ...ಅಯ್ಯೋ...'' ಆರ್ತಳಾಗಿ ಕೂಗುತ್ತ ಕರಿಯನ ಹೆಂಡತಿ ಓಡುತ್ತ ಬರುವುದು ಕಾಣಿಸಿತು, ಅವಳು ಉಟ್ಟ ಸೀರೆ ಮುದ್ದೆಯಾಗಿ ತಲೆಕೂದಲು ಕೆದರಿದೆ, ಮುಖ ವಿಕಾರವಾಗಿದೆ.

"ಕರಿಯ ಎಲ್ಲಿ ಹೋದ ಅಯ್ಯ? ಎಲ್ಲಾ ಹಾಳಾಯ್ತು. ಯಾರೋ ನಮ್ಮ ಹಟ್ಟಿಗೆ ಬೆಂಕಿ ಹಚ್ಚಿದ್ದಾರೆ..."

"ನಿನ್ನ ಗುಡಿಸಲಿಗೆ ಬೆಂಕಿಯೇ? ಎಲ್ಲಿದ್ದಾನೆ ಕರಿಯ?"

"ಬೆಳಗ್ಗೆ ಇತ್ಲಾಗೆ ಕೆಲಸಕ್ಕೆ ಬಂದನಲ್ಲ. ನಾನು ಕಾಡಿನಲ್ಲಿ ಸೊಪ್ಪು ಹೆರೀತಾ ಇದ್ದೆ. ಹೇಂಗೆ ಬೆಂಕಿ ಬಿತ್ತೋ ನಾಕಾಣೆ."

ಅವಳೊಡನೆ ಕರಿಯನ ಗುಡಿಸಲಿನತ್ತ ಹೊರಟುಬಂದರೆ ಅಲ್ಲಿ ಕಂಡದ್ದು ಕೇವಲ ಬೂದಿರಾಶಿ, ನಿಗಿನಿಗಿಸುವ ಕೆಂಡಗಳು. ಕರಿಯನ ಮೂರು ಮಕ್ಕಳೂ, ಮುದುಕಿ ತಾಯಿಯೂ ಗೋಳಾಡುತ್ತ ನಿಂತಿದ್ದಾರೆ. ಸುದ್ದಿ ತಿಳಿದು ಓಡಿಬಂದ ಕರಿಯ ಎದೆಯೊಡೆಯುವಂತೆ ಬೊಬ್ಬಿರಿಯುತ್ತಾ ಇದ್ದಾನೆ. ಎಲ್ಲೋ ಆಡುವ ಮಕ್ಕಳಿಂದ ಆದ ಅನಾಹುತವಿರಬೇಕು ಎಂದುಕೊಂಡ ದೇವ. ಅವರನ್ನೆಲ್ಲ ಸಂತೈಸಿ ಮಧ್ಯಾಹ್ನ ತನ್ನ ಮನೆಯಲ್ಲೇ ಅವರಿಗೆಲ್ಲ ಊಟದ ಏರ್ಪಾಟು ಮಾಡಿದ.

ಸಾಯಂಕಾಲದೊಳಗೆ ಆ ಕುಟುಂಬಕ್ಕಾಗಿ ಸಣ್ಣ ಚಪ್ಪರವನ್ನೂ ಕಟ್ಟಿಕೊಡಲಾಯಿತು. ಕಂದಿಹೋದ ಕರಿಯನ ಮುಖ ನೋಡಲಾರದೆ, "ಚಿಂತಿಸಬೇಡ. ಮಳೆಗಾಲದೊಳಗೆ ಹಂಚಿನ ಮನೆ ಕಟ್ಟಿಸ್ತೇನೆ" ಎಂದ.

ಆದರೆ ಆ ಗುಡಿಸಲಿಗೆ ಬೆಂಕಿ ಹೇಗೆ ಬಿತ್ತೆಂದು ರಾತ್ರಿ ಸುನೀತಿಯಿಂದ ತಿಳಿದಾಗ ಅವಾಕ್ಕಾದ. ಶಶಿಧರ ನಾಗಮ್ಮನೊಂದಿಗೆ ಗುಟ್ಟಾಗಿ ಹೇಳುತ್ತ, "ಬಾಳೆತೋಟಕ್ಕೆ ಹೋದವನು ತಮಾಷೆಗಾಗಿ ಉರಿಯುವ ಸಿಗರೇಟನ್ನು ಕರಿಯನ ಗುಡಿಸಲಿಗೆ ಬಿಸಾಡಿದ್ದೆ. ಹೇಗೆ ಬೆಂಕಿ ಹೊತ್ತಿತು ಗೊತ್ತೇ..." ಎಂದು ನಕ್ಕನಂತೆ.

"ಅಮ್ಮ ನನ್ನ ಹತ್ತಿರ ಹೇಳಲಿಲ್ಲವೇಕೆ?"

"ನಿಮ್ಮ ಸ್ವಭಾವ ತಿಳಿದ ಅವರು ಯಾಕೆ ಹೇಳ್ತಾರೆ? ಶಶಿಧರ ಮಾಡಿದ್ದೆಲ್ಲವೂ ಅವರಿಗೆ ಚೆಂದ."

ಈ ವಿಷಯ ಬೂದಿಮುಚ್ಚಿದ ಕೆಂಡದಂತೆ ಉರಿಯಿತು ದೇವನ ಮನದಲ್ಲಿ. ಆದರೂ ಶಶಿಧರನನ್ನು ಕೇಳಲಿಲ್ಲ. "ಬೆಂಕಿ ಹಚ್ಚಿದವರನ್ನು ಹುಡುಕಿಯೇ ಬಿಡುತ್ತೇನೆ" ಎಂದರೂ ನಾಗಮ್ಮ ತುಟಿ ಬಿಚ್ಚಲಿಲ್ಲ. ಹೌದು, ಪ್ರೀತ್ಯಾದರದಲ್ಲಿ ಒಂದು ಉರಿಯುವ ಬೆಂಕಿಕೊಳ್ಳಿ!

* * * * *

ಬೊಗ್ರ, ಚೋಮರ ಮನೆಯೊಂದಿಗೆ ಕರಿಯನಿಗೂ ಒಂದು ಮನೆ ಸಿದ್ಧವಾಯಿತು. ಒಂದು ದೊಡ್ಡ ಕೋಣೆ, ಅಡಿಗೆಕೋಣೆ ಹಾಗೂ ಎದುರು ಜಗಲಿಯಿರುವ ಸಣ್ಣದಾದರೂ ಅನುಕೂಲವಾದ ಮನೆ. ಮೇಲೆ ಹಂಚು ಹೊದೆಯಿಸಿದ ಮಾಡು. ಈ ಮೂರು ಮನೆಗಳ ವೆಚ್ಚದಿಂದಾಗಿ ಖರ್ಚಿನ ಪಟ್ಟಿಯೂ ಏರಿತು. ತನ್ನ ಸ್ವಂತದ ವೆಚ್ಚಗಳನ್ನೂ ದೇವ

ಮೊಟಕುಗೊಳಿಸಬೇಕಾಯಿತು. ಯಾವುದೇ ಸಾಮಾನು ಪೋಲಾಗದಂತೆ ಹೆಚ್ಚು ಎಚ್ಚರವಹಿಸಿದ.

ಈಶ್ವರಯ್ಯನವರಂತೆ ದೇವನೂ ಬಡವರಿಗಾಗಿ ಮಾಡುವ ಕೆಲಸಕಾರ್ಯ ನೋಡಿ ಬೆರಗಾದ ಊರ ಜನರು ಅಲ್ಲಲ್ಲಿ ನಡೆಯುವ ಸಭೆ-ಸಮಾರಂಭಗಳಿಗೆ ಅಧ್ಯಕ್ಷ ಸ್ಥಾನಕ್ಕೆ ಬರಬೇಕೆಂದು ಆಹ್ವಾನಿಸಲಾರಂಭಿಸಿದರು. ಆದರೆ ದೇವ ಎಲ್ಲರ ಆಹ್ವಾನಗಳನ್ನೂ ನಯವಾಗಿ ತಿರಸ್ಕರಿಸಿದ. ಮುಖ ನೋಡಿ ಮಣೆ ಹಾಕುವವರನ್ನು ಕಂಡರೆ ಅವನಿಗಾಗದು. ಅವನು ಪ್ರಚಾರ ಬಯಸಲಿಲ್ಲ. ಆದರೆ ಊರವರೆಲ್ಲ 'ಹರಿಜನ ಬಂಧು' ಎಂದೂ ಹೆಸರಿಟ್ಟರು. ಸುನೀತಿ ಹೆಮ್ಮೆಯಿಂದ ಬೀಗಿದರೆ ದೇವ ತನಗೆ ಜನರು ಕೊಡುವ ಗೌರವ ಕಂಡು ಬೆರಗಾದ. ತಾನು ಹರಿಜನ ಎಂದು ತಿಳಿದರೆ ಊರವರ ದೃಷ್ಟಿಯೂ ಬದಲಾದೀತು ಎಂದೆನಿಸದಿರಲಿಲ್ಲ.

ಮೂರು ಮನೆಗಳು ಪೂರ್ಣವಾದ ಮೇಲೆ ಪ್ರತಿ ಮನೆಗೊಂದರಂತೆ ಕೊಡಪಾನ, ಬಾಲ್ದಿ, ಲಾಂದ್ರ ಜೊತೆಯಲ್ಲಿ ಈಶ್ವರನ ಒಂದು ಪಟ ಇವಿಷ್ಟು ತಂದುಕೊಟ್ಟ. ಸುನೀತಿ ಈ ಅತಿರೇಕವನ್ನು ವಿರೋಧಿಸಲು ಪ್ರಯತ್ನಿಸಿ ಸೋತು ಕೊನೆಗೆ ಕಣ್ಣೀರು ಹಾಕಿದಳು. ಹೆಂಡತಿ ಮಕ್ಕಳನ್ನು ಮರೆತು ಬಡವರಿಗಾಗಿ ತೆರೆದುಕೊಳ್ಳುತ್ತಿದ್ದ ಅವನ ಹೃದಯವಂತಿಕೆಯನ್ನು ಗುರುತಿಸದೆ ಅಂದಳು,

"ಸಾಲದಲ್ಲಿ ನಮ್ಮನ್ನು ಮುಳುಗಿಸಿಬಿಡ್ತೀರ. ನಿಮಗೂ ಹೆಂಡತಿ ಮಕ್ಕಳಿದ್ದಾರೆ ಅಂತ ನೆನಪಿರಲಿ."

"ಸಾಲ ಖಂಡಿತ ಆಗಲಾರದು. ಈ ಕೈಗಳಿರುವುದು ದಾನಕ್ಕಾಗಿ, ಸುಮ್ಮನೆ ಅಲಂಕರಿಸಿಕೊಳ್ಳುವುದಕ್ಕಲ್ಲ. ಕೊಟ್ಟ ಹತ್ತುಪಟ್ಟು ಹಿಂದಕ್ಕೆ ಬರುತ್ತದೆ, ನಿನಗ್ಯಾಕೆ ಚಿಂತೆ?" ಅವಳ ಕಣ್ಣೀರನ್ನು ತಾನೇ ಕೈಯಿಂದ ಒರಸಿದ ದೇವ, "ನಾನಿರುವಾಗ ನಿನಗೆ ಚಿಂತೆಯೇ? ನಿನಗೆ ನಾನೇನು ಕಡಿಮೆ ಮಾಡಿದ್ದೇನೆ ಹೇಳು?"

"ಇಲ್ಲಿಗೆ ಬಂದು ಇಷ್ಟು ವರ್ಷಗಳಾದರೂ ಒಂದು ತುಂಡು ಚಿನ್ನ ಮಾಡಿಸಲಿಲ್ಲ."

"ಹೋ... ಅದಕ್ಕಾಗಿ ಸಿಟ್ಟೇನು? ಖಂಡಿತ ಮಾಡಿಸ್ತೇನೆ. ನಿನಗಲ್ಲದೆ ಇನ್ಯಾರಿಗೆ ಮಾಡಿಸಲಿ? ಎಂತಹ ಯೋಗವೋ, ನಿನ್ನಂತಹ ಹೆಂಡತಿಯನ್ನು ಪಡೆದ ಪುಣ್ಯವಂತ ನಾನು. ನನ್ನನ್ನು ಅರ್ಥಮಾಡಿಕೊಂಡವಳು ನೀನೊಬ್ಬಳೇ."

ದೇವನಿಗೆ ಶಶಿಧರನ ಶೋಕಿ, ಅನಾವಶ್ಯಕ ಖರ್ಚುಗಳು ನಿಚ್ಚಳವಾಗಿ ಗೋಚರಿಸಿದಾಗ ಎಲ್ಲಕ್ಕೂ ತಡೆಯೊಡ್ಡಿದ. ಆದರೆ ನಾಗಮ್ಮನಿಂದಾಗಿ ಅವನು ಬಯಸಿದಾಗಲೆಲ್ಲ ಕಿಸೆ ಭರ್ತಿ. ಅವನ ಪೇಟೆ ತಿರುಗಾಟ, ಸಿನಿಮಾ ಹುಚ್ಚು, ಶೋಕಿಯಲ್ಲಿ ತಿರುಗುವುದು ದ್ವಿಗುಣಗೊಂಡವು.

ಮಗನನ್ನು ನೋಡಲು ಬಂದ ಸದಾನಂದ ದೇವ ಕಟ್ಟಿಸಿದ ಮನೆಗಳನ್ನು ನೋಡಿ ನಿಬ್ಬೆರಗಾದ. ಮೂರು ಮನೆಗಳಲ್ಲಿ ಅಲಂಕರಿಸಿದ ಶಿವನ ಪಟ ನೋಡಿದಾಗ, ಅವರ ಭಜನೆ ಕೇಳಿದಾಗ ತಡೆಯಲಾಗಲಿಲ್ಲ ಅವನಿಂದ.

"ದರಿದ್ರರ ಮನೆಗಳಲ್ಲಿ ದೇವರು ನೆಲೆಸುವುದುಂಟೇ? ದೇವರಿಗೇ ನೀನು ಅವಮಾನ ಮಾಡುತ್ತೀಯಾ?"

"ಬಿಡಿ ಮಾವಾ, ಸ್ಮಶಾನದ ಬೂದಿ ಬಳಿದುಕೊಳ್ಳುವ ನಮ್ಮ ದೇವರಿಗೆ ಹರಿಜನ ರೆಂದರೆ ಬಹಳ ಇಷ್ಟ. ನಾವೆಲ್ಲರೂ ಬೇಡರ ಕಣ್ಣಪ್ಪಗಳು. ಶಿವನ ಕಿಂಕರರು! ಶಿವನಿಗೆ ಜಾತಿಭೇದವಿಲ್ಲ. ನಮ್ಮ ನಿರ್ಮಲ ಭಕ್ತಿಯೊಂದೇ ಸಾಕು. ನಮ್ಮೆಲ್ಲರ ಮನೆಗಳಿಗೆ ಹೋಗಿ ನೋಡಿ, ಶಿವ ತಾಂಡವವಾಡುತ್ತಿದ್ದಾನೆ."

"ನಿಂಗೆಲ್ಲೋ ಹುಚ್ಚು. ಈ ಕಲಿಕಾಲದಲ್ಲಿ ಊರು ಹಾಳಾಗುತ್ತೆ ನೋಡು."

"ಹಾಳಾಗಲಿ ಬಿಡಿ. ಉದ್ಧಾರವಾಗಬೇಕಾದರೂ ಯಾತಕ್ಕೆ?"

ಸದಾನಂದ ಮಾತು ಬೆಳೆಸಲಿಚ್ಛಿಸದೆ ಮಗನ ವಿಷಯವೆತ್ತಿದ. ದೇವ ಏನು ಹೇಳುತ್ತಾನೆ? ದಿನೇ ದಿನೇ ಬಲೂನಿನಂತೆ ಊದುತ್ತಿರುವ ಅವನು ಅಪ್ಪಟ ಸೋಮಾರಿ. ದೇವನಿಗೂ ಹೆದರುವವನಲ್ಲ.

"ಅಕ್ಕನ ಭೂಮಿಯಲ್ಲಿ ಇನ್ನೂ ಕೃಷಿ ಮಾಡಿಸಿಲ್ಲ ಅವನು. ನೀನೂ ಸ್ವಲ್ಪ ಪ್ರೋತ್ಸಾಹ ಕೊಡಬಾರದೇ" ನೊಂದು ಅಂದ ಸದಾನಂದ, "ಅಥವಾ ಬೆಳೆಸಬೇಕಾದ ಕೃಷಿಯ ಅಡಿಪಾಯ ಹಾಕಿಕೊಡು."

"ನನಗ್ಯಾಕೆ ಬೇಕು ಅವೆಲ್ಲ ಕೆಲಸ?" ಬಾಣದಂತೆ ಬಂದಿತು ದೇವನ ಉತ್ತರ, "ಬೇಕಾದರೆ ನೀವೇ ಮಾಡಿಸಿ. ನಿಮ್ಮ ನೌಕರಿಯಲ್ಲಿ ದುಡಿದ ಹಣ ಹೆಚ್ಚಾಗಿದ್ದರೆ ತಂದು ಸುರೀರಿ. ಇಲ್ಲದಿದ್ದರೆ ತೆಪ್ಪಗಿರಿ."

೮

ಇದ್ದಕ್ಕಿದ್ದಂತೆ ಜನರ ಗಲಾಟೆ, ಬೊಬ್ಬೆ ಕೇಳಿಸಿತು ಹೊರಗಿನಿಂದ. ಅದೇ ಆಗ ಮಧ್ಯಾಹ್ನದ ಊಟ ಮುಗಿಸಿ ಅರೆಗಳಿಗೆ ಮಲಗಿದ್ದ ದೇವ ಎಚ್ಚೆತ್ತು ಕಿಟಕಿಯಾಚೆ ನೋಡುತ್ತಾನೆ, ಹತ್ತಾರು ಜನರು ಸೇರಿಬಿಟ್ಟಿದ್ದಾರೆ ಅಂಗಳದಲ್ಲಿ. ಕೂಡಲೆ ತನ್ನ ನೀಡಿದ ಕಾಲುಗಳ ಮೇಲೆ ಮಲಗಿದ್ದ ವಿಷ್ಣುವನ್ನು ಮೆಲ್ಲನೆ ಎತ್ತಿ ಎಚ್ಚರವಾಗದಂತೆ ತೊಟ್ಟಿಲಲ್ಲಿ ಮಲಗಿಸಿ ಹೊರಗೆ ಬಂದ.

ಹೊರಗೆ ನಿಂತವರ ಮುಖದಲ್ಲಿ ಏನೋ ಆವೇಶ. ತುಕ್ರ, ಅಂಗಾರ, ಮೋಣು, ಮಾದ ಇವರೆಲ್ಲ ಈ ಅವೇಳೆಯಲ್ಲಿ ಯಾಕೆ ಬಂದರೋ. ದೇವನನ್ನು ಕಂಡಾಕ್ಷಣ ಅಂಗಾರ ಅಡ್ಡಬಿದ್ದ ಅವನಿಗೆ.

"ಕುಲದೇವತೆ ಪಂಜುರ್ಲಿ, ಕಲ್ಕುಡನನ್ನು ತೊರೆದು ಬೇರೆ ಮತ ಸೇರಿದ ಅವರಿಬ್ಬರನ್ನೂ ಸಿಗಿದು ತೋರಣ ಮಾಡ್ಬೇಕು ಅಯ್ಯ."

"ನಾಚಿಕೆ ಆಯಲಿಲ್ಲೆ ಅವಕ್ಕೆ" ಜಾರುತ್ತಿದ್ದ ಕಚ್ಚೆಯನ್ನು ಮೇಲಕ್ಕೆತ್ತಿ ಕಟ್ಟಿದ ಮಾದ ಬೊಬ್ಬಿರಿದ, "ಅವರ ಜನ್ಮಕ್ಕೆ ಧಿಕ್ಕಾರ!"

"ನಾ ಇದೇ ಕತ್ತಿಯಿಂದ ಅವರ ರುಂಡ ಚೆಂಡಾಡಿ ಬಿಡ್ತೇನೆ." ಮೋಣು ಮೇಲೆತ್ತಿದ ಕತ್ತಿಯನ್ನು. "ನಾನು ಇಬ್ಬರ ಮನೆಗೆ ಬೆಂಕಿ ಹಚ್ತೇನೆ" ಕೆಚ್ಚಿನಲ್ಲಿ ಹಲ್ಲುಕಚ್ಚಿದ ಕರಿಯ.

ಅವರ ಕೂಗಾಟ, ಗಲಾಟೆಯ ಮಧ್ಯೆ ದೇವನಿಗೆ ತಿಳಿದ ವಿಷಯ ಇಷ್ಟೇ. ಐತ ಹಾಗೂ ದುಗ್ಗ ತಮ್ಮ ಕುಲ ತೊರೆದು ಮೊನ್ನೆ ಕ್ರೈಸ್ತ ಮತಕ್ಕೆ ಸೇರಿಕೊಂಡರಂತೆ. ನಿನ್ನೆ ಪಾದ್ರಿಗಳು ಬಂದು ಅವರ ಮನೆ ಶುದ್ಧಿಮಾಡಿ ಹರಸಿಹೋಗಿದ್ದಾರೆ.

"ನಿಮ್ಮ ಅಡಿಯಾಳಾಗಿದ್ದು, ನಿಮ್ಮ ಋಣ ತಿಂದ್ಕೊಂಡು, ಸಂಘದಲ್ಲಿದ್ದವರು ಮತಾಂತರವಾದರಲ್ಲ ಅಯ್ಯ. ಈಗಲೇ ಕರೆದು ವಿಚಾರಿಸಿ" ಆವೇಶದ ಧ್ವನಿ ತೆಗೆದ ತನಿಯ.

ಕರೆದು ವಿಚಾರಿಸಲು ಅವರಿಬ್ಬರೂ ಕಲ್ಯಾಣಪುರದಲ್ಲಿ ಇರಲಿಲ್ಲ. ಯಾವುದೋ ಹೊಸ ಚರ್ಚಿನಲ್ಲಿ ಈ ಹೊಸಬರಿಗೆ ಸನ್ಮಾನವಂತೆ. ಹೊರಟುಹೋಗಿದ್ದಾರೆ. ದೇವನ ಮುಖ ಕಪ್ಪಿಟ್ಟಿತು.

"ಬನ್ರೋ ನಿಯತ್ತಿಲ್ಲದ ಇಬ್ಬರನ್ನೂ ಸಿಗಿದು ತೋರಣ ಮಾಡೋಣ." ಮುದುಕ ಬೊಗ್ರ ಕತ್ತಿ ಹಿರಿದ.

"ಹೂಂ ಬನ್ನಿ. ಮಾರಣ ಹೋಮ ಮಾಡೋಣ. ಅವರ ಹುಟ್ಟು ಇಲ್ಲ ಅನ್ನಿಸಿ ಬಿಡೋಣ." ಒಕ್ಕೊರಲಿನಿಂದ ಕೂಗಿದರು ಉಳಿದವರು.

ದೇವ ಎಲ್ಲರಿಗೂ ಸಮಾಧಾನ ಹೇಳಲು ತನ್ನ ಬುದ್ಧಿ ವ್ಯಯಿಸಬೇಕಾಯಿತು. ಅವರೆಲ್ಲ ದೇವನ ಮೇಲೆ ಭಾರಹೊರಿಸಿ ಒಂದೊಂದು ವಿಧದಲ್ಲಿ ಗೊಣಗುತ್ತ ಹೊರಟು ಹೋದರು. ದೇವ ತಡಮಾಡದೆ ತಾನೊಬ್ಬನೆ ಹೊರಟುಬಂದ ದುಗ್ಗ-ಐತರ ಮನೆಗೆ. ಈ ಹೊತ್ತಿನಲ್ಲಿ ಅವರಿಬ್ಬರೂ ಇಲ್ಲ, ಹೊಸ ಚರ್ಚಿಗೆ ಹೋಗಿದ್ದಾರೆಂದು ಇತ್ತ ಬಂದ ಮೇಲೆ ನೆನಪಾದದ್ದು. ಆದರೆ ಅವನ ಪುಣ್ಯ. ದುಗ್ಗನ ಮನೆಬಾಗಿಲು ತೆರೆದಿದ್ದು ಅಲ್ಲಿ ಐತನೂ ಇದ್ದ.

ದೇವನ ಅನಿರೀಕ್ಷಿತ ಆಗಮನದಿಂದ ಇಬ್ಬರೂ ಗಡಬಡಿಸಿ ಹೊರಬರುವ ಮೊದಲೇ ಅವನು ಕಾಲಿರಿಸಿದ್ದ ಮನೆಯೊಳಗೆ. ದುಗ್ಗ ಸಂಕೋಚದಿಂದ ಮುದುಡಿ ಗೋಡೆಗೊರಗಿ

ನಿಲ್ಲುತ್ತಿದ್ದಂತೆ ದೇವನ ದೃಷ್ಟಿ ಸಹಜವಾಗಿ ಹೊರಳಿತು ಗೋಡೆಯತ್ತ. ಶಿಲುಬೆಗೆ ಏರಿಸಿದ ಶಾಂತ ಮೂರ್ತಿ ಕ್ರಿಸ್ತನ ಪಟ ನಕ್ಕಿತು ಅವನನ್ನು ನೋಡಿ. ಯಾವುದು ಸುಳ್ಳು ಎಂದು ಕೊಂಡಿದ್ದನೋ ಅದು ದಿಟವಾಗಿತ್ತು. ಬರುವಾಗಲೇ ಇಬ್ಬರಿಗೂ ಛೀಮಾರಿ ಹಾಕಿ ಚೆನ್ನಾಗಿ ಬೈಯ್ಯಬೇಕೆಂದು ಯೋಚಿಸಿದ್ದ. ಆದರೆ ಅದೇಕೋ ಇದ್ದಕ್ಕಿದ್ದಂತೆ ಅವರ ಮೇಲೆ ಕರುಣೆಯುಕ್ಕಿ ಅವರಿಗೆ ಹೇಳಲಿರುವ ಬುದ್ಧಿಮಾತುಗಳೂ ಹೊರಬರಲಾರದೆ ಹೂತು ಹೋದವು ಅವನಲ್ಲೇ.

ಅವನು ಏನೊಂದೂ ಹೇಳದೆ ಬಂದ ಹಾಗೇ ಬೆನ್ನು ತಿರುಗಿಸಿದಾಗ ಐತ ಓಡಿಯೋಡಿ ಬಂದು, "ಅಯ್ಯ, ಏನಾದರೂ ಹೇಳಿ ಅಯ್ಯ..." ಎಂದ ಆರ್ತ ಸ್ವರದಲ್ಲಿ. "ನಿಮ್ಮನ್ನು ಕೇಳದೆ ಮತಾಂತರ ಮಾಡಿದೆವು. ನಾವು ಮಾಡಿದ್ದು ತಪ್ಪಾಯಿತೇ?" ನಡುಗಿ ಕೇಳಿದ ದುಗ್ಗ.

ತಮ್ಮ ಯಜಮಾನ ಈ ಸಮಯದಲ್ಲಿ ಬೈದರೂ ಅವರಿಗದು ಆಶೀರ್ವಚನ! ಮುಂದಿನ ಭವಿಷ್ಯಕ್ಕೆ ಶ್ರೀರಕ್ಷೆ! ದೇವ ಕರುಣೆಯಿಂದ ನೋಡಿದ ಇಬ್ಬರನ್ನೂ.

"ತಪ್ಪು-ಒಪ್ಪುಗಳನ್ನು ನಿರ್ಣಯಿಸುವವನು ನಾನಲ್ಲ. ನಿಮ್ಮ ಇಚ್ಛೆಯಂತೆ ಮಾಡಿದ್ದೀರಿ, ಸಂತೋಷ. ಎಲ್ಲಿದ್ದರೂ ಸುಖಿಯಾಗಿರಿ ಎಂದಿಷ್ಟೇ ಹೇಳಬಲ್ಲೆ." ಮುಂದಡಿ ಇಡುತ್ತ ಅವನೆಂದ, "'ಹರಿಜನ ಸಂಘ'ದ ಸದಸ್ಯತನದಿಂದ ಇಬ್ಬರನ್ನೂ ವಜಾಮಾಡಿದ್ದೇನೆ. ತೋಟದ ಕೆಲಸಕ್ಕೆ ನಿಮ್ಮ ಬದಲಿಗೆ ಬೇರೆಯವರನ್ನು ಮಾಡ್ತೇನೆ. ನಿಮ್ಮ ಪಾಡು ನಿಮಗೆ."

ಅವರ ಮುಖಗಳು ಕಂದಿ ಮ್ಲಾನವಾದುದನ್ನು ನೋಡಿದರೂ ಅಲ್ಲಿಂದ ಹೊರಟು ಬಂದ ಅವನ ಮನಸ್ಸು ತಿರುಗಣೆಯ ಮಡು. ಈಗ ಕೆಲವು ಸಮಯಗಳ ಹಿಂದೆ ಉತ್ತರಪ್ರದೇಶದಲ್ಲಿ ಸುಮಾರು ನೂರು ಹರಿಜನರು ಬೌದ್ಧಮತ ಸ್ವೀಕರಿಸಿದ್ದು ನೆನಪಾಯಿತು. ಆಗೊಮ್ಮೆ ಈಗೊಮ್ಮೆ ಮತಾಂತರ ಹೊಂದುವುದೂ ಅವನಿಗೆ ತಿಳಿದ ಸಂಗತಿ. ಆಗೆಲ್ಲ ಅವನು 'ನಮ್ಮಲ್ಲಿ ಏಕೆ ಒಗ್ಗಟ್ಟಿಲ್ಲ?' ಯಾಕೆ ಈ ವರ್ಣಭೇದ? ಯಾಕೆ ಹರಿಜನರನ್ನು ನಿಕೃಷ್ಟರಾಗಿ ನೋಡುತ್ತಾರೆ?' ಎಂದೂ ಚಿಂತಿಸಿದ್ದಾನೆ. ಈಗ ನೋಡಿದರೆ ತನ್ನದೇ ಊರಿನಲ್ಲಿ, ತನ್ನವರೇ ಇಬ್ಬರು ಕೆಲಸಗಾರರು ತನಗೆ ತಿಳಿಸದೆ ಬೇರೆ ಮತಕ್ಕೆ ಸೇರಿಹೋದರಲ್ಲ ಯಾಕೆ?

ಪ್ರಶ್ನೆಗಳ ಸುಳಿಯಲ್ಲಿ ಸಿಲುಕಿದವನಿಗೆ ಹರಿಜನ ಸಂಘದ ಹತ್ತಿರ ಜನರ ದೊಡ್ಡ ಗುಂಪು ಕಾಣಿಸಿತು. ಅವನ ಕೆಲಸದವರಲ್ಲದೆ ಊರಿನ ಇನ್ನೂ ಅನೇಕರಿದ್ದರು ಆ ಗುಂಪಿನಲ್ಲಿ. ಅವರ ಕೈಗಳಲ್ಲಿರುವ ದೊಣ್ಣೆಗಳು ಕಟಾ ಕಟಾ ಬಡಿದುಕೊಳ್ಳುವುದ ರೊಂದಿಗೆ 'ಧಿಕ್ಕಾರ' 'ಜೈಕಾರ'ಗಳ ಬೊಬ್ಬೆ. ಈ ಕಚ್ಚಾಟದ ಮೂಲ ಕೇವಲ ದುಗ್ಗ-ಐತರು! ಹೀಗೆ ಬಡಿದುಕೊಳ್ಳುವುದು ಊರಿಗೇ ಅವಲಕ್ಷಣ. ಕೂಡಲೆ ದೇವ ಗುಂಪಿನ ಬಳಿ ಬಂದು ಅವರ ಗಲಾಟೆ ತಡೆಯಲೆತ್ನಿಸಿದ. ಆದರೆ ಅವರು ಬಡಿದಾಡಿಕೊಳ್ಳುತ್ತಿದ್ದ ದೊಣ್ಣೆಗಳು

ದೇವನ ಮೈಯನ್ನೂ ಬಾರಿಸಿದವು ನಾಲ್ಕೆಂಟು ಬಾರಿ. ಗುಂಪನ್ನು ಚದುರಿಸಲು ನೋಡಿದರೆ ಮತ್ತಷ್ಟು ಏಟುಗಳು.

"ಹೋಯ್... ನಿಲ್ಲಿಸಿರೋ ನಿಮ್ಮ ಜಗಳ?" ಸ್ವರ ಏರಿಸಿ ಅರಚಿದ ಜೋರಾಗಿ.

ದೇವನಿಗೆ ಕೊಡುವ ಗೌರವ ಎಷ್ಟಿತ್ತೆಂದರೆ ಅವನ ಸ್ವರ ಕೇಳಿಸಿದ ಎಲ್ಲರ ಕೈ-ಬಾಯಿಗಳು ಒಮ್ಮಿಂದೊಮ್ಮೆಲೆ ತಟಸ್ಥವಾದವು. ಪ್ರತಿಯೊಬ್ಬರೂ ತಮ್ಮದೇ ದೂರು ಹೇಳಲು ಮುಂದೆ ಬಂದಾಗ ದೇವ ಎಲ್ಲರನ್ನೂ ಸಂತೈಸುತ್ತ ಅಂದ.

"ಹೋದವರಿಗಾಗಿ ನೀವ್ಯಾಕೆ ಕಚ್ಚಾಡ್ತೀರಿ? ಅವರ ಪಾಡು ಅವರಿಗಿರಲಿ. ಅವರ ನೆವದಲ್ಲಿ ಊರಿನಲ್ಲಿ ಅಶಾಂತಿಯ ಕಿಡಿ ಹರಡಿಸುವುದೇ? ನಡೀರಿ ಇಲ್ಲಿಂದ!" ಅನಂತರ ತನ್ನ ಕೆಲಸದವರತ್ತ ಹೊರಳಿದ, "ಎಷ್ಟು ಬಾರಿ ಹೇಳಿದ್ದೇನೆ ನಿಮಗೆ, ಹೀಗೆ ಸಾರ್ವಜನಿಕ ಸ್ಥಳದಲ್ಲಿ ಗಲಾಟೆ ಮಾಡಬಾರದು ಅಂತ. ಇನ್ನೂ ನಿಮ್ಮ ಮಕ್ಕಳಾಟಿಕೆ ಬಿಟ್ಟಿಲ್ಲ. ನಡೀರಿ, ನಿಮ್ಮ ಕೆಲಸ, ಮನೆ-ಸಂಸಾರ ನೋಡಿಕೊಂಡಿರಿ ಸಾಕು."

ನೆರೆದ ಗುಂಪಿಗೆ ಸಮಾಧಾನ ದೊರೆಯದಿದ್ದರೂ ಸ್ವಲ್ಪ ಮೆತ್ತಗಾಗಿ ಚದುರಿದರು ಅಲ್ಲಿಂದ. ಅವನೂ ತನ್ನ ಹಣೆಮೇಲಿನ ಬೆವರು ಒರಸಿಕೊಳ್ಳುತ್ತ ಹೊರಡುತ್ತಿದ್ದಂತೆ ಓಡುತ್ತ ಬಂದಳು ಸುನೀತಿ. ಅವಳ ಮುಖ ವಿವರ್ಣವಾಗಿತ್ತು ಭಯದಿಂದ. ಎಲ್ಲೋ ಮನೆ ಹತ್ತಿರ ಹೀಗೆ ಇನ್ನೊಂದು ಗಲಾಟೆಯಾಯಿತೇ ಎಂಬ ಆತಂಕ ದೇವನಿಗೆ.

ಆದರೆ ಅವಳು ಬಂದದ್ದು, ಈಗ ತಾನೇ ಮನೆಗೆ ಬಂದ ಅಂಚೆಯವನು ಇಲ್ಲಿ ನಡೆಯುತ್ತಿದ್ದ ಗಲಾಟೆ, ದೇವನೂ ಅಲ್ಲಿದ್ದಾನೆಂದು ತಿಳಿಸಿದ್ದ. ದೊಣ್ಣೆಯೊಂದಿಗೆ ಬಡಿದಾಟ ಎಂದ ಮೇಲೆ ದೇವ ಅಪಾಯದಲ್ಲಿ ಸಿಲುಕಿರಬಹುದೆಂದು ಊಹಿಸಿ ಸೀದಾ ಓಡಿಬಂದಿದ್ದಾಳೆ. ಅವಳ ಊಹೆ ಸುಳ್ಳಾಗಿರಲಿಲ್ಲ. ದೊಣ್ಣೆಯೇಟು ಬಿದ್ದು ಅಲ್ಲಲ್ಲಿ ಊದಿಕೊಂಡಿದ್ದ ದೇವನ ಮೈ ಮುಖ ಕಂಡು ಕರುಳು ಹಿಂಡಿದಂತಾಯ್ತು.

"ಯಾಕೆ ಹೋಗ್ತೀರಿ ಆ ಕೆಳವರ್ಗದ ಜನರ ಸಂಗಡ?" ಹಿಂದಿರುಗುತ್ತ ಅಂದಳು ಸುನೀತಿ, "ಹಳ್ಳಿಗಳಲ್ಲಿ ಇವೆಲ್ಲ ತೀರ ಸಾಮಾನ್ಯ. ನೀವೊಬ್ಬರು ಇಡೀ ಹಳ್ಳಿಯನ್ನೇ ತಲೆಮೇಲೆ ಹೊತ್ತವರಂತೆ ಅವರ ಜೊತೆ ಒದ್ದಾಡ್ತೀರಲ್ಲ."

"ನಮ್ಮ ಇಬ್ಬರು ಬಂಧುಗಳು ಬೇರೆ ಮತಕ್ಕೆ ಸೇರಿದರಲ್ಲ, ಒಟ್ಟು ಎರಡು ತಲೆಗಳು ಕಡಿಮೆಯಾದವು."

"ಅವರ ವಂಶ ಅಳಿದರೂ ನಮಗ್ಯಾಕೆ ತಲೆಬಿಸಿ?"

"ನಾನೂ ಅವರ ರಕ್ತದವನು! ಅದೇ ತಲೆಬಿಸಿ." ತನ್ನ ಜೊತೆ ನಡೆಯುತ್ತಿದ್ದವಳನ್ನು ಮುಖವೆತ್ತಿ ನೋಡಿದ, "ಏನೋ ನನಗೊಬ್ಬನಿಗೆ ಎಲ್ಲ ಸೌಲಭ್ಯಗಳೂ ದೊರೆತಿವೆ. ಹಾಂ, ಎಲ್ಲರಂತೆ ನಾನಲ್ಲ ನಿಜವೇ?"

"ಏನು ನಿಮ್ಮ ಮಾತಿನ ಅರ್ಥ?"

"ಹರಿಜನ ಬಂಧುವೆಂದು ನನಗಿಟ್ಟ ಹೆಸರು ನೂರಕ್ಕೆ ನೂರು ನಿಜ. ಜನ ಕೊಟ್ಟದ್ದು ನನ್ನ ಕೆಲಸ ಕಾರ್ಯ ಮೆಚ್ಚಿ! ವಿಧಿ ಕೊಟ್ಟದ್ದು ಆ ಹರಿಜನ ಜನಾಂಗದಲ್ಲೇ ನನ್ನ ಜನನ. ಸುನೀತಿ, ಈ ಸಂಗತಿ ಯಾರಿಗೂ ತಿಳಿದಿಲ್ಲ."

ಸುನೀತಿ ಹುಬ್ಬೇರಿಸಿ ನಕ್ಕು ತಮಾಷೆ ಮಾಡಿದಳು, "ನನ್ನನ್ನು ರೇಗಿಸಲು ಸುಳ್ಳು ಹೇಳಬೇಡಿ. ಇನ್ಮೇಲೆ ನಿಮಗೆ ಕಡಿವಾಣ ಎಳೆಯದಿದ್ದರೆ ಸಾಧ್ಯವಿಲ್ಲ."

ಮನೆಗೆ ಬಂದಾಗ ನಾಗಮ್ಮ ಇದಿರು ನೋಡುತ್ತಿದ್ದರು ಅವನಿಗಾಗಿ. ಅವನಿನ್ನೂ ಕಾಲುತೊಳೆದು ಬೆವರಿನ ಅಂಗಿ ಕಳಚಿರಲಿಲ್ಲ, ನಾಗಮ್ಮ ಆತುರದಿಂದ ಒಂದು ಟೆಲಿಗ್ರಾಂ ಕೊಡುತ್ತ, "ಈಗಷ್ಟೇ ಅಂಚೆಯವನು ಕೊಟ್ಟುಹೋದ. ನನ್ನ ತಂಗಿ ಜಾಹ್ನವಿ ಗೊತ್ತಲ್ಲ ನಿನಗೆ... ಅವಳ ಗಂಡ ಮೊನ್ನೆ ತೀರಿಹೋದರಂತೆ. ಹೋಗಿ ನೋಡಿ ಬರಬೇಡವೇ?" ಎಂದೂ ಕೇಳಿದರು.

ಟೆಲಿಗ್ರಾಂ ನೋಡಿದ, ಬಂದದ್ದು ಹಾಸನದಿಂದ. ತಾಯಿಗೆ ಈ ಆತಂಕವೇಕೆ? ಅವರ ಕೊನೆಯ ಸಹೋದರಿ ಜಾಹ್ನವಿ ಈವರೆಗೂ ಇಲ್ಲಿಗೆ ಬಂದವಳಲ್ಲ, ಅವರೂ ಅಲ್ಲಿಗೆ ಹೋದವರಲ್ಲ. ತನಗೂ ಅವಳನ್ನು ಒಂದೆರಡು ಬಾರಿ ನೋಡಿದ ನೆನಪು ಅಷ್ಟೇ.

"ಬಹಳ ವರ್ಷ ಜಾಹ್ನವಿಗೆ ಮಕ್ಕಳಾಗದೆ ಕೊನೆಗೆ ಎರಡು ಗಂಡು ಮಕ್ಕಳು ಹುಟ್ಟಿದ್ದು ನಿನಗೆ ತಿಳಿದಿರಬಹುದು. ಅವಿನ್ನೂ ಚಿಕ್ಕವು. ಒಂದಕ್ಕೆ ಎಂಟು ವರ್ಷ, ಇನ್ನೊಂದಕ್ಕೆ ಆರು." ಕಣ್ಣೀರು ಒರಸಿಕೊಂಡರು ನಾಗಮ್ಮ, "ಅಷ್ಟರಲ್ಲಿ ಈ ದುರಂತವೂ ಆಗಿಹೋಯ್ತು. ಆ ಮಕ್ಕಳನ್ನು ಕಟ್ಟಿಕೊಂಡು ಅವಳೇನು ಮಾಡುತ್ತಾಳೋ. ಯಾರಿದ್ದಾರೋ ಸಹಾಯಕ್ಕೆ. ಒಮ್ಮೆ ಹೋಗಿ ನೋಡಿ ಬರೋಣ."

ತಾಯಿಯ ಕಣ್ಣೀರನ್ನು ನೋಡಲಾಗಲಿಲ್ಲ. "ನನಗೆ ಇವತ್ತು ಒಂದ್ನಿಮಿಷ ಬಿಡುವಿಲ್ಲ ಅಮ್ಮಾ. ಇಲ್ಲಿ ನಡೆದ ಗಲಾಟೆ ನೀನೇ ನೋಡಿದಿಯಲ್ಲ. ನಿನಗೆ ಹೋಗಲೇಬೇಕೇನು?"

"ಇದೇನು ಹೀಗೆ ಕೇಳ್ತಿ? ಇಂಥ ಸಮಯದಲ್ಲಿ ನಮ್ಮವರು ಎನ್ನುವವರಿದ್ದರೆ ದುಃಖಿತರಿಗೆ ಎಷ್ಟೋ ಸಮಾಧಾನ."

"ಹಾಗಾದರೆ ಶಶಿಧರನನ್ನು ಕರೆದುಕೊಂಡು ಹೋಗು. ಇವತ್ತೇ ಮಂಗಳೂರಿಗೆ ಹೋದರೆ ಅಲ್ಲಿ ನಿನ್ನ ಎರಡನೇ ತಂಗಿಯಿದ್ದಾಳಲ್ಲ, ಅಲ್ಲಿ ರಾತ್ರೆ ಉಳಿದು ನಾಳೆ ಬೆಳಗ್ಗೆ ಐದು ಗಂಟೆ ಬಸ್ಸಿಗೆ ಹೋಗಬಹುದು."

ಎಂದವನೆ ಪ್ರಯಾಣಕ್ಕೆ ಬೇಕಾದ ಖರ್ಚನ್ನು ತಾಯಿಯ ಕೈಯ್ಯಲ್ಲಿರಿಸಿ ತಾನೇ ಅವರ ಬಟ್ಟೆಗಂಟನ್ನು ಕಟ್ಟಿಕೊಟ್ಟ. ಅನಿರೀಕ್ಷಿತ ಪ್ರಯಾಣದಿಂದ ಶಶಿಧರ ಹುಚ್ಚೆದ್ದು ಕುಣಿದು ನಾಗಮ್ಮನನ್ನು ಕರೆದುಕೊಂಡು ಹೊರಟುಹೋದ.

ಸಾಯಂಕಾಲ ಮತ್ತೆ ಜನರ ಗುಂಪು ಸೇರಿತು ಅಂಗಳದಲ್ಲಿ. ಒಂದು ಸಣ್ಣ ವಿಷಯಕ್ಕಾಗಿ ಇಷ್ಟು ಗಲಾಟೆಯೇ? "ಅವರಿಬ್ಬರೂ ಹೇಗೆ ಈ ಊರಿನಲ್ಲಿ ಉಳೀತಾರೋ

ನಾವೂ ನೋಡ್ತೇವೆ" ಎನ್ನುತ್ತಿದ್ದರು ತಮ್ಮ ತಮ್ಮಲ್ಲೇ. ದೇವ ಮತ್ತೊಮ್ಮೆ ಅವರಿಗೆಲ್ಲರಿಗೂ ಬುದ್ಧಿ ಹೇಳುತ್ತ ಸಮಾಧಾನ ಪಡಿಸಿದ. ಆದರೂ ಎಲ್ಲರಿಗೂ ಅಸಮಾಧಾನ.

"ಹಗಲು ರಾತ್ರೆ ಅವರಿಗಾಗಿ ಒದ್ದಾಡುವುದನ್ನು ನೋಡಿದರೆ" ರಾತ್ರೆ ಊಟಕ್ಕೆ ಕುಳಿತಾಗ ಚೇಷ್ಟೆ ಮಾಡಿದಳು ಸುನೀತಿ, "ಮಾವಯ್ಯನಿಗಿಂತಲೂ ನಿಮಗೇ ಅವರ ವ್ಯಾಮೋಹ ಅಧಿಕ."

"ನಿಜ ಸುನೀತಿ, ಸರಿಯಾಗಿ ಹೇಳಿದಿ" ತುತ್ತನ್ನು ಕೈಗೆತ್ತಿಕೊಂಡವನ ಮೈಯಲ್ಲಿ ಲಘುಕಂಪನ. ಚಿಮಣಿದೀಪದ ಬೆಳಕಿನಲ್ಲಿ ನೇರವಾಗಿ ಸಂಧಿಸಿದ ಅವಳ ಕಣ್ಣುಗಳನ್ನು.

* * * * *

ಹೊರಗೆ ದಟ್ಟೈಸಿಕೊಂಡಿದ್ದ ಕತ್ತಲೆಯಲ್ಲಿ ಕಣ್ಣಿಗೆ ಏನೇನೂ ಕಾಣಿಸುತ್ತಿರಲಿಲ್ಲ. ಸುತ್ತಲಿನ ಪ್ರಕೃತಿ ಮಲಗಿಬಿಟ್ಟಿದೆ ಗಂಭೀರ ಮೌನದಲ್ಲಿ. ಅಜ್ಜಿಯಿಲ್ಲದೆ ಕೃಷ್ಣ ಬಹಳ ಬೇಗನೆ ನಿದ್ದೆಹೋಗಿದ್ದಾನೆ. ಅವನನ್ನೂ ತೊಟ್ಟಿಲಲ್ಲಿ ಮಲಗಿದ್ದ ವಿಷ್ಣುವನ್ನೂ ನೋಡುತ್ತಿದ್ದಂತೆ ದೇವನ ಮನದಲ್ಲೆಲ್ಲ ತಳಮಳ. ಅವನಿಗೆದುರಾಗಿ ಕುಳಿತು ಅವನ ಗಾಯದ ನೋವಿಗೆ ಎಣ್ಣೆ ಹಚ್ಚುತ್ತಿದ್ದ ಸುನೀತಿ ಮೆಲ್ಲನೆ ನಕ್ಕಳು.

"ಇವತ್ತು ಗಲಾಟೆಯಲ್ಲಿ ಮೈ ಕೈ, ಬೆನ್ನು ಮಾತ್ರವಲ್ಲ ನಿಮ್ಮ ತಲೆಯನ್ನೂ ಒಡೆದುಕೊಂಡು ಬರಬೇಕಿತ್ತು. ಆಗ ನೋಡ್ತಿದ್ದೆ ಮಜಾ. ಅದೇನು, ಮಕ್ಕಳನ್ನು ಹಾಗೆ ದಿಟ್ಟಿಸಿ ನೋಡ್ತಾ ಇದ್ದೀರಿ?"

"ಏನಿಲ್ಲ, ಇವರಿಗೆ ಯಾರ ರೂಪ, ಯಾರ ಬಣ್ಣ ಬಂದಿದೆ ಅಂತ ನೋಡ್ತಾ ಇದ್ದೇನೆ, ಸುನೀತಿ" ಅವನ ಸ್ವರ ಎಲ್ಲೋ ಆಳವಾದ ಬಾವಿಯಿಂದ ಬಂದಂತಿತ್ತು, "ನಿಜ ಹೇಳು ಸುನೀತಿ, ನಿನ್ನನ್ನು ನೋಡಲು ಮೊದಲ ಬಾರಿ ಉಪ್ಪಿನಂಗಡಿಗೆ ಬಂದಾಗ ನನ್ನನ್ನು ನಿನಗೆ ಮತ್ತು ನಿನ್ನ ಅಪ್ಪ-ಅಮ್ಮನಿಗೆ ಹೇಗೆ ಕಾಣಿಸಿತು?"

ಯಾರೂ ಇಲ್ಲದ ರಾತ್ರೆಯಲ್ಲಿ ಮನೆಯ ಮೌನ ಭೇದಿಸಿತು, "ಈಗ್ಯಾಕೆ ಹಳೆ ವಿಷಯಗಳು?"

"ಈಶ್ವರಯ್ಯನವರ ದತ್ತುಪುತ್ರನ ಕುಲಗೋತ್ರ ವಿಚಾರಿಸದೆ ನಿನ್ನ ಅಪ್ಪ ಅಮ್ಮ ಅವನಿಗೆ ನಿನ್ನನ್ನು ಧಾರೆ ಎರೆದು ಕೊಟ್ಟಿದ್ದಾರೆ. ನಿಜವಾಗಿಯೂ ಆಶ್ಚರ್ಯವಲ್ಲವೇ?"

"ಹಾಗೋ ವಿಷಯ. ಅಪ್ಪನಿಗೆ ನಿಮ್ಮ ತಂದೆ ಎಲ್ಲಾ ಹೇಳಿರಬಹುದು. ನಾನು ಕೇಳಲಿಲ್ಲ. ಅಮ್ಮ ಅಂದಿದ್ದಳು, 'ಹುಡುಗ ಸ್ವಲ್ಪ ಕಪ್ಪು. ಆದರೆ ಕಲ್ಲುಗುಂಡಿನಂತೆ ಗಟ್ಟಿಮುಟ್ಟಾಗಿದ್ದಾನೆ, ನಮ್ಮ ಸುನೀತಿಯ ಅದೃಷ್ಟ' ಎಂದು. ನಿಜ, ನಾನು ಅದೃಷ್ಟವಂತೆ. ನಿಮ್ಮ ದೇಹ ಕಲ್ಲುಗುಂಡಿನಂತಿದ್ದರೂ ಮನಸ್ಸು ಹೂವಿಗಿಂತಲೂ ಮೃದು."

ದೇವ ಅವಳ ಕೈಗಳನ್ನು ತನ್ನ ಕೈಯಲ್ಲಿ ತೆಗೆದುಕೊಳ್ಳುತ್ತ ಕೇಳಿದ ಮೃದುವಾಗಿ, "ಸುನೀತಿ, ನಾನು ನಿನಗೆ ಹೇಗೆ ಕಾಣಿಸುತ್ತೇನೆ. ನನ್ನ ಹುಟ್ಟಿನ ಬಗ್ಗೆ ನೀನೆಂದೂ ಯೋಚಿಸಲಿಲ್ಲವೇ?"

"ನಿಮ್ಮ ರೂಪ, ನಿಮ್ಮ ಹುಟ್ಟಿನ ಬಗ್ಗೆ ನಾನೆಂದೂ ಯೋಚಿಸಿದವಳಲ್ಲ. ಅರೆ, ಇವತ್ತೇಕೆ ಈ ಪ್ರಶ್ನೆಗಳು?"

"ನನ್ನ ಕೈಹಿಡಿದ ನೀನು ಈ ಮನೆಯ ಒಡತಿಯಾದೆ. ನನ್ನ ಮನದ ಸಖಿಯಾದೆ. ಧರ್ಮ, ಅರ್ಥ, ಕಾಮ, ಮೋಕ್ಷಗಳಲ್ಲಿ ಎಂದೆಂದೂ ನೀನೇ ನನ್ನ ಪತ್ನಿ. ನಿಜ ತಾನೇ? ನನ್ನಿಂದ ಮುತ್ತಿನಂತಹ ಎರಡು ಮಕ್ಕಳನ್ನು ನೀನು ಪಡೆದಿದ್ದಿಯಾ. ನೋಡಿಲ್ಲಿ, ಈ ಮಕ್ಕಳಿಗೆ ನಾನೇ ತಂದೆ.... ಬೇರೆ ಯಾರೂ ಅಲ್ಲ. ಒಪ್ಪಿಕೊಳ್ಳುತ್ತೀಯಾ?"

ಸತ್ಯಕ್ಕೆ ದೂರವಲ್ಲದ ಮಾತುಗಳು. ಆದರೆ ಅದನ್ನು ಬಿಡಿಸಿ ಹೇಳುವ ಅಗತ್ಯವಿತ್ತೇ? ಅರ್ಥವಾಗದೆ ನೋಡುತ್ತಿದ್ದವಳ ಕಣ್ಣಗೊಂಬೆಗಳಲ್ಲಿ ತನ್ನ ದೃಷ್ಟಿ ನೆಟ್ಟು, "ಇವತ್ತು ಅಮ್ಮ, ಶಶಿ ಇಲ್ಲ. ನಾವಿಬ್ಬರೇ. ನನ್ನ ಬಗ್ಗೆ ನೀನು ತಿಳಿದದ್ದು ಸಾಲದು. ಇನ್ನು ನಮ್ಮಿಬ್ಬರಲ್ಲಿ ಮುಚ್ಚುಮರೆಯಿರಬಾರದು. ಅಪ್ಪ ಸಾಯುವ ಗಳಿಗೆಯಲ್ಲಿ ಹೇಳಿದ ವಿಷಯ ನಿನಗೆ ಕರ್ಣಕಠೋರವಾಗಬಹುದು..... ನಾನು ಈಶ್ವರಯ್ಯನವರ ಮಗ.... ನಾನು...."

ಸುನೀತಿಯ ಮೈಯೆಲ್ಲ ಕಂಪಿಸಿತು. ದೇವನ ಮುಖವೇಕೆ ಹೀಗೆ ಬಿಳುಚಿಕೊಂಡಿದೆ? ಯಾಕೆ ಶಬ್ದಗಳು ತಡವರಿಸುತ್ತಿವೆ? ಇದೇನು? ಅವನು ನುಡಿಯುವ ಒಂದೊಂದು ಅಕ್ಷರಗಳೂ ನಿಧಾನವಾಗಿ ಅವಳ ಕರ್ಣವನ್ನು ಭೇದಿಸುತ್ತ ಹೋಯಿತು. ಒಂದೊಂದು ಅಕ್ಷರಗಳೂ ಅವಳ ಹೃದಯವನ್ನು ಛೇದಿಸಿದವು. ಭೂಕಂಪವಾಯಿತೇ... ಸಿಡಿಲೆರಗಿತೇ... ಇಂದು ಮಧ್ಯಾಹ್ನ ಸಂಘದಿಂದ ಹಿಂದಿರುಗುವಾಗ ದೇವ ಹೇಳಿದ ಒಂದು ಮಾತನ್ನು ತಮಾಷೆಯೆಂದು ತಿಳಿದಿದ್ದಳು. ಆದರೆ ಈಗ ಅದೇ ಶಬ್ದ ಉಚ್ಚರಿಸುತ್ತಿದ್ದಾನೆ. ಅದೇ ನಾಲ್ಕು ಅಕ್ಷರಗಳು! ಈಶ್ವರಯ್ಯನವರ ದತ್ತುಪುತ್ರ ಅನಾಥ ಶಿಶುವಲ್ಲ, ಹರಿಜನರಲ್ಲಿ ಹುಟ್ಟಿದ ಮುಗ್ಧ ಕೂಸು!

ನಂಬಲಾಗಲಿಲ್ಲ ಅವಳಿಂದ. ಅವನ ಎದೆಗೂರಗಿ ಮಾತನ್ನು ಅಲ್ಲಗಳೆದರೂ ಅವನ ದೃಢಧ್ವನಿಗೆ ಬೆಚ್ಚಿದಳು. ಸಂದೇಹ, ಅನುಮಾನದಿಂದ ಅವನ ಮೈ, ಕೈ, ಮುಖ ಮುಟ್ಟಿ ಮುಟ್ಟಿ ಪರೀಕ್ಷಿಸಿದಳು. ಕಣ್ಣರಳಿಸಿ ಅವನೊಳಗೆ ಏನನ್ನೋ ಹುಡುಕಲು ಯತ್ನಿಸಿದಳು. ಊಹೂಂ, ಇದೆಲ್ಲ ಸುಳ್ಳು. ಈಶ್ವರಯ್ಯ ಎಲ್ಲೋ ತಪ್ಪಿದ್ದಾರೆ. ಆ ಬುಡಕಟ್ಟಿನ ಕ್ರಮವೇ ಬೇರೆ. ದೇವನನ್ನು ಅವರೊಂದಿಗೆ ಹೋಲಿಸುವುದೇ? ಅವನಿಗಿಂತಲೂ ಕಪ್ಪುವರ್ಣದವರು ತನ್ನ ಕುಟುಂಬದಲ್ಲಿ ಅನೇಕರಿಲ್ಲವೇ.

"ಅಪ್ಪ ಈ ವಿಷಯ ಹೇಳಿದಾಗ ನನಗೆ ನಂಬಿಕೆ ಬಂದಿರಲಿಲ್ಲ. ಅನೇಕ ದಿನಗಳೂ ನಾನು ಸರಿಯಾಗಿ ನಿದ್ರಿಸಲಿಲ್ಲ. ನಿನಗೆ ಹೇಳುವ ತನಕ ಮನಃಶಾಂತಿಯೂ ಇರಲಿಲ್ಲ.

ಇನ್ನಾದರೆ ನಿಶ್ಚಿಂತೆ. ನನ್ನನ್ನು ನೀನು ಮೊದಲಿನ ದೇವನಂತೆ ನೋಡಿಕೊಂಡರೆ ನಿಜವಾಗಿಯೂ ನಾನು ಸುಖಿ!"

ಮತ್ತೆ ಕಂಪಿಸಿದಳು ತರಗೆಲೆಯಂತೆ. ಇಲ್ಲ, ಹೀಗಾಗಲು ಸಾಧ್ಯವಿಲ್ಲ. ಇವನ ಬಣ್ಣ ವಾಗಲಿ, ರೂಪವಾಗಲಿ ತನಗೆಂದೂ ಮೋಸ ಮಾಡಲಿಲ್ಲ. ಇವನ ಬುದ್ಧಿ ತನಗೆಂದೂ ಕೇಡು ಬಗೆಯಲಿಲ್ಲ. ಇವನು ಶಿಸ್ತುಗಾರ, ಛಲಗಾರ, ಸದಾ ಕೆಲಸದ ಉತ್ಸಾಹಿ. ಅದೇಕೆ, ಇವನ ಜಪ, ಸಂಧ್ಯಾವಂದನೆ, ಓದಿನ ಕ್ರಮ, ಜ್ಞಾನದಾಹ, ಪ್ರತಿಯೊಂದರಲ್ಲಿ ಇವನಿಗಿರುವ ನಿಷ್ಠೆ! ಓ... ಇವನು ಅವನಲ್ಲ!

"ನನ್ನನ್ನು ಒಪ್ಪಿಕೊಳ್ಳೀಯಾ ಸುನೀತಿ?" ಅವಳ ಮುಖವನ್ನು ತನ್ನ ಬೊಗಸೆಯಲ್ಲಿ ಹಿಡಿದು ಅವನೆಂದ, "ಇನ್ಮೇಲೆ ನನ್ನ ಗೌರವ ಪ್ರತಿಷ್ಠೆ ನಿನ್ನ ಕೈಯಲ್ಲಿದೆ."

"ಅತ್ತೆಗೆ ಈ ವಿಷಯ ತಿಳಿಯದೇ?"

"ಇಲ್ಲ. ಅಮ್ಮನಿಗೂ ಅಪ್ಪ ಹೇಳಿರಲಿಲ್ಲ. ಅಮ್ಮನ ಕ್ರಮಗಳೆಲ್ಲ ನಿನಗೆ ಗೊತ್ತು. ಈಗಲೂ ಈ ವಿಷಯ ನಮ್ಮಿಬ್ಬರಲ್ಲೇ ಇದ್ದರೆ ಇಬ್ಬರಿಗೂ ಕ್ಷೇಮ."

ಸುನೀತಿ ಅವನ ದೇಹದುದ್ದಕ್ಕೂ ದೃಷ್ಟಿಹಾಯಿಸಿ ಅರೆಗಳಿಗೆ ಸ್ತಬ್ಧಳಾಗಿ ಕುಳಿತು ಬಿಟ್ಟಳು. ಚಿಮಣಿದೀಪದ ಬೆಳಕು ವಿಚಿತ್ರ ನೆರಳನ್ನೊಡ್ಡಿತ್ತು ಇಬ್ಬರ ಮೇಲೆ. ಇನ್ನೂ ಕೇಳುವ ವಿಷಯಗಳೆಷ್ಟೋ ಇದ್ದರೂ ಮುಂದಕ್ಕೆ ಮಾತು ಬೇಡವೆನಿಸಿ ಎಣ್ಣೆ ಕೈಗಳನ್ನು ತೊಳೆಯುವ ನೆವದಲ್ಲಿ ಅಲ್ಲಿಂದೆದ್ದಾಗ ಅವಳ ತುಟಿಯಂಚಿನಲ್ಲಿ ಮೂಡಿತ್ತು ಕಿರುನಗೆ ಯೊಂದು. ಅದರಲ್ಲಿ ವ್ಯಂಗ್ಯವಿತ್ತೇ, ಅಪಹಾಸ್ಯವಿತ್ತೇ, ಒಪ್ಪಿಗೆಯ ಮುದ್ರೆಯಿತ್ತೇ ಎಂದು ತಿಳಿಯಲಿಲ್ಲ ದೇವನಿಗೆ. ಅವಳು ಬಚ್ಚಲು ಮನೆಯತ್ತ ನಡೆದಾಗ ಸಿಳ್ಳು ಹಾಕುತ್ತ ತಾನೂ ಹಿಂಬಾಲಿಸಿ ಅವಳ ಎಣ್ಣೆ ಕೈಗಳಿಗೆ ನೀರು ಸುರಿದ.

"ಎಣ್ಣೆ ತೊಳೆಯಲು ಸಾಬೂನು ಬೇಕು ತಾನೇ? ಚೆನ್ನಾಗಿ ತಿಕ್ಕಿ ತೊಳೆದುಕೋ. ನಿನ್ನ ಮನಸ್ಸಿಗೂ ನನ್ನಿಂದ ಬೇಸರ, ದುಃಖವಾಗಿದ್ದರೆ ಅದನ್ನೂ ತೊಳೆದುಹಾಕು" ಎಂದ ನಗುತ್ತ.

ಕೈತೊಳೆದು ಮಲಗಲೆಂದು ಬಂದ ಅವಳನ್ನು ತನ್ನ ಎದೆಗೊರಗಿಸಿಕೊಂಡಾಗ ಪ್ರಶಾಂತವಾಗಿತ್ತು ಅವನ ಮನಸ್ಸು. ಆದರೆ ಅವಳೋ... ಕುದಿವ ಎಣ್ಣೆಗೆ ಎಸೆಯಲ್ಪಟ್ಟವ ಳಂತೆ ತನ್ನನ್ನೇ ಸಮಾಧಾನಪಡಿಸಿಕೊಳ್ಳುವ ಯತ್ನದಲ್ಲಿ ಚಡಪಡಿಸುತ್ತ ನಿಮಿಷಕ್ಕೊಮ್ಮೆ ಬದಿಯಲ್ಲಿದ್ದವನ ಮುಖ ನಿಟ್ಟಿಸುತ್ತ, ನಿಟ್ಟುಸಿರು ಬಿಡುತ್ತ ಕಳೆದಳು ಆ ರಾತ್ರಿಯನ್ನು.

* * * * *

ಮರುದಿನ ಬೆಳಗ್ಗೆ ಸುನೀತಿ ಅನ್ಯಮನಸ್ಕಳಾಗಿಯೇ ಎದ್ದಾಗ ದೇವ ಅವಳಿಗಿಂತ ಮುಂಚೆ ಎದ್ದು ಹಾಲು ಕರೆದು ಮುಗಿಸಿ, ಒಲೆ ಬೂದಿ ತೆಗೆದು ಬೆಂಕಿಯುರಿಸಿ ಕಾಫಿ ಮಾಡಿದ್ದ. ಕೃಷ್ಣ ಅವನ ಕಾಲಿಗೆ ಸುತ್ತಿಕೊಳ್ಳುತ್ತ ಹಠ ಹಿಡಿದಿದ್ದಾನೆ ಹಾಲಿಗಾಗಿ. "ನಂದ

ಬಾರೋ ಗೋವಿಂದ ಬಾರೋ, ಕೃಷ್ಣ ಬಾರೋ ನಮ್ಮಪ್ಪ ಬಾರೋ!!" ಎಂದು ಹಾಡುತ್ತ ಹಾಲು ಬಿಸಿಮಾಡಿ ಕೃಷ್ಣನ ಮುಂದಿರಿಸಿದಾಗ ಅವನ ಕೇಕೆ ನೋಡಬೇಕು. ಅವನ ಹಣೆಯ ಮೇಲುರುಳಿದ ಗುಂಗುರು ಕೂದಲನ್ನು ಕೈಯಿಂದ ಹಿಂದಕ್ಕೆ ತಳ್ಳಿ ತಾನೇ ಅವನಿಗೆ ಹಾಲು ಕುಡಿಸುತ್ತಿದ್ದಂತೆ ಒಳಗೆ ಕಾಲಿರಿಸಿದಳು ಸುನೀತಿ.

"ಅಮ್ಮ ಬಾರೇ, ಗುಮ್ಮ ಬಾರೇ, ಒಂದು ಲೋಟ ಬಿಸಿ ಕಾಫಿ ಕುಡಿಯ ಬಾರೇ" ಉತ್ಸಾಹದಿಂದ ಗುಣುಗುಣುತ್ತ ಕಾಫಿ ತಯಾರಿಸಿ ಗೋಡೆಗೊರಗಿ ಕುಳಿತವಳ ಮುಂದಿರಿಸಿದ. ಆದರೆ ಅವಳ ನಿಸ್ತೇಜ ಮುಖ ನೋಡಿದಾಕ್ಷಣ ಅಯ್ಯೋ ಎನಿಸಿ ಹತ್ತಿರ ಬಂದು ಕುಳಿತ.

"ಯಾಕೆ ಸುನೀತಿ, ರಾತ್ರೆಯೆಲ್ಲಾ ನಿದ್ರೆ ಮಾಡಲಿಲ್ಲವೇ?"

ಅವಳು ಕಾತರದಿಂದ ನೋಡಿದಳು ಅವನನ್ನು. ಬರಿಯ ಪಂಚೆಯುಟ್ಟು, ಹೆಣ್ಣಿನಂತೆ ಕೆಲಸಕ್ಕಿಳಿದಿದ್ದ ಅವನ ವಿಶಾಲವಾದ ಎದೆ ಮೇಲೆ ದಪ್ಪ ಜನಿವಾರ. ಅವಳ ಕಣ್ಣುಗಳು ಮಂಜಾದವು.

"ನಿನ್ನೆ ಹೇಳಿದ್ದೆಲ್ಲವೂ ತಮಾಷೆಯ ಮಾತಲ್ಲವೇ?"

ಚಕಿತನಾದ ದೇವ, "ಇನ್ನೂ ನಿನಗೆ ಅದೇ ಗುಂಗು?"

"ಮಾವಯ್ಯ ನಿಮ್ಮ ವಿಷಯವನ್ನು ಅತ್ತೆಗೆ ಯಾಕೆ ತಿಳಿಸಲಿಲ್ಲ? ನಿಮಗೆ ಮಾತ್ರ ಯಾಕೆ ಹೇಳಿದರು?"

"ನನ್ನ ಮೇಲೆ ಅವರಿಗೆ ವಿಶ್ವಾಸ ಅಧಿಕ. ಏನಾದರಾಗಲಿ, ಅವರು ಹೇಳಿದ್ದು ಸೂರ್ಯ-ಚಂದ್ರರ ಸಾಕ್ಷಿಯಾಗಿಯೂ ಸತ್ಯ ಮಾತು. ಇನ್ನು ಈ ಚಿಂತೆ ಬಿಡು. ಅದೇನು ಹೊರಗೆ ಗಲಾಟೆ?" ಎದ್ದು ಹೊರಗೆ ಬಂದು ನೋಡುತ್ತಾನೆ, ಬಂದವರು ಅವನ ಕೆಲಸದವರು.

ತನಿಯ ಎರಡೂ ಕೈಗಳನ್ನು ಜೋಡಿಸಿ ನೆಲಕ್ಕೆ ಬಗ್ಗಿದ, "ಕೋಳಿ ಕೂಗುವ ಮೊದಲೇ ದೂರು ತಂದೆವೆಂದು ಬೈಬೇಡಿ ಅಯ್ಯ, ದುಗ್ಗನ ಮನೆಗೆ ಯಾರೋ ಬೆಂಕಿ ಹಚ್ಚಿದ್ದಾರೆ."

ದುಗ್ಗನ ಮನೆಗೆ ಬೆಂಕಿ! ಕಳೆದ ವರ್ಷವಷ್ಟೇ ಐತ-ದುಗ್ಗರಿಗೆ ಹಂಚಿನ ಮನೆ ಕಟ್ಟಿಸಿದ್ದು. ಅದಕ್ಕೆ ಬೆಂಕಿ ಹಿಡಿಯುವುದಾದರೂ ಹೇಗೆ?

"ನೀವೇ ಬಂದು ನೋಡಿ ಅಯ್ಯ." ಬೊಗ್ರ ಅಂದ, "ರಾತ್ರೆ ಯಾವಾಗ ಬೆಂಕಿ ಬಿದ್ದಿತೋ. ಹಂಚುಗಳು ಪಟಾಪಟಾ ಅಂತ ಮಾರು ದೂರ ಸಿಡಿದುಹೋಗಿವೆ. ಒಂದು ಪಕಾಸಿನ ಚೂರೂ ಉಳಿದಿಲ್ಲ. ಸುಟ್ಟ ಮಣ್ಣಿನ ಗೋಡೆ ಒಂದೇ ಬಾಕಿ."

"ದುಗ್ಗ ಉಟ್ಟ ಕೋಮಣದಲ್ಲೇ ಮನೆ ಹೊರಗೆ ನಿಂತಿದ್ದಾನೆ." ಕರಿಯ ನುಡಿದ, "ಹೆಂಡ್ತಿ ಮಕ್ಕಳ ಅವಸ್ಥೆ ಕೇಳಲೇಬೇಡಿ. ಐತ ರಾತ್ರೋರಾತ್ರೆ ಹೆಂಡ್ತಿ ಮಗೂನ್ನ

ಕರ್ಕೊಂಡು ಮನೆ ಬಾಗ್ಲು ಬಟ್ಟು ಬಯಲಾಗಿ ತೆರೆದಿಟ್ಟು ಊರ್ನಿಂದ ಪಲಾಯನ ಮಾಡಿದ್ದಾನೆ. ಎಂತ ದರಿದ್ರ ಬಂದಿತೋ ಈ ಊರಿಗೆ?"

ದೇವ ಕೂಡಲೆ ಅಂಗಿ ಧರಿಸಿ ದುಗ್ಗನ ಸುಟ್ಟ ಮನೆಯತ್ತ ಬಂದಾಗ ಅಲ್ಲಿಯ ಭೀಕರತೆಯ ಬಿಸಿ ತಟ್ಟಿತು ಅವನಿಗೆ. ತನ್ನ ಸಂಘದವರಲ್ಲಿ ಯಾರೋ ಮಾಡಿದ ಈ ಕೆಲಸಕ್ಕೆ ಗುರಿಯಾದದ್ದು ಈ ಬಡಸಂಸಾರ. ನಿಸ್ಸಹಾಯಕನಾದ ದುಗ್ಗ ಹೆಂಡತಿ ಮಕ್ಕಳೊಂದಿಗೆ ಮರವೊಂದರ ಆಶ್ರಯದ ನೆರಳು ಪಡೆದಿದ್ದಾನೆ. ದೇವನನ್ನು ನೋಡಿದಾಕ್ಷಣ ತಾರಕಕ್ಕೇರಿತು ಅವನ ಸ್ವರ.

"ಊರ್ನಲ್ಲಿ ಮರ್ಯಾದೆ ಕಳ್ಕೊಂಡು ಹ್ಯಾಂಗೆ ಬದುಕಲಿ ಅಯ್ಯ? ನಿಮ್ಮ ಹೆಸರಿನಲ್ಲಿ ಒಂದು ಹೊತ್ತಿನ ಗಂಜಿ ಸಿಕ್ತಿತ್ತು. ಅದ್ಯಾವ ದೆವ್ವ ಬಡೀತೋ, ಪುರ್ಬುಸ್ ಆದೆ. ಹೆಂಡ್ತಿ ಮಕ್ಕಳ ಅವಸ್ಥೆ ನೋಡಿ, ಎಂತ ಅಯ್ಯ, ಇನ್ನು ಕಾಡಿನಲ್ಲಿ ಕಣ್ಣು ಕಟ್ಟಿ ಬಿಟ್ಹಾಗೆ ನಮ್ಮ ಸ್ಥಿತಿ."

"ಇದಕ್ಕೆ ನಾನಲ್ಲ ಹೊಣೆ. ಮನೆಗೆ ಬಾ, ಏನಾದರೂ ಸಹಾಯ ಮಾಡ್ತೇನೆ. ಆಮೇಲೆ ಊರು ಬಿಟ್ಟುಹೋಗು."

"ಎಲ್ಲಿಗೆ ಹೋಗಲಿ ಅಯ್ಯ. ಇದೇ ಊರಿನಲ್ಲಿ ನಿಮ್ಮ ನಾಯಿಯಂತೆ ಇದ್ದು, ನೀವು ಹೇಳಿದ ಕೆಲಸ ಮಾಡ್ಕೊಂಡು ಬಿದ್ದಿರ್ತೇನೆ. ನನ್ನ ಸಂಸಾರದ ಹೊಟ್ಟೆ ಖಾಲಿಯಾಗದಂತೆ ನೋಡಿಕೊಳ್ಳಿ, ಅಯ್ಯ."

"ನೀನು ಊರು ಬಿಟ್ಟುಹೋದರೆ ನಮಗೆ ಕ್ಷೇಮ." ತನಿಯ ಅಬ್ಬರಿಸಿದ ಎರಡು ಬಾರಿ.

ದೇವನ ಮನಮಿಡುಕಿತು ದುಗ್ಗನಿಗಾಗಿ. ಅವನ ಜಾತಿಬಾಂಧವರು ಅವನಿಗೆ ವಿರೋಧವಾದರೂ ತಾನೆಂದಿಗೂ ಕೈಬಿಡಲಾರೆ. "ಮನೆ ಕಟ್ಟಿಸಿಕೊಳ್ಳುವ ಹೊಣೆ ನಿನ್ನದು. ಎಂದಿನಂತೆ ನೀನೂ, ನಿನ್ನ ಹೆಂಡತಿಯೂ ನನ್ನಲ್ಲಿಗೆ ಕೆಲಸಕ್ಕೆ ಬನ್ನಿ." ಆತ್ಮೀಯತೆಯಿಂದ ದುಗ್ಗನಿಗೆ ಆಶ್ವಾಸನೆ ನೀಡಿದವನು ತನಿಯನನ್ನು ಕಣ್ಣು ಕೆಕ್ಕರಿಸಿ ನೋಡಿದ, "ಏನು ತನಿಯ, ನಿನಗ್ಹೇಗೆ ಈ ಕಲ್ಲು ಹೃದಯ? ಅವನು ಯಾವ ಮತಕ್ಕೆ ಸೇರಿದರೂ ನಿನ್ನಂತೆ ಮಕ್ಕಳೊಂದಿಗ. ದುಡಿದು ತಿನ್ನುವವ. ಜಾತಿ-ಮತಗಳ ಪ್ರಶ್ನೆ ಇಲ್ಲಿ ಬೇಡ. ಒಂದಾಗಿ ಬಾಳುವುದು, ಪರಸ್ಪರ ಸ್ನೇಹದಲ್ಲಿರುವುದು ನಮ್ಮ ಧರ್ಮ!"

* * * * *

ದೇವ ಹೊರಗೆ ಹೋದ ನಂತರವೂ ಕುಳಿತ ಸ್ಥಳದಿಂದ ಏಳಲಿಲ್ಲ ಸುನೀತಿ. ಅವಳ ಮನದ ಶಂಕೆ ದ್ವಿಗುಣಗೊಳ್ಳುತ್ತ ನಿನ್ನೆ ರಾತ್ರೆ ಹೇಳಿದ ವಿಷಯಕ್ಕೆ ರೆಕ್ಕೆ ಪುಕ್ಕ ಮೂಡಿಸಿದವು. ಹಾಲು ಕುಡಿದ ಗ್ಲಾಸಿನಲ್ಲೇ ಆಡುತ್ತಿದ್ದ ಕೃಷ್ಣನನ್ನು ನೋಡಿದಾಗ 'ಇವನು ದೇವನ ಮಗನಲ್ಲವೇ?' ಎಂದೂ ನೆನಪಾಗಿ ಅರೆಗಳಿಗೆ ಹೆಮ್ಮೆಯಾದರೂ

ಮರುಗಳಿಗೆಯಲ್ಲಿ ಮೈಯೆಲ್ಲ ಕಲಕಿ ನೂರು ಚೇಳುಗಳು ಕಟುಕಿದಂತಹ ಯಾತನೆ. ದೇವನನ್ನು ತೀರ ಚಿಕ್ಕವನನ್ನಾಗಿ ಮಾಡಿ ಎಲ್ಲೋ ಒಂದು ಹರಿಜನ ಕೇರಿಯಲ್ಲಿ ಜನ್ಮವೆತ್ತಿದ್ದನ್ನು ಕಲ್ಪಿಸಿಕೊಂಡಳು. ಅವನ ನರನಾಡಿಯಲ್ಲಿ ಹರಿಯುತ್ತಿರುವುದು ಅದೇ ನೆತ್ತರು, ಅದೇ ಬುದ್ಧಿಮತ್ತೆ. ಬೆಳೆದದ್ದು ಉತ್ತಮ ಕುಲದಲ್ಲಾದರೂ ಹುಟ್ಟನ್ನು ಅಳಿಸುವುದು ಸಾಧ್ಯವೇ?

ಸ್ವಲ್ಪ ಹೊತ್ತಿಗೆಲ್ಲಾ ದೇವ ಹಿಂದಿರುಗಿದಾಗ ತೊಟ್ಟಿಲಲ್ಲಿ ವಿಷ್ಣು ರೆಚ್ಚೆ ಹಿಡಿದು ಅಳುತ್ತಿದ್ದ. ಅವನ ಕೊಳಕು ಬಟ್ಟೆ ಬದಲಿಸಿ ಅವನನ್ನೆತ್ತಿಕೊಳ್ಳುತ್ತ ಅಡಿಗೆ ಕೋಣೆಗೆ ಬಂದವನು ನೋಡುತ್ತಾನೆ, ಸುನೀತಿ ಕುಳಿತ ಸ್ಥಳದಿಂದ ಕದಲದೆ ತಟಸ್ಥಳಾಗಿದ್ದಾಳೆ. ಮುಖದಲ್ಲಿ ನೀರವಭಾವ. ಬೆಳಗಿನ ಕೆಲಸಗಳೆಲ್ಲ ಉಳಿದಿವೆ ಹಾಗೇ.

"ಇವನು ಅಳ್ತಾ ಇದ್ದರೂ ಇದೇನು ಹೀಗೆ ಕುಳಿತಿದ್ದಿ? ಇನ್ನೂ ನಿನ್ನ ಮನಸ್ಸಿಗೆ ಸಮಾಧಾನವಾಗಲಿಲ್ಲವೇ?"

"ನೀವು ಹೇಳಿದ್ದನ್ನು ಒಪ್ಪಿಕೊಳ್ಳುವುದು ಕಷ್ಟಕರ."

"ಅದಿನ್ನೂ ಒಳಿತಾಯ್ತು ಬಿಡು. ನಾನು ತಮಾಷೆ ಮಾಡಿದ್ದೇನಂತ ತಿಳಿದು ಸಮಾಧಾನವಾಗಿರು." ನಗುತ್ತ ವಿಷ್ಣುವನ್ನು ಅವಳ ಮಡಿಲಿನಲ್ಲಿ ಮಲಗಿಸಿದ, "ಪಾಪ, ಹಸಿದಿರಬಹುದು, ಹಾಲು ಕುಡಿಸು."

ಒಂದೇ ಒಂದು ರಾತ್ರೆಯಲ್ಲಿ ಬದುಕಿನ ನೆಮ್ಮದಿಗೆ ದೊಡ್ಡ ಕೊಡಲಿಯೇಟು ಬಿದ್ದು ಮನಃಶಾಂತಿಯೆಲ್ಲಾ ಹಾಳು. ದೇವನನ್ನು ನೋಡುತ್ತ ಹೋದಂತೆ ಅವನ ಮಾತಿನ ಸತ್ಯಾಂಶವನ್ನು ಒರೆಗಲ್ಲಿಗೆ ಹಚ್ಚುವ ಸಾಹಸ ಮಾಡಿದಳು. ಮಾವಯ್ಯ ಇಂಥವನನ್ನು ದತ್ತುಪುತ್ರನನ್ನಾಗಿ ಸ್ವೀಕರಿಸಿದ್ದು ಯಾವ ಆದರ್ಶದ ಹುಚ್ಚು ಹಂಬಲದಿಂದ? ಇದ್ದೆವು, ಯಾವ ಚಿಂತೆಯಿಲ್ಲದೆ ಹಾಯಾಗಿ. ಇಲ್ಲಿ ಬಿರುಗಾಳಿ ಎಬ್ಬಿಸುವುದಕ್ಕಾಗಿ ಸಾಯುವ ಗಳಿಗೆಯಲ್ಲಿ ಸತ್ಯಸಂಗತಿ ಬಯಲುಮಾಡಬೇಕಿತ್ತೇ?

ಎರಡು ದಿನಗಳು ಹೇಗೋ ಕಳೆದವು. ಬಿಸಿಬಾಣಲೆಗೆ ಬಿದ್ದಂತೆ ಚಡಪಡಿಕೆ. ಈವರೆಗೂ ಹೇಗೋ ದೇವನೊಡನೆ ಜೀವನ ನಡೆಸಿದ್ದಾಯ್ತು. ಇನ್ನು ಮುಂದೆ ಸಾಧ್ಯವೇ? ತಾವು ಸುಖಿಯಾಗಿ ಇರಬಲ್ಲೆವೇ? ದೇವನ ಶಾಂತ ಮುಖದಲ್ಲಿ ಚಿಂತೆಯ ಗೆರೆಗಳಿಲ್ಲ. ಆದರೆ ಅವನಂತಿರಲು ತನ್ನಿಂದ ಸಾಧ್ಯವಿಲ್ಲ. ಯಾರೊಂದಿಗಾದರೂ ಎಲ್ಲವನ್ನೂ ಹೇಳಿಕೊಳ್ಳಬೇಕು. ಹಾಗೆ ಹೇಳಿಕೊಳ್ಳಲು ಅರ್ಹರಾದವರು ತಂದೆ-ತಾಯಿ ಮಾತ್ರ.

"ನನ್ನ ಮನಸ್ಸಿನ ತೂಕ ತಪ್ಪಿಹೋಗಿದೆ. ಒಮ್ಮೆ ಉಪ್ಪಿನಂಗಡಿಗೆ ಹೋಗಿಬರ್ತೇನೆ" ದೇವನ ಉತ್ತರಕ್ಕೂ ಕಾಯದೆ ಅದೇ ಗಳಿಗೆಯಲ್ಲಿ ಮಕ್ಕಳೊಂದಿಗೆ ಹೊರಟು ಸಿದ್ಧಳಾದಳು.

ದೇವ ಹುಬ್ಬುಗಂಟಿಕ್ಕಿದ, "ತೂಕ ತಪ್ಪಿದ ಮನಸ್ಸನ್ನು ಸರಿಪಡಿಸುವುದು ನಿನ್ನ ಕೈಯಲ್ಲಿದೆ. ಅದನ್ನೆಲ್ಲ ತಂದೆ ತಾಯಿ ಹತ್ತಿರ ಹೇಳಿಕೊಳ್ಳುವುದಲ್ಲ!"

"ಅದು ನನ್ನಿಷ್ಟ" ಒರಟಾಗಿತ್ತು ಅವಳ ಉತ್ತರ.

"ಹಾಗಾದರೆ ಹೇಳಿಕೋ. ಆದರೆ ಈ ಎರಡು ಮಕ್ಕಳ ಭವಿಷ್ಯ, ನನ್ನ ಬದುಕು ನಿನ್ನ ಕೈಯಲ್ಲಿದೆ. ಸಮಾಜದ ಕಣ್ಣಿನಲ್ಲಿ ನಾನು ನಿಕೃಷ್ಟನಾಗಬಾರದು. ಹಳೆ ಸಂಪ್ರದಾಯದಲ್ಲಿದ್ದ ನನ್ನ ಅಮ್ಮನಿಗೂ ವಿಷಯ ತಿಳಿದು ನೋವಾಗಬಾರದು."

"ನನಗಾದ ನೋವು ನಿಮಗೆ ಅರ್ಥವಾಗಿಲ್ಲ. ನನ್ನ ಅಪ್ಪನಿಗೆ ಎಲ್ಲಾ ವಿಷಯ ಹೇಳ್ತೇನೆ. ಅವರು ಹತ್ತೆಂಟು ಕಡೆ ವಿಚಾರಿಸಿ ನಿಮ್ಮ ತಂದೆ-ತಾಯಿ ಯಾರು, ಏನು ಮಾಡ್ತಾರೆ? ಹೇಗಿದ್ದಾರೆ ಎಲ್ಲಾ ಒಮ್ಮೆ ನೋಡಲಿ."

"ಬುದ್ಧಿ ಸರಿಯಾಗಿದೆಯೇ ನಿನಗೆ?" ಸಿಡುಕಿದ ದೇವ ಹತ್ತಿರ ಬಂದು ಅಬ್ಬರಿಸಿದ, "ನನ್ನ ಕಡೆಯವರನ್ನು ಇಷ್ಟು ವರ್ಷಗಳ ನಂತರ ಹುಡುಕುವುದೇ? ನಾನು ತಾಯಿಯ ಹೊಟ್ಟೆಯಲ್ಲಿರುವಾಗಲೇ ಅಪ್ಪ ತೀರಿಹೋದನಂತೆ. ತಾಯಿಯ ಮುಖ ಕಂಡ ನೆನಪೂ ನನಗಿಲ್ಲ. ಆ ಬಾಂಧವ್ಯಗಳನ್ನು ಕಿತ್ತೆಸೆದು ಇತ್ತ ಬಂದಾಗ ನನ್ನ ಬಗ್ಗೆ ನೂರೆಂಟು ಪ್ರಶ್ನೆಗಳು, ಊಹಾಪೋಹ ಎದ್ದಿರಬಹುದು. ಜನರೂ ಹೊಟ್ಟೆಕಿಚ್ಚಿನಿಂದ ಅಲ್ಲಲ್ಲಿ ವಿಚಾರಿಸಿರಬಹುದು. ಈಗ... ಎರಡು ಮಕ್ಕಳ ತಂದೆಯಾದ ನನ್ನ ಕುಲಗೋತ್ರ ವಿಚಾರಿಸಲು ನಿನ್ನ ಅಪ್ಪನ ವಕಾಲತ್ತು ಬೇಕೇ?"

"ಸಮಾಧಾನವಾದರೂ ಸಿಕ್ಕೀತು."

"ಓಹೋ!" ವ್ಯಂಗ್ಯವಾಗಿ ನಕ್ಕ ದೇವ, "ಅಪ್ಪ ಸಮಾಧಾನ ಹೇಳುತ್ತಾರೆಯೇ? ಬದಲಾಗಿ ನಿನ್ನನ್ನೇ ಸರಿಸುತ್ತಾರೆ ದೂರಕ್ಕೆ. ನನ್ನ ಕೈ ಹಿಡಿಯುವ ಮೊದಲು ನೀನು ಅವರ ಮನೆ ಮಗಳು, ನಿಜ. ಆದರೆ ಈಗಲ್ಲ!"

ಅವನ ಮಾತನ್ನು ಆಳವಾಗಿ ಅರ್ಥೈಸಿಕೊಳ್ಳದ ಸುನೀತಿ ತನ್ನ ನಿರ್ಧಾರವನ್ನೂ ಹಿಂದೆಗೆಯಲಿಲ್ಲ. ಎಳೆಮಕ್ಕಳನ್ನು ಕರೆದೊಯ್ಯಲು ಅವಳಿಗೆ ಕಷ್ಟವಾಗದಂತೆ ಒಬ್ಬ ಕೆಲಸದವನನ್ನೂ ಜೊತೆಮಾಡಿ ತಾನೇ ಅವರನ್ನು ಬಸ್ಸು ಹತ್ತಿಸಿ ಕಳುಹಿಸಿದ ಮೇಲೆ ದೇವನ ಪಾಲಿಗೆ ಉಳಿದದ್ದು ಮೌನ ಒಂದೇ ದಾರಿ.

## ೯

ಕೊಯ್ಲಿಗೆ ಸಿದ್ಧವಾದ ಭತ್ತವನ್ನು ಒಳಗೆ ತುಂಬಿಸುವ ಗಲಾಟೆಯಲ್ಲಿ ದೇವನಿಗೆ ಅರೆಗಳಿಗೆ ಬಿಡುವಿಲ್ಲ. ಈ ಬಾರಿ ಅವನ ಸುಗ್ಗಿ ಬೇಸಾಯವೂ ನಿಧಾನ. ತಂದು ರಾಶಿ ಹಾಕಿದ ಭತ್ತವನ್ನು ಚೆನ್ನಾಗಿ ಒಣಗಿಸಿದ ಮೇಲೆ ತಾನೇ ಹನ್ನೆರಡು ಜನ ಕೆಲಸದವರಿಗೆ ಪಾಯಸದೂಟ ಮಾಡಿ ಬಡಿಸಿದ.

ಹದಿನೈದು ದಿನಗಳ ನಂತರ ಹಿಂದಿರುಗಿ ಬಂದರು ನಾಗಮ್ಮ ಮತ್ತು ಶಶಿಧರ. ಮನೆಯಲ್ಲಿ ಸುನೀತಿಯಿಲ್ಲದ ಕೊರತೆ ನಾಗಮ್ಮನನ್ನು ಬಾಧಿಸದಂತೆ ದೇವ ಹೆಣ್ಣು ಮಗಳಂತೆ ತಾನೇ ವಹಿಸಿಕೊಂಡ ಒಳ-ಹೊರಗಿನ ಕೆಲಸವನ್ನು. ಮನಸ್ಸಿಲ್ಲದೆ ಜಾಹ್ನವಿಯ ಕಥೆ ಆಲಿಸಿದ.

ಪತಿಯ ಮರಣದಿಂದ ನಿರ್ಗತಿಕಳಾದ ಜಾಹ್ನವಿಗೆ ತನ್ನ ಎರಡು ಸಣ್ಣ ಮಕ್ಕಳೊಡನೆ ಭವಿಷ್ಯವನ್ನು ಹೇಗೆ ಎದುರಿಸಬೇಕು ಎನ್ನುವುದೇ ದೊಡ್ಡ ಪ್ರಶ್ನೆ. ಬದುಕಲು ನೂರು ದಾರಿಗಳಿದ್ದರೂ ಸದ್ಯಕ್ಕೆ ಉಳಿಯಲು ಒಂದು ನೆಲೆ ಬೇಕಾಗಿದೆ. ಸದಾನಂದ ಅವಳಿಗೆ ಆಶ್ರಯಕೊಡಲು ನಿರಾಕರಿಸಿದನಂತೆ. ಅವಳ ಸ್ಥಿತಿಗೆ ಮರುಕಗೊಂಡ ನಾಗಮ್ಮ ತನ್ನಲ್ಲಿ ಆಶ್ರಯ ನೀಡುತ್ತೇನೆಂದು ಭರವಸೆಯಿತ್ತು ಬಂದಿದ್ದಾರೆ.

ದೇವ ಹೌಹಾರಿಹೋದ, "ಯಾವಾಗ ಬರ್ತಾರಂತೆ ಇಲ್ಲಿಗೆ?"

"ಮುಂದಿನ ವಾರ ಶಶಿ ಕರೆದುಕೊಂಡು ಬರ್‍ತಾನೆ. ದೇವರು ನಮಗೆ ಅಷ್ಟಿಷ್ಟು ಕೊಟ್ಟಿದ್ದಾನೆ. ಅವಳು, ಮಕ್ಕಳು ನಮಗೊಂದು ಭಾರವಾಗಲಾರರು ಅಲ್ಲವೇ."

ನಾಗಮ್ಮನ ನಿಶ್ಚಿಂತೆಯ ನುಡಿಗೆ ಚಕಿತನಾದ ದೇವ. ತಮ್ಮ ಕೊನೆ ತಂಗಿಯ ಮೇಲೆ ಈಗ ಅವರಿಗೆ ಉಕ್ಕಿ ಹರಿದಿದೆ ಪ್ರೀತಿ. ಈವರೆಗೆ ಇಲ್ಲದ ವ್ಯಾಮೋಹ ಅವಳು ವಿಧವೆಯಾದ ಮೇಲೆ ಹೆಚ್ಚಿದೆ! ಜಾಹ್ನವಿ ಮತ್ತು ಅವಳ ಮಕ್ಕಳನ್ನು ಸಾಕುವ ಹೊಣೆ ತನ್ನ ಪಾಲಿಗೆ. ಆದರೆ ಇದೆಲ್ಲ ಎಷ್ಟು ದಿನಗಳು? ತನಗೆ ತಿಳಿಸದೆ ತಂಗಿಗೆ ಆಶ್ರಯ ನೀಡುತ್ತೇನೆ ಎಂದು ತಾಯಿ ಒಪ್ಪಿ ಬಂದಿರುವ ಅರ್ಥವೇನು?

ಮುಂದೆ ಹತ್ತು ದಿನಗಳಲ್ಲಿ ಶಶಿಧರ ಹಾಸನಕ್ಕೆ ತೆರಳಿ ಜಾಹ್ನವಿ ಮತ್ತು ಮಕ್ಕಳನ್ನು ಕರೆದುಕೊಂಡು ಬಂದ. ನಾಗಮ್ಮ ಕಣ್ಣೀರಿನಿಂದ ಅವರನ್ನು ಬರಮಾಡಿಕೊಂಡು ಉಪಚರಿಸಿದರು ಆದರಭಾವದಲ್ಲಿ. ಮನೆಯಲ್ಲಿ ಏರಿದವು ಮೂರು ತಲೆಗಳು. ನಾಲ್ಕು ದಿನಗಳ ನಂತರ ತಡೆಯಲಾರದೆ ಕೇಳಿದ-

"ಇನ್ನೆಷ್ಟು ದಿನ ಆ ಮೂವರೂ ಇಲ್ಲಿರ್‍ತಾರೆ? ಸದಾನಂದ ಮಾವ ಬಂದು ಕರೆದೊಯ್ದರೆ ನಮಗೂ ನಿಶ್ಚಿಂತೆ."

"ಅವಳಿಗೆ ಆಶ್ರಯ ನೀಡಲು ಯಾರೂ ಸಿದ್ಧರಿಲ್ಲ. ಸುಖದ ದಿನಗಳಲ್ಲಿ ಎಲ್ಲರೂ ಹತ್ತಿರ ಬರುತ್ತಾರೆ. ದುಃಖದ ದಿನಗಳಾದರೆ ಕಣ್ಣೆತ್ತಿ ನೋಡುವವರು ಒಬ್ಬರೂ ಇಲ್ಲ. ನೀನು ಇಷ್ಟು ಕಟುಕನಾಗಬಾರದು!"

ಅನಂತರ ದೇವ ಕೆಣಕಲಿಲ್ಲ. ಆದರೆ ಈ ಅಸಮಾಧಾನ ಒಳಗೊಳಗೆ ಹೊಗೆಯಾಡುತ್ತ ಹೊರಗೆ ಬಾರದೆ ಹೋಯಿತು. ಈ ಮಧ್ಯೆ ಸುನೀತಿಯ ಕಾಗದ ಬರಲಿಲ್ಲ, ಅವಳೂ ಬರಲಿಲ್ಲ. ಯಾವಾಗಲೂ ಕೇವಲ ಎಂಟು ದಿನಗಳಿಗೆ ಹೋಗಿ ಬರುವವಳು

ಈ ಸಲ ಸುದ್ದಿಯಿಲ್ಲ. ತಾನೇ ಹೋಗಿ ಕರೆತರುವುದು ಲೇಸೆಂದು ಹೊರಟು ಬಂದ ಉಪ್ಪಿನಂಗಡಿಗೆ.

ಅವನಿಗೆ ತಿಳಿದಿತ್ತು, ಸುನೀತಿ ಈಗಾಗಲೆ ತನ್ನ ಬಗ್ಗೆ ತವರುಮನೆಯಲ್ಲಿ ಸುದ್ದಿ ಹೇಳಿರುತ್ತಾಳೆ. ಅವರೆಲ್ಲ ತನ್ನನ್ನು ಯಾವ ಭಾವದಲ್ಲಿ ಸ್ವಾಗತಿಸಬಹುದು ಎಂಬ ಅನುಮಾನ. ಅವರೀಗ ಯಾವ ಮಾತು ಹೇಳಿದರೂ ಕೇಳಿಸಿಕೊಳ್ಳಲು ತಾನು ಸಜ್ಜಾಗ ಬೇಕು. ಏಕೋ ಅಧೀರನಾದ ತನ್ನಲ್ಲೇ.

ಆದರೆ ನಿರೀಕ್ಷೆ ಮೀರಿ ಎಂದಿಗಿಂತಲೂ ಹೆಚ್ಚಿನ ರಾಜೋಪಚಾರ ದೊರೆಯಿತು ಮಾವನ ಮನೆಯಲ್ಲಿ. ಯಾವ ಹೊಸ ವಿಷಯಗಳ ವಿಚಾರ ವಿನಿಮಯವಾಗಲಿಲ್ಲ. ಕೃಷ್ಣ ತಂದೆಯನ್ನು ನೋಡಿದಾಕ್ಷಣ ಅವನ ತೊಡೆಯೇರುತ್ತ, "ಅಪ್ಪ, ಮನೆಗೆ ಕರ್ಕೊಂಡು ಹೋಗು" ಎಂದ. "ವಿಷ್ಣುವಿಗೆ ಎರಡು ದಿನಗಳಿಂದ ಜ್ವರ, ಕೆಮ್ಮು. ಇವತ್ತು ಸ್ವಲ್ಪ ವಾಸಿ" ಎನ್ನುತ್ತ ಮಾವ ಅವನನ್ನು ಎತ್ತಿ ತಂದು ಅವನ ಕೈಗಿತ್ತರು. ಅನೇಕ ದಿನಗಳಿಂದಲೂ ಮಕ್ಕಳ ಮುಖ ಕಾಣದೆ ನೊಂದಿದ್ದ ದೇವ ಅವರಿಬ್ಬರನ್ನೂ ಎತ್ತಿ ಮುದ್ದಾಡಿದ. ಕಣ್ಣುಗಳು ಸೂಕ್ಷ್ಮವಾಗಿ ನಿರೀಕ್ಷಿಸಿದವು ಒಳಬಾಗಿಲನ್ನು.

"ನಿಮ್ಮಿಬ್ಬರಲ್ಲಿಯೂ ಏನಪ್ಪ ವಿರಸ?" ಅಳಿಯನ ಬದಿಯಲ್ಲಿ ಕುಳಿತು ಕೇಳಿದರು ಮಾವ, "ಇಲ್ಲಿಗೆ ಬಂದ ಲಾಗಾಯ್ತು ಸುನೀತಿ ಒಂದು ತರಹ ಇದ್ದಾಳೆ. ನಾನೇ ಇವರುಗಳನ್ನು ನಿಮ್ಮಲ್ಲಿಗೆ ಕರೆದುಕೊಂಡು ಬರೋಣ ಎಂದುಕೊಂಡಿದ್ದೆ."

ಮಾವನ ನುಡಿಕೇಳಿ ಆನಂದದಿಂದ ಪುಳಕಿತನಾದ ದೇವ. ಬುದ್ಧಿವಂತೆ ಸುನೀತಿ ತನ್ನನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದಾಳೆ. ರಾತ್ರೆ ಊಟದ ಹೊತ್ತಿನಲ್ಲಿಯೂ ಅವಳು ಎದುರುಬಾರದಿದ್ದಾಗ ತಾಯಿ ಒಳಗಿನಿಂದ ಗದರಿಕೊಳ್ಳುವುದೂ ಕೇಳಿಸಿತು.

"ನಮ್ಮ ಹುಡುಗಿಗೆ ಮೊದಲಿನಿಂದಲೂ ಹಠ ಜಾಸ್ತಿ." ಬಡಿಸುತ್ತ ಅಂದರು ಸುನೀತಿಯ ತಾಯಿ, "ನೀನೇ ಸುಧಾರಿಸಿಕೊಳ್ಳಬೇಕು. ನಿನ್ನ ಸಂಗಡವೂ ಮನೇಲಿ ಹೀಗಿರ್ತಾಳಾ?"

ದೇವ ತುಟಿಯಂಚಿನಲ್ಲಿ ನಕ್ಕ, "ಏನಿಲ್ಲ ಅತ್ತೆ, ಅವಳು ಹೀಗೆ ಮುನಿಸುಗೊಳ್ತಾ ಇದ್ದರೇ ನನಗಿಷ್ಟ. ನನ್ನ ಹತ್ತಿರವಲ್ಲದೆ ಅವಳು ಇನ್ಯಾರ ಹತ್ತಿರ ಹಠ ಮಾಡಬೇಕು ಹೇಳಿ?"

ಅಳಿಯನ ಆತ್ಮೀಯ ಮಾತಿನಿಂದ ನಗುವಿನ ಅಲೆ ಎದ್ದಿತು ಊಟದ ಮಧ್ಯೆ. ರಾತ್ರೆ ಬಹಳ ತಡವಾಗಿ ಮಲಗಲೆಂದು ಬಂದು ಸುನೀತಿಗಾಗಿ ಎಚ್ಚರವಾಗಿ ಕುಳಿತಿದ್ದ ದೇವ. ಇಲ್ಲಿಗೆ ಬಂದಮೇಲೆ ಅವಳು ತುಂಬ ಇಳಿದುಹೋಗಿದ್ದಾಳಲ್ಲ ಎಂದೆನಿಸಿ ವ್ಯಥೆಯಾಗಿ ಹತ್ತಿರಕ್ಕೆ ಕರೆದ.

"ಬಹಳ ದಿನಗಳಾದವಲ್ಲ ಮನೆಬಿಟ್ಟು ಬಂದು. ನೀನು ಯಾವಾಗ ಬರುತ್ತೀ ಅಂತ ಕಾಯ್ತಾ ಇದ್ದಾಳೆ ಅಮ್ಮ. ನನಗೂ ನೀನಿಲ್ಲದೆ ಜೋಡು ಹಾಸಿಗೆಯಲ್ಲಿ ಒಬ್ಬನೇ ಮಲಗಿ ಬೇಸರ ಬಂದಿದೆ."

"ನಾನೀಗ ಮನೆಗೆ ಬರಲು ಸಿದ್ಧಳಿಲ್ಲ."

"ಸಿದ್ಧಳಿಲ್ಲ!" ಬೆರಗಾಗಿ ಅವಳ ಕೈ ಹಿಡಿದ, "ಇಲ್ಲೇ ಇರ್ತಿಯಾ? ನೋಡಿದವರು ಏನಂದಾರು ಹೇಳು. ನನ್ನ ಮೇಲೆ ನಿನ್ನ ಅಪ್ಪ ಅಮ್ಮನಿಗೆ ತುಂಬು ಅಭಿಮಾನ. ಇವನೊಬ್ಬ ಅಯೋಗ್ಯ ಅಳಿಯ ಎಂದು ಅವರು ದೂರುವಂತಾಗಬಾರದು. ನಾಳೆ ಬೆಳಗ್ಗೆ ಹೊರಟುಬಿಡೋಣ. ನನಗೆ ವಿಪರೀತ ಕೆಲಸವಿದೆ."

ನಿಧಾನವಾಗಿ ಅವಳ ಹೆಗಲ ಮೇಲೆ ಕೈಯ್ಯಿರಿಸಿದ. ಆದರೆ ಅವನ ಸ್ಪರ್ಶ ಅವಳಲ್ಲಿ ಯಾವ ಹೊಸ ಸಂವೇದನೆಯನ್ನೂ ಉಂಟುಮಾಡಲಿಲ್ಲ. ಮೊದಲಾದರೆ ಅವನಿಂದ ಎರಡು ದಿನ ಅಗಲಿದರೆ ಸಾಕು, ತಾನಾಗಿಯೇ ಓಡಿಬಂದು ಅವನ ತೋಳತೆಕ್ಕೆಯಲ್ಲಿ ಬಂಧಿತಳಾಗುತ್ತಿದ್ದಳು. ಈ ದಿನ ಅವನು ಹತ್ತಿರ ಬಂದರೂ, ತನ್ನ ಬಿಸಿಯಪ್ಪುಗೆಯಲ್ಲಿ ಬಂಧಿಸಿದರೂ ಯಾವ ಹೊಸ ಚೇತನವೂ ತುಂಬಲಿಲ್ಲ ಅವಳಲ್ಲಿ. ಅವನ ಮಾತುಗಳು ಉತ್ಸಾಹವನ್ನೂ ಕೊಡಲಿಲ್ಲ. ಒಂದು ವಿಧವಾದ ಆಲಸಿಕೆಯಿಂದ ನರನಾಡಿಗಳೆಲ್ಲ ಸೆಟೆದುಕೊಂಡು "ಬಿಡಿ ನನ್ನನ್ನು..." ಎನ್ನುತ್ತ ಉದ್ವೇಗದಿಂದ ಕಂಪಿಸಿ ಸರಿದಳು ದೂರಕ್ಕೆ.

ಅವಳ ಹೊಸ ಸ್ವಭಾವ ಅನಿರೀಕ್ಷಿತವಾದರೂ ಆಘಾತವುಂಟುಮಾಡಲಿಲ್ಲ. ಅವನು ದೀರ್ಘವಾಗಿ ನೋಡಿದ ಅವಳತ್ತ "ಬೆಳಗ್ಗೆ ಹೊರಡುವ ಮುನ್ನ ಇಲ್ಲದ ಹಗರಣ ಬೇಡ. ಕೃಷ್ಣನಿಗೆ ನಾನಿಲ್ಲದೆ ಬೇಸರಬಂದಿದೆ. ನನಗೂ ನೀವಿಲ್ಲದೆಯಿದ್ದರೆ ಹೊತ್ತು ಹೋಗದು. ನನ್ನ ಜೊತೆಯೇ ಹೊರಟು ಸಿದ್ಧಳಾಗು!" ಕಟ್ಟಪ್ಪಣೆ ಮಾಡುವಂತಿತ್ತು ಅವನ ಧ್ವನಿ.

ಸುನೀತಿಗೆ ಎಲ್ಲಿಲ್ಲದ ತಳಮಳ. ತನಗೆ ಏನಾಗಿದೆ? ಯಾವ ವಿಷಯ ಹೇಳಲು ತವರು ಮನೆಗೆ ಬಂದಿದ್ದಳೋ ಅದನ್ನು ಹೇಳಲಾಗಲಿಲ್ಲ ಇನ್ನೂ. ತಂದೆ ತಾಯಿಯ ಮುಖ ನೋಡಿದಾಗಲೆಲ್ಲ ಬಾಯಿ ಕಟ್ಟಿಹೋಗಿದೆ. ತಾಯಿ ಕೇಳುತ್ತಿದ್ದರು, "ಯಾಕೆ ಸುನೀತಿ ಮಂಕಾಗಿದ್ದಿ? ಅಳ್ತಾ ಇದ್ದಿ? ಮೈಯಲ್ಲಿ ಹುಷಾರಿಲ್ಲವೇ?" ತಂದೆ ಅಳಿಯನ ಗುಣಗಾನ ಮಾಡುತ್ತ "ಇನ್ನೇನು ದೇವನ ಕಾರುಭಾರ? ಹೊಸ ಕೃಷಿ ಏನು ಮಾಡಿಸಿದ್ದಾನೆ?" ಎಂದೂ ಕೇಳುವವರು. ಅವರಿಬ್ಬರೂ ಅಳಿಯನಿಗೆ ಕೊಡುವ ಗೌರವ ಅಪಾರ. ಮುರಳೀಧರನಿಗೂ, ಅವನಿಗೂ ಎಂದೂ ಭೇದಭಾವ ತೋರಿಸಿದವರಲ್ಲ. ಇಂತಹ ತಂದೆತಾಯಿಯ ಮನದಲ್ಲಿ ತಾನೊಂದು ಬಿರುಗಾಳಿ ಎಬ್ಬಿಸಬೇಕೇ? ಎತ್ತರಕ್ಕೇರಿದ ದೇವನನ್ನು ತನ್ನ ಕೈಯ್ಯಾರೆ ಪಾತಾಳಕ್ಕೆ ನೂಕಬೇಕೇ?

ಮನಸ್ಸಿನ ತುಮುಲವನ್ನು ಯಾರೊಂದಿಗೂ ಹಂಚಿಕೊಳ್ಳದೆ ನುಂಗಿಕೊಂಡಳು ತನ್ನಲ್ಲೆ. ಆದರೆ ಎಷ್ಟು ದಿನ ಹೀಗೆ? ಎಷ್ಟು ದಿನ ತಾನು ಮಕ್ಕಳೊಡನೆ ಇಲ್ಲಿರಬೇಕು ಎಂಬ ಪ್ರಶ್ನೆ ಕಾಡಿದಾಗ ನಡುಗಿದ್ದಾಳೆ ತನ್ನಲ್ಲೆ. ತನಗಿರುವುದು ಎರಡೇ ದಾರಿ. ಒಂದು ಸತ್ಯ ಸಂಗತಿ ತಿಳಿಸಿ ತವರುಮನೆಯಲ್ಲಿ ತಾನು ಉಳಿಯುವುದು. ಎರಡನೆಯದು ಮೌನ ವಾಗಿ ದೇವನ ಜೊತೆ ಕಲ್ಯಾಣಪುರಕ್ಕೆ ಹೊರಟು ಹೋಗುವುದು. ಆದರೆ ಹೇಗೆ ಹೋಗಲಿ

ಅವನ ಜೊತೆ? ಅವನು ಮೊದಲಿನ ದೇವನಲ್ಲ. ಗಾಯತ್ರಿ ಉಚ್ಚರಿಸಿದಾಕ್ಷಣ ಅವನು ನಮ್ಮ ಗಂಡಸರಂತೆ ಆಗಲಾರ. ಜನಿವಾರ ಧರಿಸಿದ ಮಾತ್ರಕ್ಕೆ ನಮ್ಮವನಾಗಲಾರ.

ಯೋಚಿಸುತ್ತಿದ್ದ ಸುನೀತಿ ಅಷ್ಟೇ ದೀರ್ಘವಾಗಿ ಅವನನ್ನು ನೋಡುತ್ತ ಮುಖ ತಿರುಗಿಸಿಕೊಂಡಾಗ ತುಂಬಿಬಂದಿದ್ದವು ಅವಳ ಎರಡೂ ಕಣ್ಣುಗಳು.

ಮರುದಿನ ಬೆಳಗ್ಗೆ ದೇವ ಹಾಸಿಗೆ ಬಿಟ್ಟೇಳುವ ಮೊದಲೇ ಸುನೀತಿ ಮಕ್ಕಳೊಂದಿಗೆ ಹೊರಟು ಸಿದ್ಧಳಾಗಿದ್ದಳು. ದೇವನ ಹೃದಯ ತುಂಬಿಹೋಯಿತು, ಹೊಸ ಗೆಲುವಿನ ಉತ್ಸಾಹದಲ್ಲಿ. ಅವಳ ತಂದೆತಾಯಿಯತ್ತ ಹೆಮ್ಮೆಯಿಂದ ನೋಡಿದ. ಜಾಹ್ನವಿ ಮತ್ತು ಮಕ್ಕಳು ಮನೆಗೆ ಬಂದುಳಿದಿರುವ ವಿಷಯ ಹೇಳುತ್ತ ಅವನೆಂದ-

"ಮನೆಗೆ ಯಾರೇ ಬಂದಿರಲಿ, ಎಷ್ಟೇ ಜನರಿರಲಿ, ನನಗೆ ನಿಮ್ಮ ಮಗಳು, ನನ್ನ ಈ ಮಕ್ಕಳು ಮನೇಲಿಲ್ಲದಿದ್ದರೆ ಮನಕ್ಕೆ ನೆಮ್ಮದಿಯಿಲ್ಲ!"

## ೧೦

ಮನೆಗೆ ಬಂದಾಗ ಸುಜಾತೆಯ ಕಾಗದ ಇದಿರು ನೋಡುತ್ತಿತ್ತು. "ನಿಮ್ಮ ಗದ್ದೆ, ತೋಟ, ಹಸಿರು ಬೆಟ್ಟದ ಸಾಲು, ಹೊಳೆಯಂಚು ಇವುಗಳಿಂದ ಆಕರ್ಷಿತವಾದ ನನ್ನ ಮನಸ್ಸು ಅಲ್ಲೇ ವಿಹರಿಸುತ್ತಿದೆ ಈಗಲೂ. ಇನ್ನೊಮ್ಮೆ ಬರುವ ಆಸೆ. ಧೀರೇಂದ್ರ ಮೆಹತಾ ಮತ್ತು ಅವರ ಹೆಂಡತಿ ಈವರೆಗೂ ಹಳ್ಳಿ ನೋಡಿಲ್ಲವಂತೆ. ಅವರೂ ಬರುವ ಆಸೆ ವ್ಯಕ್ತಪಡಿಸಿದ್ದಾರೆ. 'ಚಳಿಗಾಲದ ಕೊನೆಯ ದಿನಗಳಲ್ಲಿ ಹವೆ ಮತ್ತು ಪ್ರಕೃತಿ ಸೌಂದರ್ಯ ಚೆನ್ನಾಗಿರುತ್ತದೆ, ಆಗ ಹೋಗೋಣ' ಎಂದಿದ್ದೇನೆ. ನಾವೆಲ್ಲರೂ ಬರುವುದು ನಿಮಗೆ ತೊಂದರೆಯಾದರೆ ಕಾಗದ ಬರೆದು ತಿಳಿಸಿ" ಎಂದು ಬರೆದಿದ್ದಾಳೆ.

ಸುಜಾತೆಯ ಆತ್ಮೀಯ ಕಾಗದ ನೋಡಿ ದೇವನ ಕಣ್ಣುಗಳು ಹೆಮ್ಮೆಯಿಂದ ಹೊಳೆದವು. ಈ ಹಳ್ಳಿಮೂಲೆಯನ್ನೂ ಸುಜಾತೆ ಮೆಚ್ಚಿ ಕೆಲವರನ್ನು ಕರೆತರುವ ಆಸೆ ವ್ಯಕ್ತಪಡಿಸಿದ್ದಾಳೆ. ಇದಕ್ಕಿಂತ ಬೇರೆ ಸಂತೋಷ ಬೇಕೇ? ನಾಲ್ಕಲ್ಲ ನೂರು ಜನ ಬಂದರೂ ತನಗೆ ಕಷ್ಟವಿಲ್ಲ. ಸುನೀತಿಗೂ ಸಂತಸ ತಂದಿತ್ತು ಈ ಕಾಗದ.

"ಇವತ್ತೇ ಹುಬ್ಬಳ್ಳಿಗೆ ಆಹ್ವಾನದ ಕಾಗದ ಬರೆದು ಹಾಕಿ" ಎಂದವಳು ಸುತ್ತಲೂ ಕಣ್ಣಾಡಿಸಿದಳು, "ಅವರ ಜೊತೆ ಮುರಳೀಧರನೂ ಬರಬಹುದು. ಅವನಿಗೆ ಈ ಮುರುಕು ಮನೆ ಇಷ್ಟವಾಗುತ್ತೋ ಇಲ್ಲವೊ. ಎಲ್ಲರಿಗೂ ಇಲ್ಲಿ ಸ್ಥಳ ಸಾಲದು."

ನಿಜ, ಜಾಹ್ನವಿ ಬಂದ ಮೇಲೆ ಮನೆ ಇನ್ನಷ್ಟು ಇಕ್ಕಟ್ಟಾಗಿದೆ. ಮಹಡಿಯಿಲ್ಲದ ಆ ಮನೆಯ ಹಲಗೆ ಅಟ್ಟದ ಮೇಲೆ ಒಂದು ಸಣ್ಣ ಸಾಮಾನುಗಳ ಕೋಣೆಯಿತ್ತು. ಈಗ ಅದು ದೇವನ ಮಲಗುವ ಕೋಣೆ. ವಿಷ್ಣುವಿನ ತೊಟ್ಟಿಲನ್ನೂ ಅಲ್ಲೇ ಕಟ್ಟಲಾಗಿದೆ. ಬಂದ

ದಿನವೇ ಕೃಷ್ಣ ತಮ್ಮ ಮಲಗುವ ಕೋಣೆ ನೋಡಿ ಕುಣಿದಾಡಿದ್ದ ಸಂಭ್ರಮದಲ್ಲಿ. ಆದರೆ ಸುನೀತಿಯಿಂದ ಯಾವ ಪ್ರತಿಕ್ರಿಯೆಯೂ ಬರಲಿಲ್ಲ.

"ನನ್ನಿಂದ ನಿಮಗೆ ತೊಂದರೆಯಾಗಬಾರದು. ನಾನೇ ಮಕ್ಕಳ ಜೊತೆ ಅಟ್ಟದ ಕೋಣೆಯಲ್ಲಿ ಮಲಗ್ತೇನೆ" ಸಂಕೋಚದಿಂದ ಜಾಹ್ನವಿ ಮುದುಡಿದರೂ ಒಪ್ಪಿಕೊಂಡಿರಲಿಲ್ಲ ದೇವ. ತಮ್ಮ ನೆರಳು ಬಯಸಿ ಬಂದ ಹೆಣ್ಣುಮಗಳಿಗೆ ಯಾವ ಕಷ್ಟವಾಗಬಾರದೆಂಬ ಉದಾರತನ ಅವನದು.

ಈಗ ಸುನೀತಿ "ಸ್ಥಳ ಸಾಲದು" ಎಂದಾಗ ನಿಜವೆಂದು ಮನ ಒಪ್ಪಿದರೂ ಮುಖ ತುಂಬಾ ನಗುವೆಳೆದು ಅಂದ.

"ಅದಕ್ಕೇನಾದರೂ ವ್ಯವಸ್ಥೆ ಮಾಡೋಣ. ಮನೆ ಸಣ್ಣದಾದರೂ ನಮ್ಮ ಮನಸ್ಸು ದೊಡ್ಡದಾಗಿದೆ!"

ಆ ತಿಂಗಳು ಮನೆಯಲ್ಲಿ ಸಣ್ಣದಾಗಿ, ಚೊಕ್ಕವಾಗಿ ನಡೆದ ಸತ್ಯನಾರಾಯಣ ಪೂಜೆಗೆ ಸುನೀತಿ ದೇವನೊಂದಿಗೆ ಸಹಕರಿಸಲಿಲ್ಲ. ಎರಡು ದಿನವೂ ಅವಳ ಮುಖ ಮೋಡ ಕವಿದ ಚಂದ್ರನಂತೆ. ಎಲ್ಲೋ ನೋಡುತ್ತಾಳೆ. ಆಗಾಗ ಕಣ್ಣೀರು. ಯಾರೊಡನೆಯೂ ಮಾತಿಲ್ಲ. ಕೃಷ್ಣನ ಮೇಲೆ ವಿನಾ ಕಾರಣ ಕೋಪ. "ನಗ್ತಾ ಇರು ಮಹಾರಾಯ್ತೀ" ದೇವ ವಿನಯದಿಂದ ಬೇಡಿದರೂ ಪ್ರಯೋಜನವಿಲ್ಲ. ಜಾಹ್ನವಿಗೆ ಸಂಕಟ. ಎಲ್ಲಿಂದಲೋ ಬಂದ ತಾನು ಇವಳಿಗೆ ಹೊರೆಯಾದೆನೆಂಬ ಅನುಮಾನ. ಸುನೀತಿಯ ಪರಿಚಯ ಅವಳಿಗೆ ಹೊಸದು. ಅವಳು ತವರು ಮನೆಯಿಂದ ಬರುವ ಮೊದಲೇ ನಾಗಮ್ಮ ಸೊಸೆಯನ್ನು ಹೊಗಳಿ "ತುಂಬಾ ಮಾತುಗಾರ್ತಿ" ಎಂದಿದ್ದರು. ಆದರೆ ಸುನೀತಿ ಅವಳೊಂದಿಗೆ ಎಲ್ಲೋ ನಾಲ್ಕು ಮಾತುಗಳನ್ನಾಡಿರಬಹುದು ಅಷ್ಟೇ. ಮನೆ ಕೆಲಸಗಳನ್ನು ತಾನೇ ವಹಿಸಿಕೊಂಡಿದ್ದ ಜಾಹ್ನವಿ ಸುನೀತಿಯನ್ನು ಪ್ರಸನ್ನಪಡಿಸಲು ಒದ್ದಾಡಿದರೂ ಅವಳಿಂದ ಒಂದೇ ಒಂದು ನಗುವಿನ ಉತ್ತರ ಪಡೆಯಲಿಲ್ಲ. 'ವಿಧವೆಯಾದರೆ ಇದೇ ಹಣೆಬರಹ. ಎಷ್ಟಾದರೂ ಹಂಗಿನ ತುತ್ತು' ತನ್ನನ್ನೇ ಹಳಿದುಕೊಂಡ ಜಾಹ್ನವಿ ಆ ದುಃಖವನ್ನೂ ನುಂಗಿಕೊಂಡಳು ಮೌನವಾಗಿ.

ಶಶಿಧರ ಇತ್ತೀಚೆಗೆ ಇನ್ನಷ್ಟು ಸೋಮಾರಿಯಾಗಿ ಯಾರಿಗೂ ಹೆದರದೆ, ಯಾರನ್ನೂ ಲಕ್ಷ್ಯಕ್ಕೆ ತಂದುಕೊಳ್ಳದೆ ಸ್ವತಂತ್ರವಾಗಿ ತಿರುಗುವ ಹಕ್ಕಿ. ಗದ್ದೆ, ತೋಟ, ಸಮೀಪದ ಕಾಡಿನಲ್ಲಿ ಕಂಡವರನ್ನೆಲ್ಲ ಚೇಷ್ಟೆ ಮಾಡುವುದು ಇತ್ತೀಚೆಗೆ ಬೆಳೆದ ಅವನ ದುರ್ಬುದ್ಧಿ. ದೇವನ ನಯವಿನಯದ ಮಾತುಗಳಿಗೆ ಸೊಪ್ಪು ಹಾಕಿದವನಲ್ಲ. ತಿನ್ನಲು ಬಕಾಸುರ, ನಿದ್ರೆಯಲ್ಲಿ ಕುಂಭಕರ್ಣ. ದೇವನಿಗೆ ಅವನೊಬ್ಬ ಹೊರೆ. ಆದರೆ ನಾಗಮ್ಮನಿಗೆ ಈಗಲೂ ಅವನನ್ನು ಕಂಡರೆ ಉಕ್ಕಿಹರಿಯುತ್ತದೆ ಪ್ರೀತಿಯ ಹೊಳೆ.

ಈ ದಿನಗಳಲ್ಲಿ ಬಂದ ಸದಾನಂದ ಮಗನ ಪುಷ್ಟಿಯಾದ ಶರೀರ ನೋಡಿ ಸಂತಸಗೊಂಡರೂ ಇನ್ನೂ ಕೃಷಿಕಾರ್ಯಕ್ಕೆ ಕೈಹಾಕದೆ ಸುಮ್ಮನಿದ್ದುದು ನೋಡಿ ಗದರಿಕೊಂಡ.

"ಹಣ ಎಲ್ಲಿದೆ ಅಪ್ಪಾ" ತಿರುಗಿಬಿದ್ದು ಕೇಳಿದ ಮಗ, "ವಾಸುದೇವನಿಗೆ ತನ್ನ ಎಲ್ಲಾ ಕೆಲಸಗಳಿಗೂ ಹಣವಿದೆ. ನಾನು ಕೇಳಿದರೆ ಪುಡಿಗಾಸು ಬಿಚ್ಚಿದವನಲ್ಲ. ಪುಣ್ಯಾತ್ಮ ಅದೇನು ಮಾಡುತ್ತಾನೋ ದಿನವೆಲ್ಲ ಮೈ ಕೈ ಎಲ್ಲಾ ಮಣ್ಣು ಮಾಡಿಕೊಂಡು ಬಹಳ ಕೆಲಸವಿರುವವನಂತೆ ಓಡಾಡ್ತಾ ಇರ್ತಾನೆ" ಎಂದ ತಿರಸ್ಕಾರದಲ್ಲಿ. ಅವನಂದುಕೊಂಡಿದ್ದಾನೆ, ದೇವ ಹಣವನ್ನೆಲ್ಲ ಬ್ಯಾಂಕ್‌ನಲ್ಲಿ ಕೂಡಿಟ್ಟಿದ್ದಾನೆಂದು.

ನಿಜವಾಗಿಯೂ ದೇವನಿಗೆ ಈ ವರ್ಷ ಆರ್ಥಿಕಮುಗ್ಗಟ್ಟು ಬಾಧಿಸುತ್ತಿದೆ. ಶಶಿಧರ, ಜಾಹ್ನವಿ ಮತ್ತು ಅವಳ ಮಕ್ಕಳು ಹೊರೆ ಎನಿಸದಿದ್ದರೂ ಅವರ ಖರ್ಚಿನ ಬಾಲ ಬೆಳೆಯುತ್ತಿದೆ. ಹರಿಜನ ಸಂಘದ ಕೆಲಸಗಳಿಗೆ ಖರ್ಚು ಮಾಡುವಾಗಲೂ ಯೋಚಿಸಬೇಕು. ಇದರೊಂದಿಗೆ ಸಂಘದ ಮೊದಲಿನ ಚಟುವಟಿಕೆ, ಆಸಕ್ತಿ ಶಿಥಿಲಗೊಳ್ಳುತ್ತಿದೆ. ಈಶ್ವರಯ್ಯನವರ ಸ್ಥಾನ ಅವನು ತುಂಬಿದರೂ ಹರಿಜನರ ಮೇಲೆ ಪರಿಣಾಮಕಾರಿ ಪ್ರಭಾವಬೀರಲು ಅಸಮರ್ಥ. ದುಗ್ಗ ಮತ್ತು ಐತರ ನಿರ್ಗಮನದಿಂದ ಒಡಕು ಹೆಚ್ಚುತ್ತಿದೆ, ಈ ಕಾರಣವೋ ಅಥವಾ ಇಂದಿನ ಯುವಜನತೆಗೆ ಸಂಘದ ಕೆಲಸ ನಾಟಕೀಯವಾಗಿ ಕಂಡಿತೋ... ಅಂತೂ ಪ್ರತಿದಿನದ ಭಜನೆ ವಾರಕ್ಕೆರಡರಂತೆ ನಡೆಯಿತು. ಹಿಂದಿನಿಂದ ಕಟು ಟೀಕೆಗಳು. ಸಂಘದ ಗೋಡೆಯ ಮೇಲೆ ಅಶ್ಲೀಲ ಶಬ್ದಗಳನ್ನು ಗೀಚಿಟ್ಟರು ಯಾರೋ ಕೆಲವರು. ಹೆಂಡ ಕುಡಿಯುವುದಿಲ್ಲವೆಂದು ಪ್ರತಿಜ್ಞೆ ಮಾಡಿದವರೂ ಮೆಲ್ಲನೆ ಅತ್ತ ಹೆಜ್ಜೆಹಾಕಿದರು. ಕಂಠಪೂರ್ತಿ ಕುಡಿದು ರಾತ್ರೆ ಶಾಲೆಗೆ ಬಂದ ಇಬ್ಬರನ್ನು ದೇವ ಒಳಗೆ ಕರೆದುಕೊಳ್ಳದಿದ್ದಾಗ, "ಇವನೊಬ್ಬ ಉದ್ಧಾರಕ" ಎಂದು ಗೇಲಿಮಾಡಿ ನಕ್ಕರು. ಮತ್ತೊಂದು ದಿನ ಅಪರಿಚಿತನೊಬ್ಬನ ಶರಾಬು ಹಂಡೆ ಪ್ರತ್ಯಕ್ಷವಾಯಿತು ಸಂಘದ ಎದುರು. ಸಂಜೆ ಭಜನೆ ಸಮಯದಲ್ಲಿ ಎಲ್ಲರ ಲಕ್ಷ್ಯ ಹಂಡೆಯ ಮೇಲೆ. ಸಂಘದ ಎದುರು ಶರಾಬು ಮಾರದಂತೆ ತಡೆಗಟ್ಟಲು ದೇವ ಮಾಡಿದ ಪ್ರಯತ್ನಗಳೆಲ್ಲ ನಿಷ್ಫಲ.

ಯಾರೆಷ್ಟು ತಿದ್ದಿದರೂ ತಮ್ಮನ್ನು ತಾವೇ ತಿದ್ದಿಕೊಳ್ಳದಿದ್ದರೆ ಎಲ್ಲ ಪ್ರಯತ್ನಗಳೂ ನೀರ ಮೇಲಿನ ಹೋಮ ಮಾಡಿದಂತೆ ಎನಿಸಿತು ದೇವನಿಗೆ. ಸಂಘ ಅವನ ಕಣ್ಣೆದುರು ಶಿಥಿಲಗೊಳ್ಳುತ್ತ ಅದು ತನ್ನ ಶ್ರೇಷ್ಠತೆಗೆ ತಾನೇ ಮಸಿ ಬಳಿಯತೊಡಗಿತು.

ಈ ಮಧ್ಯೆ ಅಡಿಕೆ ತೋಟದಲ್ಲಿ ಕಳ್ಳರ ಬಾಧೆ. ದೇವ ಜಾಗ್ರತೆಯಲ್ಲಿ ತೋಟದ ಸುತ್ತಲೂ ಮುಳ್ಳು ಬೇಲಿ ಹಾಕಿಸಿದ್ದಲ್ಲದೆ ತೆಂಗಿನ ಮರಗಳಿಗೆ ಮುಳ್ಳು ಕಟ್ಟಿಸಿದ. ರಾತ್ರೆ ತೋಟದಲ್ಲಿ ಕಾವಲು ಮಲಗಿಸಿದ ಇಬ್ಬರನ್ನು. ಆದರೂ ಅಡಿಕೆ, ತೆಂಗು ಅಷ್ಟಿಷ್ಟು ನಾಪತ್ತೆ.

"ಶಶೀ, ಕೆಲಸವಿಲ್ಲದೆ ಮನೇಲಿದ್ದೀಯಾ. ಯಾರು ಕದೀತಾರೆ ಅಂತ ನೋಡಬಾರದೇ. ಅಷ್ಟಾದರೂ ಉಪಕಾರ ಮಾಡು." ಕೇಳಿಕೊಂಡ ಶಶಿಧರನನ್ನು.

"ಆ ಕೆಲಸ ನನಗಿರಲಿ. ನನ್ನ ಕಣ್ಣು ತಪ್ಪಿಸಿ ಯಾರು ಕದೀತಾರೆ ನೋಡೋಣ" ಎಂದ ಶಶಿಧರ ಗರ್ವದಲ್ಲಿ ಎದೆಯುಬ್ಬಿಸಿ.

ಒಂದು ಸಾಯಂಕಾಲ ದೇವ ಒಬ್ಬನೇ ಹಿಂದಿರುಗಿ ಬರುತ್ತಾ ಇದ್ದ ಬಾಳೆ ತೋಟದಿಂದ. ಬಿಳಿ ಮೋಡದಿಂದ ತುಂಬಿದ ಆಗಸದ ಪಶ್ಚಿಮ ಭಾಗದಲ್ಲಿ ಮೂಡಿದ್ದ ಕೆಂಬಣ್ಣವನ್ನು ನೋಡುತ್ತ ನಡೆದವನಿಗೆ ಯಾರದೋ ಅಸ್ಪಷ್ಟ ಸ್ವರ ಕೇಳಿಸಿದಂತಾಗಿ ಗಕ್ಕನೆ ನಿಂತುಬಿಟ್ಟ. ಬಿದಿರು ಮೆಳೆಗಳ ಆಚೆ, ಕಾಡು ಪೊದೆಯೊಂದರ ಹಿಂದೆ ಯಾರದೋ ನೆರಳಿನ ಛಾಯೆ. ಸರಸರನೆ ಅತ್ತ ನಡೆದು ನೋಡುತ್ತಾನೆ, ಒಬ್ಬ ತನಿಯ, ಇನ್ನೊಬ್ಬ ಅವನ ಬಲಗೈ ಬಂಟ ಕರಿಯ. ಇಬ್ಬರೂ ಗುದ್ದಾಡಿಕೊಳ್ಳುತ್ತಿದ್ದಾರೆ. ಶೀಘ್ರಕೋಪಿಯಾದ ಕರಿಯ ತನಿಯನನ್ನು ಗುದ್ದುತ್ತ ಅಬ್ಬರಿಸುತ್ತಿದ್ದಾನೆ.

"ಮಾಡು ನಿನ್ನ ಪ್ರಮಾಣ. ಹಾಕು ನಿನ್ನ ಆಣೆ. ನಡೆ, ದೇವರ ಮುಂದೆ ಸಾಕ್ಷಿ ಹೇಳು."

ವಿಷಯ ಅರ್ಥವಾಗದಿದ್ದರೂ ದೇವ ಮೊದಲು ಕರಿಯನನ್ನು ಹಿಡಿದು ತನ್ನತ್ತ ಎಳೆದುಕೊಂಡ. ಕೆಳಗೆ ಬೀಳಲಿದ್ದ ತನಿಯ ಸಾವರಿಸಿನಿಲ್ಲುತ್ತ ದೇವನನ್ನು ನೋಡಿದವನೆ ಗಡಗಡ ನಡುಗುತ್ತ ಒಂದೇ ಕಾಲಿನಿಂದ ಓಟಕಿತ್ತ.

"ಎಲ್ಲಿಗ್ಹೋಗ್ತಿಯೋ?" ಕೊಳೆ ಮುಂಡನ್ನು ಹೆಗಲಿಗೆಸೆದುಕೊಳ್ಳುತ್ತ ಬೊಬ್ಬಿರಿದ ಕರಿಯ, "ನಾಳೆ ಸಿಕ್ತಿಯಲ್ಲ, ನಿನ್ನನ್ನು ಚಟ್ನಿ ಮಾಡ್ತೇನೆ."

ಅನಂತರ ಕರಿಯನ ಕಿಡಿಕಾರುವ ಕಣ್ಣುಗಳು ತನ್ನ ಯಜಮಾನನನ್ನು ನೋಡಿದವು. ಕರುಣೆಯೇ ಮೈವೆತ್ತಿ ಬಂದ, ತಮ್ಮ ಜನಗಳಿಗಾಗಿ ದುಡಿಯುವ ಈತನಿಗೆ ಹೇಗೆ ಸುದ್ದಿ ತಿಳಿಸಲಿ? ಅವನ ನೋಟ ಇಳಿಮುಖವಾಯಿತು.

"ಅಯ್ಯ, ಯಾರನ್ನೂ ನಂಬಬೇಡಿ. ಅನ್ನದ ಋಣ ಇಲ್ಲದ ಪಾಪಿಗಳು. ಹಾಲು ಕೊಟ್ಟು ಉಪಕಾರ ಮಾಡಿದಿರಲ್ಲ. ಹಾವಿಗೆ ಹಾಲೆರೆದಷ್ಟೇ ಫಲ. ಇದು ಹಾವಲ್ಲ, ಕಚ್ಚುವ ಘಟಸರ್ಪ!"

ಕರಿಯ ಒಂದೊಂದೇ ವಿಷಯ ಬಯಲಿಗೆಳೆದ. ಈ ದಿನ ಬೆಳಗ್ಗೆ ಹೊಳೆಯಾಚೆಯ ತೆಂಗಿನ ಮರದಿಂದ ಯಾರೋ ಕಾಯಿ ಕೀಳುವುದನ್ನು ನೋಡಿದ ಅವನ ಮಕ್ಕಳು ಕುತೂಹಲದಿಂದ ಅತ್ತ ಹೋದಾಗ ಮರದಿಂದ ಇಳಿಯುತ್ತಿದ್ದಾನೆ ತನಿಯ. ಮಕ್ಕಳನ್ನು ನೋಡಿ ಅವನು ಸ್ವಲ್ಪ ಹೆದರಿರಬೇಕು, ಅವಸರದಲ್ಲಿ ತಾನು ಬೀಳಿಸಿದ ತೆಂಗಿನಕಾಯಿಗಳನ್ನು ಗೋಣಿಚೀಲಕ್ಕೆ ತುಂಬಿಸಿ, "ಹೇಯ್, ಪೋರಗಳಾ! ಇಕೊಳ್ಳಿ ನಿಮಗೆ ಎರಡು ಸೀಯಾಳ, ತಿನ್ನಿ. ಹಾಂ, ಯಾರಿಗೂ ಹೇಳಬೇಡಿ" ಎಂದನಂತೆ. ಕರಿಯನಿಗೆ ವಿಷಯ ತಿಳಿದದ್ದು ಸಾಯಂಕಾಲ. ಕೂಡಲೆ ತನಿಯನನ್ನು ಹುಡುಕುತ್ತ ಅವನ ಮನೆಗೆ ಬಂದಾಗ ಅವನಿಲ್ಲವೆಂದೂ, ಬೆಳಗ್ಗೆಯೇ ಪೇಟೆಗೆ ಹೋಗಿದ್ದಾನೆಂದೂ ತಿಳಿಯಿತು. ಪೇಟೆಗೆ ಹೋದವ ಮನೆಗೆ ಹಿಂದಿರುಗುವ ಕಾಡುದಾರಿಯಲ್ಲಿ ಸಿಗುತ್ತಾನೆಂದು ಗೊತ್ತು ಕರಿಯನಿಗೆ. ಅವನಿಗಾಗಿ ಕಾದುಕುಳಿತು ಹಿಡಿದಿದ್ದಾನೆ.

''ಹಿಡೀರಿ ಈ ಮೂವತ್ತು ರೂಪಾಯಿ. ಬೆಳಗ್ಗೆ ಕದ್ದ ತೆಂಗಿನಕಾಯಿಗಳನ್ನು ಮಾರಿ ಬಂದಿದ್ದಾನೆ'' ತನಿಯನಿಂದ ಕಸಿದುಕೊಂಡ ರೂಪಾಯಿ ನೋಟುಗಳನ್ನು ದೇವನ ಕೈಲಿರಿಸಿದ, ''ಮನೇಲಿ ಸಾಕಿದ ನಾಯಿಯಾದರೂ ಇವನಿಗಿಂತ ಎಷ್ಟೋ ವಾಸಿ. ಕೃತಜ್ಞತೆಯಿಲ್ಲದವ.''

ದೇವ ತನ್ನ ಕೈಗೆ ಬಂದ ಮುದ್ದೆಯಾದ ನೋಟುಗಳನ್ನು ನೋಡಿದ. ಹಾಗೇ ಮುಷ್ಟಿ ಮುಚ್ಚಿಕೊಂಡು ಹೊರಟ ಮೌನವಾಗಿ. ಕರಿಯ ಆಶ್ಚರ್ಯದಿಂದ ತಲೆಬಗ್ಗಿಸಿ ನಡೆಯುತ್ತಿದ್ದವನನ್ನು ನೋಡುತ್ತ ತಾನೂ ಹಿಂಬಾಲಿಸಿದ ವಿಧೇಯನಂತೆ.

ರಾತ್ರೆ ಊಟ ಬೇಡವಾಗಿತ್ತು ಅವನಿಗೆ. ''ಬಡವನೆಂದು ಕನಿಕರ ತೋರಿಸಿ, ಮನೆ ಕಟ್ಟಿಸಿಕೊಟ್ಟು, ಮಕ್ಕಳಿಗೆ ಹಾಲು, ಔಷಧಿಯಿತ್ತು ತಮ್ಮವರಂತೆ ನೋಡಿಕೊಂಡರೆ ಈಗ ಆದುದೇನು? ವಿಶ್ವಾಸಘಾತುಕದ ಕೆಲಸ.'' ಶಶಿಧರ ಕೊಂಕಿನ ರಾಗ ತೆಗೆದ.

''ಅವರನ್ನು ತಲೆ ಮೇಲೆ ಹೊತ್ತು ನೋಡ್ಕಂಡ್ರಲ್ಲಾ... ನಿಮ್ಮ ಮನೆಗೇ ಬೆಂಕಿ ಇಡ್ತಾವೆ ನೋಡಿ....''

ಮರುದಿನ ಹಾಲಿಗಾಗಿ ಬರಲಿಲ್ಲ ತನಿಯ. ''ಈಗಿಂದೀಗಲೆ ಹೋಗಿ ಕರೆದುಕೊಂಡು ಬಾ'' ಅಪ್ಪಣೆ ಮಾಡಿದ ಕರಿಯನಿಗೆ. ತಡಮಾಡದೆ ಕರಿಯ ದಾಪುಗಾಲಿಕ್ಕುತ್ತ ನಡೆದ. ಅರ್ಧಗಂಟೆಯಲ್ಲಿ ಹಾಜರಾದ ತನಿಯನೊಂದಿಗೆ.

ಹೊರಜಗಲಿಯಲ್ಲಿ ಕುಳಿತಿದ್ದ ದೇವ ಅವನನ್ನು ಹತ್ತಿರ ಕರೆದು ಅವನ ಮುಂದೆ ಹಾಲುತುಂಬಿದ ಲೋಟ ಮತ್ತು ಮೂವತ್ತು ರೂಪಾಯಿಗಳನ್ನಿರಿಸಿ ಕರುಣೆದುಂಬಿ ನೋಡಿದ. ತನಿಯನ ಸರ್ವಾಂಗವೂ ಕಂಪಿಸಿ ದೊಪ್ಪನೆ ಬಿದ್ದ ಕೆಳಗೆ. ಇಲ್ಲಿಗೆ ಬರುವಾಗ ಯಾವ ಸುಳ್ಳು ಹೇಳಬೇಕೆಂದು ಯೋಚಿಸಿದವನು ದೇವನ ಎರಡೂ ಕಾಲುಗಳನ್ನು ಹಿಡಿದು ತನ್ನ ತಲೆಯನ್ನು ಅವನ ಪಾದದ ಮೇಲಿರಿಸಿ ಗೋಳೋ ಎಂದು ಅತ್ತುಬಿಟ್ಟ. ಸುಳ್ಳು ಹೇಳಲು ಸಿದ್ಧವಾದ ನಾಲಗೆ ಕ್ಷಮೆಯಾಚಿಸಿತು.

''ಅಡ್ಡಬಿದ್ದೆ ಅಯ್ಯ. ನನ್ನನ್ನು ಕ್ಷಮಿಸಿ.''

''ನಿನಗೆ ಬಂದ ಕಷ್ಟವಾದರೂ ಏನು ತನಿಯ? ನಿನಗ್ಯಾಕೆ ಬೇಕಿತ್ತು ಈ ಮೂವತ್ತು ರೂಪಾಯಿ? ಕೇಳಿದ್ದರೆ ನಾನು ಕೊಡ್ತಾ ಇರಲಿಲ್ಲವೇ? ಸಂಘದಲ್ಲಿ ನಾನು ಹೇಳಿ ಕೊಟ್ಟಿದ್ದೇನು? ಕದೀಬಾರದು, ಸುಳ್ಳು ಹೇಳಬಾರದು, ಯಾರಿಗೂ ಕೇಡು ಬಗೆಯಬಾರದು...''

''ದುಷ್ಟ ರಾಕ್ಷಸ ತಲೆಗೆ ಹೊಕ್ಕಿದ್ದ.''

''ಅದ್ಹೇಗೆ ಸೇರಿಕೊಂಡ ಆ ರಾಕ್ಷಸ? ಉಪಕಾರ ಮಾಡಿದವನಿಗೇ ಅಪಕಾರ ಮಾಡು ಎಂದನೇ ಅವನು? ನಿನಗೆ ಮನೆಕಟ್ಟಿಸಿದ್ದು, ನಿನ್ನ ಪೋಲಿಯೋ ಮಗುವಿಗೆ ಚಿಕಿತ್ಸೆಗೆ ಹಣ ಕೊಟ್ಟಿದ್ದು, ನಿನಗೆ ಹಾಲು ಕೊಡ್ತಾ ಇರುವುದು ಯಾರು?''

ತನಿಯ ಬಿಕ್ಕಳಿಸಿದ, "ಎಲ್ಲಾ ಅವರು ಹೇಳಿದ್ಹಾಗೆ ಮಾಡ್ದೆ ಅಯ್ಯ." ದೇವನ ಹಿಂದೆ ನಿಂತಿದ್ದ ಶಶಿಧರನತ್ತ ಬೆರಳು ತೋರಿಸಿದ, "ಅಡಿಕೆ, ತೆಂಗು ಕದ್ದುಮಾರಿ ಬಂದ ಹಣದಲ್ಲಿ ಮುಕ್ಕಾಲು ಭಾಗ ಅವರಿಗೆ, ಕಾಲು ಭಾಗ ನನಗೆ ಎಂದು ನಮ್ಮೊಳಗೆ ಒಪ್ಪಂದ ಆಗಿತ್ತು. ಎಲ್ಲಾ ಅವರು ಹೇಳಿಕೊಟ್ಟರು."

ದೇವ ತಲೆ ಎತ್ತಿ ನೋಡಿದ ತನ್ನ ಹಿಂದೆ ನಿಂತವನನ್ನು.

"ಕದಿಯುವಾಗ ಅವರೂ ಬೇಕಾದ ಸಹಾಯ ಮಾಡ್ತಿದ್ದರು. ನಿಮ್ಮಾಣೆ, ನಿಮಗೆ ಕೆಡಕು ಬಗೆಯಲಿಲ್ಲ ಅಯ್ಯ."

ದೇವನ ಮುಷ್ಟಿಗಳು ಬಿಗಿದುಕೊಳ್ಳುತ್ತಿದ್ದಂತೆ ಶಶಿಧರನ ಮುಖದ ಬಣ್ಣ ಬದಲಾಯಿಸಿ ಸರ್ರನೆ ಒಳಹೋಗಲು ಯತ್ನಿಸಿದ. ಆದರೆ ಅಷ್ಟರಲ್ಲಿ ದೇವ ಅವನ ಶರ್ಟಿನ ಕಾಲರಿಗೆ ಕೈಹಾಕಿ ಇತ್ತ ಎಳೆದಾಗಿತ್ತು. "ಏನೋ, ಅವನು ಹೇಳಿದ್ದು ನಿಜವೇ?"

"ಎಲ್ಲೋ ನಾಲ್ಕು ತೆಗೆದೆವು. ಏನು ಮಹಾ ಬಿಡು."

ಅವನ ದಿಟ್ಟ ಸವಾಲು ಕೆಣಕಿತು ದೇವನನ್ನು. "ನಾಲ್ಕು ತೆಗೆದದ್ದೇ? ಅವತ್ತು ಬಾಳೆಗೊನೆ ಕದ್ದವನು ನೀನೇ ಅಲ್ಲವೇ? ಈ ತನಕ ನಮ್ಮ ಆಳುಗಳು ಏನನ್ನೂ ಕದ್ದವರಲ್ಲ. ನೀನೀಗ ಅವರಿಗೆಲ್ಲ ತರಬೇತು ಕೊಡುವ ನಾಯಕ!" ಎನ್ನುತ್ತ ಛಟೀರನೆ ಬಾರಿಸಿದ ಕೆನ್ನೆಯ ಮೇಲೆ.

ಅಷ್ಟರಲ್ಲಿ ಓಡಿಬಂದ ನಾಗಮ್ಮ ಅವನನ್ನು ಎಳೆದುಕೊಂಡರು ತಮ್ಮತ್ತ. ದೇವ ಕೆಣಕಿದ ಸರ್ಪವಾಗಿದ್ದ. ಮೊದಲೇ ಶಶಿಧರನ ಗುಣನಡತೆಗಳು ಸರಿಬೀಳುತ್ತಿರಲಿಲ್ಲ. ಈಗಂತೂ ಇಮ್ಮಡಿಯಾಯಿತು ರೋಷ, "ಇನ್ನೊಮ್ಮೆ ಇಂತಹ ಸುದ್ದಿ ಬಂದರೆ ನಿನ್ನನ್ನು ಸಿಗಿದು ತೋರಣ ಮಾಡ್ತೇನೆ. ಹುಷಾರ್!"

ಅವನ ಮಾತಿಗೆ ಉದ್ಧಟತನದ ಉತ್ತರ ಕೊಡದೆ ಒಳಗೆ ನಡೆದ ಶಶಿಧರ. ತನಿಯನಿಗೆ ಬುದ್ಧಿವಾದ ಹೇಳುತ್ತ ಅಂದಿನ ಆ ಪ್ರಸಂಗ ಮುಕ್ತಾಯವಾಯಿತು. ಆದರೆ ಆ ರಾತ್ರೆ ಅನಿರೀಕ್ಷಿತವಾಗಿ ಮಹಡಿ ಕೋಣೆಗೆ ಬಂದರು ನಾಗಮ್ಮ. ಅವನನ್ನು ಕೇಳದೆ ಮರದ ಕಪಾಟಿನಿಂದ ಹಣ ತೆಗೆದುಕೊಂಡು ಹೊರಟಾಗ ದೇವ ತನ್ನ ಸ್ವರವನ್ನು ಮೃದುಗೊಳಿಸಿ ಕೇಳಿದ ಮೆಲ್ಲನೆ,

"ಈಗ ಯಾರಿಗೆ ಬೇಕಮ್ಮಾ ಹಣ?"

ನಾಗಮ್ಮ ಅವನತ್ತ ಹೊರಳದೆ ಅಂದರು, "ದೊಡ್ಡವನಾದ ಶಶಿಗೂ ಆಸೆಗಳಿಲ್ಲವೇ. ನಿನಗೆ ಇನ್ನೊಬ್ಬರ ಕಷ್ಟದ ಅರಿವಿಲ್ಲ. ಮನೆಯವರ ಬೇಕು-ಬೇಡದ ಅಗತ್ಯದತ್ತ ಲಕ್ಷ್ಯವಿಲ್ಲ. ಅವನ ಕೈಖರ್ಚಿಗೆ ಹಣಕೊಡುವ ಉದಾರ ಬುದ್ಧಿಯೂ ನಿನಗಿಲ್ಲ. ಅದಕ್ಕೇ ಕದ್ದಿದ್ದಾನೆ. ಪಾಪ, ಈ ಹಣ ಅವನ ಖರ್ಚಿಗೆ."

"ಪ್ರಾಯ ಬಂದ ಹುಡುಗ, ದುಡಿಯಲಿ. ದುಡಿಯದೆ ಹಣ ಕೊಡುವುದು ನನ್ನಿಂದ ಸಾಧ್ಯವಿಲ್ಲ."

"ಮನಸ್ಸಿದ್ದರೆ ಎಲ್ಲವೂ ಸಾಧ್ಯ! ಅವನಿಲ್ಲಿ ಇರುವುದು ನಿನಗಿಷ್ಟವಿಲ್ಲ. ನನಗೆ ಗೊತ್ತು ಎಷ್ಟಾದರೂ ಅವನು..." ನಾಗಮ್ಮನ ಮಾತು ತಡೆಯಿತು ಅಲ್ಲೇ, ಮತ್ತೊಂದು ನಿಮಿಷದಲ್ಲಿ ಮರದ ಏಣಿ ಮೆಟ್ಟಲುಗಳನ್ನು ಧಡಧಡ ಸದ್ದು ಮಾಡುತ್ತ ಕೆಳಗಿಳಿದು ಹೋದರು.

ದೇವ ನಿಬ್ಬೆರಗಾಗಿ ಬಾಗಿಲತ್ತ ನೋಡುತ್ತ ಅರೆಗಳಿಗೆ ಹಾಗೇ ಮುಚ್ಚಿಕೊಂಡ ತನ್ನ ಕಣ್ಣುಗಳನ್ನು.

## ೧೧

ಸುನೀತಿ ತನ್ನಲ್ಲೇ ಅಂತರ್ಮುಖಿಯಾಗತೊಡಗಿದಳು. ಪ್ರಶಾಂತವಾಗಿ ಹರಿಯುತ್ತಿದ್ದ ಜೀವನದಿಯಲ್ಲಿ ಎಲ್ಲಿಂದಲೋ ಬಂದು ಸೇರಿಕೊಂಡಿದೆ ಪ್ರವಾಹ. ನೆಮ್ಮದಿ ಬುಡ ಮೇಲಾಗಿದೆ. ಉಕ್ಕೇರುವ ಸಮುದ್ರದಂತೆ ಭೋರ್ಗರೆಯುತ್ತಿದೆ ಅವಳ ಮನಸ್ಸು. ಕೆಲಸ ದಲ್ಲಿ ಉತ್ಸಾಹವಿಲ್ಲ, ಊಟದಲ್ಲಿ ಅರುಚಿ. ಪ್ರತಿ ಗಳಿಗೆ, ಪ್ರತಿ ನಿಮಿಷ ಚಿಂತೆ. ಎಲ್ಲ ಚಿಂತೆಗಳನ್ನು ಮರೆತು ಇಷ್ಟು ವರ್ಷಗಳೂ ಜೊತೆಯಾಗಿದ್ದ ದೇವನೊಂದಿಗೆ ಮೊದಲಿ ನಂತೆ ಇರಬಲ್ಲೆ ಎಂದು ನಿರ್ಧರಿಸುತ್ತಾಳೆ. ಮತ್ತೊಂದು ಕ್ಷಣದಲ್ಲಿ ಅವನು ಎದುರು ಬಂದಾಗ ಕಣ್ಣರೆಪ್ಪೆಗಳು ಇಳಿಮುಖವಾಗಿ ಮನದಲ್ಲಿ ಅಲ್ಲೋಲ ಕಲ್ಲೋಲ. 'ಕರಿಯ, ತನಿಯ, ದುಗ್ಗ ಇವರಿಗಿಂತ ಬೇರೆಯಲ್ಲ ದೇವ. ಅಂದರೆ ನಿನಗೆ ತಕ್ಕವನಲ್ಲ!' ಒಳಮನಸ್ಸು ಪಿಸುಧ್ವನಿ ತೆಗೆದಾಗ ಮೈರಕ್ತ ಹೆಪ್ಪುಗಟ್ಟುತ್ತದೆ.

ಮನೆಯಲ್ಲಿ ಯಾವ ಬದಲಾವಣೆಗಳಾಗದೆ ಸರಿದು ಹೋಗುತ್ತಿವೆ ದಿನಗಳು. ಜಾಹ್ನವಿ ಅರೆಗಳಿಗೆ ಸುಮ್ಮನೆ ಕುಳಿತಿರುವವಳಲ್ಲ. ತನ್ನ ಮಕ್ಕಳೊಡನೆ ವಿಷ್ಣು, ಕೃಷ್ಣ ನನ್ನೂ ಪ್ರೀತಿಯಿಂದ ನೋಡಿಕೊಳ್ಳುತ್ತಾಳೆ. ಅವರಿಗೆ ಸ್ನಾನ ಮಾಡಿಸುತ್ತಾಳೆ, ವಿಷ್ಣುವಿನ ಹೇಸಿಗೆಯನ್ನೂ ತೆಗೆಯುತ್ತಾಳೆ. ಸುನೀತಿಯ ಪ್ರತಿ ಕೆಲಸದಲ್ಲಿ ಸಹಕಾರ ಕೊಡುತ್ತ, ಪ್ರಾಯದಲ್ಲಿ ತನಗಿಂತ ಕಿರಿಯವಳಾದವಳಿಗೆ 'ನಾನು ನಿನ್ನ ಅಡಿಯಾಳು' ಎಂದು ಮಾತಿನಲ್ಲಿ ಹೇಳದೆ ಕೃತಿಯಲ್ಲಿ ತೋರಿಸಿ ಒಂದಾಗಿ ಬೆರೆಯುತ್ತಾಳೆ. ಇನ್ನೊಬ್ಬರಿಗೆ ಹೊರೆಯಾಗದಂತೆ ಹೊರೆಗಲ್ಲಾಗುವವಳು.

ಆದರೆ ಸುನೀತಿಗೆ ಇತ್ತ ಗಮನ ಕಡಿಮೆ. ಬೆಳಗಿನಿಂದ ಕತ್ತಲೆಯವರೆಗೆ ಅವಳೇನು ಮಾಡುವಳೋ ಅವಳಿಗೇ ತಿಳಿಯದು. ಸುಜಾತೆ ಅವಳಿಗೆ ತಂಗಿಯಾದರೂ ಅವಳ ಅಂತರಂಗದ ಆತ್ಮೀಯ ಸಖಿಯೂ ಹೌದು. ಅವಳಿಗೆ ಕಾಗದ ಬರೆದು ಮನದ ವಿಪ್ಲವ ತೋಡಿಕೊಳ್ಳುವ ಬಯಕೆ. ಬರೆದಳು ಹತ್ತಾರು ಕಾಗದಗಳನ್ನು. ಆದರೆ ಒಂದನ್ನೂ ಅಂಚೆಗೆ ಹಾಕದೆ ಹರಿದೆಸೆದಳು. ಏನೆಂದು ತಿಳಿಸಲಿ? ದೇವನ ಬಗ್ಗೆ ಏನೆಂದು ಬರೆಯಲಿ?

ಅವಳ ಮನ ಮಿಡುಕಿ ಮಿಡುಕಿ ಕೆದಕಿ ನೋಡಿತು ಆಳವನ್ನು. ಅವನ ಬಣ್ಣ, ರೂಪ, ಆಕಾರಕ್ಕೆ ಹಿಂದೆಂದೂ ಬೆಲೆ ಕೊಟ್ಟವಳಲ್ಲ. ಈಗ ನೋಡಿದರೆ ಅದಕ್ಕೂ ಬೆಲೆಯಿದೆ. ಅವನು ಯಾರು? ಆದರ್ಶದ ಹುಚ್ಚಿನಲ್ಲಿದ್ದ ಈಶ್ವರಯ್ಯನವರು ಎಲ್ಲರೂ ತಮ್ಮಂತೆ ಆದರ್ಶವಾದಿಗಳು ಎಂದುಕೊಂಡರೇನು? ತಾನೆತ್ತಿ ಮುದ್ದಿಸಿದ ಕೂಸಿನ ಮೇಲೆ ಅವರಿಗೆ ಅನುಕಂಪ ಸಹಜ. ಹಾಗೆಂದು ಜನರ ಕನಿಕರದ ತುತ್ತು ಸಿಗಬೇಕೆಂದು ಬಯಸುವುದು ನ್ಯಾಯವಲ್ಲ. ಈಶ್ವರಯ್ಯ ಮೋಸದಿಂದ ಅವನೊಂದಿಗೆ ತನ್ನ ಮದುವೆ ಮಾಡಿದರಲ್ಲ...

ಹಿಂದಿನ ಸುಂದರ ದಿನಗಳ ಮೇಲೆ ಬಿದ್ದ ಕರಾಳ ಮುದ್ರೆ ಅವಳನ್ನು ಇನ್ನೂ ಮೌನಿಯನ್ನಾಗಿ ಮಾಡಿತು. ಆ ಹಿಂದಿನ ಕೀಟಲೆ, ನಗುವಿನ ರಸ ನಿಮಿಷಗಳು ಎತ್ತಹೋದವೋ. ಒಬ್ಬರನ್ನೊಬ್ಬರು ಚೇಷ್ಟೆ ಮಾಡುತ್ತ ನಾಗಮ್ಮನ ಇದಿರಿನಲ್ಲೇ ಸರಸ ಗೈಯ್ಯುತ್ತಿದ್ದ ಆ ದಿನಗಳೆಲ್ಲ ಏನಾಗಿ ಹೋದವೋ... ಇನ್ನು ಬರಿ ನೆನಪು ಮಾತ್ರ ಉಳಿದೀತೇ? ದೇವನ ಸಾಮಿಪ್ಯ, ಸ್ಪರ್ಶ, ಸವಿನುಡಿಗಳಿಗೆ ಹಾರೈಸುತ್ತಿದ್ದ ಅವಳಿಗೆ ಸಾಯಂಕಾಲವಾದಂತೆ ಮೈಯಲ್ಲಿ ಜ್ವರ ಬಂದ ಅನುಭವ. ತುಂಬಿದ ಮನೆಯಲ್ಲಿ ಕಣ್ಣುಮುಚ್ಚಾಲೆಯಾಡುವುದು ಸುಲಭವಲ್ಲ. ಮಹಡಿಯ ಏಕಾಂತದ ಕೋಣೆ ಅವಳ ಪಾಲಿಗೆ ಅಶಾಂತಿಯ ಗೂಡು. ದೇವ ಅವಳ ಸಮೀಪಕ್ಕೆ ಬಂದರೆ ಸಾಕು, ಎಲ್ಲೋ ನರಕಕ್ಕೆ ತಳ್ಳಲ್ಪಟ್ಟವಳಂತೆ ನಡುಕ. ಅವನಿಂದ ಮಾರು ದೂರ ಸರಿಯುತ್ತದೆ ಹಾಸಿಗೆ. ಪ್ರತಿರಾತ್ರಿ ಅವನೊಂದು ಬದಿಗೆ, ಇವಳೊಂದು ಬದಿಗೆ. ಮಧ್ಯೆ ಮಕ್ಕಳಿಬ್ಬರ ಹಾಸಿಗೆ. "ಹೀಗೆ ಮನಸ್ಸನ್ನು ಹಿಂಡಬೇಡ ಸುನೀತಿ. ನಿನಗಿಲ್ಲಿ ಮಲಗಲು ಇಷ್ಟವಿಲ್ಲದಿದ್ದರೆ ಕೆಳಗೆ ಹೋಗಿ ಮಲಗು" ಎನ್ನುತ್ತಾನೆ ದೇವ ನೊಂದ ಧ್ವನಿಯಲ್ಲಿ. ಅವಳು ಪಿಳಿಪಿಳಿ ಕಣ್ಣುಬಿಡುತ್ತಾ ನೋಡುತ್ತಾಳೆ ಹೊರಗಿನ ಕತ್ತಲೆಯನ್ನು. ಕೆಳಗೆ ಮಲಗಿದ್ದ ವಿಧವೆಯರಿಗೇನು ಗೊತ್ತು. ಅವರ ದೃಷ್ಟಿಯಲ್ಲಿ ಇವರಿಬ್ಬರೂ ಸತಿಪತಿಗಳು. ಇಬ್ಬರ ಮನಸ್ಸು ಆ ತೀರ, ಈ ತೀರ. ನಡುವೆ ವಿರಸವೇನೂ ನಡೆದಿಲ್ಲ. ಜಗಳವೂ ಆಗಿಲ್ಲ. ದೇವ ಅವಳನ್ನು ಒಲಿಸಿಕೊಳ್ಳಲು ಯತ್ನಿಸುತ್ತಿದ್ದಾನೆ. ಅವನ ಒಲವು, ಪ್ರೀತಿ ತುಂಬಿದ ಮಧುಪಾತ್ರೆಯನ್ನು ಅವಳು ತಾನೇ ಸರಿಸುತ್ತಿದ್ದಾಳೆ ದೂರಕ್ಕೆ.

ಆಗೀಗ ಘರ್ಷಣೆಯ ಕಿಡಿಗಳು ಏಳುತ್ತಿವೆ ಮನೆಯಲ್ಲಿ. ತೋಟದಲ್ಲಿ, ಗದ್ದೆಯಲ್ಲಿ ಈ ವರ್ಷ ಫಸಲು ಕಡಿಮೆ. ಮನೆಯಲ್ಲಿ ತಿನ್ನುವ ಬಾಯಿಗಳು ಅಧಿಕ. ಖರ್ಚಿನ ಯಾದಿ ತಯಾರಿಸಿ ಮಿತಿಯಲ್ಲಿ ದೇವ ಸಾಮಾನುಗಳನ್ನು ತಂದುಹಾಕಿದರೂ ಅದರ ಬಾಲ ಬೆಳೆಯುತ್ತದೆ. ನಾಗಮ್ಮ ತಮ್ಮ ಕಡೆಯವರಿಗೆ ಮಾಡುವ ಉಪಚಾರಕ್ಕೆ ಮಿತಿಯಿಲ್ಲ. ಸೂಕ್ಷ್ಮದಲ್ಲಿ ಮನೆ ನಡೆಸುವ ಕಲೆ ಅವರಿಗೆ ತಿಳಿದಿಲ್ಲ. ಶಶಿಧರನ ಹವ್ಯಾಸೀ ಸ್ವತಂತ್ರ ಜೀವನ ಲಂಗುಲಗಾಮಿಲ್ಲದೆ ಮುಂದುವರಿದಿದೆ. ಇದರೊಂದಿಗೆ ಸುನೀತಿಯೂ ಆಗಾಗ ಗೊಣಗುತ್ತಾಳೆ. ದೇವ ಹತ್ತಿರ ಬಂದರೆ ಸಿಡುಕುತ್ತಾಳೆ. ಅವಳ ಬಿಗಿದ ಮುಖ ನೋಡಿದ ದೇವನಿಗೆ ಮಾತು ಬೇಡವಾಗಿ ತನ್ನ ಆರ್ಥಿಕ ಕಷ್ಟಗಳನ್ನು ತಾನೇ ಅದುಮಿಕೊಳ್ಳಲು ಪ್ರಯತ್ನಿಸುತ್ತಾನೆ. ಸುನೀತಿ ತನ್ನಿಂದ ದಿನೇ ದಿನೇ ದೂರ ಸರಿಯುವಾಗ ಹೃದಯದ ಆಳದಲ್ಲೆಲ್ಲೋ ನೋವಿನ ಸೆಲೆ. ಹೇಗೆ ಮೆಚ್ಚಿಸಲಿ ಅವಳನ್ನು?

ಆಳು ತನಿಯನಿಗೆ ಕೊಡುವ ಒಂದು ಲೋಟ ಹಾಲನ್ನು ಮನೆಯವರು ನಿಲ್ಲಿಸಿದಾಗ ರೇಗಿಹೋದ ದೇವ. ಆದರೆ ಸುನೀತಿ ಅಂದಳು, ಖಾರವಾಗಿ, "ಮನೆ ತುಂಬ ಜನರಿರುವಾಗ ಊರೆಲ್ಲ ದಾನ ಮಾಡುವ ಬುದ್ಧಿ ನಿಮಗ್ಯಾಕೆ? ಆ ಕಳ್ಳನಿಗೆ ಹಾಲಂತೆ ಹಾಲು... ನೀರು ಕುಡಿಯಲು ಹೇಳಿ."

ದೇವ ಉತ್ತರಿಸಿದ ಶಾಂತವಾಗಿ, "ಸಾಯಲಾದ ಮಗುವಿಗೆ ಒಂದು ಲೋಟ ಹಾಲು ಕೊಟ್ಟಾಕ್ಷಣ ಮನೆಯೇನೂ ತೊಳೆದು ಹೋಗುವುದಿಲ್ಲ. ಇಲ್ಲಿ ನೀರುಮಜ್ಜಿಗೆ ಸಾಕು."

"ಅದ್ಹೇಗೆ ಸಾಧ್ಯ?" ಮಧ್ಯೆ ನುಡಿದರು ನಾಗಮ್ಮ, "ಒಂದು ಲೋಟ ಹಾಲು ಅಂದ್ರೆ ಈಗಿನ ದಿನಗಳಲ್ಲಿ ಕಿಮ್ಮತ್ತು ಎಷ್ಟಾಯ್ತು ಹೇಳು. ಅವರ ಬಡತನಕ್ಕೆ ನಾವಲ್ಲ ಹೊಣೆ. ಜಾಹ್ನವಿ, ಮಕ್ಕಳು ಇದ್ದಾರೆ. ನೀರುಮಜ್ಜಿಗೆ ಬಡಿಸಿದರೆ ಸರಿಯಾಗದು. ಈಗೇನು ನಮಗೆ ದರಿದ್ರ ಬಂದಿಲ್ಲ."

"ಇಲ್ಲಿಲ್ಲ. ರಾಜರಂತೆ ಇದ್ದೇವೆ. ನೀವೆಲ್ಲ ಚೆನ್ನಾಗಿ ಮೊಸರು ಉಣ್ಣಬೇಕಾದವರು. ನಾಳೆಯಿಂದ ಹೊರಗೆ ಮಾರುವ ಹಾಲನ್ನು ನಿಮಗಾಗಿ ತೆಗೆದಿರಿಸ್ತೇನೆ. ಆದರೆ ತನಿಯನಿಗೆ ಕೊಡುವ ಹಾಲು ನಿಲ್ಲಿಸಕೂಡದು" ಸ್ವರದಲ್ಲಿ ಕಾಠಿಣ್ಯವಿತ್ತು.

ಆ ರಾತ್ರೆ ಅವನು ಅಡಿಗೆ ಕೋಣೆಗೆ ಬಂದಾಗ ಸುನೀತಿ ಸ್ವಲ್ಪ ಕಠಿಣವಾಗಿ ಗುಡುಗಿದಳು, "ಒಲೆ ಬದಿಗೆ ಹಾಲಿಟ್ಟಿದ್ದೇನೆ. ಕುಡಿಯಿರಿ."

"ಯಾರಿಗೆ ಬೇಕಾಗಿದೆ ಹಾಲು?" ಸಿಡಿಗುಂಡಿನಂತೆ ಹೊರಬಿತ್ತು ಮಾತು, "ನನಗೆ ಕುಡಿಯಲು ಇಟ್ಟ ಹಾಲಿಗೆ ಹೆಪ್ಪಿಟ್ಟು, ನೀವೆಲ್ಲ ನಾಳೆ ಮೊಸರನ್ನು ತಿನ್ನಿ." ಎಂದವನೆ ಅಲ್ಲಿಂದ ಹೊರಟುಹೋದ ತನ್ನ ಕೋಣೆಗೆ.

ಜಾಹ್ನವಿ ತಬ್ಬಿಬ್ಬಾಗಿ ಹೋದಳು. ಸುನೀತಿಯೂ ಕಸಿವಿಸಿಗೊಂಡು ನೋಡಿದಳು ಬಾಗಿಲತ್ತ. ದೇವನಿಗೆ ಕೃಷಿಯಷ್ಟೇ ಆಸಕ್ತಿ ದನ-ಎಮ್ಮೆಗಳನ್ನು ಸಾಕುವದರಲ್ಲಿದೆ. ಅವನು ಪ್ರಾಯಕ್ಕೆ ಬಂದ ಮೇಲೇ ಇಲ್ಲಿ ಹಾಲಿನ ಸಮೃದ್ಧಿ. ಹಾಲು, ಅದರಿಂದ ತಯಾರಿಸುವ ಎಲ್ಲ ಖಾದ್ಯ ವಸ್ತುಗಳೂ ಅವನಿಗಿಷ್ಟ. ಆದರೆ ಈ ದಿನ ಅವನು ಹಾಲು ನಿರಾಕರಿಸಿ ಹೊರಟುಹೋದಾಗ ಸುನೀತಿ ತಪ್ಪಿತಸ್ಥಳಂತೆ ನೋಡಿದಳು ಜಾಹ್ನವಿಯತ್ತ. ಒಲೆಕಟ್ಟೆ ಬಳಿ ಹಾಲಿನ ಬರ್ಫಿಯನ್ನು ಕಾಯಿಸಿ ಇಳಿಸುತ್ತಿದ್ದ ಜಾಹ್ನವಿ,

"ನಿಮ್ಮೆಲ್ಲರ ಕಾಲಿಗೆ ಬೀಳ್ತೇನೆ ಸುನೀತಿ, ಅವರ ಮನಸ್ಸು ನೋಯಿಸಬೇಡ. ನನಗೂ, ಮಕ್ಕಳಿಗೂ ನೀರುಮಜ್ಜಿಗೆ ಸಾಕು. ಅದೂ ಬೇಡ, ಗಂಜಿ ಉಪ್ಪು ಸಾಕು. ಅವರಿಗೆ ಏನೇನು ಬೇಕೋ ಅವನ್ನು ಮಾಡಿಕೊಡು." ಎನ್ನುತ್ತ ಬರ್ಫಿಯನ್ನು ತಟ್ಟೆಗೆ ಸುರಿದಳು.

"ಹೇಳು ಸುನೀತಿ" ಅವಳ ಎರಡೂ ಕೈಗಳನ್ನು ಹಿಡಿದು ಕಣ್ಣೀರು ಹಾಕಿದಳು ವಿಧವೆ, "ನನ್ನ ಮೇಲೆ ಅಸಮಾಧಾನವಿದ್ದರೆ ಹೇಳಿಬಿಡು. ನನ್ನಿಂದಾಗಿ ನಿನ್ನ ಸಂಸಾರದ ನೆಮ್ಮದಿ ತಪ್ಪಬಾರದು."

ಇವಳಿಂದ ತನ್ನ ಸಂಸಾರದ ನೆಮ್ಮದಿ ಕೆಡಬಲ್ಲದೇ? ಇಲ್ಲ, ಅದಕ್ಕಿಂತ ಮಿಗಿಲಾದ್ದು ತನ್ನ ಒಳಮನಸ್ಸನ್ನು ಕೊರೆದು ತೂತು ಮಾಡುತ್ತಿದೆ.

ಜಾಹ್ನವಿ ನಾಲ್ಕು ತುಂಡು ಬರ್ಫಿಯನ್ನು, ಬಿಸಿಹಾಲನ್ನು ಸುನೀತಿಯ ಕೈಯಲ್ಲಿರಿಸಿದಳು, "ಹೋಗಿ ಕೊಟ್ಟು ಬಾ."

ಮನಸ್ಸಿಲ್ಲದಿದ್ದರೂ ಅವನ್ನು ಮಹಡಿಗೆ ತಂದಾಗ ದೇವ ಒಂದೇ ಮಾತಿನಲ್ಲಿ ನಿರಾಕರಿಸಿಬಿಟ್ಟ. ಈ ದಿನ ನಿಜವಾಗಿಯೂ ಕ್ರೋಧಗೊಂಡಿದ್ದಾನೆ ಸುನೀತಿಯ ಮೇಲೆ. ಅವನ ಬದಿಯಲ್ಲೇ ಕುಳಿತಿದ್ದ ಕೃಷ್ಣ ಚಂಗನೆ ನೆಗೆದು, "ನಂಗೆ ಅಪ್ಪಾ ಬರ್ಫಿ... ನಂಗೆ ಹಾಲು" ಎಂದು ಕೈ ನೀಡಿದಾಗ ಛಟೀರನೆ ಬಿತ್ತು ಬೆನ್ನಿಗೊಂದು ಏಟು.

"ಇನ್ಮೇಲೆ ನಿನಗೆ ಹಾಲಿಲ್ಲ! ತನಿಯನ ಮಕ್ಕಳು ನೀರಿನಲ್ಲಿ ಬೆಳೀತಾವಂತೆ. ನೀನೂ ಅಂಥವರ ಮಗನೇ. ನಿನಗೂ ಇನ್ನು ನೀರು ಒಂದೇ ಸಾಕು."

ಕೃಷ್ಣನಿಗೆ ಅರ್ಥವಾಗದೆ 'ಹೋ' ಎಂದು ಅಳು ರಾಗ ತೆಗೆದಾಗ ಮತ್ತೆ ಬಿತ್ತು ಮುಖದ ಮೇಲೊಂದು ಪೆಟ್ಟು, "ತಿನ್ನುವುದು ಜಾಸ್ತಿಯಾಯ್ತು, ಬಾಯ್ಮುಚ್ಚಿ ಮಲಗು."

"ಯಾಕೆ ಹೊಡೀತೀರಿ ಅವನನ್ನು." ತನ್ನತ್ತ ಮಗುವನ್ನು ಎಳೆದುಕೊಂಡ ಸುನೀತಿ ಬರ್ಫಿಯನ್ನು ಅವನ ಕೈಗಿತ್ತಳು.

"ಓಹೋಹೋ... ನಾನು ಹೇಗಿದ್ದರೂ ನಿನಗಾಗದು. ಇನ್ನು ಈ ಎರಡು ಮಕ್ಕಳನ್ನು ನೀನು ಒಪ್ಪಿಕೊಳ್ತೀಯಾ. ಹಾಲು-ತಿಂಡಿ ತೆಗೆದುಕೊಂಡು ಹೋಗು. ಅಮ್ಮನ ಕಡೆಯವರಿಗೆ ನಡೆಯಲಿ ಉಪಚಾರ." ಕೃಷ್ಣನನ್ನು ತನ್ನತ್ತ ಒರಟಾಗಿ ಎಳೆದುಕೊಂಡು ಅವನ ಕೈಯಲ್ಲಿರುವ ಬರ್ಫಿಯನ್ನು ಎತ್ತಿ ಕುಕ್ಕಿದ ನೆಲದ ಮೇಲೆ.

ಸುನೀತಿ ವ್ಯಗ್ರಳಾದಳು, "ಯಾರ ಮೇಲಿನ ಸಿಟ್ಟಿಗೆ ಹೊಡೀತಾ ಇದ್ದೀರಿ ಅವನನ್ನು. ಬಿಡಿ..."

"ಯಾಕೆ ಬಿಡಬೇಕು? ಗಟ್ಟಿಯಾಗಿ ಹಿಡಿದುಕೊಳ್ತೇನೆ. ಹಾಲಿನ ಬದಲಿಗೆ ಒತ್ತಾಯದಿಂದ ಇವನಿಗೆ ಹೆಂಡ ಕುಡಿಸ್ತೇನೆ. ನಾನೂ ಕುಡೀತೇನೆ! ಏನೋ ಕೃಷ್ಣ... ನೀನು ಕುಡೀತಿಯಾ?"

ದೇವನ ಸ್ವರ ಏರಿದ್ದರಿಂದ ಸುನೀತಿ ಗಾಬರಿಯಾಗಿ ಬಾಗಿಲಾಚೆ ನೋಡಿದಳು. "ಕೆಳಗೆ ಅತ್ತೆ ಇರುವುದು ಮರೆತು ಹೋಯ್ತೇ?"

"ನೆನಪುಂಟು. ಅಮ್ಮನಿಗ್ಯಾಕೆ ಹೆದರಬೇಕು?"

"ನಿಮ್ಮ ಕೈಮುಗೀತೇನೆ. ಮಾತು ಸಾಕುಮಾಡಿ. ಹಿಡೀರಿ ಹಾಲು, ತಿಂಡಿ. ಕೃಷ್ಣ ಇನ್ನು ಸಣ್ಣ ಮಗು, ಇಲ್ಲದ್ದನ್ನು ತಲೆಯಲ್ಲಿ ತುಂಬಿಸಬೇಡಿ." ಹಾಲಿನ ಲೋಟ, ತಿಂಡಿ ತಟ್ಟೆ ಅವನ ಮುಂದಿರಿಸಿದಳು.

ಹೊರಗೆ ಎಲ್ಲಿಂದಲೋ ಕಾಡುಹಕ್ಕಿಯೊಂದು ಕೂಗುತ್ತಾ ಮಾಡಿನ ಮೇಲಕ್ಕೆ ಹಾರಿ ಹೋಯಿತು. "ಅಪ್ಪ ನನ್ನ ಹೊಡೀತಿಯಾ?... ನೀನು ಒಳ್ಳೆಯವನಲ್ಲವೇ." ಕೇಳಿದ ಕೃಷ್ಣ ಬೆದರಿದ ಧ್ವನಿಯಲ್ಲಿ.

'ಛೇ, ತಮ್ಮ ಸಿಟ್ಟನ್ನು ಮಕ್ಕಳ ಮೇಲೆ ತೀರಿಸಿಕೊಳ್ಳುವುದು ಸರಿಯಲ್ಲ' ಖಿನ್ನನಾದ ಅವನು ಕೃಷ್ಣನನ್ನು ಬಿಗಿದಪ್ಪಿ ಮುದ್ದಿಸಿ ಬರ್ಫಿಯ ತುಂಡನ್ನು ಬಾಯಿಗಿರಿಸಿದ. ಕೃಷ್ಣ ಇನ್ನೊಂದು ತುಂಡಿನ ಆಸೆಯಿಂದ ಅವನ ತೊಡೆಯಿಂದ ಹಾರಿ ತಾಯಿಯ ಹಿಂದೆ ಕೆಳಗಿಳಿದು ಹೋದ.

ಬೆಳಗ್ಗೆ ಅಲ್ಲಿರಿಸಿದ ತಟ್ಟೆಯಲ್ಲಿ ತಿಂಡಿ ಹಾಗೇ ಇತ್ತು. ತುಂಬಿದ ಹಾಲಿನ ಲೋಟದಲ್ಲಿ ಸತ್ತ ಜಿರಲೆಯೊಂದು ತೇಲುತ್ತಿತ್ತು.

* * * * *

ಚಳಿಗಾಲದಲ್ಲಿ ಬೋಳು ಬೋಳಾಗಿದ್ದ ಮರಗಳಲ್ಲಿ ಹೊಸ ಚಿಗುರು ಕಂಗೊಳಿಸಿತು. ಹೊಸ ತಳಿರು, ಹಸಿರೆಲೆ, ವಿವಿಧ ಹೂವುಗಳಿಂದ ಅಲಂಕೃತಳಾದ ಪ್ರಕೃತಿ ನೋಡುವವರ ಕಣ್ಮನಗಳಿಗೆ ಹುಚ್ಚೆಬ್ಬಿಸಿದಳು. ಬಿದಿರು ಮೆಳೆಗಳಿಂದ 'ಬೋಂ' ಎಂದು ಬೀಸುವ ಗಾಳಿ, ಹೂವಿನಿಂದ ಹೂವಿಗೆ ಹಾರುವ ದುಂಬಿಗಳ ದಂಡು, ಹೊಸ ಹುರುಪಿನಲ್ಲಿ ಹಾಡುತ್ತಿರುವ ಪಕ್ಷಿ ಸಮೂಹ, ಕೋಗಿಲೆಯ ಇಂಚರ, ಮಾವಿನ ಹೂವುಗಳ ಮಧುರ ಕಂಪು, ವಸಂತೋತ್ಸಾಹದಿಂದ ಪ್ರಕೃತಿ ನಗುತ್ತಿದ್ದಾಳೆ.

ಆದರೆ ಇದೇನು, ದೇವನ ಹೃದಯದಲ್ಲಿ ನಿರಾಸೆಯ ಕಾರ್ಮುಗಿಲು. ಸುನೀತಿಯ ಸ್ವಭಾವ ಒಗಟಾಗಿದೆ ಅವನ ಪಾಲಿಗೆ. ಹತ್ತಿರವಿದ್ದರೂ ಅವಳು ಸಹಸ್ರಮೈಲು ದೂರ ದಲ್ಲಿದ್ದಾಳೆ. ಎಂದಿನಂತೆ ಮೆಚ್ಚುಗೆಯ ಮಾತಿಲ್ಲ, ಪ್ರೀತಿಯ ನೋಟವಿಲ್ಲ. ಅವಳ ನಿರಾಸಕ್ತಿ ನೋಡಿದರೆ 'ಸದ್ಯ ತಾನೇನೋ ಕಳೆದುಕೊಳ್ಳುತ್ತಿದ್ದೇನೆ' ಎಂಬ ಅನುಮಾನ.

ಅವನು ತನ್ನ ಮನಸ್ಸನ್ನು ಅಧ್ಯಯನದಲ್ಲಿ ತೊಡಗಿಸಿದ. ಭಗವದ್ಗೀತೆ, ಉಪನಿಷತ್ತು, ಇನ್ನಿತರ ವೇದಾಂತದ ಗ್ರಂಥಗಳಲ್ಲದೆ ಬೈಬಲನ್ನು ತಂದು ಓದಿದ. ಆಗಾಗ ತನ್ನಲ್ಲೇ ಅಂದುಕೊಳ್ಳುವ, 'ಈ ಶರೀರ ಇರುವ ತನಕವೂ ಸಹಸ್ರ ಬಯಕೆಗಳು. ಶರೀರ ಹೋದ ನಂತರ ಇನ್ನೇನೂ ಇಲ್ಲ!' ತನ್ನ ತಂದೆ ಹೇಳಿದ ವಿಷಯವನ್ನು ಸುನೀತಿಗೆ ಮನವರಿಕೆ ಮಾಡಲು ಯತ್ನಿಸುತ್ತಾನೆ, "ಮನುಷ್ಯನಿಗೆ ಅವನ ಹುಟ್ಟು ಮುಖ್ಯವಲ್ಲ. ಹುಟ್ಟಿನಿಂದ ಯಾರೂ ಒಳ್ಳೆಯವರಾಗುವುದಿಲ್ಲ. ತನ್ನ ಗುಣ-ನಡತೆಗಳಿಂದ, ಮಾಡುವ ಕರ್ಮಗಳಿಂದ ಒಬ್ಬ ಉತ್ತಮನಾಗಬಲ್ಲ. ರಕ್ತ ಮಾಂಸಗಳ ಈ ತೊಗಲಿನ ಶರೀರಕ್ಕೆ ಬೆಲೆಕೊಡಬೇಡ. ಒಳಗಿರುವ ಆತ್ಮನನ್ನು ನೋಡು!"

ಆದರೆ ಸುನೀತಿ ಈ ಮಾತಿಗೆಲ್ಲ ಕಿವುಡಳು. ಮನೆ ಪೂಜೆಗೆ ಬೇರೊಬ್ಬ ವಟುವನ್ನು ಮಾಡಬೇಕೆಂದು ನಾಗಮ್ಮನಲ್ಲಿ ಹೇಳಿದಾಗ ಅವರಿಗೆ ಆಶ್ಚರ್ಯ, "ದೇವನಿಗೆ ಏನಾಗಿದೆ

ಈಗ? ಅವನು ಪೂಜೆ ಮಾಡ್ತಾ ಇಲ್ಲವೇ? ಅವನಂತೆ ಮಂತ್ರ ಹೇಳುವವರು ಯಾರಿದ್ದಾರೆ?"

ದೇವ ಖಿನ್ನನಾದ ಸುನೀತಿಯ ಹೊಸ ವಿಚಾರ ಕೇಳಿ. "ನಿನ್ನ ಅಭಿಪ್ರಾಯ ತಿಳಿಯಲಿಲ್ಲ."

"ದೇವರಿಗೆ ನಮ್ಮಿಂದ ಅಪಚಾರವಾಗಬಾರದು. ಅತ್ತೆ ಹತ್ರ ನೀವು ಮುಚ್ಚಿಟ್ಟರೂ ದೇವರೊಬ್ಬ ನೋಡೇ ನೋಡ್ತಾನೆ."

"ದೇವರಿಗೆ ಮಡಿ ಮೈಲಿಗೆ ಇಲ್ಲ. ಅವನು ಬಯಸುವುದು ಶುದ್ಧ ಪ್ರೇಮ, ಭಕ್ತಿಯನ್ನು. ಬೇಡರ ಕಣ್ಣಪ್ಪ ದೇವರಿಗೆ ಮಾಂಸ ಮದ್ಯಗಳನ್ನು ಅರ್ಪಿಸಿ ತನ್ನ ಕಣ್ಣನ್ನೂ ತೆತ್ತು ಅವನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಲಿಲ್ಲವೇ? ನಿಜವಾದ ಜ್ಞಾನ, ಪರಿಶುದ್ಧ ಅಂತಃಕರಣವಿರುವವನು ಚಾಂಡಾಲನಾದರೂ ಗುರುವಿಗೆ ಸಮಾನ. ಸುನೀತಿ, ನಿನ್ನ ಮನಸ್ಸಿನಲ್ಲಿ ಏನಿದೆಯೋ ಅದನ್ನು ಸ್ಪಷ್ಟವಾಗಿ ಹೇಳಬಾರದೇ?"

"ಅತ್ತೆ ಹತ್ತಿರ ಎಲ್ಲಾ ಹೇಳಿ. ಅವರು ಏನು ಹೇಳ್ತಾರೋ ಹಾಗೆ ಮಾಡೋಣ."

"ಹೇಳಲು ನನಗೇನು ಹೆದರಿಕೆಯಿಲ್ಲ." ಅವಳನ್ನೇ ನಿಟ್ಟಿಸಿದ, "ಆದರೆ ಅಮ್ಮನಿಗೆ ಇದರಿಂದ ಎಷ್ಟು ದುಃಖವಾದೀತೆಂದು ಊಹಿಸುವುದು ಕಷ್ಟ. ಪರಿಣಾಮ ಅಮ್ಮ ನನ್ನನ್ನು ದೂರ ಸರಿಸುತ್ತಾಳೆ. ಜೊತೆಯಲ್ಲಿ ಈ ಮನೆ ಸೊಸೆಯಾದ ನಿನಗೂ ಇಲ್ಲಿ ಸ್ಥಾನವಿಲ್ಲ. ಪಾಪ, ಅದು ನನ್ನ ಕೈಹಿಡಿದ ತಪ್ಪಿಗೆ!"

ಸುನೀತಿ ಗಾಬರಿಯಿಂದ ನೋಡಿದಳು ಅವನನ್ನು.

"ನೀನು ಉಚ್ಚಕುಲದ ಸ್ತ್ರೀ ಇರಬಹುದು. ನಾನು ನಿಕೃಷ್ಟನೂ ಆಗಿರಬಹುದು. ಆದರೆ ಇಲ್ಲಿ ನಮ್ಮಿಬ್ಬರ ಸಂಬಂಧ ಮುಖ್ಯ. ಎಲ್ಲ ಮತಧರ್ಮಗಳೂ ವಿವಾಹಿತ ಸ್ತ್ರೀ ತನ್ನ ಪತಿಯ ಕುಲಬಾಂಧವರನ್ನು ಸೇರಬೇಕು ಎನ್ನುತ್ತವೆ. ನಿನ್ನ ಕುಲ-ಮತಗಳ ಪ್ರಶ್ನೆ ಮದುವೆಗಿಂತ ಮೊದಲಾಯಿತು. ಈಗ ನೀನು ನನ್ನವಳು. ನಾನೇನು ಆಗಿರುವೆನೋ ಅದು ನೀನೂ ಆಗಿದ್ದಿಯಾ." ದೇವ ಸ್ವರ ಇಳಿಸಿ ಅವಳ ಹೆಗಲ ಮೇಲೆ ಕೈ ಇರಿಸಿದ, "ನದೀ ಮೂಲ, ಋಷಿಮೂಲ ನೋಡಬಾರದು. ಮನುಷ್ಯ ಜನ್ಮದ ಹುಟ್ಟು, ಎಲ್ಲಾಯಿತೆಂದು ಚಿಂತಿಸಬಾರದು. ಎಲ್ಲರೂ ಹುಟ್ಟುವುದು ಹೊಲೆತನದಲ್ಲಿ ಜಾತಿ, ಧರ್ಮ, ದೇವರು, ಆಚಾರ ಎಲ್ಲವೂ ಬರುವುದು ಅನಂತರ. ರಕ್ತಮಾಂಸಗಳ ಈ ಮಾನವ ಶರೀರಕ್ಕೆ ಜಾತಿಮತದ ಸಂಕೋಲೆ ಯಾತಕ್ಕೆ?"

ಅವನ ಪ್ರಶ್ನೆಗೆ ಅವಳಲ್ಲಿ ಉತ್ತರವಿರಲಿಲ್ಲ. ಜೀವನದಲ್ಲಿ ಹೊಸತನ್ನು ರೂಢಿಸಿಕೊಳ್ಳುವುದು ಹೇಳಿದಷ್ಟು ಸುಲಭವಲ್ಲ. ಅವಳ ಬಿಗಿದ ಮುಖ, ಬಿಗಿದ ತುಟಿ ನೋಡಿ ಸಮಾಧಾನ ಹೇಳುವ ಕೆಲವು ಶಬ್ದಗಳೂ ಮರೆತುಹೋದವು ದೇವನಿಗೆ. ಗಂಭೀರವಾಯಿತು ಅವನ ಮುಖ. ಈಶ್ವರಯ್ಯನವರು ತಮ್ಮ ಮರಣದ ಕಾಲಕ್ಕೆ ಈ ಸತ್ಯಸಂಗತಿ

ಹೇಳದಿದ್ದರೆ ನಿಜವಾಗಿಯೂ ನಿಶ್ಚಿಂತೆಯಿತ್ತು. ಆದರೆ ತಾನೆಂತಹ ಹೆಡ್ಡ... ಯಾಕೆ ಸುನೀತಿಗೆ ಎಲ್ಲವನ್ನೂ ಹೇಳಿದೆ?....

ಬಹಳ ಹೊತ್ತು ಇಬ್ಬರಲ್ಲೂ ಮೌನ. ಕೊನೆಗೊಮ್ಮೆ ಸುನೀತಿ ಇನ್ನೇನೋ ನೆನಪಾಗಿ ನೀರವವಾಗಿ, ನಿಸ್ತೇಜ ಧ್ವನಿ ತೆಗೆದಳು.

''ಹೇಗೆ ಮನೆ ತೂಗಿಸಿಕೊಳ್ತಿರೋ ನಾನರಿಯೆ. ಒಂದೆಡೆ ಈ ಚಿಂತೆ, ಇನ್ನೊಂದೆಡೆ ಆರ್ಥಿಕ ಚಿಂತೆ.''

''ನಾನಾದರೂ ಏನ್ಮಾಡಲಿ? ಶಶಿಧರನಿಗೆ ಅಮ್ಮ ಕೊಡುವ ಹಣ ನೋಡಿ ಹೊಟ್ಟೆ ಉರಿದು ಹೋಗ್ತಾ ಇದೆ. ಜೊತೆಗೆ ಈ ವಿಧವೆ ಮತ್ತು ಮಕ್ಕಳ ಖರ್ಚು. ಅಮ್ಮನಿಗೆ ಯಾರು ಹೇಳ್ತಾರೆ ಬುದ್ಧಿ?''

''ಶಶಿಧರ ಕೊಬ್ಬಿದ ಗೂಳಿಯಾದದ್ದು ಅತ್ತೆಯ ಮುದ್ದಿನಿಂದ. ಹಳ್ಳಿಯಲ್ಲಿ ಸಿಕ್ಕಿದ ಹುಡುಗಿಯರನ್ನು ತಮಾಷೆ ಮಾಡ್ತಾ ಇರ್‍ತಾನಂತೆ. ಇವತ್ತು ಅರ್ಚಕರ ಹೆಂಡತಿ ಹೇಳಿದರು.''

''ನನ್ನ ಕಿವಿಗೂ ಬಿದ್ದಿದೆ ಈ ಸುದ್ದಿ. ಆದರೆ ನಾನೇ ಕಣ್ಣಾರೆ ನೋಡದೆ ಏನನ್ನೂ ಮಾಡಲಾರೆ. ಅಮ್ಮನಿಗೆ ತನ್ನ ತವರಿನ ರಕ್ತ ಸಂಬಂಧಿಗಳ ವ್ಯಾಮೋಹ, ಪ್ರೀತಿ ಹೆಚ್ಚು. ಅದೇ ಪ್ರೀತಿ ಈ ಸಾಕುಮಗನ ಮೇಲೆ ಹೇಗೆ ಬಂದೀತು?''

''ಇಲ್ಲ, ಅತ್ತೆಗೆ ಅವರಿಗಿಂತಲೂ ನಿಮ್ಮ ಮೇಲೆ ಪ್ರೀತಿ ಹೆಚ್ಚು. ಆವತ್ತು ನೀವು ಹಾಲು ಕುಡಿಯಲಿಲ್ಲವೆಂದು ಸುಮ್ಮನೆ ಕಣ್ಣೀರು ಹಾಕಿದ್ದರು. 'ನಮ್ಮಿಂದಾಗಿ ಅವನು ಹಾಲು ಕುಡಿಯದೆ ಮಲಗಿದನಲ್ಲ. ಅವನ ಮನಸ್ಸಿಗೆ ನೋವಾಗಬಾರದು. ತನಿಯನಿಗೆ ಹಾಲು ಕೊಡೋಣ' ಎಂದರು. ಆಮೇಲೆ ಅದೆಷ್ಟೋ ಹೊತ್ತು ನಿಮ್ಮದೇ ಗುಣಗಾನ.''

''ಮತ್ಯಾಕೆ ಶಶಿಧರನಿಗೆ ಉಪಚಾರ, ನನ್ನ ಮೇಲೆ ಕೋಪ?''

''ಹೆಚ್ಚು ಇಷ್ಟವಿದ್ದವರ ಮೇಲೆ ಪ್ರೀತಿ ತುಂಬಿದ ಕೋಪವೂ ಹೆಚ್ಚಿರುವುದು ಸಹಜ ತಾನೇ. ನೀವು ಅವರ ಅಂಗೈ ಮೇಲೆ ಬೆಳೆದ ಮುದ್ದಿನ ಮಗ. ಅವನೂ ಎಷ್ಟಾದರೂ ಅಣ್ಣನ ಮಗ. ಆವತ್ತು ಸದಾನಂದ ಆಸ್ತಿ ವಿಷಯದಲ್ಲಿ ತಕರಾರು ಮಾಡಿದಾಗಲೆಲ್ಲ ಅವರದು ಒಂದೇ ಉತ್ತರ.''

''ಏನಂತೆ?''

''ಅವನ ವಿಷಯದಲ್ಲಿ ನೀನೇನೂ ಹೇಳಬೇಡ. ಅವನಿಂದ ಕೇಳುವ ಹಕ್ಕು ನನಗಾಗಲಿ, ನಿನಗಾಗಲಿ ಇಲ್ಲ ಎಂದು ಅವನ ಬಾಯಿಮುಚ್ಚಿಸಿದ್ದರು.''

''ಭೇಷ್, ಇದಾದರೆ ಅಮ್ಮನ ನಿಜವಾದ ಮಾತು!'' ಅವಳ ಕೈಮೇಲೆ ತನ್ನ ಕೈಯ್ಯಿರಿಸಿ ತೃಪ್ತಿಯಿಂದ ಕಣ್ಣುಮುಚ್ಚಿದ.

ಸುನೀತಿಯ ಕೈಗಳಲ್ಲಿ ನಡುಕ. ಅರೆ, ಇಷ್ಟು ಹೊತ್ತು ಎಷ್ಟು ಸಹಜವಾಗಿ ತಾನು ಮಾತನಾಡಿದೆ! ಏಕೋ ಇವನು ಬಂದರೆ ಮೊದಲು ಮಾತು ಬೇಡವೆನಿಸಿದರೂ ಅರೆಗಳಿಗೆ ತನ್ನ ಬಾಯಿ ತೆರೆದರೆ ಸಾಕು, ಇವನ ಹೊರತಾಗಿ ಈ ಮನೆಯಲ್ಲಿ ತನಗಾರೂ ಇಲ್ಲವೆನಿಸುತ್ತದೆ. ಇವನ ಆತ್ಮೀಯ ನುಡಿಗೆ ಕರಗುತ್ತದೆ ತನ್ನ ಹೃದಯ. ಇವನ ಧ್ವನಿ ತನ್ನನ್ನು ಸೆಳೆದುಕೊಳ್ಳುತ್ತದೆ.

ಅವಳ ದೃಷ್ಟಿ ತನ್ನ ಕೈ ಮೇಲಿರುವ ದೇವನ ಒರಟು ಹಸ್ತಗಳನ್ನು ದಿಟ್ಟಿಸಿದವು. ಒಂದು ದಿನ ಇಬ್ಬರೂ ಇದೇ ರೀತಿ ಕೈಹಿಡಿದುಕೊಂಡು ಸಂಸಾರಪಥದಲ್ಲಿ ಹೆಜ್ಜೆ ಯಿರಿಸಿದೆವು. ಸದಾ ಒಬ್ಬರನ್ನೊಬ್ಬರು ನಂಬಿ ಪ್ರೀತಿ-ವಿಶ್ವಾಸ ತುಂಬಿದ ನೆಮ್ಮದಿ ಜೀವನ ನಡೆಸುತ್ತೇವೆ ಎಂದುಕೊಂಡೆವು. ಆದರೆ ಈಗೇನಾಯಿತು?

ತುಂಬಿ ಬಂದ ಕಣ್ಣೀರು ದೇವನ ಮುಂಗೈ ಮೇಲುರುಳಿದಂತೆ ಛಕ್ಕನೆ ಕೈಬಿಡಿಸಿ ಕೊಂಡು ಅಲ್ಲಿಂದೆದ್ದುಬಿಟ್ಟಳು. ಎಂದಿನಂತೆ ಆ ರಾತ್ರೆಯೂ ಮೋಡ ಮುಸುಕಿದ ಚಂದ್ರನ ಮಂಕು ಬೆಳಕು ತುಂಬಿತು ಕೋಣೆಯನ್ನು. ನೀರವ ರಾತ್ರೆಯಲ್ಲಿ ವಿರಹ ವೇದನೆಯಿಂದ ಬಳಲಿದ ಹಕ್ಕಿಯೊಂದು ಸಮೀಪದ ಮರದಲ್ಲಿ ಸುಮ್ಮನೆ ಕೂಗಿಕೊಳ್ಳುತ್ತಿತ್ತು.

## ೧೨

ಆಗ ತಾನೇ ಬಂದಿತ್ತು ಸುಜಾತೆಯ ಕಾಗದ. "ಮುಂದಿನ ವಾರ ನಾನು, ಮುರಳೀಧರ, ಧೀರೇಂದ್ರ ಮೆಹತಾ ಮತ್ತು ಅವರ ಪತ್ನಿ, ಸ್ವೀಡನ್‌ನಿಂದ ಬಂದಿರುವ ಮೆಹತಾರ ಗೆಳೆಯ ಡಿ. ಮಾರ್ಷಲ್ ಇಷ್ಟು ಜನ ನಿಮ್ಮಲ್ಲಿಗೆ ಬರಲಿದ್ದೇವೆ. ನಮಗಾಗಿ ಹೆಚ್ಚಿನ ತಯಾರಿ ಅನಗತ್ಯ."

ಸಂತೋಷ, ಸಂಭ್ರಮ ಹೊತ್ತು ತಂದ ಕಾಗದ ದೇವನಿಗೆ ಅರೆಕ್ಷಣ ಚಿಂತೆಗೀಡು ಮಾಡಿತು. ಬರುವವರು ಸಾಮಾನ್ಯದ ಅತಿಥಿಗಳಲ್ಲ. ಮುರಳೀಧರನ ಭವ್ಯ ಬಂಗಲೆ ಯೆದುರು ಇದೊಂದು ಮುರುಕು ಗುಡಿಸಲು. ಎಲ್ಲರಿಗೂ ಸ್ಥಳ ಸಾಲದು. ಅಂಗಳದಲ್ಲಿ ಒಂದು ಚಪ್ಪರ ಹಾಕಿಸಿದರೂ ಅತಿಥಿಗಳನ್ನು ಅಲ್ಲಿ ಮಲಗಿಸುವುದೇ? ಸುಜಾತೆ ಈಗಾಗಲೆ ತನ್ನನ್ನು ಹಾಡಿ ಹೊಗಳಿ ಬರುವವರಲ್ಲಿ ಕಲ್ಪನೆಯ ರಂಗೇರಿಸಿರಬಹುದು. ಬಂದಾಕ್ಷಣ ಈ ಮುರುಕು ಗುಡಿಸಲು ಎಂಥ ಆತಿಥ್ಯ ನೀಡೀತು...

ತನ್ನ ಮನದ ಆತಂಕವನ್ನು ಸುನೀತಿಗೆ ಹೇಳುತ್ತಿದ್ದಂತೆ ಅಲ್ಲೇ ಇದ್ದ ಶಶಿಧರನಿಂದ ಬಾಣದಂತೆ ಬಂದಿತು ಉತ್ತರ-

"ಬಡವರ ಉದ್ಧಾರಕ್ಕೆ ಹೊರಟ ಧರ್ಮರಾಯನ ಮನೆ ಯಾವಾಗಲೂ ಸುದಾಮನ ಗುಡಿಸಲು! ಅವರಿಗೂ ತಿಳಿಯಲಿ ನಿಮ್ಮ ಬವಣೆ."

"ಬಾಯ್ಮುಚ್ಚು ಅಧಿಕಪ್ರಸಂಗಿ! ನಮ್ಮ ಮಾತಿನ ಮಧ್ಯೆ ನಿನ್ನ ಒಗ್ಗರಣೆ ಬೇಡ."

ಶಶಿಧರ ಈ ದಿನಗಳಲ್ಲಿ ಇನ್ನೂ ಉಂಡಾಡಿ ಗುಂಡನಾದದ್ದು ನಿಜ. ಪೊದೆ ಮೀಸೆ ಬೇರೆ ಬೆಳೆಸಿದ್ದಾನೆ. ದಿನವೆಲ್ಲ ತನ್ನನ್ನು ಅಲಂಕರಿಸಿಕೊಂಡು ತಿರುಗುವುದೊಂದೇ ಕೆಲಸ. ಸದಾನಂದನೂ ಅನೇಕ ದಿನಗಳಿಂದ ಕಲ್ಯಾಣಪುರಕ್ಕೆ ಬಂದಿಲ್ಲ. ಅಕ್ಕನ ಮೇಲಿರುವ ನಂಬಿಕೆ ಕುಸಿದಿರುವುದೇ ಇದಕ್ಕೆ ಕಾರಣ! ಹೇಗಾದರೂ ಅಕ್ಕನ ಮನವೊಲಿಸಿ ದೇವನ ಹೆಸರಿಗಾದ ಆಸ್ತಿಯಲ್ಲಿ ಅರ್ಧಪಾಲನ್ನು ತನ್ನ ಹೆಸರಿಗೆ ಬರೆಯಿಸಿಕೊಳ್ಳುವ ಆಸೆ ಹುಸಿಯಾಗುತ್ತಿದೆ. ಆದರೂ ಅವನಿನ್ನೂ ನಿರಾಸೆ ತಳೆದಿಲ್ಲ. ಆದರೆ ಶಶಿಧರನಿಗೆ ಇದಾವುದೂ ಬೇಡ. ಇತ್ತೀಚೆಗೆ ಅವನ ಅಧಿಕಪ್ರಸಂಗದ ಮಾತುಗಳೂ ಹೆಚ್ಚಾಗುತ್ತಿದ್ದು ದೇವನ ತಲೆ ತಿನ್ನುವ ಕೀಟವಾಗಿದ್ದಾನೆ.

ಇವತ್ತೂ ದೇವನಿಂದ ಹೇಳಿಸಿಕೊಂಡು ಮತ್ತೆಲ್ಲೋ ಅಲೆಯಲು ಹೊರಟುಹೋದ ನಿಶ್ಚಿಂತೆಯಲ್ಲಿ. ಅದೇ ಮಧ್ಯಾಹ್ನ ನಿರೀಕ್ಷಿಸದ ಸಂಗತಿಯೊಂದು ಜರುಗಿಹೋಯಿತು.

ಅಂದು ಮಧ್ಯಾಹ್ನ ಸುಮಾರು ಮೂರು ಗಂಟೆ ಸಮಯ, ದೇವ ತನ್ನ ಕೆಲಸದವರೊಡನೆ ಅಡಿಕೆ ತೋಟದಲ್ಲಿದ್ದಾಗ ಹೊಳೆ ದಡದಿಂದ ರಾಮ ನಾಯ್ಕನ ಎರಡನೇ ಮಗಳು ರಾಧೆ ಎದುಸಿರು ಬಿಡುತ್ತ ಓಡಿಬರುವುದು ಕಾಣಿಸಿತು. ಹುಡುಗಿಯ ಮುಖ ಕೆಂಪಾಗಿದೆ, ಭೀತಿಯಿಂದ ನಡುಗುತ್ತಿದ್ದಾಳೆ.

"ಅಣ್ಣಯ್ಯ..." ದೇವನನ್ನು ನೋಡಿದಾಕ್ಷಣ ಆರ್ತಧ್ವನಿ ತೆಗೆದಳು "ಆ ಹುಲಿಯಿಂದ ನನ್ನನ್ನು ರಕ್ಷಿಸಿ!"

"ಹುಲಿ!" ದೇವ ಬೆರಗಾಗಿ ಕೂಡಲೇ ಕತ್ತಿ ಎತ್ತಿಕೊಂಡ. ಹತ್ತಿರದಲ್ಲೇ ಇತ್ತು ಹಾರೆ, "ಎಲ್ಲಿದೆ ಹುಲಿ? ...ಕಾಡಿನಲ್ಲಿಯೇ? ಹೊಳೆದಡದಲ್ಲಿಯೇ?"

"ಅದು ಮನುಷ್ಯ ಹುಲಿ. ಆ ಹುಲಿಯಿಂದ ಈ ಹಳ್ಳಿಯಲ್ಲಿ ಯಾವ ಹುಡುಗಿಗೂ ಉಳಿಗಾಲವಿಲ್ಲ."

"ಏನೇ ನಿನ್ನ ಮಾತು?" ಸದ್ಯ ಬಂದದ್ದು ಹುಲಿಯಲ್ಲ ಎಂದು ತಿಳಿದ ಮೇಲೆ ಧೈರ್ಯದಿಂದ ಎರಡು ಹೆಜ್ಜೆ ಮುಂದಿಟ್ಟ.

ರಾಧೆ ಕೆದರಿದ ತಲೆಗೂದಲನ್ನು ಹಿಂದಕ್ಕೆ ತಳ್ಳಿ ಕಾಡಿನತ್ತ ಬೆರಳು ತೋರಿಸಿದಳು. ಅವಳು ಹೇಳಿದ ವಿಷಯ ಕೇಳುತ್ತ ಹೋದಂತೆ ಅವನ ಸರ್ವಾಂಗವೂ ಕಂಪಿಸಿತು ಕೋಪದ ಜ್ವಾಲೆಯಲ್ಲಿ. ಸೊಪ್ಪಿಗಾಗಿ ಬಂದ ರಾಧೆಯ ಮೈಮೇಲೆ ಹಾರಿ, ಸೀರೆಗೆ ಕೈಹಾಕಿ ಮರದತ್ತ ಎಳೆದನಂತೆ ಆ ಘಟಿಂಗ. ಬೇರೆ ಯಾರೂ ಅಲ್ಲ ಶಶಿಧರ! ಅವನಿಂದ ತಪ್ಪಿಸಿಕೊಂಡು ಓಡಿಬಂದದ್ದು ಅವಳ ಪುಣ್ಯ!

"ಈಗೆಲ್ಲಿದ್ದಾನೆ?" ಗುಡುಗಿದ ನೆಲ ಅದುರುವಂತೆ.

"ನನ್ನ ಹಿಂದೆ ಇದ್ದ. ಈಗೆಲ್ಲೋ ಕಾಡಿನಲ್ಲಿ ಅಡಗಿರಬೇಕು."

ದೇವ ತಡಮಾಡದೆ ಹಾರೆ ಹೆಗಲಿಗೇರಿಸಿ, ಬಲಗೈಯ್ಯಲ್ಲಿ ಕತ್ತಿ ಹಿಡಿದು ಸೀದಾ ನಡೆದ ಕಾಡಿನತ್ತ. ಅವನ ಹೆಜ್ಜೆಗೆ ಕಾಲ ಕೆಳಗಿನ ಭೂಮಿ ಕುಸಿಯುತ್ತಿದೆ. ಕ್ರೋಧಕ್ಕೆ ಸುತ್ತಮುತ್ತಲಿನ ಎಲೆ-ಮರಗಳೂ ಸುಡುತ್ತಿವೆ. ನಡೆವ ಠೀವಿ, ಹೋಗುವ ರಭಸ ನೋಡಿದರೆ ಪುರಾಣದ ಪರಶುರಾಮನನ್ನೂ ಮೀರಿಸಿದ್ದಾನೆ. ಅವನ ವಿಶಾಲವಾದ ಎದೆ, ಕಟ್ಟುಮಸ್ತಾದ ಮೈಕಟ್ಟು ನಡುಗುತ್ತಿದೆ ರೋಷದಲ್ಲಿ.

ಕಾಡನ್ನೆಲ್ಲ ಸುತ್ತಿದರೂ ಶಶಿಧರ ನಾಪತ್ತೆ. ಹೊಳೆದಡದಲ್ಲಿ ಸುಳಿವಿಲ್ಲ. "ಎಲ್ಲಿದ್ದಾನೆ ಆ ಮೂರ್ಖ?" ಅಬ್ಬರಿಸಿದ ತೋಟದಲ್ಲಿದ್ದ ಕೆಲಸಗಾರರಿಗೆ. "ಈಗಷ್ಟೇ ಮನೆ ಕಡೆ ಹೋದರು" ಎಂದ ಒಬ್ಬ.

ಹಾರೆ, ಕತ್ತಿಯನ್ನು ಅಲ್ಲೇ ಬಿಸಾಡಿ ದಾಪುಗಾಲಿಡುತ್ತ ನಡೆದ ಮನೆಯತ್ತ. ಅವನಿಗೆ ಗೊತ್ತು, ಅವೆರಡೂ ಕೈಯಲ್ಲಿದ್ದರೆ ಏನಾದರೂ ಅನಾಹುತ ಆಗುತ್ತದೆ ಎಂದು. ಮನೆಗೆ ಬಂದಾಗ ಹೊರ ಮೆಟ್ಟಲಿನ ಮೇಲೆ ಶಶಿಧರನ ಸುಂದರವಾದ ಪಾದರಕ್ಷೆಗಳು 'ಅವನು ಒಳಗಿದ್ದಾನೆ!' ಎಂಬಂತೆ ನಕ್ಕವು. ಅವನ್ನು ಒದ್ದು ಝಾಡಿಸಿದ ಮಾರುದೂರಕ್ಕೆ "ಶಶೀ...!" ಬೊಬ್ಬಿರಿದ ಮನೆಗೆಲ್ಲಾ ಕೇಳುವಂತೆ. ಆಗಲೇ ಅಡಿಗೆಕೋಣೆ ಸೇರಿ ಕಾಫಿ ಹೀರುತ್ತಿದ್ದ ಶಶಿಧರನ ಕೈಯ್ಯಿಂದ ಲೋಟ ಕಸಿದು ಬಿಸಾಡಿ ಅಂಗಿ ಕಾಲರು ಹಿಡಿದು ಮುಷ್ಟಿಯಿಂದ ಗುದ್ದಿದ ಮುಖದ ಮೇಲೆ.

"ಹೆಣ್ಣಿಗ! ಇವತ್ತೇನು ಮಾಡಿದೆ ಕಾಡಿನಲ್ಲಿ?"

ದೇವನ ಅವತಾರ ನೋಡಿ ಶಶಿಧರನ ಜೀವ ಬಾಯಿಗೆ ಬಂದಂತಾಗಿ "ಅತ್ತೆ..." ಎಂದು ಒರಲಿದ ವಿಕಾರ ಸ್ವರದಲ್ಲಿ.

"ಕಾಡಿನಲ್ಲಿ, ಊರಿನಲ್ಲಿ ನಿನ್ನದೇ ಸಾಮ್ರಾಜ್ಯವಲ್ಲವೇ? ಇನ್ನೂ ಮೀಸೆ ಬಲಿತಿಲ್ಲ, ಆಗಲೇ ಪ್ರಾರಂಭವಾಗಿದೆ ರಾಸಕ್ರೀಡೆ. ನಿನ್ನಿಂದ ಊರ ಹೆಣ್ಣುಮಕ್ಕಳು ಮರ್ಯಾದೆಯಾಗಿ ಓಡಾಡುವಂತಿಲ್ಲ. ಬೊಗಳೋ... ತೋಟದ ತೆಂಗು, ಅಡಿಕೆ ಕದ್ದು ಮಾರಿಯಾಯ್ತು, ಇನ್ನು ನಿನಗೆ ಹುಡುಗಿಯರ ಗೀಳು" ಅವನ ಭುಜಬಗ್ಗಿಸಿ ಹೊಡೆಯತೊಡಗಿದ ಬೆನ್ನ ಮೇಲೆ.

ಶಶಿಧರ ಕೊಸರಿಕೊಳ್ಳುತ್ತಿದ್ದಂತೆ ಏಟಿನ ಮೇಲೆ ಬಿತ್ತು ಏಟು. ನಾಗಮ್ಮ ದೇವನ ಕೆಂಪಾದ ಕಣ್ಣುಗಳು, ಭೀಭತ್ಸ ಮುಖ ನೋಡಿ ಹೆದರಿ ರಕ್ಷಣೆಗೆಂದು ಧಾವಿಸಿ ಬಂದಾಗ ದೇವ ಅವರನ್ನೂ ಅತ್ತ ನೂಕಿದ.

"ಇವನ ಅಹಂಕಾರ ಇಳಿಸಿ ಆಮೇಲೆ ಬಿಡ್ತೇನೆ. ನಮ್ಮವನು ಎಂದು ಸಲುಗೆ ಕೊಟ್ಟಿದ್ದು ಹೆಚ್ಚಾಯ್ತು." ಎನ್ನುತ್ತ ಕುತ್ತಿಗೆಗೆ ಕೈಹಾಕಿ ದರದರನೆ ಎಳೆದು ತಂದ ಹೊರಗೆ, "ಇನ್ಮೇಲೆ ನಿನ್ನ ನೆರಳು ಈ ಮನೆಯಲ್ಲಿ ಹಾಯಬಾರದು. ನಡಿ, ಈಗಲೇ ಈ ಮನೆಯಿಂದ ತೊಲಗಬೇಕು... ಹೂಂ..." ಹೂಂಕರಿಸುತ್ತ ಹೊರಬಾಗಿಲಾಚೆ ನೂಕಿದ ಅವನನ್ನು.

ಆ ರಭಸಕ್ಕೆ ಆಯತಪ್ಪಿದ ಶಶಿಧರ ಮೆಟ್ಟಿಲುಗಳಾಚೆ ಧಡಾರನೆ ಬಿದ್ದು ಹೊಸ್ತಿಲಿನ ಬದಿ ಹಣೆಗೆ ತಾಗಿ ಝಿಲ್‌ನೆ ರಕ್ತ ಚಿಮ್ಮಿತು. ಹಾಗೆ ಬಿದ್ದವನು ಹೆಡೆಯೆತ್ತಿದ ಸರ್ಪದಂತೆ ಭುಸುಗುಡುತ್ತ ಎದ್ದು ಹಾರಿದ ದೇವನ ಮೇಲೆ, "ನನ್ನ ಅತ್ತೆ ಮನೆಯಲ್ಲಿ ನೀನ್ಯಾರೋ ಕೇಳುವವನು. ನನ್ನ ಖುಷಿಯಂತೆ ಇರಬಲ್ಲೆ."

ದೇವ ನಿರೀಕ್ಷಿಸಿಕೊಂಡಿದ್ದ ಅವನನ್ನು. ಅವನು ಮೈಮೇಲೆ ಹಾರಿದಾಗ ಜಾಗ್ರತೆಯಾಗಿ ಬದಿಗೆ ಸರಿದು ಹಿಂದಿನಿಂದ ಅವನ ಎರಡೂ ಕೈಗಳನ್ನು ಕಟ್ಟಿ ಒಂದು ಸಾಮಾನನ್ನು ಎತ್ತುವಂತೆ ಅನಾಯಾಸವಾಗಿ ಮೇಲೆತ್ತಿದ. ಏನು ಶಕ್ತಿ ಅವನಲ್ಲಿ! ಶಶಿಧರ ಪ್ರಾಣ ಭೀತಿಯಲ್ಲಿ ತತ್ತರಿಸಿ "ಅತ್ತೇ?" ಎಂದೊರಲುತ್ತ ಝಾಡಿಸತೊಡಗಿದ ಕಾಲುಗಳನ್ನು.

"ನಿನ್ನ ಆಟ ನಿಲ್ಲಬೇಕು, ನೀನು ಈ ಮನೆಯಿಂದ ತೊಲಗಬೇಕು. ಇಲ್ಲಾಂದ್ರೆ ಇಲ್ಲೇ ನೆಲಕ್ಕಪ್ಪಳಿಸಿ ಬಿಡ್ತೇನೆ ತೆಂಗಿನಕಾಯಿ ಅಪ್ಪಳಿಸುವಂತೆ."

ನಾಗಮ್ಮನಿಗೆ ದೇವನ ಅವತಾರ ಕಂಡು ಅಲ್ಲೇ ಮೂರ್ಛೆ ಬರುವಂತಾಯಿತು. ಇವನಿಗಾದರೂ ಯಾಕೆ ಇಷ್ಟು ಕೋಪ? ಅನೇಕ ತಿಂಗಳುಗಳಿಂದ ಶಶಿಧರನ ಮೇಲೆ ಹೊಗೆಯಾಡುತ್ತಿರುವ ಕೋಪ ಇಂದು ಹೊರಹೊಮ್ಮಿದೆ. ಇನ್ನವನು ತಡೆಯಲಾರ. ರುದ್ರಭಯಂಕರ ಶಿವನಂತೆ ಕಾಣಿಸುತ್ತಿದ್ದಾನೆ. ಆ ಗಳಿಗೆಯಲ್ಲಿ ಏನೂ ಆಗಿಹೋಗಬಹುದು. ಸುನೀತಿ, ಜಾಹ್ನವಿ ಮುಂದಿನದನ್ನು ನೋಡಲಾರದೆ ಕಣ್ಣುಮುಚ್ಚಿಕೊಂಡರು.

ದೇವ ಅವನನ್ನು ಅನಾಮತ್ತಾಗಿ ಸುತ್ತಮುತ್ತ ತಿರುಗಿಸಿದ. ಇನ್ನೇನು ಅವನನ್ನು ಕೆಳಗೆ ಅಪ್ಪಳಿಸುತ್ತಾನೆ ಎಂದುಕೊಂಡ ನಾಗಮ್ಮ ಚಿಟ್ಟನೆ ಚೀರಿದರು. ಆದರೆ ದೇವ ಅವನನ್ನು ಹಾಗೇ ಕೆಳಗಿಳಿಸಿ, "ಈಗಲೇ ಇಲ್ಲಿಂದ ತೊಲಗು, ಇನ್ನು ಊರಿನ ಮುಖ ನೋಡಿದಿಯಾದರೆ ನಿನ್ನ ದಿನಗಳೂ ಮುಗಿದವೆಂದು ತಿಳಿ..." ಎನ್ನುತ್ತ ಇನ್ನೊಮ್ಮೆ ಕುತ್ತಿಗೆಗೆ ಕೈ ಹಾಕಿ ನೂಕಿದ.

ಹಿಡಿದು ಮೇಲೆತ್ತಿದ ಪರಿಣಾಮ, ಮತ್ತೆ ನೂಕಿಸಿಕೊಂಡದ್ದು ಸೇರಿ ತಲೆಯೆಲ್ಲಾ ತಿರುಗಿ ಹಲಸಿನಕಾಯಿ ಬಿದ್ದಂತೆ ದೊಪ್ಪನೆ ಬಿದ್ದುಬಿಟ್ಟ. ಆಮೇಲೆ ಹೇಗೋ ಎದ್ದು ಮೈ ಕೊಡಹಿಕೊಳ್ಳುತ್ತ, ಹಣೆಯ ರಕ್ತ ಒರಸಿಕೊಳ್ಳದೆ ಅಂಗಳ ದಾಟಿ ಅಷ್ಟು ದೂರ ನಡೆದು ಹೊರಳಿ ನಿಂತ.

"ಏಯ್.... ಹಂದೀ. ನಾನೇನು ಸುಮ್ಮನೆ ಇರ್ತೇನೆ ಎಂದುಕೊಂಡಿದ್ದಿಯಾ? ಇದಕ್ಕೆ ತಕ್ಕ ಪ್ರತೀಕಾರ ಮಾಡದಿದ್ದರೆ ನಾನು ಶಶಿಧರನೇ ಅಲ್ಲ. ನಿನ್ನ ಅಹಂಕಾರ ತಗ್ಗಿಸದಿದ್ದರೆ ನಾನು ಅಪ್ಪನಿಗೆ ಹುಟ್ಟಿದ ಮಗನಲ್ಲ..." ಎಂದವನೇ ಇನ್ನು ಅವನು ಜಾಂಬವಂತನ ಆಕಾರ ತಾಳಿ ತನ್ನನ್ನು ಹಿಂಬಾಲಿಸಬಹುದೆಂದು ಹೆದರಿ ಉಟ್ಟ ಬಟ್ಟೆಯಲ್ಲಿ ಓಡಿಹೋದ.

"ಪೀಡೆ ತೊಲಗಿತು" ಮೈಧೂಳು ಕೊಡಹಿ ನಕ್ಕಾಗ ನಾಗಮ್ಮನ ಕ್ರೂರ ನೋಟ ಇರಿಯಿತು ಅವನನ್ನು.

"ನೀನೇ ಮುದ್ದು ಮಾಡಿ ಕೆಡಿಸಿದ್ದಿ. ಅಪ್ಪ ಇರುವಾಗ ಈ ಮನೆ ಮೆಟ್ಟಲು ತುಳಿಯಲು ಹೆದರಿದವ. ಈಗ ನೋಡು ಅಹಂಕಾರ. ನನ್ನ ಮನೆಯಲ್ಲಿ ಇವನ ಅಹಂಕಾರ ಸಹಿಸಲಾರೆ. ಅಮ್ಮ, ಈ ತನಕ ನಿನಗಾಗಿ ಬಾಯಿ ಮುಚ್ಚಿದ್ದೂ ತಪ್ಪಾಯ್ತು. ಎಳೆ ಸಿಕ್ಕಿದರೆ ಇಡೀ ಹಚ್ಚಡ ನುಂಗುವ ಕದೀಮರು. ತ್ಸಕ್..."

ನಾಗಮ್ಮ ಗೊಣಗಿಕೊಳ್ಳುವುದು ಕೇಳಿಸಿದರೂ ನಿರ್ಲಕ್ಷ್ಯದಿಂದ ದನದ ಕೊಟ್ಟಿಗೆ ಯತ್ತ ನಡೆದಾಗ ಹಿಂದಿನ ಬಾಗಿಲು ಹಾದು ಅದೇ ಆಗ ಬಂದು ನಿಂತಿದ್ದಳು ಜಾಹ್ನವಿ. ಅವಳ ಮುಖವೂ ಕಂಗೆಟ್ಟಿದೆ. ದೇವನ ಆದರ್ಶ, ಗುಣನಡತೆ ಮೆಚ್ಚಿದ್ದ ಜಾಹ್ನವಿಗೆ ಇವತ್ತು ಶಶಿಧರನನ್ನು ಓಡಿಸಿದ್ದು ಸಂತಸವಿತ್ತರೂ ಅವನ ಭುಗಿಲೆದ್ದ ಕೋಪ ನೋಡಿ ನಡುಗಿಹೋಗಿದ್ದಾಳೆ. ತಾನು ಇವನಿಗೆ ಹೊರೆಯಾದೆನೇ ಎಂಬ ಅಳುಕು.

"ನಿಮ್ಮ ಮನೆ ಕೂಳನ್ನುಂಡು ಮಕ್ಕಳ ಸಂಗಡ ಬದುಕ್ತಾ ಇದ್ದೇನೆ, ಬೇರೆಲ್ಲಿ ಯಾದರೂ ಆಶ್ರಯ ಸಿಕ್ಕಿದರೆ ಖಂಡಿತ ಹೋಗ್ತಾ ಇದ್ದೆವು. ನಮ್ಮ ಮೂವರಿಂದ ನಿಮಗೇನಾದರೂ ತೊಂದರೆಯಾಗಿದ್ದರೆ ತಿಳಿಸಿ, ತಿದ್ದಿಕೊಳ್ತೇವೆ."

"ಸದ್ಯಕ್ಕೆ ಏನೂ ಆಗಿಲ್ಲ. ಆದಾಗ ನೋಡಿಕೊಳ್ಳೋಣ" ಅವನ ಮೈಯ್ಯಲ್ಲೇರಿದ ಆವೇಶದ ಕಾವು ಇಳಿದಿರಲಿಲ್ಲ ಇನ್ನೂ. ಹೀಗಾಗಿ ಮೃದುವಾಗಬೇಕಿದ್ದ ಅವನ ಧ್ವನಿ ಗಡುಸಾಗಿತ್ತು.

ಅಷ್ಟರಲ್ಲಿ ಅನಿರೀಕ್ಷಿತವಾಗಿ ಕೇಳಿಸಿತು ಕಾರಿನ ಸದ್ದು. ನೋಡುತ್ತಾನೆ ಮನೆ ಅಂಗಳದಲ್ಲಿ ಹೊಳೆಯುವ ಹಸಿರು ಕಾರೊಂದು ಬಂದು ನಿಂತಿದೆ. ಕಾರಿನಿಂದ ಕೆಲವರು ಇಳಿಯುವುದೂ ಕಾಣಿಸಿತು. ಓ... ಮುಂದಿನ ವಾರ ಬರಬೇಕೆಂದಿದ್ದವರು ಇವತ್ತೇ ಬಂದರೇ? ಚಿಂತಿತನಾದ ದೇವ.

## ೧೩

ಮನೆ ಅಧಿಕ ಜನರಿಂದ ತುಂಬಿ ಅಲ್ಲೊಂದು ಸಂಭ್ರಮದ ವಾತಾವರಣ ಸೃಷ್ಟಿ ಯಾಯಿತು. ಬಂದವರು ಆರು ಜನರು. ಸುಜಾತೆ, ಮುರಳೀಧರ ಮತ್ತು ಮಗು; ಧೀರೇಂದ್ರ ಮೆಹತಾ ಮತ್ತು ಅವರ ಪತ್ನಿ, ಅಲ್ಲದೆ ಮೆಹತಾರ ಪೆನ್‌ಫ್ರೆಂಡ್ ಆಗಿದ್ದ ಕೆಲವು ಸಮಯಗಳಿಂದ ಭಾರತ ಸುತ್ತಲೆಂದು ಬಂದ ಸ್ವೀಡನ್‌ನ ಡಿ. ಮಾರ್ಷಲ್. ಇವರ ಅನಿರೀಕ್ಷಿತ ಆಗಮನದಿಂದ ಏನು ಮಾಡಬೇಕೆಂದು ಮೊದಲಿಗೆ ಯಾರಿಗೂ ತಿಳಿಯಲಿಲ್ಲ. ಶಶಿಧರನ ಗಲಾಟೆಯಿಂದ ಕ್ರೋಧತಳೆದ ನಾಗಮ್ಮ ಕಾರಿನಿಂದ ಇಳಿದವರನ್ನು ನೋಡಿದರೂ ಒಳಕೋಣೆಗೆ ಸೇರಿಬಿಟ್ಟರು.

"ಹೀಗೆ ಧಿಡೀರನೆ ಬಂದು ನಿಮಗೆ ತೊಂದರೆಯಾಯ್ತು. ಮುಂದಿನವಾರ ಯಾರಿಗೂ ಪುರುಸೊತ್ತು ಇಲ್ಲವಂತೆ. ಈಗಲೇ ಬರಬೇಕಾಯ್ತು." ವಿವರಣೆ ನೀಡಿದ ಸುಜಾತೆ ಅಕ್ಕನ ಕೆಲಸದಲ್ಲಿ ಸಹಾಯಮಾಡಲು ಮುಂದಾದಳು.

ಹಳ್ಳಿಯ ಸಣ್ಣಮನೆ, ಕತ್ತಲೆ ಕೋಣೆಗಳು. ಓಬೀರಾಯನ ಕಾಲದ ಮಿಣುಕು ದೀಪಗಳು. ಸರಿಯಾಗಿ ಮಲಗೋಣವೆಂದರೆ ಸ್ಥಳದ ಅಭಾವ. ಅನುಕೂಲ ಸೊನ್ನೆ. ದೇವ ಕೂಡಲೆ ಕರಿಯನನ್ನು ಕರೆದು ನಾಲ್ಕು ಮುರಿದ ಅಡಿಕೆಮರಗಳನ್ನು ತರಲು ಓಡಿಸಿದ. ತನಿಯನನ್ನು ಶೆಟ್ಟರ ಮನೆಗೆ ಕಳುಹಿಸಿದ ಮೆಟ್ರೋಮ್ಯಾಕ್ಸ್ ದೀಪಗಳನ್ನು ತರಲು. ರಾಮಣ್ಣನಿಗೆ ಶ್ಯಾನುಭಾಗರ ಮನೆಯಿಂದ ಜಮಖಾನಗಳನ್ನು ತರಲು ಹೇಳಿದ. ಕತ್ತಲೆಯೊಳಗೆ ಈ ಎಲ್ಲ ಸಾಮಾನುಗಳಲ್ಲದೆ ಅರ್ಚಕರ ಮನೆಯಿಂದ ಚಪ್ಪರಕ್ಕೆ ಹೊದೆಯಿಸುವ ಮಡಲು ತಟ್ಟಿಗಳೂ ಬಂದವು. ರಾತ್ರೆಯೊಳಗೆ ಮನೆಯೆದುರು ಸಣ್ಣ ಚಪ್ಪರದ ನಿರ್ಮಾಣ. ಕುಳಿತುಕೊಳ್ಳಲು ಜಮಾಖಾನ ಹಾಸಿದರು. ದೀಪಗಳನ್ನು ಬೆಳಗಿಸಿ ಕೊಂಡರು. ಸುಜಾತೆ ಬಂದವರಿಗೆ ಹಾಸು-ಹೊದಿಕೆ ಸಿದ್ಧಪಡಿಸಿದಳು.

ಒಳಗೆ ಅಡಿಗೆ ತಯಾರಿ. ಒಲೆಗಳ ಮೇಲೆ ಹೇರಿದ ತಪ್ಪಲೆಗಳು. ಕಾಯಿ ಹೆರೆಯುವ-ಬೀಸುವ ಗಲಾಟೆ. ಜಾಹ್ನವಿಗೆ ನಿಮಿಷದ ಬಿಡುವಿಲ್ಲ. "ಇವರೆಲ್ಲ ನಮಗೇನು ಸಂಬಂಧ ವೆಂದು ಇಲ್ಲಿ ಬಂದಿದ್ದಾರೆ? ನಮಗೇ ಕಷ್ಟ. ಇನ್ನು ಇವರದೊಂದು ಉಪದ್ರ" ಗೊಣಗಿದರು ನಾಗಮ್ಮ ಅಸಹನೆಯಲ್ಲಿ.

ಸುನೀತಿಗೆ ಅಚ್ಚರಿಯಾಯಿತು. ಶಶಿಧರನನ್ನು ಓಡಿಸಿದನೆಂದ ದೇವನ ಮೇಲೆ ಉಕ್ಕಿದ ಅವರ ಕೋಪ ಇನ್ನೂ ಹಾಗೇ ಇದೆ ಅವರ ಮುಖದಲ್ಲಿ. 'ಅಯ್ಯೋ ಪಾಪ' ಎಂದು ತಮ್ಮನ ಮಗನ ಮೇಲೆ ಮಾತ್ರ ಕನಿಕರ. ಅವರ ದೃಷ್ಟಿಯಲ್ಲಿ ದೇವ ಇನ್ನೂ ಅಪರಾಧಿ!

ಇಕ್ಕಟ್ಟಾದ ಊಟದ ಕೋಣೆಯಲ್ಲಿ ನೆಲದ ಮೇಲೆ ಬಾಳೆ ಎಲೆ ಇಟ್ಟು ಊಟದ ಏರ್ಪಾಟು. ಪಟ್ಟಣದ ಝಗಝಗಿಸುವ ದೀಪದ ಬೆಳಕಿನ ಮುಂದೆ ಇಲ್ಲಿ ದೀಪಗಳು ಮಿಣುಕು ಹುಳದಂತೆ. ಆದರೂ ಎಲ್ಲರ ಮುಖದ ತುಂಬಾ ಸಂತಸದ ನಗು.

ಹೊರಜಗಲಿಯಲ್ಲಿ ಗಂಡಸರಿಗೂ, ಒಳಕೋಣೆಯಲ್ಲಿ ಹೆಂಗಸರಿಗೆ ಮತ್ತು ಮಗುವಿಗೂ ಮಲಗಲು ಏರ್ಪಾಟು ಮಾಡಲಾಯಿತು. ಚಳಿಗಾಲದ ಕೊನೆಯ ದಿನಗಳಲ್ಲಿ ತಂಪಾಗಿತ್ತು ಹವೆ. ಮೆಹತಾ ಮತ್ತು ಡಿ. ಮಾರ್ಷಲ್‌ರಿಗೆ ಈ ಹೊಸ ವಾತಾವರಣದಲ್ಲಿ ಮಲಗಿದಾಕ್ಷಣ ಘೋರ ನಿದ್ರೆ.

"ಶಶಿಧರನ ಸಾಮಾನುಗಳೆಲ್ಲ ಇಲ್ಲೇ ಇವೆ. ನಾಳೆ ಬೆಳಗ್ಗೆ ಯಾರ ಹತ್ತಿರವಾದರೂ ಕಳುಹಿಸಿಕೊಡು" ಎಂದರು ನಾಗಮ್ಮ ದೇವ ಮಹಡಿ ಮೆಟ್ಟಿಲು ಹತ್ತುತ್ತಿದ್ದಾಗ.

"ಸದಾನಂದ ಮಾವ ಬಂದಾಗ ತೆಗೆದುಕೊಂಡು ಹೋಗಲಿ."

"ಶಶಿ ಮನೆಗೆ ಹೋದನೋ ಅಥವಾ ಇನ್ನೆಲ್ಲಿಗೆ ಓಡಿದನೋ. ಪಾಪ, ಮಧ್ಯಾಹ್ನ ಸರಿಯಾಗಿ ಊಟ ಮಾಡಿರಲಿಲ್ಲ."

"ಇನ್ನೂ ಒಳಿತೇ ಆಯ್ತು. ಹಸಿವೆಯಾದರೆ ಬುದ್ಧಿ ಬರುತ್ತದೆ. ತಿಂದು ಗೂಳಿಯಾಗಿದ್ದ ಇಲ್ಲಿ."

ಮಹಡಿಗೆ ಬಂದಾಗ ಸುನೀತಿ ತನ್ನ ಹಾಸಿಗೆ ಸುರುಳಿಯೊಂದಿಗೆ ಕೆಳಗೆ ಹೋಗುವ ತಯಾರಿಯಲ್ಲಿದ್ದಾಳೆಂದು ತಿಳಿದು ಅವಾಕ್ಕಾದ. ಕ್ಷಣದಲ್ಲಿ ಚೇತರಿಸಿದವ ತಡೆದು ನಿಲ್ಲಿಸಿದ.

"ಕೈ ಬಿಡಿ. ನಾನು ಸುಜಾತೆ ಜೊತೆ ಮಲಗ್ತೇನೆ." ಅವನತ್ತ ನೋಡದೆ ಉತ್ತರಿಸಿದಳು.

"ಕೆಳಗಿನ ಕೋಣೆಯಲ್ಲಿ ಅವರಿಗೆ ಮಲಗುವುದಕ್ಕೆ ಸ್ಥಳವಿಲ್ಲ." ದೇವನ ಕಣ್ಣುಗಳು ಮಕ್ಕಳಿಬ್ಬರ ಹಾಸಿಗೆಗಳ ಮಧ್ಯೆ ತನ್ನ ಹಾಸಿಗೆ ನೋಡಿದವು, "ವಿಷ್ಣು ರಾತ್ರೆ ಎದ್ದು ರಂಪ ಮಾಡ್ತಾನೆ. ನೀನಿಲ್ಲೇ ಮಲಗು."

ಸುನೀತಿಯ ಕೈಯಲ್ಲಿದ್ದ ಹಾಸಿಗೆ ಕೆಳಗುರುಳಿತು. ಶಶಿಧರನ ಗಲಾಟೆಯಿಂದ ಬೇಸತ್ತಿದ್ದ ದೇವನಿಗೂ ಮಲಗಿದಾಕ್ಷಣ ನಿದ್ರೆ ಬರಲಿಲ್ಲ. ತಾನು ಮಾಡಿದ್ದು ತಪ್ಪಾಯಿತೇ? ಎಂತಹ ಆವೇಶ ಬಂದಿತ್ತು ತನಗೆ. ಅವನ ಮೇಲೆ ಕೈಮಾಡಬಾರದೆಂದು ಸಂಯಮದಿಂದ ಇದ್ದರೂ ಕೊನೆಗೆ ಸೋತುಹೋದೆ. ಸುನೀತಿ ತನ್ನ ಬಗ್ಗೆ ಏನಂದು ಕೊಂಡಳೋ. ನೀವು ಮಾಡಿದ್ದು ಒಳಿತಾಯಿತು ಎಂದು ಅವಳೇಕೆ ಒಂದೇ ಒಂದು ಮೆಚ್ಚುಗೆಯ ಮಾತನ್ನಾಡಲಿಲ್ಲ? 'ಭೇಷ್, ನೀವಾದರೆ ಧೀರ ಗಂಡಸು' ಎನ್ನಲಿಲ್ಲವೇಕೆ? ಅಮ್ಮನಿಗೆ ತನ್ನ ಮೇಲೆ ಕೋಪ. ಜಾಹ್ನವಿಗೆ ಭೀತಿ. ಆದರೆ ಇವಳೇಕೆ ತನಗೆ ಸಂಬಂಧಿಸದವಳಂತೆ ಇದ್ದಾಳೆ. ಇವಳ ನಿರ್ಲಿಪ್ತತೆ ತನ್ನನ್ನು ಅಧೀರನನ್ನಾಗಿ ಮಾಡುತ್ತಿದೆ. ಈ ಗಳಿಗೆಯಲ್ಲಾದರೂ ಮಾತನಾಡಬಾರದೇ?

ಕೃಷ್ಣನ ಹಾಸಿಗೆ ಬದಿಗೆ ಸರಿಸಿ "ಸುನೀತಿ" ಎಂದು ಕರೆದ ಮೃದುವಾಗಿ. ಮೈ ಅಲುಗಿಸಿದ ಹೂವನ್ನು ಸ್ಪರ್ಶಿಸುವಂತೆ. ಅವಳು ತನ್ನಲ್ಲೇ ಅಳುತ್ತಿರುವುದು ಗಮನಕ್ಕೆ ಬಂದಾಗ ಮೆಲ್ಲನೆ ಬಗ್ಗಿದ ಅವಳತ್ತ.

"ನನ್ನನ್ನು ಕಂಡು ನಿನಗೂ ಸಿಟ್ಟು ಬಂದಿರಬೇಕು. ನಾನು ಶಶಿಧರನನ್ನು ಓಡಿಸಿದ್ದು ತಪ್ಪಾಯಿತೇ? ಅರೆ, ಯಾಕೆ ಅಳ್ತಾ ಇದ್ದೀ?" ಅವಳ ಮುಖವನ್ನು ತನ್ನ ಕೈಯಲ್ಲಿ ಹಿಡಿದು ಕೇಳಿದ.

ಅವನ ಬಿಸಿಯುಸಿರು ಕೆನ್ನೆ ಸೋಂಕುತ್ತಿದ್ದಂತೆ ದಿಗ್ಗನೆ ಎದ್ದು ಕುಳಿತಳು, ಕೈ ಅವನನ್ನು ದೂರ ಸರಿಸಿತು.

"ಬಹಳ ದಿನಗಳಾದವು ಸುನೀತಿ. ಯಾಕೆ ನನ್ನಿಂದ ದೂರ ಸರಿಯುತ್ತಾ ಇದ್ದಿ? ನನ್ನನ್ನು ಇನ್ನೂ ಅರ್ಥಮಾಡಿಕೊಳ್ಳಲಿಲ್ಲವೇ? ಇನ್ನೆಷ್ಟು ದಿನ ಹೀಗೆ ಬೇರೆ ಯಾಗಿರೋಣ?"

ಸುನೀತಿ ಬಿಕ್ಕಳಿಸಿದಳು ತನ್ನಲ್ಲೇ. ಅವಳಲ್ಲೂ ಇದೇ ಪ್ರಶ್ನೆ. ಇನ್ನೆಷ್ಟು ದಿನ ಹೀಗೆ ಬೇರೆಯಾಗಿರಬೇಕು? ಓ... ದೇವರೇ, ದೇವನಿಗಾಗಿ ಪರಿತಪಿಸುತ್ತಿದ್ದ ಅವಳ ಮನಸ್ಸು, ದೇಹ ಜಡವಾಗಿ ಹೋಗಿದೆ. ಮನದಲ್ಲೆದ್ದ ಬಿರುಗಾಳಿ ಶಾಂತವಾಗಿಲ್ಲ ಇನ್ನೂ.

"ನಿನಗಿಷ್ಟವಿಲ್ಲದಿದ್ದರೆ ಬೇಡ ಬಿಡು. ಆದರೆ ನನ್ನನ್ನು ಒಬ್ಬನನ್ನೇ ಬಿಟ್ಟು ಕೆಳಗೆ ಹೋಗಬೇಡ. ಹಾಯಾಗಿ ಮಲಗು."

ಕತ್ತಲೆಯಲ್ಲಿ ಹೊರಬಂದ ಅವನ ನಿಟ್ಟುಸಿರು ಕಲುಕಿತು ಅವಳ ಅಂತರಂಗವನ್ನು. ಕಿಟಕಿಯಿಂದ ಬೀಸಿಬಂದ ಚಳಿಗಾಳಿ ನಡುಗಿಸಿತು ಮೈಯ್ಯನ್ನು.

* * * * *

ಚಳಿಗಾಲದ ಕೊನೆಯ ದಿನಗಳು. ಪ್ರತಿ ಗಿಡ ಮರಗಳೂ ತಮ್ಮ ಹಳೆ ಎಲೆಗಳನ್ನು ಉದುರಿಸಿ ಹೊಸಚಿಗುರು ಪಡೆದು ನಿಂತಿವೆ ಗೆಲುವಿನಿಂದ. ಹಸಿರೆಲೆಗಳ ಮಧ್ಯೆ ಹೂವಿನ ಶೋಭೆಯ ಮೆರುಗು. ಮಾವಿನ ಮರಗಳಲ್ಲಿ ತೇರಿನಂತೆ ಕಂಗೊಳಿಸುವ ಮಧುರ ಕಂಪು ಬೀರುವ ಹೂವುಗಳು, ಗೇರು ಹೂಗಳ ನವಿರಾದ ಕಂಪು, ಪಾರಿಜಾತ-ಸುರಗಿಯ ಹಿತವಾದ ಪರಿಮಳ, ಗದ್ದೆ ಬದಿಯಲ್ಲಿ ಅರಳಿನಿಂತ ಹಳದಿ ಹೂವುಗಳ ಸಾಲು, ಪ್ರಕೃತಿ ಆಗ ತಾನೇ ನವಜನ್ಮ ಪಡೆದಂತೆ ಕಂಗೊಳಿಸುತ್ತಿದ್ದಾಳೆ ಲವಲವಿಕೆಯಿಂದ. ಕೋಗಿಲೆಯ ಕೂಹೂ ಕೂಹೂ ಧ್ವನಿ, ಹಕ್ಕಿಗಳ ಉಲಿತ, ಬೆಳಗಿನ ಇಬ್ಬನಿಯಲ್ಲಿ ತೊಯ್ದು ನೇಸರಿನ ಕಿರಣ ಗಳನ್ನು ತಬ್ಬಿ ಆಹ್ವಾನಿಸುವ ಪ್ರಕೃತಿಯ ಮಡಿಲಲ್ಲಿ ಹೇಗೆ ಒಂದು ವಾರ ಕಳೆಯಿತೋ, ಬಂದ ಅತಿಥಿಗಳಿಗೆ ತಿಳಿಯಲೇ ಇಲ್ಲ.

ಮೆಹತಾ ದಂಪತಿಗಳಿಗೆ ಮನೆಗಿಂತ ಹೊಳೆದಡದಲ್ಲಿರುವ ಹುಳಿ ಮಾವಿನ ಮರದ ನೆರಳು ಹೆಚ್ಚು ಪ್ರಿಯವಾಗಿ ತಮ್ಮ ಹೆಚ್ಚಿನ ಸಮಯ ಕಳೆದದ್ದು ಅಲ್ಲಿಯೇ. ಮೆಹತಾಗೆ ಹೆಚ್ಚಾದರೆ ಐವತ್ತರ ಪ್ರಾಯ. ಪತ್ನಿ ಅವರಿಗಿಂತ ನಾಲ್ಕು ವರ್ಷಕ್ಕೆ ಚಿಕ್ಕವರು. ಆದರೂ ಇಬ್ಬರಲ್ಲಿ ಹರೆಯದ ಉತ್ಸಾಹ. ಎಲ್ಲಿ ಹೋದರೂ ಜೊತೆಯಲ್ಲಿ ತಿರುಗುವವರು. ಮೆಹತಾ ಎಲ್ಲರೆದುರು ಪತ್ನಿಯನ್ನು ರೇಗಿಸಿದರೆ ಪತ್ನಿ ಅವರನ್ನು ಅಷ್ಟೇ ಛೇಡಿಸುತ್ತಾರೆ.

"ನಿಮ್ಮ ಐವತ್ತರ ಹನಿಮೂನ್‌ಗೆ ಕಲ್ಯಾಣಪುರದ ಶುಭಾಶಯಗಳು" ದೇವ ನಕ್ಕು ತಮಾಷೆ ಮಾಡಿದಾಗ "ಅದಕ್ಕೇನಂತೆ, ಅರ್ವತ್ತರ ಹನಿಮೂನ್‌ಗೂ ಶುಭಕೋರುತ್ತ ನಾವಿಬ್ಬರೂ ಮತ್ತೆ ಇಲ್ಲಿಗೇ ಬರ್‍ತೇವೆ" ಎಂದರು ಧೀರೇಂದ್ರ ಮೆಹತಾ ಪತ್ನಿಯ ಬೆನ್ನು ತಟ್ಟಿ.

ಹಳ್ಳಿಯೆಂದರೆ ಮೂಗುಮುರಿಯುವ ಮುರಳೀಧರನಿಗೂ ಇಲ್ಲಿ ಬೇಸರವಾಗಲಿಲ್ಲ. ಸ್ವೀಡನ್‌ನ ಮಾರ್ಷಲ್‌ನಿಗೆ ದಿನದ ಇಪ್ಪತ್ನಾಲ್ಕು ಗಂಟೆ ಸಾಲದು. ಕಲ್ಯಾಣಪುರದ ಮೂಲೆ ಮೂಲೆ ಓಡಾಡಿದ. ಕಾಡು ಹತ್ತಿ ಇಳಿದ. ಹೊಳೆಯಲ್ಲಿ ಮೀನಿನಂತೆ ಈಜಿದ. ದೊಡ್ಡ ದೊಡ್ಡ ಹೆಮ್ಮರಗಳ ಮೇಲೆ ಮರಕೋತಿಯಾದ. ಅವನ ಹೆಗಲ ಕ್ಯಾಮರಾ ಮೂಲೆ ಮೂಲೆಗಳ ನಿಸರ್ಗಸೌಂದರ್ಯವನ್ನು ಸೆರೆಹಿಡಿದುಕೊಂಡಿತು. ಭಾಷೆ ಬರದಿದ್ದರೂ ಎಲ್ಲ ಕೆಲಸದವರೊಡನೆ ಸ್ನೇಹ ಬೆಳೆಸಿದ. ಅವರ ಮನೆ, ಹರಿಜನ ಸಂಘ ನೋಡಿ ಹರ್ಷಿತ ನಾದ. ದೇವ ಸಾಕಿದ ದನಗಳ ಮೇಲೆ ವಿಶೇಷ ಆಸ್ಥೆ. ಒಂದೆರಡು ಬಾರಿ ಹಾಲು ಕರೆದ ಉತ್ಸಾಹದಲ್ಲಿ. ಪರಸ್ಪರ ಭಾಷೆ ತೊಡಕಾಗದಂತೆ ದೇವ ಮತ್ತು ಮಾರ್ಷಲ್‌ರ ಮಧ್ಯೆ ಸುಜಾತೆ ದುಭಾಷಿಯಾದಳು.

ಕೇವಲ ಒಂದು ಸೂಟು, ತೆಳ್ಳಗಿನ ಅಂಗಿ ಇವಿಷ್ಟೇ ಮಾರ್ಷಲ್‌ನ ಉಡುಪು. ಹೆಗಲಿಗೆ ಒಂದು ಕ್ಯಾಮರಾ. ಪರ ಊರು, ಪರಕೀಯ ಭಾಷೆ, ಯಾವ ಜಾತಿಯೋ ಏನೋ. ಆದರೇನಂತೆ, ಮನುಷ್ಯರೆಲ್ಲ ಒಂದೇ! ಅಚ್ಚ ಬಿಳಿಯನೂ, ಆರಡಿ ಎತ್ತರದವನೂ ಆದ ಮಾರ್ಷಲ್‌ಗೆ ಕಪ್ಪು ವರ್ಣದ ತನ್ನ ಭುಜಕ್ಕೆ ಬರುವ ದೇವನೊಂದಿಗೆ ಗಾಢವಾಗಿ ಬೆಸೆದುಕೊಂಡಿತು ಸ್ನೇಹದ ಕೊಂಡಿ.

ನಾಗಮ್ಮನ ಮುಖದ ಮೇಲೆ ಏನೋ ಅಸಮಾಧಾನ. ತಮ್ಮವರಲ್ಲದ ಜನರೊಡನೆ ಬೆರೆಯುವುದು ಅವರಿಗೆ ತಿಳಿಯದು. ಪ್ರತಿದಿನ ಅತಿಥಿಗಳು ಉಂಡ ಎಲೆಗಳನ್ನು ದೇವ ತೆಗೆದು ಸಾರಿಸಬೇಕು. ಒಂದು ದಿನ ಸುನೀತಿ ಮಾರ್ಷಲ್ ಊಟ ಮಾಡಿದ ಎಲೆ ತೆಗೆದಾಗ, "ಆ ಬಿಳಿ ಚರ್ಮದವನು ಎಂಥವನೋ ಏನೋ. ಹೋಗಿ ತಲೆಸ್ನಾನ ಮಾಡಿ ಬಾ." ಎಂದಿದ್ದರು. ಅವರ ಹಳೆ ಸಂಪ್ರದಾಯಗಳನ್ನು ಅರಿತ ಮೆಹತಾ ದಂಪತಿಗಳಿಗೆ ಇದೇನು ಹೊಸ ವಿಷಯವಲ್ಲ.

"ಅಮ್ಮನನ್ನು ತಪ್ಪು ತಿಳಿದು ಯಾರೂ ನಿಮ್ಮ ಮನಸ್ಸು ನೋಯಿಸಿಕೊಳ್ಳಬಾರದು" ಬಂದ ದಿನವೇ ಎಲ್ಲರಿಗೂ ಹೇಳಿದ್ದ ದೇವ.

ವನಭೋಜನವೆಂದು ಹೊಳೆದಡದಲ್ಲಿ ಕಳೆದ ಆ ಒಂದು ಮಧ್ಯಾಹ್ನ ಎಲ್ಲರಿಗೂ ಸವಿನೆನಪು. ನಾಗಮ್ಮನ ಗೈರುಹಾಜರಿಯಲ್ಲಿ ಎಲ್ಲರೂ ಸ್ವತಂತ್ರರು. ಇವರ ನಗುವಿನ ಕೇಕೆಯಿಂದ ತುಂಬಿಹೋಯಿತು ಹೊಳೆ ದಡವೆಲ್ಲ. ಮಾರ್ಷಲ್ ಮತ್ತು ದೇವ ಈಜುತ್ತಲೇ ನೀರಾಟವಾಡಿದ್ದು ಎಲ್ಲರಿಗೂ ಒಂದು ಮೋಜು. ಭೋಜನವಂತೂ ವೈವಿಧ್ಯಮಯ. ಸಾರು, ಸಾಂಬಾರು, ಮೊಸರನ್ನ, ಹುಳಿಯನ್ನ, ವಡೆ, ಪಾಯಸ, ಇನ್ನೂ ಏನೇನೋ. ಕೃಷ್ಣ ಮತ್ತು ಜಾಹ್ನವಿಯ ಮಕ್ಕಳಿಗೆ ಇವೆಲ್ಲ ಹೊಸತು. ಹಳ್ಳಿಯಲ್ಲಿ ಹೀಗೆ ವನಭೋಜನ ಮಾಡುವವರು ಅಪರೂಪ. ದೊಡ್ಡ ಮರವೊಂದರ ನೆರಳಿನಲ್ಲಿ ಮಾತು-ನಗುವಿನ ಮಧ್ಯೆ ಊಟಮಾಡಿದ್ದು ತಿಳಿಯಲಿಲ್ಲ ಯಾರಿಗೂ.

"ಹುಬ್ಬಳ್ಳಿಯಲ್ಲಿ ಎಷ್ಟು ಬಾರಿ ವನಭೋಜನ ಮಾಡಿದ್ದೇವಲ್ಲ. ಆದರೆ ಇವತ್ತಿನಷ್ಟು ಯಾವಾಗಲೂ ಖುಷಿಯಾಗಲಿಲ್ಲ." ಮೆಹತಾ ಡರ್ ಎಂದು ತೇಗಿದರು.

"ಬೆಳದಿಂಗಳ ಊಟವೂ ಇಷ್ಟೇ ಚೆನ್ನಾಗಿರುತ್ತೆ" ಸುಜಾತೆ ಅಂದಳು, "ಈಗ ಮಾತ್ರ ಕೃಷ್ಣ ಪಕ್ಷ."

"ಇನ್ನೊಮ್ಮೆ ಶುಕ್ಲ ಪಕ್ಷದಲ್ಲೇ ಬನ್ನಿ. ಪ್ರತಿದಿನ ಬೆಳದಿಂಗಳ ಊಟ ಮಾಡೋಣವಂತೆ" ದೇವ ಹೇಳಿದಾಗ ಎಲ್ಲರೂ ಹೋಹೋ ಎಂದು ನಕ್ಕುಬಿಟ್ಟರು.

ಇನ್ನೇನು ಎರಡು ದಿನಗಳಲ್ಲಿ ಅವರೆಲ್ಲರೂ ಹೊರಟುಹೋಗಲಿದ್ದಾರೆ. ಸುನೀತಿ ದುಃಖಿತಳಾದಳು ತನ್ನಲ್ಲೇ. ಅತಿಥಿಗಳು ಬಂದ ಸಂಭ್ರಮದಲ್ಲಿ ಬೇರಾವುದನ್ನೂ ಚಿಂತಿಸುವ ಅವಕಾಶವಿರಲಿಲ್ಲ. ದೇವನ ಆತ್ಮೀಯ ಉಪಚಾರದಲ್ಲಿ ಅವಳದೂ ಸಮಪಾಲು. ಅವನು ಒಂದು ಮಾತಿನಿಂದ ಬಂದವರನ್ನು ಉಪಚರಿಸಿದರೆ ಅವಳು ನಾಲ್ಕು

ಮಾತುಗಳಿಂದ ಎಲ್ಲರನ್ನೂ ಸಂತೋಷಪಡಿಸಿದ್ದಾಳೆ. "ಸರಿಯಾದ ಜೊತೆ ಇಬ್ಬರದೂ. ಎಂತಹ ಉಪಚಾರ, ಏನು ಆತ್ಮೀಯತೆ" ಎಂದು ಮೆಚ್ಚಿದ್ದಾರೆ ಮೆಹತಾ ದಂಪತಿಗಳು. ಮಾರ್ಷಲ್‌ನಿಗೆ ಅವರ ಅನ್ಯೋನ್ಯ ದಾಂಪತ್ಯ, ಮುದ್ದಾದ ಮಕ್ಕಳನ್ನೂ ನೋಡಿ ತಾನು ಈಗಲೇ ಮದುವೆಯಾಗಬೇಕೆಂಬ ಉತ್ಸಾಹ ಬಂದಿದೆಯಂತೆ.

ಸುನೀತಿಗೆ ತಂಗಿಯನ್ನು ನೋಡುವಾಗಲೆಲ್ಲ ತನ್ನ ಮನಸ್ಸಿನ ಹೊರೆ ಇಳಿಸಿಕೊಳ್ಳುವ ಉತ್ಕಟ ಇಚ್ಛೆ. ಏಕಾಂತದಲ್ಲಿ ಎರಡು ಬಾರಿ ಬಾಯ್ದೆರೆದವಳು "ನನ್ನ ಗೌರವ, ಪ್ರತಿಷ್ಠೆ ನಿನ್ನ ಕೈಯಲ್ಲಿದೆ ಸುನೀತಿ" ಎಂದು ದೇವ ದೀನ ನೋಟದಿಂದ ಕೇಳಿದಂತಾಗಿ ಬೆಚ್ಚಿ ಬಾಯ್ಮುಚ್ಚಿದ್ದಾಳೆ.

ಹುಬ್ಬಳ್ಳಿಗೆ ಹೊರಡುವ ಹಿಂದಿನ ದಿನ ಸಾಯಂಕಾಲ ಮಾರ್ಷಲ್ ತಮಾಷೆಗಾಗಿ ದೇವನನ್ನು ಕುಸ್ತಿಯಾಟಕ್ಕೆ ಆಹ್ವಾನಿಸಿದ. ಮತ್ತೆ ಕೇಳಬೇಕೇ. ದೇವ ನಿರಾಕರಿಸದೆ ಅಂಗಿ ಕಳಚಿಟ್ಟು ಸಣ್ಣ ಚಡ್ಡಿ ಧರಿಸಿ ಬಂದೇ ಬಿಟ್ಟ ಚಪ್ಪರಕ್ಕೆ. ಸುಜಾತೆ ಒಳಗೋಡಿ ಎರಡು ಜಮಖಾನಗಳನ್ನು ತಂದು ಹಾಸಿದಳು ನೆಲದ ಮೇಲೆ. ನಾಗಮ್ಮ, ಜಾಹ್ನವಿ, ಮೆಹತಾ ದಂಪತಿಗಳು ಅಲ್ಲಲ್ಲೇ ಮೂಲೆ ಸೇರಿ ಕುಳಿತರು. ಹೊರಗಿದ್ದ ಕರಿಯನಿಗೂ ಸುದ್ದಿ ತಲುಪಿ ಆ ಕ್ಷಣ ಎತ್ತಲೋ ಹೋಗಿ ತನ್ನ ನಾಲ್ಕಾರು ಜೊತೆಗಾರರನ್ನು ಕರೆತಂದ ಹೊಸ ಆಟ ನೋಡಲು. ಕೃಷ್ಣ ಚಪ್ಪಾಳೆ ತಟ್ಟಿ ಹುರಿದುಂಬಿಸಿದ ತಂದೆಯನ್ನು. ದೇವನ ದೃಷ್ಟಿ ಬಾಗಿಲಿಗೊರಗಿ ಕುಳಿತ ಸುನೀತಿಯತ್ತ ಹೊರಳಿತು. ಅವಳು ಉತ್ಸಾಹದಿಂದ ಇದ್ದಳಲ್ಲದೆ ದೇವ ಅವಳತ್ತ ಹೊರಳಿದಾಗ ಸಹಜವಾಗಿ ಎಂದಿನ ಕಿರು ಆತ್ಮೀಯ ನಗು ಮೂಡಿತು ಅವಳ ತುಟಿಯಂಚಿನಲ್ಲಿ. ಆ ಒಂದು ನಗುವಿನಿಂದ ದೇವ ಉತ್ಸಾಹ ಇಮ್ಮಡಿಯಾಗಿ "ಹುರ್ರೇ..." ಎಂದು ಕೂಗುತ್ತ ತೊಡೆ ತಟ್ಟಿದ.

ಮಾರ್ಷಲ್ ತುದಿಗಾಲಿನಿಂದ ನೆಲ ಬಡಿದು ತೊಡೆತಟ್ಟಿ ಸ್ವೀಡಿಷ್ ಭಾಷೆಯಲ್ಲಿ ಏನೋ ಹೇಳಿ ದೇವನತ್ತ ಮುಂದುವರಿದ... ಸರಿ, ಕೈಕೈ ಹತ್ತಿಕೊಂಡಿತು. ಒಬ್ಬರ ಮೇಲೊಬ್ಬರು ಉರುಳಾಡುತ್ತ ಕೆಣಕಿದ ಸಲಗಗಳಂತೆ ಗುದ್ದಿಕೊಳ್ಳತೊಡಗಿದರು. ಯಾರ ಬಲ ಹೆಚ್ಚು ಎಂದು ಊಹಿಸುವುದು ಕಷ್ಟಕರ. ಹಾಸಿದ ಜಮಖಾನ ಸರಿಯಿತು ಅತ್ತ ಇತ್ತ. ಸೆಗಣಿ ಸಾರಿಸಿದ ನೆಲದ ಮೇಲೆಯೂ ಧೂಳೆದ್ದಿತು. ಒಬ್ಬ ಅಚ್ಚ ಬಿಳಿಯ, ಇನ್ನೊಬ್ಬ ಅಚ್ಚ ಕರಿಯ... ಗುದ್ದಿಕೊಳ್ಳುವುದೊಂದು ಕಾಣಿಸಿತು ನೋಡುವವರಿಗೆ. ಹಾಂ ಹೂಂ ಎಂಬ ಸದ್ದು. ಸುನೀತಿ ಕುಳಿತಲ್ಲಿಂದ ಎದ್ದಳು. ದೇವ ಕೆಳಗೆ ಬೀಳುತ್ತಿದ್ದಾನೆ... ಮತ್ತೆ ಏಳುತ್ತಿದ್ದಾನೆ. ಎದ್ದು ಮಾರ್ಷಲ್‌ನ ಹೊಡೆತಗಳನ್ನು ಅನುಭವಿಸುತ್ತಿದ್ದಾನೆ. ಮತ್ತೊಮ್ಮೆ ಅವನ ರಟ್ಟೆ ಎಳೆದು ನೆಲಕ್ಕೆ ದೂಡಿದ್ದಾನೆ.

ಸುನೀತಿಯಿಂದ ಇನ್ನು ನೋಡಲಾಗಲಿಲ್ಲ. "ಸುಜೀ, ಅವರಿಗೆ ಕುಸ್ತಿಯಾಟ ಗೊತ್ತಿಲ್ಲ. ಅಲ್ನೋಡು ಹಣೆ ಮೇಲೆ ರಕ್ತ... ಇನ್ನು ನಿಲ್ಲಿಸು" ಕೂಗಿಕೊಂಡಳು ತನಗರಿವಿಲ್ಲದಂತೆ.

ಸ್ವಲ್ಪ ಹೊತ್ತಿನಲ್ಲಿ ಮಾರ್ಷಲ್ ಕೆಳಗುರುಳಿದ. ದೇವ ಅವನ ಮೈಮೇಲೆ ಏರಿ ಕುಳಿತು ವಿಜಯದಿಂದ ತಲೆ ಎತ್ತಿ ಕೈಬೀಸಿದಾಗ ಎಲ್ಲರೂ ಹೋಹೋ ಎಂದು ಹರ್ಷ

ವ್ಯಕ್ತಪಡಿಸುತ್ತ ಎದ್ದು ನಿಂತರು. ಹೊರಗೆ ನಿಂತ ಕೆಲಸದವರೂ ತಮ್ಮ ಯಜಮಾನನ ವಿಜಯ ಕಂಡು 'ಲೇ ಲೇ...' ಎನ್ನುತ್ತ ಚಪ್ಪಾಳೆ ತಟ್ಟತೊಡಗಿದರು.

ತಾನು ಸೋತೆನೆಂದು ಬೇಸರಿಸದ ಮಾರ್ಷಲ್ ದೇವನನ್ನು ತನ್ನ ಹೆಗಲ ಮೇಲೆ ಎತ್ತಿ ಕುಳ್ಳಿರಿಸಿ ವಿಚಿತ್ರ ಧ್ವನಿ ಹೊರಡಿಸುತ್ತ ಕುಣಿಯತೊಡಗಿದ.

'ಶಹಭಾಷ್, ಶಹಭಾಷ್' ಬೆನ್ನು ತಟ್ಟಿದ ಮುರಳೀಧರ. ಜಾಹ್ನವಿ ಬಿಸಿ ಕಾಫಿ ತಂದು ಕೊಟ್ಟಳು ಇಬ್ಬರಿಗೂ. ಸುನೀತಿಗೆ ದೇವನ ಆಯಾಸದ ಮುಖ, ಧೂಳು ಮತ್ತು ಬೆವರಿನಿಂದ ತೋಯ್ದ ಶರೀರ ನೋಡಿ ಅಯ್ಯೋ ಎನಿಸದಿರಲಿಲ್ಲ. ಎಂದೂ ಕುಸ್ತಿಯಾಟಕ್ಕಿಳಿಯದ ದೇವನ ಮೈ ಸಣ್ಣಗೆ ನೋಯುತ್ತಿತ್ತು. ಸ್ನಾನ ಮುಗಿಸಿ ಬಂದರೂ ಮೈ ನೋವು ನಿಲ್ಲಲಿಲ್ಲ. ಕುತ್ತಿಗೆ ಎಲ್ಲೋ ಉಳುಕಿದೆ. ತೊಡೆ ಬದಿಯಲ್ಲಿ ಅಪಾರ ನೋವು.

"ಹುಬ್ಬಳ್ಳಿಯಲ್ಲಿ ಪ್ರತಿ ವರ್ಷ ಕುಸ್ತಿ ಪಂದ್ಯ ನಡೆಯುತ್ತದೆ. ಆಗ ಬನ್ನಿ. ಬಹುಮಾನ ನಿಮ್ಮ ಪಾಲಿಗೆ" ಎಂದ ಮುರಳೀಧರ ಗೆದ್ದವನನ್ನು ಅಭಿನಂದಿಸುತ್ತ.

"ಅಕ್ಕ ನಿಮಗೇನೋ ಆಗುತ್ತದೆಯೆಂದು ಎಷ್ಟು ಹೆದರಿದಳು. ಮೊದಲು ಅವಳನ್ನು ಸಮಾಧಾನಪಡಿಸಿ" ನಕ್ಕಳು ಸುಜಾತೆ.

"ಹಾಗೋ! ನನಗೇನಾದರೂ ಅವಳಿಗೇನಂತೆ ದುಃಖ? ಈ ದೇಹ ನನ್ನದು, ಅವಳದಲ್ಲ!"

"ನಿನ್ನನ್ನು ನೋಡಿದರೆ ಹೊಟ್ಟೆಕಿಚ್ಚಾಗುತ್ತೆ ಅಕ್ಕ" ಸುಜಾತೆ ಅಕ್ಕನ ಗಲ್ಲ ತಟ್ಟಿದಳು. "ಭಾವನಂತಹ ಗಂಡನನ್ನು ಪಡೆಯಲು ನೀನು ಪುಣ್ಯ ಮಾಡಿದ್ದೀಯಾ!"

* * * * *

ಮುರಳೀಧರನ ತೊಡೆಯ ಮೇಲೆ ಮಲಗಿದ್ದ ವಿಷ್ಣುವನ್ನು ಎತ್ತಿಕೊಂಡು ಸುನೀತಿ ಮಹಡಿಗೆ ಬಂದಾಗ ಅಷ್ಟು ಹೊತ್ತಿಗಾಗಲೆ ದೇವ ನಿದ್ದೆಹೋಗಿದ್ದ. ಅವನ ಬದಿಯಲ್ಲಿ ಮಲಗಿಬಿಟ್ಟಿದ್ದಾನೆ ಕೃಷ್ಣ. ವಿಷ್ಣುವನ್ನು ತೊಟ್ಟಿಲಲ್ಲಿ ಮಲಗಿಸಿ ಚಿಮಣಿದೀಪ ಆರಿಸಲೆಂದು ದೇವನ ಹಾಸಿಗೆಯ ಬಳಿ ಬಂದವಳು ಫಕ್ಕನೆ ಅಲ್ಲೇ ಕುಳಿತುಬಿಟ್ಟಳು. ದೀಪದ ಬೆಳಕಿನಲ್ಲಿ ದೇವನ ಮುಚ್ಚಿದ ಕಣ್ಣುಗಳನ್ನು ನೋಡುತ್ತಿದ್ದಂತೆ ಏನೋ ವೇದನೆ, ವಿಚಿತ್ರ ಸಂಕಟ. ತುಂಬಿದ ಕೆನ್ನೆ, ಗುಂಗುರು ಕೂದಲು, ತೀಡಿಟ್ಟ ಹುಬ್ಬು, ವಿಶಾಲವಾದ ಎದೆಯ ಮೇಲೆ ಅರ್ಧಸರಿದ ಹೊದಿಕೆ. ಬಲಗೈಯನ್ನು ತಲೆ ಕೆಳಗಿಟ್ಟು, ಎಡಗೈಯನ್ನು ಚಾಚಿ ಮಲಗಿದ್ದಾನೆ. ಆಯಾಸಗೊಂಡವನಿಗೆ ಅವಳು ಹತ್ತಿರ ಬಂದರೂ ಎಚ್ಚರವಿಲ್ಲ.

ಅರಿಯದೆ ಅವಳ ಕೈ ಅವನ ಕೂದಲನ್ನು ನೇವರಿಸಿತು. ಮಾರ್ಷಲ್ ಜೊತೆ ಕುಸ್ತಿಗಿಳಿದಾಗ ನಿಜವಾಗಿಯೂ ಅವರಿಗೇನೋ ಆಗಿಹೋಗುತ್ತದೆಂದು ಎಷ್ಟು ಹೆದರಿದೆ ತಾನು? ಹಾಗೇನಾದರೂ ಆಯಿತೆಂದರೆ ತನಗೆ ತಡೆದುಕೊಳ್ಳುವ ಶಕ್ತಿ ಖಂಡಿತ ಇಲ್ಲ. ತನ್ನೊಂದಿಗೆ ಇವರು ಬೇಕು. ಯಾಕೆ ಈ ಮೋಹ? ಕುಸ್ತಿಯಾಡಿ ಅಭ್ಯಾಸವಿಲ್ಲದೆ ಎಷ್ಟು

ಆಯಾಸಗೊಂಡರೋ. ಮೈ ಕೈ ಎಲ್ಲಾ ನೋಯುತ್ತಿರಬಹುದು. ತನ್ನೊಂದಿಗೆ ಏನನ್ನೂ ಹೇಳಿಕೊಳ್ಳಲಿಲ್ಲ. ತಾನು ಹಾಲು, ತುಪ್ಪ ಬಡಿಸಲು ಬಂದರೆ ತಲೆ ಎತ್ತದೆ ಬೇಡ ಎಂದರಲ್ಲವೇ. ಯಾಕೋ ಸರಿಯಾಗಿ ಊಟ ಮಾಡಿಲ್ಲ.

ಮೆಲ್ಲನೆ ಮುಂದಕ್ಕೆ ಬಾಗಿ ಅವನ ಕೂದಲಿನಲ್ಲಿ ಮುಖವಿರಿಸಿದಳು. ಆ ಗಳಿಗೆಯಲ್ಲಿ ಅವಳ ನರನಾಡಿಯಲ್ಲಿ ಅದೇ ಹಿಂದಿನ ರೋಮಾಂಚನದ ಅನುಭವ. ದೇವ ನಿದ್ದೆಯಲ್ಲಿ ನಗುತ್ತಿರುವಂತೆ ಭಾಸವಾಯಿತು. ಎಂತಹ ಆಕರ್ಷಣೆ ಇವನಲ್ಲಿ? ಅವಳಿಗನಿಸಿತು, ಓ... ಇವನ ತೋಳ ತೆಕ್ಕೆಯಲ್ಲಿ ತಲೆಯಿರಿಸದೆ ಕಳೆದುಹೋದವಲ್ಲ ಎಷ್ಟೋ ದಿನಗಳು. ಇವನ ಬಾಹುಬಂಧನದಲ್ಲಿ ತನ್ನನ್ನು ತಾನು ಅರ್ಪಿಸಿಕೊಳ್ಳದೆ ಎಷ್ಟು ಸಮಯವಾಯಿತೋ. ತನ್ನಿಂದ ತಪ್ಪಾಗಿಹೋಗಿದೆ. ಒಂದಾಗಿರುವ ತಮ್ಮಿಬ್ಬರನ್ನು ಎಂದೆಂದಿಗೂ ಯಾರೊಬ್ಬರೂ ಬೇರ್ಪಡಿಸಲಾರರು. "ನಿನ್ನ ವಾಸುದೇವನೆಂದರೆ ದೇವರಿಗೆ ಸಮಾನ. ಸುನೀತಿ, ಇವನ ಕೈಹಿಡಿದ ನೀನು ಪುಣ್ಯವಂತಳು!" ಈ ಮನೆಯ ಗೃಹಲಕ್ಷ್ಮಿಯಾಗಿ ಕಾಲಿರಿಸಿದ ದಿನ ಈಶ್ವರಯ್ಯನವರು ಹೇಳಿದ ಹಿತನುಡಿ ಮರೆತಿಲ್ಲ ಈಗಲೂ. ಅವರ ನುಡಿಯಲ್ಲಿ ಹುಸಿಯಿಲ್ಲ. ದೇವರಾದರೂ ಅಷ್ಟಿಷ್ಟು ಪಕ್ಷಪಾತ ತೋರಿಸಬಲ್ಲ. ಆದರೆ ಈ ದೇವ ಅವಳ ಪ್ರತಿಯೊಂದು ಸ್ವಭಾವ, ಅಭಿರುಚಿಗೆ, ಭಾವ-ರಾಗಗಳಿಗೆ ಸರಿಯಾಗಿ ಹೊಂದಿದ್ದಾನೆ. ಹಾಲು-ಜೇನಿನಂತಹ ದಾಂಪತ್ಯ. ಇವನಂತೆ ಸಿಗಲಾರರು ಇನ್ನೊಬ್ಬರು. ಈಶ್ವರಯ್ಯನವರು ಹೇಳಿದ್ದೆಲ್ಲವೂ ಸುಳ್ಳು. ತಾನು ಕೇಳಿದ್ದು ಸುಳ್ಳು ಕಥೆಯನ್ನು...ಆದರೆ....

ನಿಧಾನವಾಗಿ ಹಿಂದೆ ಸರಿದವಳು ತನ್ನೆರಡೂ ಕೈಗಳಿಂದ ಮುಖಮುಚ್ಚಿ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು. ತಾವಿಬ್ಬರೂ ಮೊದಲಿನಂತಿರುವುದು ಸಾಧ್ಯವೇ? ಎಲ್ಲ ಚಿಂತೆಗಳಿಗೂ ಮನಸ್ಸು ಕಾರಣವಂತೆ. ತನ್ನೊಳಗೆ ಹೀಗೆ ಕೊರಗುವುದರಿಂದ ಯಾವ ಲಾಭವೂ ಇಲ್ಲ. ಜೀವಂತ ದಹಿಸುತ್ತಿದ್ದೇನೆ. ಯಾರೊಂದಿಗೆ ಹೇಳಿಕೊಳ್ಳಲಿ? ಯಾರೊಂದಿಗೆ ಹೇಳಿದರೂ ಅಲ್ಲಿ ದೇವನೊಡನೆ ತನ್ನ ಸ್ಥಾನಮಾನ ತೂಗಲ್ಪಡುತ್ತವೆ.

ತೂಗುಯ್ಯಾಲೆಯಾಡುವ ಮನಸ್ಸಿನಲ್ಲೇ ಎದ್ದು ಕಿಟಕಿಯ ಹತ್ತಿರ ಬಂದು ನಿಂತಳು. ಹೊರಗೆ ದಟ್ಟೈಸಿದ ಕತ್ತಲೆಗಿಂತಲೂ ಹೆಚ್ಚು ದಟ್ಟವಾಗಿತ್ತು ಮನದೊಳಗಿನ ಕತ್ತಲೆ. ಒಂಟಿ ಪಕ್ಷಿಯೊಂದು ಈಗಲೂ ವ್ಯಥಿತ ಸ್ವರದಲ್ಲಿ ಕೂಗಿಕೊಳ್ಳುತ್ತಿತ್ತು ಹೊರಗೆಲ್ಲೋ.

## ೧೪

ಬಂದ ಅತಿಥಿಗಳು ಸಂತೋಷದಿಂದ ಹೊರಟು ನಿಂತಾಗ ಧೀರೇಂದ್ರ ಮೆಹತಾ ದೇವನನ್ನು ಗಾಢವಾಗಿ ಆಲಂಗಿಸಿ ಇನ್ನೊಮ್ಮೆ ಹುಬ್ಬಳ್ಳಿಗೆ ಬರಬೇಕೆಂದೂ ಆಹ್ವಾನವಿತ್ತರು. ಮುರಳೀಧರ, ಸುಜಾತೆಯಿಂದಲೂ ಒತ್ತಾಯದ ಆಹ್ವಾನ. ಮಾರ್ಷಲ್‌ಗೆ ಇಲ್ಲಿಂದ ಹೊರಡುವ ಮನಸ್ಸಿಲ್ಲ. ಅಪಾರ ವ್ಯಥೆ ತುಂಬಿತ್ತು ಅವನ ಕಣ್ಣುಗಳಲ್ಲಿ. ಮುಂದಿನ ತಿಂಗಳು ಸ್ವೀಡನ್‌ಗೆ ಹಿಂದಿರುಗುತ್ತಾನಂತೆ. ತನ್ನ ದೇಶದ ಮನೆ ವಿಳಾಸ

ಕೊಡುತ್ತ "ಕಾಗದ ಬರೀತಾ ಇರಿ. ನಾನೂ ಬರೀತೇನೆ. ಸ್ವೀಡನ್‌ಗೆ ಬಂದರೆ ಕೃಷಿಗೆ ಬೇಕಾದುದನ್ನು ಸಂಗ್ರಹಿಸಬಹುದು" ಎಂದು ದೇವನ ಕೈಕುಲುಕಿ ಹಸ್ತ ಚುಂಬಿಸಿದ.

ಬಂದವರೆಲ್ಲ ಹೊರಟುಹೋದ ಮೇಲೆ ಯಥಾ ರೀತಿ ಶಾಂತವಾಯಿತು ಮನೆ. ನಾಗಮ್ಮ ಪಂಚಗವ್ಯದಿಂದ ಮನೆಯೆಲ್ಲ ಶುದ್ಧಿಪಡಿಸಿ ಹಾಸಿ-ಹೊದಿಕೆಗಳನ್ನು ಕುದಿವ ನೀರಿನಲ್ಲಿ ನಾಲ್ಕು ಬಾರಿ ನೆನೆಸಿ ತೊಳೆದು ಒಣಗಿಸಿ 'ಅಯ್ಯಬ್ಬ' ಎಂದೂ ನಿಟ್ಟುಸಿರು ತೆಗೆದರು. ಪರಕೀಯರಾದ ಮೆಹತಾ ದಂಪತಿಗಳು, ಮಾರ್ಷಲ್ ಇದ್ದದ್ದು ಅವರಿಗೆ ಹಿತವಾಗಿರಲಿಲ್ಲ. ಮಾರ್ಷಲ್ ಇಲ್ಲಿದ್ದಾಗ ಒಂದು ದಿನ ಅಡಿಗೆ ಕೋಣೆಯ ಬಾಗಿಲ ಬದಿಯಲ್ಲಿ ನಿಂತು ತಲೆ ಮಾತ್ರ ಒಳಗೆ ಹಾಕಿ ಉರಿಯುವ ಒಲೆ, ಮಸಿಹಿಡಿದ ಪಾತ್ರೆ-ಮಡಕೆ, ಹೊಗೆ ತುಂಬಿದ ಕೋಣೆ ನೋಡಿದರೂ "ಇವೆಲ್ಲ ನನಗೆ ಇಷ್ಟ" ಎಂದಾಗ ಅಲ್ಲೇ ಇದ್ದ ಸುನೀತಿ, ಸುಜಾತೆ ನಾಚಿಕೆಯಿಂದ ಮುದ್ದೆಯಾಗಿ ಹೋಗಿದ್ದರು. ಅವನು ಮಾತನಾಡುತ್ತ ನಿಂತದ್ದು ಎಲ್ಲೋ ಐದು ನಿಮಿಷ. ಆದರೆ ಅವನು ಹೊರಗೆ ಹೋದಾಕ್ಷಣ ಗುಡುಗಿದ್ದರು ನಾಗಮ್ಮ,

"ಯಾಕೆ ಅವನನ್ನು ದೇವರ ಕೋಣೆ ಹತ್ರ ಬಿಟ್ಟಿರಿ? ಬಿಳಿಯರ ಗಾಳಿ ಸೋಂಕಿದರೂ, ಸೆರಳು ಬಿದ್ದರೂ ದೇವರಿಗೆ ಅಪಚಾರವಾಗುತ್ತದೆ."

ಇಂತಹ ನಾಗಮ್ಮ ಪಂಚಗವ್ಯದಿಂದ ಮನೆ ಶುದ್ಧಿಮಾಡಿದ್ದು ಅಚ್ಚರಿಯೇನಲ್ಲ. ಆದರೆ ಸುನೀತಿ ನಡುಗಿಹೋದಳು ತನ್ನಲ್ಲೇ.

ಮುಂದೆ ನಾಲ್ಕಾರು ದಿನಗಳಲ್ಲಿ ಸದಾನಂದ ಬಂದ. ಅವನೇನು ಕುತಂತ್ರ ಸಾಧಿಸಲು ಬಂದನೆಂದು ತಿಳಿಯುವ ಕುತೂಹಲ, ವಿಚಾರಿಸುವ ಆಸಕ್ತಿ ದೇವನಿಗಿರಲಿಲ್ಲ. ಆದರೆ ಸದಾನಂದ ಕತ್ತಿಯಂತೆ ಹರಿತವಾದ ಆ ನಂಜಿನ ನಾಲಿಗೆಯಲ್ಲಿ ಇಂದು ಬೆಣ್ಣೆಯಂತಹ ಮೃದು ಮಾತುಗಳಿದ್ದವು. ಶಶಿಧರನನ್ನು ನಿಂದಿಸಿ ದೇವನನ್ನು ಹೊಗಳಿದ.

"ನೀನಾದರೆ ಗಂಡಸು, ಸರಿಯಾಗಿ ಆ ಶತಮೂರ್ಖನಿಗೆ ಬುದ್ಧಿ ಕಲಿಸಿದೆ." ಮುಖ ಸೊಟ್ಟಗೆ ಮಾಡಿ ಮೂಗರಳಿಸಿದ ಸದಾನಂದ, "ಮನೆಗೆ ಬಂದು ನಿನ್ನನ್ನು ನನ್ನೆದುರಿನಲ್ಲಿ ದೂರಿದನಲ್ಲ. ಮೂರ್ಖ ಹುಡುಗ, 'ಎದುರಿನ ಎರಡೂ ಹಲ್ಲುಗಳನ್ನು ಉದುರಿಸ ಬೇಕಿತ್ತು' ಎಂದೆ ನಾನು. ಯಾರದ್ದು? ನಿನ್ನದಲ್ಲ, ಅವನದ್ದು! ನೀನೇನಪ್ಪ ಹಗಲು ರಾತ್ರೆ ದುಡಿಯುವವ. ಬಿಟ್ಟಿಯಾಗಿ ಭಾವನ ಆಸ್ತಿ ಸಿಕ್ಕಿದೆ. ಅಲ್ಲಲ್ಲ... ನಮ್ಮ ಶಶೀ ಬಿಟ್ಟಿ ಹಾಲು-ಮೊಸರು ಸುರಿದು ಕೊಬ್ಬಿದ ಗೂಳಿಯಾಗಿದ್ದಾನೆ... ಏನಪ್ಪ, ಇಲ್ಲಿರುವಾಗ ನಿನಗೇನೂ ಸಹಾಯ ಮಾಡ್ತಾ ಇರಲಿಲ್ಲವೇ?"

"ಇದ್ದ, ಮಾಡಿದ ಅನ್ನ ಉಣ್ಣುವುದಕ್ಕೆ ಮಾತ್ರ!"

"ಹ್ಹೇ ಹ್ಹೆ... ನಿನಗೆ ಕಷ್ಟವಪ್ಪ. ನಾನು ಅಕ್ಕನಿಗೆ ಹೇಳಿದ್ದೇನೆ, 'ನೋಡಕ್ಕ, ನಿನ್ನಿಂದ ನಾನೆಷ್ಟೋ ಸಹಾಯ ತೆಗೆದುಕೊಂಡಿದ್ದೇನೆ. ಹೇಗಾದರೂ ಆ ಋಣ ತೀರಿಸಬೇಕಲ್ಲ' ಶಶಿಧರ ನಾಲಾಯಕ್ಕು. ಅದಕ್ಕೇ ವಿಶ್ವಂಭರನನ್ನು ಇಲ್ಲಿಗೆ ಕಳುಹಿಸ್ತೇನೆ."

"ಆ ಪೀಚು ಮುಖದ ಸಿಂಬಳ ಸುರುಕನೇ?" ಗಂಭೀರನಾದ ದೇವ, "ಮಾವ, ನನ್ನ ಸಹಾಯಕ್ಕೆ ನಿಮ್ಮ ಯಾರ ಅಗತ್ಯವೂ ಇಲ್ಲ. ನನ್ನ ಬುದ್ಧಿ ಗೊತ್ತಲ್ಲ ನಿಮಗೆ?"

"ನನಗೇನೂ ಕೋಪವಿಲ್ಲ. ಶಶಿಧರ ನಿನ್ನ ಸಂಗಡ ಪೆದಂಬಾಗಿ ನಡೆದುಕೊಂಡಿರಬೇಕು. ವಿಶ್ವಂಭರ ಹಾಗಲ್ಲ, ಗುಣವಂತ."

"ನಮ್ಮ ಜೀವನ ನಿರ್ವಹಣೆಯೇ ಕಷ್ಟವಾಗಿದೆ. ಸಾಲ ಬೇರೆ ತೆಗೆದಿದ್ದೇನೆ. ನಿಮ್ಮ ಅಕ್ಕ ಅವರ ಮಕ್ಕಳನ್ನೂ ಇಲ್ಲೇ ಇಟ್ಟುಕೊಂಡಿದ್ದೇನೆ. ವಿಶ್ವಂಭರನಿಗೂ, ಶಶಿಧರನಿಗೂ ನೀವೇ ಏನಾದರೂ ದಾರಿ ಮಾಡಿ ಕೊಡಿ. ನನಗೆ ತೊಂದರೆ ಕೊಡಬೇಡಿ."

ಆದರೆ ದೇವನ ಮಾತಿಗೆ ಬೆಲೆಕೊಡುವ ಬುದ್ಧಿ ಸದಾನಂದನದಲ್ಲ. ಮುಂದೆ ಎರಡು ದಿನದಲ್ಲಿ ಸಣಕಲು ಶರೀರದ, ರೋಗಿಷ್ಠನಂತೆ ಕಾಣುವ, ಪೀಚು ಮುಖದ ತರುಣ ಹಾಜರಾದ.

"ಎರಡು ದಿನ ಉಳಿದು ನಿನ್ನ ಪೆಟ್ಟಿಗೆ ಕಟ್ಟಿ ಹೊರಡು!" ದೇವ ತಡೆಯಲಾರದೆ ವಿಶ್ವಂಭರನಿಗೆ ಅಪ್ಪಣೆ ಮಾಡಿದಾಗ ನಾಗಮ್ಮ ತಡೆದರು. ಭ್ರಾತೃವ್ಯಾಮೋಹದ ಕುರುಡಿನಲ್ಲಿ ಈ ಹುಡುಗನನ್ನು ಕಳುಹಿಸಲು ಅವರಿಗೆ ಇಷ್ಟವಿರಲಿಲ್ಲ.

ದೇವ ನಯವಾಗಿ ಆಕ್ಷೇಪಿಸಿದ. ನಾಗಮ್ಮನನ್ನೂ ದೂಷಿಸಿದ. ಆತನಿಗಂತೂ ಎಲ್ಲಿಲ್ಲದ ಅಚ್ಚರಿ. ತಾನು ಈ ಆಸ್ತಿಯ ಹಕ್ಕುದಾರ. ತಾಯಿಯನ್ನು ಕೈಬಿಡದೆ ಚೆನ್ನಾಗಿ ನೋಡಿಕೊಳ್ಳುತ್ತಿದ್ದೇನೆ. ತಾಯಿಗೆ ತನ್ನ ಮೇಲೆ, ಸುನೀತಿ ಮತ್ತು ಮಕ್ಕಳ ಮೇಲೆ ಅಪಾರ ಪ್ರೀತಿಯಿದೆ. ಆದರೂ ಅವರಿಗೆ ಬಿಡದ ತವರಿನ ವ್ಯಾಮೋಹ. ಇದೊಂದು ಅರ್ಥವಾಗದ ವಿಷಯ.

ಅವನು ಗುಟ್ಟಾಗಿ ಸುನೀತಿಯಲ್ಲಿ ಹೇಳಿಕೊಂಡ, "ಇವನೂ, ಇನ್ನೊಬ್ಬ ಶಶಿಧರ ನಾಗದಿದ್ದರೆ ನಮ್ಮ ಪುಣ್ಯ!"

* * * * *

ಸುನೀತಿಯ ನಿರ್ಲಿಪ್ತತೆ, ನಿಸ್ತೇಜತನ, ಅನ್ಯಮನಸ್ಕತೆ ಹೆಚ್ಚಿದಂತೆ ದೇವನ ತಾಳ್ಮೆ, ಸಂಯಮಗಳ ಪರೀಕ್ಷೆಯೂ ಹೆಚ್ಚಿತು. ಅಸಮಾಧಾನದ ಸ್ಥಾನದಲ್ಲಿ ಹೊಗೆಯಾಡ ತೊಡಗಿತು- ಕೋಪ, ರೋಷ. ಕೆಲಸದವರೊಡನೆ ಹಸನ್ಮುಖಿಯಾಗಿದ್ದವನು ಈಗ ಪ್ರತಿ ಕೆಲಸಗಳಿಗೂ ಸಿಡುಕಲಾರಂಭಿಸಿದ. ಅವರು ನಿಂತರೆ ತಪ್ಪು, ಕುಳಿತರೆ ತಪ್ಪು. ಪ್ರತಿ ಮಾತಿಗೂ ಗದರಿಸುವ.

ಸಂಘದಲ್ಲಿ ನಡೆಯುವ ಭಜನೆಯಲ್ಲಿ ಮೊದಲಿನ ಉತ್ಸಾಹವಿದ್ದರೂ ದೇವನಿಗೆ ಕರ್ಕಶವಾಗಿ ಕೇಳಿಸುತ್ತದೆ. 'ಹರಿಜನರ ಉದ್ಧಾರ ಇನ್ನೊಬ್ಬರಿಂದ ಸಾಧ್ಯವಿಲ್ಲ' ಎಂದೆನಿಸಿತು ಅವನ ಇಬ್ಬರು ಕೆಲಸದವರು ಹೆಂಡದಂಗಡಿಯಿಂದ ತೂರಾಡುತ್ತ ಹೊರ ಬಂದಾಗ. ಸರಕಾರದಿಂದ ವಿಧವೆಯರಿಗೆ, ಬಡವೃದ್ಧೆಯರಿಗೆ ಸಿಗುವ ಮಾಸಿಕ ವೇತನವನ್ನು

ಅವರ ಬಂಧುಗಳು ಪೋಲು ಮಾಡುವುದನ್ನು ನೋಡಿಯೂ ಮೌನತಳೆದ. ಸರಕಾರ ಕೊಡುವ ಸಾಲದ ಹಣದಲ್ಲಿ [illegible] ಹಣ ಜೇಬಿಗಿಳಿಸಿ ಠಾಕುಠೀಕಾಗಿ ತಿರುಗಿದ್ದನ್ನು ನೋಡಿಯೂ ನೋಡದವನಂತೆ ತೆಪ್ಪಗಾದ. ಮೊದಲಾದರೆ ತನ್ನ ಹಳ್ಳಿಯಲ್ಲಿ ಯಾರದೇ ತಪ್ಪಿರಲಿ, ಅವರನ್ನು ಕರೆದು ಬುದ್ಧಿ ಹೇಳಿ ಸರಿದಾರಿಗೆ ತರಲು ಪ್ರಯತ್ನಿಸುತ್ತಿದ್ದ. ದೇವನ ಪ್ರತಿ ಮಾತುಗಳೆಂದರೆ ತೂಕದಿಂದ ಕೂಡಿದ್ದು. ಜನರಿಗೂ ಅವನ ಮೇಲೆ ಅಪಾರ ವಿಶ್ವಾಸ. ಆದರೆ ಈಗ ಅವನಿಗನಿಸಿದೆ, ಬೇರೆಯವರಿಗೆ ಹೇಳುವ ಅಧಿಕಾರ ತನಗಿಲ್ಲ!

ಅಂದು ಸುನೀತಿಗಾಗಿ ಒಂದು ಹೊಸ ಚಿನ್ನದ ನೆಕ್ಲೇಸನ್ನು ತಂದು ಮನೆಯಲ್ಲಿ ಯಾರಿಗೂ ತೋರಿಸದೆ ರಾತ್ರೆ ಗುಟ್ಟಾಗಿ ಅವಳ ಕೈಯ್ಯಲ್ಲಿರಿಸಿದಾಗ ಅವಳಿಗೆ ಅಚ್ಚರಿಯೇ ಅಚ್ಚರಿ. ಹೊಳೆಯುವ ನೆಕ್ಲೇಸ್ ಕುಕ್ಕುತ್ತಿತ್ತು ಕಣ್ಣುಗಳನ್ನು. ಅಲ್ಲಲ್ಲಿ ಕೆಂಪು ಕಲ್ಲುಗಳನ್ನು ಹೊಂದಿಸಿದ, ಕೆಂಪು ಕಲ್ಲಿನ ಪದಕವಿರುವ ಅದು ಅವಳ ಎಷ್ಟೋ ಸಮಯಗಳ ಆಸೆಯ ಉಡುಗೊರೆ. ಕಡಿಮೆಯೆಂದರೂ ನಾಲ್ಕು ಸಾವಿರವಿರಬಹುದು. ತನಗೆ ತಿಳಿಸದೆ ಯಾವಾಗ ಮಾಡಿಸಲು ಹಾಕಿದ್ದು... ಅವಳು ಬೆರಗಾಗಿ ನೋಡಿದಳು ಅವನತ್ತ.

ದೇವನ ಕಣ್ಣುಗಳಲ್ಲಿ ತುಂಟತನದೊಂದಿಗೆ ಹೆಮ್ಮೆಯೂ ಕುಣಿಯುತ್ತಿತ್ತು. ಮಕ್ಕಳಿಬ್ಬರ ಮೈಮೇಲೆ ತೆಳುಹೊದಿಕೆ ಹೊದೆಯಿಸಿ ಅವಳ ಬಳಿ ಬಂದು ಕುಳಿತ, "ನಿನಗೆ ಇಷ್ಟವಾಗಲಿಲ್ಲವೇ?"

"ಕೈ ತುಂಬ ಸಾಲವಿರುವಾಗ ಇದನ್ನೇಕೆ ತಂದಿರಿ?"

"ಸಾಲ ಏನು ಮಹಾ? ಇವತ್ತಲ್ಲ ನಾಳೆ ತೀರೀತು. ಹಣಕ್ಕಾಗಿ ಚಿಂತಿಸಬೇಡ. ಮದುವೆಯಾದ ಮೇಲೆ ನಾನಾದರೂ ನಿನಗೆ ಏನನ್ನೂ ಮಾಡಿಸಿಲ್ಲ. ಹೇಳು, ನಿನಗೆ ತೃಪ್ತಿಯಾಯಿತೇ? ನಿನಗೆ ತುಂಬ ಚೆಂದ ಕಂಡೀತು. ಎಲ್ಲಿ ನಾನೇ ಹಾಕಲೇ?"

"ಬೇಡ, ನಾಳೆ ಅತ್ತೆಗೆ ತೋರಿಸಿ, ದೇವರಿಗಿಟ್ಟು, ನಮಸ್ಕಾರ ಮಾಡಿ ಆಮೇಲೆ ಹಾಕಿಕೊಳ್ತೇನೆ."

"ಒಟ್ಟಿನಲ್ಲಿ ನೀನು ಸುಖಿಯಾಗಿರಬೇಕು ಸುನೀತಿ. ಈಗ... ನೀನು ಹೇಗಿದ್ದೀಯಾ?"

ಸುನೀತಿ ತಟ್ಟನೆ ಕಣ್ಣೆತ್ತಿ ನೋಡಿದಳು. ಓ... ಅವನ ಈ ಪ್ರಶ್ನೆಯಲ್ಲಿ, ಆಕರ್ಷಕ ಕಣ್ಣುಗಳಲ್ಲಿ ನೂರು, ಸಹಸ್ರ ಬಯಕೆಗಳು. ಮುಖದಲ್ಲಿ ದೈನ್ಯತೆ. "ಈಗ ಹೇಗಿದ್ದೀ?" ಎನ್ನುವ ಆತ್ಮೀಯ ಪ್ರಶ್ನೆಗೆ ಉತ್ತರ ತನ್ನಲ್ಲಿಲ್ಲ. "ಇದ್ದೇನೆ ಹೇಗೋ ಒಂದು ತರಹ. ಇರಲೇಬೇಕಲ್ಲ ಹೇಗಾದರೂ."

"ಅಂದರೆ ಇನ್ನೂ ಚಿಂತೆ ಬಿಟ್ಟಿಲ್ಲ. ಅಪ್ಪ ಹೇಳಿದ್ದು ಸುಳ್ಳು ಎಂದು ದಿನಕ್ಕೆ ಹತ್ತು ಬಾರಿ ಜಪಮಾಡು. ಸುನೀತಿ... ನಾನು ಈಶ್ವರಯ್ಯ ಮತ್ತು ನಾಗಮ್ಮನ ಸಂಯೋಗದಿಂದ ಹುಟ್ಟಿದ ಮಗು. ಒಪ್ಪಿಕೋ ನನ್ನ ಮಾತು."

ಕಿಟಕಿಯಿಂದ ತಂಪಾದ ಗಾಳಿ ಬೀಸಿ ಬಂದಿತು ಒಳಗೆ. ಹತ್ತಿರದ ಕಾಡಿನಿಂದ [illegible] ಬರಬಹುದೆಂದು [illegible] ನೋಡಿದ್ದೇ ನೋಡಿದ್ದು. ದೇವ ಕಿಟಕಿಯನ್ನು ಪೂರ್ಣ ತೆರೆದು ಇನ್ನೂ ಅವಳ ಹತ್ತಿರ ಸರಿದ.

"ರಾತ್ರಿ ಬಹಳವಾಯ್ತು. ಹೋಗಿ ಮಲಗಿಕೊಳ್ಳಿ" ಅವನಿಂದ ದೂರ ಸರಿಯುತ್ತ ಮುಖ ತಿರುಗಿಸಿದಳು.

"ರಾತ್ರೆ ಆಗುತ್ತದೆ, ಬೆಳಗೂ ಮೂಡುತ್ತದೆ. ಇವತ್ತು ನಮ್ಮದು. ನಾಳೆ ಇನ್ನಾರ ದಿನಗಳೋ..." ದೇವನ ಬಲಹಸ್ತ ಚಾಚಿತು ಅವಳತ್ತ.

ದೀಪದ ನೆರಳಿನಲ್ಲಿ ಚಾಚಿದ ಕೈ ನೆರಳು ವಿಕಾರವಾಗಿ ಕಾಣಿಸಿತು. ಕುಳಿತವಳು ಮತ್ತಷ್ಟು ಬದಿಗೆ ಸರಿದಳು. ಅವನ ಬೇಡಿಕೆ ಹೆಚ್ಚಿತು, ದೈನ್ಯನೋಟ ಇರಿಯಿತು ಅವಳನ್ನು. ಕೈಯಿಂದಲೇ ಬೇಡ ಎಂದು ಸನ್ನೆ ಮಾಡುತ್ತ ಗೋಡೆಗೊರಗಿದಾಗ ಅವಳ ತುಂಬಿದ ಕಂಬನಿಯ ಹನಿಗಳು ಜಾರಿ ಬಿದ್ದವು ಕೆನ್ನೆಯ ಮೇಲೆ. ಬಲಗೈಯಿಂದ ಅವನ ಕೈಯನ್ನು ರಭಸದಿಂದ ದೂಡಿದಳು ಅವಳಿಗರಿಯದಂತೆ.

"ಹೇಂಯ್...." ಹಾವು ಮೆಟ್ಟಿದವನಂತೆ ಹಾರಿ ಬಿದ್ದ ಅವನ ಕಣ್ಣುಗಳು ಕಿಡಿಕಾರಿದವು. "ನನ್ನ ನೆರಳು ನೋಡಿದರೆ ದೂರ ಹಾರ್ತಾ ಇದ್ದೀಯಾ. ನನ್ನನ್ನು ನಾಯಿ ಅಂತ ತಿಳಿದಿದ್ದೀಯೇನು?" ಎರಡೂ ಕೈಗಳಿಂದ ಗಬಕ್ಕನೆ ಅವಳನ್ನು ಹಿಡಿದು ತನ್ನತ್ತ ಎಳೆದುಕೊಂಡ. "ನಾನು ಯಾರು? ಮನೆ ನಾಯಿಯನ್ನಾದರೂ ಮೈಸವರಿ ಮುದ್ದಿಸುತ್ತಾರೆ. ನಾನು ಅದಕ್ಕಿಂತ ಕಡೆಯಾಗಿ ಹೋದೆನೇನು? ಇಷ್ಟು ದಿನ ತಡೆದುಕೊಂಡಾಯ್ತು. ಇನ್ನು ಸುಮ್ಮನಿರಲಾರೆ..."

ಅವನ ಸ್ವರ ಏರಿ ಎಂದಿನ ಮೃದುತನ ಕಳೆದುಕೊಳ್ಳುತ್ತ ಗಡುಸಾಯಿತು. ಸುನೀತಿ ಅವನಿಂದ ಬಿಡಿಸಿಕೊಳ್ಳಲು ಯತ್ನಿಸುತ್ತಿದ್ದಂತೆ ಅವನ ಬಿಗಿತವೂ ಹೆಚ್ಚಿತು. ಮುಖ, ಹಣೆಯ ಮೇಲೆಲ್ಲ ಚಲಿಸಿದವು ಅವನ ನಡುಗುವ ಅಧರಗಳು. ಅಸ್ಪಷ್ಟ ಗೊಣಗಾಟ. ಅಲ್ಲಿಯೇ ತಲೆ ತಿರುಗುವಂತಾಯಿತು ಸುನೀತಿಗೆ. ಅವನ ಬಿಸಿ ಸ್ಪರ್ಶಕ್ಕೆ ಜೀವ ಕಾತರಿಸಿದ್ದರೂ ಈ ಗಳಿಗೆಯಲ್ಲಿ ಸಿದ್ಧಳಾಗಿರಲಿಲ್ಲ. ಅವನ ವರ್ತನೆಯನ್ನು ಖಂಡಿಸದಿದ್ದರೂ ಸ್ವೀಕರಿಸಲು ಮನ ಒಪ್ಪಲಿಲ್ಲ. ಆ ಸ್ಪರ್ಶ ನವಚೇತನ ತುಂಬುವ ಬದಲು ಮಂಜಿ ಗೆಸೆದವಳಂತೆ ತತ್ತರಿಸಿಹೋದಳು.

"ಶತ್ರುಗಳಂತೆ ನಾವಿಬ್ಬರೂ ಈ ಮನೆಯಲ್ಲಿರಬೇಕೇ? ಹೇಳು, ನಾನೇನು ತಪ್ಪು ಮಾಡಿದ್ದೇನೆ, ನಾನು ಯಾರು?" ಅವನ ಹಿಡಿತ ಸಡಿಲಗೊಂಡಾಗ ಅವಳು ಚೆಂಡಿನಂತೆ ಪುಟಿದಳು ಅಷ್ಟು ದೂರಕ್ಕೆ. ದೇವನ ಕ್ರೋಧವೂ ಅಷ್ಟೇ ವೇಗದಲ್ಲಿ ಚಿಮ್ಮಿತು ಈ ಬಾರಿ.

"ಶತಮೂರ್ಖಳು!' ಕೈ ಕೊಡಹಿದ ಅವನು ಎದ್ದುನಿಂತ. "ಇರು ಹೀಗೆ. ನಿನ್ನನ್ನು ಬದಲಾಯಿಸುವುದು ಸಾಧ್ಯವಿಲ್ಲ ನನ್ನಿಂದ. ನಾನೇ ಈ ಮನೆಯಿಂದ ಹೊರಟುಹೋಗ್ತೇನೆ.

ಆದರೆ ಸುಮ್ಮನೆ ಹೋಗಲಾರೆ. ಹೋಗುವ ಮುನ್ನ ಅಮ್ಮನಿಗೆ, ಇಲ್ಲಿದ್ದವರಿಗೆ, ನಿನ್ನ ಅಪ್ಪ ಅಮ್ಮನಿಗೆಲ್ಲಾ ನನ್ನ ನಿಜ ವಿಷಯ ತಿಳಿಸಿಯೇ ಹೋಗುತ್ತೇನೆ. ಆಮೇಲೆ ನಿನ್ನ ಸ್ಥಿತಿ ಏನಾಗುತ್ತದೆಯೆಂದು ನೀನೇ ನೋಡಿಕೋ!" ಕಾಲಪ್ಪಳಿಸುತ್ತ ಮಹಡಿಯಿಂದ ಕೆಳಗಿಳಿದು ಹೋದ.

ಗೋಡೆಗೊರಗಿ ನಿಂತವಳು ಅಲ್ಲೇ ಕುಸಿದಳು ಕೆಳಗೆ. ಓ... ತನ್ನ ಮನಸ್ಸೇಕೆ ಇನ್ನೂ ಸಮಾಧಾನ ಪಡೆಯಲಿಲ್ಲ? ಯಾಕೆ ಈ ವಿಪ್ಲವ? ಅವನಾದರೂ ಎಲ್ಲವನ್ನೂ ಬಹಿರಂಗ ಗೊಳಿಸಿದರೆ ಮನೆಯಲ್ಲಿ ಮತ್ತು ಸಮಾಜದಲ್ಲಿ ತನಗೆ, ಮಕ್ಕಳಿಗೆ ಬೇರೆಯೇ ಸ್ಥಾನ. ದೇವ ತನ್ನನ್ನು ನಿಜವಾಗಿಯೂ ಬಿಟ್ಟುಹೋದರೆ ತಾನು ಎಲ್ಲಿಗೆ ಹೋಗಲಿ? ಹೇಗಿರಲಿ? ಅವನಿಲ್ಲದೆ ತಾನಿರಲಾರೆ. ಅವನಲ್ಲಿರುವ ಮಾನವೀಯ ಸದ್ಗುಣ, ಹೃದಯ ವೈಶಾಲ್ಯ ವನ್ನು ತಾನೇಕೆ ನೋಡುವುದಿಲ್ಲ? ಒಂದು ಸಣ್ಣ ವಿಷಯದಿಂದ ತನ್ನನ್ನೇ ಪ್ರಪಾತಕ್ಕೆ ತಳ್ಳಿಕೊಳ್ಳುತ್ತಿದ್ದೇನೆ.

ಉಮ್ಮಳಿಸಿ ಬಂದ ದುಃಖವನ್ನು ತಡೆದುಕೊಳ್ಳುವುದು ಅವಳಿಂದಾಗಲಿಲ್ಲ.

* * * * *

ತಂಪಾದ ಗಾಳಿ ಮೈಸೋಂಕಿದರೂ ಒಳಗೇನೋ ಉರಿ, ದಾಹ, ಅಸಮಾಧಾನ. ಹಣೆಯ ಮೇಲೆ ಸಾಲಾಗಿ ಮುತ್ತಿನಂತೆ ನಿಂತಿವೆ ಬೆವರ ಹನಿಗಳು. ಏನು ಸೆಕೆ... ಮಳೆ ಬಂದರೆ ತಂಪಾಗಬಹುದೋ ಏನೋ. ಹೊದೆದ ಶಾಲನ್ನು ಎತ್ತಿ ಬಿಸಾಡಿದ ನೆಲದ ಮೇಲೆ. ಎದೆಯ ಮೇಲಿರುವ ಜನಿವಾರವೂ ಬೇಡವೆನಿಸಿ ಅದನ್ನೂ ಕಳಚಿಟ್ಟ. ನೀಳವಾಗಿ ಉಸಿರೆಳೆದು ಆಗಸದಲ್ಲೇರಿದ ಚಂದ್ರನತ್ತ ದೃಷ್ಟಿ ಹಾಯಿಸಿದ. ಮೋಡವಿಲ್ಲದ ನಿರಭ್ರ ಆಗಸದಲ್ಲಿ ಸಹಸ್ರ ತಾರೆಯರೊಂದಿಗೆ ಅದೆಷ್ಟು ಸುಖಿಯಾಗಿದ್ದಾನೆ ಆ ಚಂದ್ರ. ಯಾವ ಆತಂಕವಿಲ್ಲ, ಯಾರ ಬಂಧನವೂ ಇಲ್ಲ.

ದೇವನಿಗೀಗ ಸುನೀತಿಯ ಮೇಲೆ ಕ್ರೋಧ ಬರಲಿಲ್ಲ, ನಗುವುಕ್ಕಿ ಬಂದಿತು. ಅವಳ ಸ್ವಭಾವ ಏನೇ ಇರಲಿ, ಹೇಗೇ ಇರಲಿ, ತಾನೀಗ ಎಲ್ಲವನ್ನೂ, ಎಲ್ಲರನ್ನೂ ಎದುರಿಸಿ ದೃಢವಾಗಿ ನಿಲ್ಲಬೇಕು. ತನಗೇನು ನಾಚಿಕೆಯೇ? ಭೀತಿಯೇ? ಅಳುಕೇ? ನಾಗಮ್ಮ ನೊಂದಿಗೆ ಎಲ್ಲಾ ಹೇಳುತ್ತೇನೆ. ಅವರ ಪ್ರತಿಕ್ರಿಯೆಯನ್ನೂ ನಿರೀಕ್ಷಿಸುತ್ತೇನೆ. ಹಳೆ ಸಂಪ್ರದಾಯದ ಅವರು ತನ್ನನ್ನು ಕ್ಷಮಿಸಲಿಕ್ಕಿಲ್ಲ. ಓಹೋ, ಆದರೆ ಈ ಮನೆಯಿಂದ ನನ್ನನ್ನು ಹೊರದೂಡುವುದು ಸುಲಭವೇ? ಇಲ್ಲಿ ಅಧಿಕಾರ ಈಶ್ವರಯ್ಯನವರ ಸಾಕುಪುತ್ರ ದೇವನದು. ಸುನೀತಿ ಸರಿಯಲಿ ದೂರ, ಮನೆಯವರೂ ಕೈ ಬಿಡಲಿ, ಸಮಾಜವೂ ತನ್ನನ್ನು ಹೊರಗಿರಿಸಲಿ, ಯಾರ ಹೆದರಿಕೆಯಿಲ್ಲದೆ ಇರಬಲ್ಲೆ. ಆದರೆ ಕೃಷ್ಣ ಮತ್ತು ವಿಷ್ಣು?

ಅವರ ನೆನಪು ಮುದ ನೀಡಿತು ಮನಸ್ಸಿಗೆ. 'ಅಪ್ಪಾ' ಎಂದು ತನ್ನ ಹಿಂದೆ ಇರುವ ಕೃಷ್ಣನನ್ನು ದೂರಮಾಡುವುದು ಸಾಧ್ಯವಿಲ್ಲ. ವಿಷ್ಣು ಇನ್ನೂ ವರ್ಷ ತುಂಬದ ಹಸುಳೆ. ಭವಿಷ್ಯದ ಅರಿವಿಲ್ಲ ಇಬ್ಬರಿಗೂ. ತನ್ನಿಂದ ಪಡೆದ ಮಕ್ಕಳನ್ನು ಸುನೀತಿ ತನ್ನಂತೆಯೇ

ತಿರಸ್ಕರಿಸುತ್ತಾಳೆಯೇ? ಅವಳೊಬ್ಬಳೇ ಎತ್ತಬೇಕಾದರೂ ಹೊರಟುಹೋಗಲಿ. ತನಗೆ ತನ್ನ ಮಕ್ಕಳು ಬೇಕೇ ಬೇಕು.

ಅದೇ ಸಮಯದಲ್ಲಿ ಯಾರೋ ತನ್ನ ಬಳಿ ಬಂದು ಕುಳಿತಂತೆ ಭಾಸವಾಗಿ ಹೊರಳಿ ನೋಡಿದರೆ ಸುನೀತಿ! ಅವಳ ಹಸ್ತ ಸ್ಪರ್ಶಿಸಿತು ಅವನ ಮೈಯ್ಯನ್ನು. 'ಇದು ಕನಸಲ್ಲವಲ್ಲ' ಕಣ್ಣುಜ್ಜಿಕೊಂಡ ಇನ್ನೊಮ್ಮೆ.

"ಯಾಕೆ ಬಂದೆ ಇಲ್ಲಿಗೆ?" ಅವಳ ಕೈ ನೂಕಿದ, "ನನ್ನನ್ನು ಮುಟ್ಟುವುದಕ್ಕೂ ನಿನಗೆ ಅಸಹ್ಯ. ಛೀಛೀ. ತೊಲಗಾಚೆ."

ಅವಳಿಂದ ಮುಖ ತಿರುಗಿಸಿ ಇನ್ನೇನು ಅಲ್ಲಿಂದ ಎದ್ದುಬಿಡಬೇಕು ಎನ್ನುವಾಗಲೆ ಸುನೀತಿಯ ಎರಡೂ ಕೈಗಳು ಅವನನ್ನು ಬಿಗಿಯಾಗಿ ತಬ್ಬಿಕೊಂಡವು. ಅವಳ ತಲೆ ಒರಗಿತು ಅವನ ಎದೆಯ ಮೇಲೆ. ಮಾತು ಬಾರದ ಮೂಕಿಯಾದವಳು ಬಿಕ್ಕಳಿಸಿದಳು ಜೋರಾಗಿ.

ಅರ್ಥವಾಯಿತು ದೇವನಿಗೆ. ತಿಂಗಳ ಬೆಳಕಿನಲ್ಲಿ ಮುಖದ ಭಾವನೆಗಳು ಅಸ್ಪಷ್ಟ. ಆದರೆ ಮೌನ ನೂರು ರಾಗಗಳನ್ನು ಮಿಡಿದವು. ಎಲ್ಲೋ ಭಾರವಾಗಿ, ಜಡವಾಗಿ ಹೋಗಿದ್ದ ಹೃದಯದಲ್ಲಿ ಸಹಸ್ರ ವೀಣೆಗಳು ಮೀಂಟಿ ಕಣ್ಣುಗಳ ಹೊಳಪಿನಲ್ಲಿ ಕರಗಿ, ತುಟಿಯಂಚಿನ ನಗುವಿನಲ್ಲಿ ಇಣುಕಿದವು. ಹಿಂದೆಂದೂ ಕಾಣದ ಒಂದು ಅತೀತ ಸುಖ ಕಲ್ಪನೆಯು ಇಂದು ಹೆಚ್ಚು ಅರ್ಥಪೂರ್ಣವಾಗಿ ಹೊಸ ಆಯಾಮ ಸೂಚಿಸಿದವು. ಕತ್ತಲೆಯಲ್ಲಿ ಮಿಂಚಿದ ಬೆಳಕು ಕಣ್ಣೀರಿನಲ್ಲಿ ಪ್ರತಿಫಲನವಾಗಿ ಅಲ್ಲಿ ಮೂಡಿಸಿದವು ಸಹಸ್ರ ಕಾಮನಬಿಲ್ಲುಗಳ ರಂಗು. ತಾರೆಗಳು ನಕ್ಕವು. ಚಂದಿರನಿಗೆ ಇದೇನು ನಾಚಿಕೆ? ಮೆಲ್ಲಮೆಲ್ಲನೆ ಮೋಡದೊಳಗೆ ಹುದುಗಿಕೊಳ್ಳುತ್ತಿದ್ದಾನೆ.

ಶಾಂತವಾದ ಸಂತೃಪ್ತಭಾವದಲ್ಲಿ ದೇವ ಅಲ್ಲಿಂದೆದ್ದ. "ರಾತ್ರೆ ಬಹಳವಾಯಿತು, ನಡಿ, ಮಹಡಿಗೆ ಹೋಗೋಣ."

## ೧೫

ಸುನೀತಿಯಿಂದ ತಡವಾಗಿ ಪುರಸ್ಕೃತನಾದರೂ ನಿನ್ನೆ ರಾತ್ರೆ ತಿರಸ್ಕರಿಸಲ್ಪಟ್ಟು ಮಹಡಿಯಿಳಿದು ಕೆಳಗೆ ಹೋಗಿ ಯಾವಾಗ ಅಂಗಳದಲ್ಲಿ ಕುಳಿತನೋ ಆಗಲೇ ದೇವನಲ್ಲಿ ಅಳಿದುಳಿದ ಅಳುಕು ಮಾಯವಾಗಿ ಹೊಸ ವಿಧದ ಮೊಂಡು ಹಟ ಉದಯಿಸಿತ್ತು. ಅಳಿದುಳಿದ ಅಳುಕು ಮಾಯವಾಗಿ ಹೊಸ ವಿಧದ ಮೊಂಡು ಹಟ ಉದಯಿಸಿತ್ತು. ದೃಢವಾಗಿ, ಧೈರ್ಯವಾಗಿ ಎಲ್ಲರನ್ನೂ ಎದುರಿಸಬಲ್ಲೆನೆಂಬ ಆತ್ಮವಿಶ್ವಾಸದ ಹುರುಪು ತುಂಬಿತ್ತು. ಮೂರು ತಿಂಗಳ ಶಿಶುವಿನಿಂದಲೂ ಪ್ರೀತಿ-ವಾತ್ಸಲ್ಯದ ನೀರೆರೆದು ಸಾಕಿದ ತಾಯಿಯೊಂದಿಗೆ ಮುಚ್ಚುಮರೆ ಸಲ್ಲದೆಂದು ಸುನೀತಿ ಬೇಡವೆಂದರೂ ಕೇಳದೆ ಅಂದು ಮಧ್ಯಾಹ್ನ ಒಳಕೋಣೆಯಲ್ಲಿ ಮಲಗಿದ್ದ ನಾಗಮ್ಮನ ಬಳಿ ಕುಳಿತು ತನ್ನ ಕಥೆಯನ್ನು

ವಿಸ್ತಾರವಾಗಿ ಹೇಳಿಕೊಂಡ. ಈ ಬಾರಿ ಹೇಳುವಾಗ ನಡುಗಲಿಲ್ಲ ಅವನ ಧ್ವನಿ. ಅಳುಕಲಿಲ್ಲ ಮನ. ಕಣ್ಣರೆಪ್ಪೆಗಳು ಇಳಿಮುಖವಾಗಲಿಲ್ಲ.

ನಾಗಮ್ಮ ಕೇಳಿಸಿಕೊಂಡರು. ಕೇಳುತ್ತ ಎದ್ದುಕುಳಿತು ಆಶ್ಚರ್ಯಭರಿತ ನೇತ್ರಗಳಿಂದ ನೋಡುತ್ತ ದೇವನ ಮೈ ಕೈ ಎಲ್ಲಾ ಮುಟ್ಟಿ ತೆರೆದ ಬಾಯಿಯನ್ನು ಮುಚ್ಚದೆ ಕುಳಿತುಬಿಟ್ಟರು ಕಲ್ಲುಗೊಂಬೆಯಂತೆ. 'ಹೀಗಾಗಲು ಸಾಧ್ಯವೇ?" ಮನದಲ್ಲೆದ್ದ ಪ್ರಶ್ನೆ ಹೇಳಲಾರದೆ ಗಂಭೀರವದನರಾಗಿ, "ನನಗೆ ಈ ವರೆಗೂ ತಿಳಿಯದ ವಿಷಯ. ನಿನ್ನ ಮಾತನ್ನು ನಾನು ಅಲ್ಲಗಳೆಯಲಾರೆ. ಸಂತೋಷವಪ್ಪ. ನೂರುಕಾಲ ಬಾಳು" ಎಂದರು ಅವನನ್ನು ದಿಟ್ಟಿಸುತ್ತ.

ದೇವ ದಿಗ್ಭ್ರಮೆಯಿಂದ ನೋಡಿದ ತಾಯಿಯನ್ನು. ತನ್ನ ಹುಟ್ಟಿಗಾಗಿ ಪರಿತಪಿಸದೆ, ಗೋಳಿಡದೆ, ಯಾವ ಆಘಾತಕ್ಕೂ ಒಳಪಡದೆ ಎಷ್ಟು ಸಹಜವಾಗಿ ಸ್ವೀಕರಿಸಿದ್ದಾಳೆ. ಓ....ತಂದೆಯಂತೆ ಅವಳದೂ ವಿಶಾಲ ಹೃದಯ. ಅವನು ಸಂತೋಷದಿಂದ ಕುಣಿದು ಕುಪ್ಪಳಿಸಿ ಹಾರಿಕೊಂಡು ಬಂದ ಸುನೀತಿಯ ಕೋಣೆಗೆ.

"ಅಮ್ಮನ ಹತ್ತಿರ ಎಲ್ಲಾ ಹೇಳಿದೆ ಸುನೀತಿ. ಅಮ್ಮ ನಿನಗಿಂತ ಮುಂದುವರಿದವಳು. ಪ್ರೀತಿಯಿಂದ ಹರಸಿದ್ದಾಳೆ ನನ್ನನ್ನು!"

ದೇವ ಅದೇ ಸಂತೋಷದಲ್ಲಿ ತೋಟ-ಗದ್ದೆಗಳನ್ನು ಸುತ್ತಿಬಂದ. ವಿಶ್ವಂಭರನನ್ನು ಕೆಣಕಿ ನಗಿಸಿದ. ಆ ದಿನ ಕೆಲಸದವರಿಗೆಲ್ಲಾ ಸಿಹಿ ಅವಲಕ್ಕಿಯ ಸಮಾರಾಧನೆ. ಕಾಲುಗಳು ನೆಲದ ಮೇಲಿಲ್ಲ. ಹೃದಯ ಹೂವಿಗಿಂತಲೂ ಹಗುರವಾಗಿ ಎಲ್ಲೋ ವಿಹರಿಸಿಕೊಂಡು ಹೋಗುತ್ತಿದೆ.

ಆ ರಾತ್ರೆಯವರೆಗೂ ನಾಗಮ್ಮ ಯಾವ ಶಬ್ದಗಳನ್ನೂ ಉಚ್ಚರಿಸದೆ ಹಸನ್ಮುಖರಾಗಿದ್ದದ್ದು ಸುನೀತಿಗೂ ಧೈರ್ಯ. ಅತ್ಯಂತ ಸಹಜವಾಗಿತ್ತು ಅವರ ವರ್ತನೆ. ಮರುದಿನ ಬೆಳಗ್ಗೆ ಎಂದಿನಂತೆ ದೇವ ಸ್ನಾನ ಮುಗಿಸಿ ಮಡಿಯುಟ್ಟು ದೇವರ ಕೋಣೆಯಲ್ಲಿ ಮಂತ್ರಪಠಣ ಪ್ರಾರಂಭಿಸಿದಾಗ ಬಾಗಿಲಲ್ಲಿ ಬಂದು ನಿಂತರು ನಾಗಮ್ಮ. ಮಡಿಯುಟ್ಟ ದೇವ ಸಾಕ್ಷಾತ್ ಶಿವನಂತೆ ಕುಳಿತಿದ್ದಾನೆ ದೇವರೆದುರು. ಬಾಯಿಯಲ್ಲಿ ಪಟಪಟನೆ ಮಂತ್ರೋಚ್ಚಾರಣೆ. ಉದ್ಧರಣೆ ನೀರಿನ ಅಭಿಷೇಕ. ಗಂಧ-ಪುಷ್ಪಗಳ ಸಮರ್ಪಣೆ. ಎತ್ತಿದ ಆರತಿಯೊಂದಿಗೆ ನಮೋ ನಮೋ ಎನ್ನುತ್ತ ಸಾಷ್ಟಾಂಗ ನಮಸ್ಕಾರ.

ಮನೆ ಕಟ್ಟಿಸಿದ ದಿನದಿಂದ ಇದೇ ಕೋಣೆಯಲ್ಲಿ ಪ್ರತಿಷ್ಠೆಯಾದ ದೇವರನ್ನು ಮಡಿ ಮೈಲಿಗೆಯಿಂದ ದೂರವಿರಿಸಿ ದಿನನಿತ್ಯದಲ್ಲಿ ಮತ್ತು ವಿಶೇಷ ದಿನಗಳಲ್ಲಿ ಮಡಿಯಲ್ಲಿ ಪೂಜಿಸುವುದು ಪದ್ಧತಿ. ಆದರೆ ಈವರೆಗೂ ಇಲ್ಲಿ ಪೂಜೆ ನಡೆದದ್ದು ಯಾರಿಂದ? ಈ ಹುಡುಗ ತನ್ನ ಉಪನಯನವಾದಂದಿನಿಂದ ಇಲ್ಲಿ ಪೂಜೆ ಮಾಡಿದನೇ? ಯಾರು ಇವನಿಗೆ ಪೂಜಿಸುವ ಅಧಿಕಾರ ಕೊಟ್ಟರು?

ಅಂದು ಮಧ್ಯಾಹ್ನ ತಲೆನೋವೆಂದು ಮಲಗಿದ ನಾಗಮ್ಮ ಮೂರು ದಿನ ಹಾಸಿಗೆ ಬಿಟ್ಟೇಳಲಿಲ್ಲ. ಜ್ವರ, ತಲೆನೋವಿನಲ್ಲಿ ರಾತ್ರೆಯೆಲ್ಲ ಕನವರಿಕೆ. ದೇವ ತಾಯಿಯ ಹತ್ತಿರವೇ ಕುಳಿತ ಆರೈಕೆ ಮಾಡಲೆಂದು. ಸುನೀತಿ ರಾತ್ರೆಯೆಲ್ಲ ನೋಡಿಕೊಂಡಳು ಅತ್ತೆಯನ್ನು. ನಾಲ್ಕನೇ ದಿನ ಜ್ವರ ಕಡಿಮೆಯಾದರೂ ಏಳಲಾರದ ನಿಶ್ಶಕ್ತಿ. ಮಗ ಸೊಸೆಯ ಆರೈಕೆ ಸಾಕೆಂಬಂತೆ ಕಷ್ಟದಲ್ಲಿ ಎದ್ದು ಓಡಾಡಿದರು. ಮನದ ಆಂದೋಲನ ವನ್ನು ಹೊರಗೆಡಹುವುದು ಅವರಿಂದಾಗಲಿಲ್ಲ. ತನ್ನನ್ನೇ ನಿಂದಿಸಿಕೊಂಡರು, ಜರೆದು ಕೊಂಡರು. ಮುಂದೆ ನಾಲ್ಕು ದಿನಗಳಲ್ಲಿ ಮನೆದೇವರ ಪೂಜೆ ಮಾಡಲು ಹನ್ನೆರಡು ವರ್ಷದ ವಟುವೊಬ್ಬ ಹಾಜರಾದ. "ಇಷ್ಟು ದಿನಗಳೂ ಹೇಗೋ ತಿಳಿಯದೆ ಕಳೆದಾಯ್ತು. ಇನ್ನು ಮುಂದೆ ನಮ್ಮವನೇ ಪೂಜೆ ಮಾಡಲಿ" ಎಂದರು ದೇವನಿಗೆ ಮುಖ ತೋರಿಸದೆ. ಅವನ ಮನಸ್ಸಿಗೆ ನೋವಾಗದಿರಲೆಂದು ಅಸಮಾಧಾನದಲ್ಲಿ ಸಮ್ಮತಿಸಿದ ದೇವ.

ಇದೊಂದೇ ಅಲ್ಲ, ಇನ್ನೂ ಅನೇಕ ಮಹತ್ವದ ಬದಲಾವಣೆಗಳು ನಡೆದು ಮನೆಯ ಶಿಸ್ತು ಏರುಪೇರಾಯಿತು. ತಮ್ಮ ಮನದ ಬೇಗುದಿ ತೋಡಿಕೊಳ್ಳಲಾರದ ನಾಗಮ್ಮ ಸುನೀತಿಯೊಂದಿಗೆ ಎಂದಿಗಿಂತಲೂ ಮೌನಿ. ದೇವನೊಂದಿಗೂ ಮಾತು ಅಷ್ಟಕ್ಕಷ್ಟೇ. ಅವನು ಹಾಲು ಕರೆದು ತಂದು ಅಡಿಗೆಕೋಣೆಯಲ್ಲಿದ್ದರೆ ನಾಗಮ್ಮ ಒಳಗೆ ಕಾಲಿಡ ಲಾರರು. ಅವರು ಅಡಿಗೆಕೋಣೆಯಲ್ಲಿದ್ದಾಗ ಅವನು ಬಂದರೆ ಹುಬ್ಬು ಮೇಲೇರುತ್ತದೆ. ಬಿಗಿದುಕೊಳ್ಳುತ್ತದೆ ಮುಖ. ಉಣ್ಣುವ, ತಿನ್ನುವ ಸಮಯದಲ್ಲಿ ಅವರಿಲ್ಲ. ಜಾಹ್ನವಿ ಅಥವಾ ಸುನೀತಿ ಬಡಿಸಬೇಕು. ದೇವ ಬಚ್ಚಲಲ್ಲಿ ಸ್ನಾನ ಮುಗಿಸಿ ಬಂದರೆ ನಾಗಮ್ಮ ಒಳಗಿನಿಂದ ನೀರು ಕಾಯಿಸಿ ಸ್ನಾನಮಾಡುತ್ತಾರೆ. ಅವರ ಹಾಸಿಗೆ, ಬಟ್ಟೆಬರೆ ಪ್ರತ್ಯೇಕ ವಾಯಿತು.

ಹೊರಕೆಲಸಗಳಲ್ಲೇ ಮಗ್ನನಾದ ದೇವನಿಗೆ ಈ ಬದಲಾವಣೆ ಲಕ್ಷ್ಯಕ್ಕೆ ಬರಲಿಲ್ಲ. ಆದರೆ ಸುನೀತಿಯ ಪಾಲಿಗೆ ನರಕವಾಯಿತು ಮನೆ. ದೇವನ ಹೆಂಡತಿಯಾದ ತಪ್ಪಿಗೆ ದೇವರಕೋಣೆ ಪ್ರವೇಶ, ಅಡಿಗೆ ಕೆಲಸ, ನಾಗಮ್ಮನ ಸೇವೆಯೂ ನಿಷೇಧವಾಯಿತು. ಒಳ-ಹೊರಗೆ ತಿರುಗುವಾಗಲೂ ಎಚ್ಚರವಿರಬೇಕು. ಅವಳು ಹತ್ತಿರ ಬಂದಾಗ ದೂರ ಸರಿದುಕೊಳ್ಳುವ ನಾಗಮ್ಮನ ನಡವಳಿಕೆ ಸುನೀತಿಗೇ ಮುಜುಗರ. ಅದೇಕೆ, ಕೃಷ್ಣ, ವಿಷ್ಣುವನ್ನು ಮುಟ್ಟಿಸಿಕೊಳ್ಳುವುದಕ್ಕೆ ಹಿಂಜರಿತ. ವಿಷ್ಣು ಎಷ್ಟು ಅತ್ತರೂ ಎತ್ತಿಕೊಳ್ಳಲು ಮುಂದಾಗಲಿಲ್ಲ. ಆ ಮಕ್ಕಳು ತಮ್ಮ ಮೊಮ್ಮಕ್ಕಳಲ್ಲ ಎಂಬ ಭಾವ ಬಂದಿತೇ? ಆದರೆ ಅಜ್ಜಿಯ ತೊಡೆ ಮೇಲೆ ನಲಿದ ಕೃಷ್ಣ ಅವರನ್ನು ಪದೇ ಪದೇ ಕಾಡಿದ. ಅವರು ದೂರ ಮಾಡಿದಾಗಲೆಲ್ಲ ಅತ್ತು ರಂಪ ಮಾಡಿದ.

"ಇದೇನು ವಿಪರೀತ ಮಾಡ್ತಾ ಇದ್ದೀರಿ ಅತ್ತೆ. ಇಷ್ಟು ವರ್ಷಗಳು ಅಂಟಿಕೊಳ್ಳದ ಕೊಳೆ ಈಗ ನಿಮ್ಮನ್ನು ಅಂಟಿಕೊಳ್ಳುತ್ತದೆಯೇ?" ಒಮ್ಮೆ ಮನ ತಡೆಯಲಾರದೆ ಅಂದಳು ಸುನೀತಿ.

ಅಷ್ಟು ಹೇಳಿದ್ದೇ ತಡ. ಮುಸಿಮುಸಿ ಅಳಲಾರಂಭಿಸಿದರು ನಾಗಮ್ಮ. "ಮಕ್ಕಳಿಲ್ಲ ವೆಂಬ ಕೊರಗಿನಲ್ಲಿದ್ದರೂ ಆವತ್ತು ಅವರು ಕುಲಗೋತ್ರವಿಲ್ಲದ ಮಗುವನ್ನು ಹೊತ್ತು ತಂದಾಗ ಬೇಡವೆಂದು ತಿರಸ್ಕರಿಸಿದ್ದೆ. ಆರೇಳು ತಿಂಗಳು ಕೈಯಿಂದ ಮುಟ್ಟಿ ಕೂಡ ನೋಡಿರಲಿಲ್ಲ. ಅಯ್ಯೋ, ಅವರು ಸುಳ್ಳು ಹೇಳಿ ನನ್ನನ್ನು ವಂಚಿಸಿದರು. ಇನ್ನು ಅವನನ್ನು ನನ್ನ ಮಗ ಎಂದು ಹೇಗೆ ಸ್ವೀಕರಿಸಲಿ?"

"ಇಷ್ಟು ವರ್ಷಗಳಿಂದ ನೀವು ಏನನ್ನು ನಂಬಿಕೊಂಡಿದ್ದೀರೋ ಆ ನಂಬಿಕೆ ಸಡಿಲಗೊಳಿಸಬೇಡಿ. ನಮ್ಮ ಸಂಪ್ರದಾಯಕ್ಕೆ ಇದು ವಿರೋಧವಾದರೂ ನಮ್ಮ ಮಟ್ಟಿಗೆ ಅನಿವಾರ್ಯ, ಹೊಂದಿಕೊಳ್ಳಲು ಕಲಿಯೋಣ."

"ಹೇಗೆ ಸಾಧ್ಯ ಸುನೀತಿ? ಬೇರೆಯೇ ವರ್ಣದಲ್ಲಿ ಹುಟ್ಟಿದ ಅವನಿಗಿರುವ ಸ್ಥಾನ ಬೇರೆಯೇ? ಅಲ್ಲ..." ಕರುಣೆಯ ನೋಟ ಬೀರಿದರು ಅವಳತ್ತ. "ನೀನು ಹೇಗೆ ಇರ್ತಿಯಾ ಅವನ ಜೊತೆ?"

"ಆರು ತಿಂಗಳಿನಿಂದಲೂ ಇದೇ ಯೋಚನೆಯಲ್ಲಿ ಹಣ್ಣಾಗಿ ಕೊನೆಗೆ ನನ್ನ ಬಾಳು ಮಣ್ಣಾಗಬಾರದೆಂದು ಹೊಂದಿಕೊಳ್ಳಲು ಕಲಿತೆ. ನೀವು ಸಾಕಿದ ಮಗನ ವರ್ಣ ನೋಡಲಿಲ್ಲ. ಬದಲಾಗಿ ಅವರ ಗುಣ-ಸ್ವಭಾವಕ್ಕೆ ಬೆಲೆ ಕೊಟ್ಟೆ. ಅತ್ತೆ, ನಿಮ್ಮ ಯಜಮಾನರದ್ದು ಎಂತಹ ವಿಶಾಲ ಹೃದಯ!"

"ಆದರೂ ನಾವು ನಂಬಿಕೊಂಡಿರುವ ಆಚಾರ ಪದ್ಧತಿಗೆ ಇದು ವಿರೋಧ. ಹೋಗಲಿ, ನನಗಾದರೂ ಅವರು ಮೊದಲೇ ತಿಳಿಸಬಾರದಿತ್ತೇ? ಏನೂ ಹೇಳದೆ ನನ್ನನ್ನು ಈ ಸ್ಥಿತಿಯಲ್ಲಿ ಬಿಟ್ಟುಹೋದರಲ್ಲ" ಈಶ್ವರಯ್ಯನವರನ್ನು ನಿಂದಿಸುತ್ತ ಗೋಳಾಡಿದರು ನಾಗಮ್ಮ.

"ನೀವು ಸಾಕಿದ ಮಗ ನಿಮ್ಮ ಮಡಿಲಲ್ಲಿ, ನಿಮ್ಮ ನೆರಳಲ್ಲಿ, ನಿಮ್ಮದೇ ಸಂಸ್ಕೃತಿ ಯಲ್ಲಿ ಬೆಳೆದು ಬಂದವನಲ್ಲವೇ? ಯಾವ ಕೊರತೆಯಾದರೂ ಇದೆಯೇ? ನಿಮ್ಮ ದೇವ ಅಪ್ಪಟ ಚಿನ್ನ! ಕೃಷ್ಣ, ವಿಷ್ಣು ನಿಮ್ಮ ಮೊಮ್ಮಕ್ಕಳೆಂದು ತಿಳಿದು ಸಮಾಧಾನವಾಗಿರಿ."

ತಲೆ ಕೊಡಹಿಕೊಂಡರು. ಈ ಯೋಚನೆ ಅವರಿಗೂ ಬಂದಿದೆ. ದೇವನಲ್ಲಿ ಅವರೆಂದೂ ಕುಂದುಕೊರತೆ ಕಂಡವರಲ್ಲ. ಕೆಲವೊಮ್ಮೆ ಈಶ್ವರಯ್ಯನವರಿಗಿಂತಲೂ ಹಿರಿದಾದ ವ್ಯಕ್ತಿತ್ವವನ್ನು ಸಣ್ಣಪ್ರಾಯದಲ್ಲೇ ಅವನಲ್ಲಿ ನೋಡಿದ್ದಾರೆ. ಸಾಕುತಾಯಿಯ ಮೇಲೆ ಅವನಿಗಿರುವ ಪ್ರೀತಿ-ವಾತ್ಸಲ್ಯ ಸ್ವಂತ ಮಗನಿಂದಲೂ ಅವರು ಪಡೆಯುವುದು ಕಷ್ಟ. ಕೆಲವು ದಿನಗಳ ಹಿಂದೆ ಸುಜಾತೆಯಿಂದ ಬಂದ ಕಾಗದದ ನೆನಪಾಯಿತು. ಕಾಗದದ ತುಂಬಾ ದೇವನ ವರ್ಣನೆ, ಗುಣಗಾನ. ಕೃಷಿಕನಾಗಿ ನಾಲ್ಕು ಜನ ಮೆಚ್ಚುವಂತಿರುವ ಅವನ ವ್ಯಕ್ತಿತ್ವವನ್ನು ಬಂದವರೆಲ್ಲ ಹೊಗಳಿದ ಕ್ರಮ, ಅವರು ಕೊಟ್ಟ ಗೌರವ, ಮೆಚ್ಚುಗೆಯ ಕ್ರಮಗಳ ವಿವರಣೆ. ಓದುತ್ತ ಇಂತಹ ಮಗನನ್ನು ತಾನು ಪಡೆದಿದ್ದೇನಲ್ಲ ಎಂಬ

ಹೆಮ್ಮೆಯಿಂದ ಬೀಗಿ ವಿಶ್ವಂಭರನಿಗೆ ಕಾಗದ ಓದಲು ಕೊಟ್ಟಿದ್ದರು, ಸದಾನಂದನಿಗೂ ಬರೆದು ತಿಳಿಸಿದ್ದರು.

ಆದರೆ ಈಗ ಆ ಭಾವನೆಗಳೆಲ್ಲ ಬುಡಮೇಲಾಗಿ ಅವನ ವಿಷಯದಲ್ಲಿ ಜಡವಾಗಿದೆ ಮನಸ್ಸು. ಅವರ ತುಮುಲ, ಸಂಕಟ ಹೆಚ್ಚುತ್ತಿದೆ ದಿನೇದಿನೇ. ಹೀಗಾಗಿ ಸುನೀತಿ ಹೇಳಿದ ಯಾವ ಸಮಾಧಾನದ ಮಾತುಗಳೂ ಅವರ ಅಂತರಂಗಕ್ಕೆ ತಲುಪಲಿಲ್ಲ.

ದಿನಸರಿದಂತೆ ಅವರ ಸ್ಥಿತಿ ಇನ್ನಷ್ಟು ಶೋಚನೀಯವಾಯಿತು. ಮೊದಲಿನಿಂದಲೂ ಪತಿಯ ಆದರ್ಶಗಳತ್ತ ಮುಖ ತಿರುಗಿಸಿದವರು. ಈಗಂತೂ ಈ ಆಘಾತ ತಡೆಯಲು ಸಾಧ್ಯವಾಗುತ್ತಿಲ್ಲ. ದಿನವೆಲ್ಲ ಬಿದ್ದುಕೊಳ್ಳುತ್ತಾರೆ ಹಾಸಿಗೆಯಲ್ಲಿ ಅಥವಾ ಬಾವಿಕಟ್ಟೆಯ ಬಳಿ ಈಶ್ವರಯ್ಯನವರನ್ನು ನಿಂದಿಸುತ್ತ ನಿಲ್ಲುತ್ತಾರೆ. ದೇವ ಹತ್ತಿರ ಬಂದರೆ ಸಿಡಿಮಿಡಿ. ಆಗಾಗ ಸಹಸ್ರನಾಮದ ಬೈಗಳು. ಏನನ್ನೋ ಯೋಚಿಸುತ್ತ ರೋದಿಸುತ್ತಾರೆ ದೊಡ್ಡ ಸ್ವರದಲ್ಲಿ.

ಆ ಶನಿವಾರ ಕಲ್ಯಾಣಪುರಕ್ಕೆ ಬಂದ ಸದಾನಂದ ಎಂದಿಗಿಂತಲೂ ಗಂಭೀರ. ದೇವ ಕೊಟ್ಟ ಪಾನೀಯ ಸ್ವೀಕರಿಸಲಿಲ್ಲ. ನಾಗಮ್ಮನೊಡನೆ ಗುಟ್ಟಿನಲ್ಲಿ ನಡೆಯಿತು ಅವನ ಮಾತು. ಮತ್ತೆರಡು ದಿನಗಳಲ್ಲಿ ಧಾವಿಸಿ ಬಂದರು ಸುನೀತಿಯ ತಂದೆ. ಸದಾನಂದ ಅವನಿಗೂ ತಲುಪಿಸಿದ್ದ ಸುದ್ದಿಯನ್ನು. ಅವರು ದೇವನಿಗೆ ಏನನ್ನೂ ಹೇಳದಿದ್ದರೂ ಮಗಳೊಡನೆ, "ಎಂತಹ ಅನ್ಯಾಯವಾಯಿತಲ್ಲ ಸುನೀತಿ. ಆದರೂ ಹೊಂದಿಕೊಂಡು ಧೈರ್ಯವಾಗಿರು!" ಎಂದರು. ಅವರಿಗೆ ಗೊತ್ತು ಮಗಳ ಜೀವನ ಈವರೆಗೂ ಹೂವಿನ ಹಾಸಿಗೆಯಾಗಿದೆ. ಇನ್ನೆಂದೂ ಅದು ಮುಳ್ಳಿನ ಹಾಸಿಗೆ ಆಗಬಾರದೆಂಬ ಕಳಕಳಿ.

ಇದರೊಂದಿಗೆ ಬಂದಿತು ಸುಜಾತೆಯ ಕಾಗದ. ಸದಾನಂದನ ಕಿವಿಗೆ ಸುದ್ದಿ ಸಿಕ್ಕಿದರೆ ಅದು ಕಹಳೆ ಬಾಯಿಗೆ ಮುತ್ತುಕೊಟ್ಟಂತೆ!

"ಅಕ್ಕ, ಸದಾನಂದ ನಿಮ್ಮ ವಿಷಯಗಳನ್ನೆಲ್ಲ ಬರೆದು ತಿಳಿಸಿದ್ದಾರೆ. ನಿಜಕ್ಕೂ ಆಶ್ಚರ್ಯಪಟ್ಟೆವು. ಈಶ್ವರಯ್ಯನವರದು ಕೇವಲ ಠಕ್ಕು ಆದರ್ಶವಲ್ಲ. ದೇವ ಭಾವನನ್ನು ನೋಡಿದವರಿಗೆ, ಅವರ ಪರಿಚಯ ಮಾಡಿಕೊಂಡವರಿಗೆ ಅವರ ಬಗ್ಗೆ ಅನುಮಾನ ಬರುವುದಿಲ್ಲ. ದೇವನೊಡನೆ ಇನ್ನೂ ಮುಂದೆಯೂ ನಿನ್ನ ಜೀವನ ಹಾಲು ಜೇನಿನಂತಿರಲಿ."

ಸುಜಾತೆಯ ಕಾಗದ ಅದೆಷ್ಟೋ ನೆಮ್ಮದಿ ತಂದಿತು ಸುನೀತಿಗೆ. ಕಲ್ಯಾಣಪುರದಲ್ಲಿ ಕ್ಷಣಮಾತ್ರದಲ್ಲಿ ಹಬ್ಬಿದ ಸುದ್ದಿಗೆ ರೆಕ್ಕೆ-ಪುಕ್ಕ ಮೂಡಿದವು. ಒಬ್ಬೊಬ್ಬರದು ಒಂದೊಂದು ಮಾತು. ಪರೀಕ್ಷಿಸಲೆಂಬಂತೆ ಧಾಳಿಯಿಟ್ಟರು ದೇವನ ಮನೆಗೆ. ದೇವ ಹೋದ ಕಡೆಗಳಲ್ಲಿ ಪ್ರಶ್ನಾರ್ಥಕ ನೋಟ. ಹರಿಜನರು, ಚಮ್ಮಾರರು, ಪೂಜಾರಿಗಳು, ಇತರ ಜನರು ಮೂಗಿನ ಮೇಲೆ ಬೆರಳಿಟ್ಟರು. ಕೆಳಮನೆ ಅರ್ಚಕರು ನೇರವಾಗಿ ಪ್ರಶ್ನಿಸಿದರೆ ಮೇಲ್ಮನೆ ಶಾಸ್ತ್ರಿಗಳು ಬಳಸುದಾರಿಯಲ್ಲಿ ಕೆದಕಿದರು. ಎಲ್ಲರದೂ ಒಂದೇ

ಪ್ರಶ್ನೆ. "ದೇವ ಹರಿಜನ ಎನ್ನುವುದು ನಿಜವೇ?" ದೇವನದು ಒಂದೇ ಒಂದು ಉತ್ತರ. "ನಾನು ಈಶ್ವರಯ್ಯನವರ ಮಗ!"

ಸದಾನಂದ ಬಂದ ಕ್ಷಣದಿಂದ ಸುನೀತಿಗೆ ಮುಳ್ಳಿನ ಮೇಲೆ ಕುಳಿತ ಅನುಭವ. ಅವನ ಬಿರುಗಣ್ಣಿನ ನೋಟ ಇರಿಯುತ್ತಿದೆ ಅವಳನ್ನು. ದೇವ ಮತ್ತು ಅವಳ ಸಂಬಂಧದ ಬಗ್ಗೆ ಹಲವು ಪ್ರಶ್ನೆ ಕೇಳುವ ತವಕ. ಕೃಷ್ಣ, ವಿಷ್ಣುವನ್ನು ನೋಡುತ್ತ, "ಈ ಮಕ್ಕಳ ಭವಿಷ್ಯ ಇನ್ನೇನು ಆಗಲಿದೆಯೋ?" ಎನ್ನುತ್ತಾನೆ ತಿರಸ್ಕಾರದಲ್ಲಿ. ತನ್ನದೇ ಮನೆಯೆಂಬ ಅಧಿಕಾರದ ದರ್ಪದಲ್ಲಿ ಓಡಾಡುವವನ ಮುಂದೆ ಅವಳು ಇಲಿಯಾದಳು. ರಾತ್ರಿ-ಹಗಲು ತನ್ನ ಅತ್ತೆ ಮತ್ತು ಅವನು ಏನು ಮಾತನಾಡುವರೆಂಬ ಕುತೂಹಲ ಅವಳಿಗಿಲ್ಲ. ಆದರೆ ತನ್ನ ಪರಿಸ್ಥಿತಿ ನೆನೆದು ನಡುಗಿಹೋಗಿದ್ದಾಳೆ.

ದೇವನಿಗೂ ಅರ್ಥವಾಗಿದೆ ಸುನೀತಿಯ ಕಷ್ಟ. ಇನ್ನೇನು ಕೆಲವು ದಿನಗಳಲ್ಲಿ ಈಶ್ವರಯ್ಯನವರ ವರ್ಷಾಂತಿಕ. ಆಗೊಂದು ದೊಡ್ಡ ಗಲಾಟೆಯಾಗುವುದು ಖಂಡಿತ. ತಾನಾದರೆ ಎಂತಹ ಗಲಾಟೆಯನ್ನೂ ಎದುರಿಸಬಲ್ಲೆ. ಸುನೀತಿಯಿಂದ ಸಾಧ್ಯವಿಲ್ಲ. ತಮ್ಮಿಂದ ಅಮ್ಮನಿಗೆ ಇನ್ನಷ್ಟು ತೊಂದರೆಯಾಗಬಾರದು.

"ಕೆಲವು ದಿನಗಳಿಗೋಸ್ಕರ ಉಪ್ಪಿನಂಗಡಿಗೆ ಹೋಗಿ ಬಾ ಸುನೀತಿ. ವರ್ಷಾಂತಿಕ ಕಳೆದ ಮೇಲೆ ಹಿಂದಿರುಗಿದರೆ ಸಾಕು. ಸಾಧ್ಯವಾದರೆ ನಾವೇ ಬೇರೆ ಮನೆ ಮಾಡೋಣ."

ದೇವನ ಸಲಹೆ ಸರಿಯೆನಿಸಿತು ಸುನೀತಿಗೆ. ಮಕ್ಕಳೊಂದಿಗೆ ಹೊರಟವಳು, "ನಿಮ್ಮನ್ನು ಅಗಲಿ ಹೆಚ್ಚು ದಿನ ಇರಲಾರೆ. ವರ್ಷಾಂತಿಕ ಕಳೆದ ಮೇಲೆ ಇಲ್ಲಿ ಪರಿಸ್ಥಿತಿ ನೋಡಿಕೊಂಡು ಕಾಗದ ಬರೆಯಿರಿ. ಬೇಗ ಬಂದುಬಿಡ್ತೇನೆ. ಆದರೆ ಸದಾನಂದನ ಬಗ್ಗೆ ಎಚ್ಚರವಾಗಿರಿ" ಎಂದಳು ಹನಿದುಂಬಿದ ಕಣ್ಣುಗಳಿಂದ.

ಅವಳು ಹೊರಟುಹೋದ ಮೇಲೆ ನಿಶ್ಚಿಂತನಾಗಿ ಅಂದ ತಾಯಿಗೆ, "ಇನ್ನು ನಿನಗೆ ತೊಂದರೆಯಿಲ್ಲ. ಅವಳನ್ನು, ಮಕ್ಕಳನ್ನು ಕಳುಹಿಸಿದ್ದೇನೆ".

ನಾಗಮ್ಮ ಬೆಚ್ಚಿಬಿದ್ದರು. ತಮ್ಮಿಂದಾಗಿ ಅವನ ಹೆಂಡತಿ ಮಕ್ಕಳು ಹೊರಟು ಹೋದರೇ? "ಅವರನ್ನು ಯಾಕೆ ಕಳುಹಿಸಿದೆ? ವರ್ಷಾಂತಿಕ ಮುಗಿಯುವ ತನಕ ನಾನು ಇಲ್ಲಿರ್ತೇನೆ. ಆಮೇಲೆ ಸದಾನಂದನ ಮನೆಗೆ ಹೋಗುವ ನಿಶ್ಚಯ ಮಾಡಿದ್ದೇನೆ."

"ನೀನ್ಯಾಕೆ ಮನೆಬಿಟ್ಟು ಹೋಗ್ತಿ ಅಮ್ಮಾ. ನಾನೇ ಬೇರೆ ಮನೆ ಮಾಡ್ತೇನೆ. ಅಲ್ಲಿಯವರೆಗೆ ಆಳು ಕರಿಯನಿಗೆ ಬಡಿಸಿದಂತೆ, ಅವನನ್ನು ನೋಡಿಕೊಂಡಂತೆ ನನಗೂ ಊಟ, ತಿಂಡಿ ಹೊರಗೆ ಬಡಿಸು!"

ನಾಗಮ್ಮ ಕಸಿವಿಸಿಗೊಂಡರು ಈ ಮಾತಿನಿಂದ. ಕರಿಯನೊಂದಿಗೆ ಇವನನ್ನು ಹೋಲಿಸಲು ಒಪ್ಪಲಿಲ್ಲ ಅವರ ಮನಸ್ಸು. ಅಂದು ಮಧ್ಯಾಹ್ನ ದೇವ ತನಗಾಗಿ ಬಡಿಸಿದ

ಎಲೆಯನ್ನು ಎತ್ತಿಕೊಂಡು ಹೊರಗೆ ನಡೆದಾಗ, "ಬೇಡಪ್ಪ ದೇವ, ಇಲ್ಲೇ ಅಡಿಗೆಕೋಣೆಯಲ್ಲಿ ಕುಳಿತುಕೋ. ನಾನೇನೂ ಹೇಳಲಾರೆ" ಎಂದರು ಗಡಗಡ ನಡುಗುತ್ತ.

ದೇವ ತೀಕ್ಷ್ಣವಾಗಿ ನೋಡಿದ ಅವರನ್ನು. "ಅಮ್ಮ, ನಿನ್ನ ಮುಖ ನೋಡಿ ನಾನಿಲ್ಲಿ ಎಲ್ಲದಕ್ಕೂ ಸುಮ್ಮನಿದ್ದೇನೆ ಅಷ್ಟೇ!"

## ೧೬

ಹೊಸ ವಿಷಯ ದೊರೆತ ಸದಾನಂದನಿಗೆ ರಾತ್ರಿ ಹಗಲು ಅದೊಂದೇ ಆಲೋಚನೆ. ಮೊದಲೇ ದೇವನ ನೆರಳು ಕಂಡರಾಗದು. ಇದೀಗ ತನ್ನ ದರ್ಪ ಸಾಧಿಸಲು ಸಿಕ್ಕಿದೆ ಸರಿಯಾದ ಎಳೆ. ಅವನು ಪಾಣೆಮಂಗಳೂರಿನಲ್ಲಿ ಅನೇಕ ಹಿರಿಯರನ್ನು ಕಂಡು ವಿಚಾರವಿನಿಮಯ ನಡೆಸಿದ. ಕಲ್ಯಾಣಪುರಕ್ಕೆ ಬಂದು ಅಲ್ಲಿ ಶಾಸ್ತ್ರಿಗಳನ್ನೂ, ಪುರೋಹಿತರನ್ನೂ ಭೇಟಿಮಾಡಿ ಚರ್ಚಿಸಿದ. ದೇವನ ಮನೆಯಲ್ಲಿ ಸೇರಿತು ಹಿರಿಯರ ಸಭೆ. ಸದಾನಂದ ತಾನೇ ಮನೆ ಹಿರಿಯನೆಂಬಂತೆ ವರ್ತಿಸಿದ.

ಈಶ್ವರಯ್ಯನವರ ವರ್ಷಾಂತಿಕವನ್ನು ಯಾರು ಮಾಡಬೇಕೆಂಬ ಚರ್ಚೆ ಎದ್ದಾಗ ದೊಡ್ಡ ಗಲಾಟೆ ಆಗಿಹೋಯಿತು. ಈಶ್ವರಯ್ಯ ತಾವು ಸಾಯುವ ಕಾಲಕ್ಕೆ ತನ್ನನ್ನು ಕರೆದು 'ನೀನೇ ಮಾಡಬೇಕು' ಎಂದು ಕೇಳಿಕೊಂಡದ್ದನ್ನು ದೇವ ನೆನಪಿಸಿದಾಗ ಕಿಡಿಕಿಡಿಯಾದ ಸದಾನಂದ. ನಾಗಮ್ಮನೂ ಒಪ್ಪಲಿಲ್ಲ ಈ ಮಾತನ್ನು. ಹಿರಿಯರೆಲ್ಲರೂ ಧರ್ಮಗ್ರಂಥಗಳನ್ನು ತಿರುವಿಹಾಕಿದರು. ವ್ಯಾಸ, ವಿಶ್ವಾಮಿತ್ರ, ದೂರ್ವಾಸ ಇವರೆಲ್ಲರೂ ತಮ್ಮದೇ ನಿಷ್ಠೆ, ತಪಸ್ಸು, ಸತತ ಸಾಧನೆಯಿಂದ ಮಹರ್ಷಿಗಳಾದವರು. ಸಕಲಜ್ಞಾನಿಯಾದ ಚಾಂಡಾಲನೊಬ್ಬನಿಗೆ ಶ್ರೀ ಶಂಕರಾಚಾರ್ಯರು 'ನೀನೇ ಗುರು' ಎಂದು ವಂದಿಸಲಿಲ್ಲವೇ? ಕುಲ, ವರ್ಣಗಳನ್ನು ನೋಡಲಿಲ್ಲ. ಸ್ಮಶಾನ ಕಾಯುವವನನ್ನು ರಾಜಾಧಿರಾಜ ಹರಿಶ್ಚಂದ್ರ ಸೇವೆ ಮಾಡಿಕೊಂಡಿದ್ದ. ಈಶ್ವರಯ್ಯನವರು ದೇವನ ಹುಟ್ಟು ನೋಡಲಿಲ್ಲ. ತಮ್ಮದೇ ಆದರ್ಶದಲ್ಲಿ ಬೆಳೆಸಲು ಅಹೋರಾತ್ರ ಹೆಣಗಿದ್ದು ನಿಜ. ಎಲ್ಲ ಹಿರಿಯರಿಗೂ ತಿಳಿದಿದೆ, ಅವರ ಗರಡಿಯಲ್ಲಿ ಬೆಳೆದ ಅವನ ವ್ಯಕ್ತಿತ್ವ ಪುಟಕ್ಕಿಟ್ಟ ಚಿನ್ನ. ಹೀಗಾಗಿ ಅವರ ವರ್ಷಾಂತಿಕ ಮಾಡಲು ಅವನೇ ಹೆಚ್ಚು ಯೋಗ್ಯ ಎನಿಸಿತು. ಆದರೆ ಬಾಯಿಬಿಟ್ಟು ಹೇಳುವ ಧೈರ್ಯ ಒಬ್ಬರಿಗೂ ಬರಲಿಲ್ಲ. ಮತ್ತು ಈಗ ನಡೆದು ಬಂದ ಸಂಪ್ರದಾಯಗಳಿಗೆ ವಿರೋಧವಾಗುವುದು ಯಾರಿಗೂ ಬೇಕಿರಲಿಲ್ಲ.

"ಪುರಾಣ ಶಾಸ್ತ್ರಗಳೆಲ್ಲವೂ ಹಿಂದಿನ ಕಾಲಕ್ಕಾಯಿತು. ಬದಲಾಗುತ್ತಿರುವ ಈ ಕಾಲಕ್ಕೆ ತಕ್ಕಂತೆ ನಾವೂ ಬದಲಾಗುವುದು ಅನಿವಾರ್ಯ. ಸರಿಯಾದ ಪಥವನ್ನು ತೀರ್ಮಾನಿಸುವುದು ಕಷ್ಟಕರ. ನಿಮಗೆ ಅನುಮಾನವಿದ್ದರೆ, ಸಂಶಯ ಬಂದರೆ ಗೋಕರ್ಣದಲ್ಲಿ ಈಶ್ವರಯ್ಯನವರ ವರ್ಷಾಂತಿಕ ಮಾಡಿ ಮುಗಿಸಿ. ಯಾರ ರಗಳೆಯೂ ಇಲ್ಲ" ಎಂದರು ಮುಖ್ಯ ಹಿರಿಯರು. ದೇವನಿಗೆ ನೋವು ಕೊಡುವ ಇಚ್ಛೆ ಅವರದಲ್ಲ.

"ಇದು ಮೂಢನಂಬಿಕೆ". ಮೂಲೆಯಲ್ಲಿ ಕೈಕಟ್ಟಿ ಕುಳಿತ ದೇವನ ಸ್ವರ ಕೇಳಿಸಿತು. "ಸತ್ತವರ ಆತ್ಮ ಈಗಾಗಲೇ ಯಾರ ದೇಹದ ಆಶ್ರಯ ಪಡೆದಿದೆಯೋ... ಇಲ್ಲಿ ಅಲ್ಲಿ ಅಂತ ವೃಥಾ ಹಣ ಪೋಲು ಮಾಡುವ ಬದಲು ಅವರ ಹೆಸರಿನಲ್ಲಿ ಊರಿನ ಬಡವರಿಗೆ ಊಟ ಬಡಿಸಿದರೆ ಅದೇ ಅವರ ಆತ್ಮಕ್ಕೆ ತೃಪ್ತಿ."

"ಅದಾಗದು. ನಮ್ಮ ಜನರು ಮೊದಲಿನಿಂದಲೂ ನಡೆದುಕೊಂಡು ಬಂದ ಕ್ರಮ ವೊಂದಿದೆಯಲ್ಲ. ಸತ್ತವರ ಆತ್ಮ ಅನ್ನ ನೀರಿಲ್ಲದೆ ಅಂತರಿಕ್ಷದಲ್ಲಿ ತೊಳಲಾಡಬಾರದು" ಎಂದರು ಯಾರೋ.

"ಏನು ಹುಚ್ಚುತನ ನಿಮ್ಮದು" ಗಹಗಹಿಸಿ ನಕ್ಕ ದೇವ. "ಆತ್ಮ ಅವಿನಾಶಿ. ಅದಕ್ಕೆ ಹುಟ್ಟು ಇಲ್ಲ, ಸಾವು ಇಲ್ಲ. ಮೂಳೆ ಮಾಂಸಗಳಿಂದ ಕೂಡಿದ ಜೀರ್ಣವಾದ ಹಳೆದೇಹವನ್ನು ಕಳಚಿ ಹೊಸತನ್ನು ಪಡೆದುಕೊಳ್ಳುತ್ತದೆ. ಇವೆಲ್ಲ ಸಂಸ್ಕಾರಗಳೂ ಅದರ ಹೊದಿಕೆಗಳು."

"ನಿನ್ನ ಅಧಿಕಪ್ರಸಂಗತನ ಇಲ್ಲಿ ಬೇಡ. ಬಾಯ್ಮುಚ್ಚು" ಗದರಿಸಿದ ಸದಾನಂದ.

"ನದಿಯ ಒಂದು ದಡದಲ್ಲಿ ನಿಂತು ಆಚೆದಡದಲ್ಲಿ ಒಂದು ಮೈಲು ದೂರವಿರುವ ತನ್ನ ಗದ್ದೆಗೆ ನಿಂತ ದಡದಿಂದಲೆ ಬೊಗಸೆಯಿಂದ ನೀರೆತ್ತಿ ನೀರು ಹಾಯಿಸಿ ಬೆಳೆ ಬೆಳೆಸುತ್ತೇನೆ ಎಂದನಂತೆ ಒಬ್ಬ ಮೂರ್ಖ. ಹಾಗೆ ಸತ್ತವರ ಆತ್ಮಕ್ಕೆ ಶಾಂತಿ ದೊರೆಯ ಲೆಂದು ಮಾಡುವ ಕಾರ್ಯಗಳ ಅರ್ಥವೂ ಇಷ್ಟೇ. ಈ ಕಾರ್ಯವನ್ನು ಈಶ್ವರಯ್ಯನವರ ಸ್ವಂತ ಮಗ ಮಾಡಿದರೂ ಒಂದೇ, ಸಾಕುಮಗ ಮಾಡಿದರೂ ಒಂದೇ ಅಥವಾ ಮೂರನೆಯವ ಮಾಡಿದರೂ ಅದರ ಫಲ ಒಂದೇ!"

ಆದರೆ ನಾಗಮ್ಮ ಹಿರಿಯರ ಮಾತಿನಂತೆ ಪತಿಯ ವರ್ಷಾಂತಿಕವನ್ನು ಗೋಕರ್ಣ ದಲ್ಲಿ ನೆರವೇರಿಸಲು ಎರಡು ದಿನಗಳ ಮುಂಚಿತವಾಗಿ ಸದಾನಂದ ಮತ್ತು ವಿಶ್ವಂಭರನ ಜೊತೆ ಹೊರಟು ನಿಂತರು. ಹೋಗುವ ಮುನ್ನ ಜಾಹ್ನವಿ ಮತ್ತು ಮಕ್ಕಳನ್ನು ಸದಾನಂದನ ಮನೆಗೆ ಕಳುಹಿಸುವ ಏರ್ಪಾಟು ಮಾಡಲಾಯಿತು. ದೇವನ ನೆರಳಿನಲ್ಲಿ ನಿಶ್ಚಿಂತಳಾಗಿದ್ದ ಜಾಹ್ನವಿ ತನ್ನ ಸ್ಥಿತಿ ನೆನೆದು ತತ್ತರಿಸಿಹೋದಳು. ಆದರೆ ಅವಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ ದೇವ ತಾನಾಗಿಯೇ ಅಂದ,

"ಜೀವನಕ್ಕೆ ಬೇರೆ ಏನಾದರೂ ದಾರಿ ಮಾಡಿಕೊಳ್ಳಿ."

"ನನಗೆ ಯಾರು ಕೊಡ್ತಾರೆ ಕೆಲಸ? ಇನ್ನು ಸದಾನಂದನ ಮನೆಯಲ್ಲಿ ಒಂದು ತುತ್ತು ಅನ್ನಕ್ಕೂ ಹಂಗಿಸಿಕೊಂಡಿರಬೇಕು."

"ಇಲ್ಲೇ ನನ್ನ ಪರಿಚಯದವರ ಮನೆಗೆ ಸಣ್ಣ ಮಕ್ಕಳನ್ನು ನೋಡಿಕೊಳ್ಳಲು ಒಬ್ಬಳು ಹೆಂಗಸು ಬೇಕಂತೆ. ಜನ ಒಳ್ಳೆಯವರು. ಸದ್ಯ ಅವರೆಲ್ಲ ಉತ್ತರ ಭಾರತ ಪ್ರವಾಸ ಹೋಗಿದ್ದಾರೆ. ಬಂದ ಮೇಲೆ ವಿಚಾರಿಸುತ್ತೇನೆ. ನೀವು ಒಪ್ಪಿಕೊಳ್ತೀರಾ? ನಿಮ್ಮ ಮಕ್ಕಳ ವಿಷಯ ಬಿಡಿ, ಅವರನ್ನು ಹಾಸ್ಟೆಲ್‌ಗೆ ಸೇರಿಸಿ ಅವರ ವಿದ್ಯೆಗೆ ಬೇಕಾದ ಎಲ್ಲ ಏರ್ಪಾಟು ನಾನು ಮಾಡ್ತೇನೆ."

ಜಾಹ್ನವಿ ಸಂತೋಷದಿಂದ ಮೂಕಳಾಗಿಹೋದಳು. ರಕ್ತ ಸಂಬಂಧವಿರದಿದ್ದರೂ ಇದೆಂತಹ ಕರುಣೆಯ ಬಾಂಧವ್ಯ ಇವನಿಗೆ! ನಿಜವಾದ ಮಾನವೀಯ ಸೇವೆ ಎಂದರೆ ಇದು. ತಾನಿರುವಷ್ಟು ಸಮಯ ಒಂದು ದಿನವೂ ಅವನು ತನ್ನ ಹಾಗೂ ಮಕ್ಕಳನ್ನು ಹಾಗೆ ಹೀಗೆ ಎಂದು ಆಡಿಕೊಂಡವನಲ್ಲ. ಮುಖ ಸಿಡುಕಿದವನಲ್ಲ. ಸುನೀತಿಗಾದರೂ ಕೋಪ ಬಂದಿರಬಹುದು. ಆದರೆ ಇವನು ತಾಳ್ಮೆಯ ಮೂರ್ತಿ! ಅವಳಿಗರಿಯದಂತೆ ಮನದಲ್ಲೇ ವಂದಿಸಿದಳು ಅವನನ್ನು. ಆಮೇಲೆ ಆಚೆ ಈಚೆ ನೋಡುತ್ತ ಪಿಸುಧ್ವನಿಯಲ್ಲಿ ಏನನ್ನೋ ಹೇಳಿದಾಗ ದೇವನ ಮುಖದಲ್ಲಿ ಚಿಮ್ಮಿತು ವ್ಯಂಗ್ಯ ನಗೆಯೊಂದು.

*  *  *  *  *

ಈಶ್ವರಯ್ಯನವರ ವರ್ಷಾಂತಿಕ ಗೋಕರ್ಣದಲ್ಲಿ ನಡೆದ ದಿನ ಕಲ್ಯಾಣಪುರದ ಬಡಬಗ್ಗರಿಗೆಲ್ಲಾ ಔತಣದೂಟ. ಅಡಿಗೆಗೆ ಯಾರೂ ಜನರು ಸಿಗದಿದ್ದಾಗ ಯಾವನೋ ಒಬ್ಬ ಸಣ್ಣ ಹುಡುಗನ ಸಹಾಯದಿಂದ ತಾನೇ ಮಾಡಿ ಬಡಿಸಿದ. ಬೆಳಗಿನಿಂದಲೂ ಎಡೆಬಿಡದೆ ಸುರಿಯುತ್ತಿದ್ದ ಅಂದಿನ ಮಳೆಯಲ್ಲಿ ತುತ್ತು ಅನ್ನಕ್ಕಾಗಿ ಕಾದು ನಿಂತವರನ್ನು ಕಂಡಾಗ, ಅವರಿಗೆ ಮಾಡಿ ಬಡಿಸಿದಾಗ, 'ಇದೀಗ ಅಪ್ಪನ ಆತ್ಮಕ್ಕೆ ಶಾಂತಿ ದೊರೆಯಿತು' ಎಂದುಕೊಂಡ ತೃಪ್ತಿಯಲ್ಲಿ.

ಅದೇ ದಿನ ಬಂದಿತು ಸುನೀತಿಯ ಕಾಗದ. "ಅಪ್ಪ ಅಮ್ಮ ಆದರದಿಂದ ನೋಡಿಕೊಂಡರೂ ನನ್ನನ್ನು ದೂರವಿಟ್ಟಿದ್ದಾರೆ. ದೇವರಕೋಣೆಗೆ ನನಗೆ ಪ್ರವೇಶವಿಲ್ಲ. ನಿಮ್ಮ ಹೆಂಡತಿಯಾದೆನೆಂದು ಯಾವ ತಪ್ಪು ನನ್ನಲ್ಲಿ ನೋಡಿದರೋ ನಾನರಿಯೆ. ಅಮ್ಮನಿಗೆ ತುಂಬಾ ವ್ಯಥೆ. 'ನಿನಗೆ ಅವನ ಜೊತೆ ಉಳಿಯುವ ಇಷ್ಟವಿಲ್ಲದಿದ್ದರೆ ಇಲ್ಲೇ ಉಳಿದು ಬಿಡು' ಎನ್ನುವ ಅಮ್ಮನ ಮಂಕುತನಕ್ಕೆ ನಗುಬರುತ್ತದೆ. ಎಷ್ಟೇ ಕಷ್ಟವಾದರೂ ನಿಮ್ಮ ಜೊತೆಯಿದ್ದರೆ ನಾನು ಸುಖಿ. ಬೇಗ ಕರೆಯಿಸಿಕೊಳ್ಳಿ."

ಸುನೀತಿಯ ಕಾಗದ ತಂದಿತು ನೂರ್ಮಡಿ ಉತ್ಸಾಹ. ಇದರೊಂದಿಗೆ ಜಾಹ್ನವಿ ಹೇಳಿದ ಮಾತುಗಳ ನೆನಪು. "ಶಶಿಧರನನ್ನು ನೀವು ಓಡಿಸಿದ ದಿನದಿಂದಲೇ ಸದಾನಂದ ನಿಮ್ಮ ಮೇಲೆ ತಿರುಗಿ ಬಿದ್ದಿದ್ದಾನೆ. ನಿಮ್ಮ ಕೆಲಸದವರಿಂದ ನಿಮ್ಮದೇ ಭೂಮಿಗೆ ಡಿಕ್ಲರೇಶನ್ ಕೊಡಿಸುವ ಹಂಚಿಕೆಯಲ್ಲಿದ್ದಾನೆ. ಜಾಗ್ರತೆಯಾಗಿರಿ."

ಪಿಸುಧ್ವನಿಯಲ್ಲಿ ಹೇಳಿದ ಮಾತುಗಳನ್ನು ಸುಲಭದಲ್ಲಿ ತಳ್ಳಿಹಾಕದೆ ತನ್ನ ಕೆಲಸದವರನ್ನೆಲ್ಲ ಕರೆದು ವಿಚಾರಿಸಿದ. "ನನ್ನ ಗದ್ದೆ, ತೋಟಕ್ಕೆ ಯಾರು ಬೇಕಾದರೂ ಡಿಕ್ಲರೇಶನ್ ಕೊಡಿ. ಹೇಗಿದ್ದರೂ ಕಾನೂನು ನಿಮ್ಮ ಕಡೆಗಿದೆ" ಎಂದ ಭೂಮಿಯಿಲ್ಲದ ನಾಲ್ವರಿಗೆ.

"ಅಯ್ಯೋ, ಆ ಮೇಲಿನ ದೇವರು ಬಂದು ಹೇಳಿದರೂ ನಿಮ್ಮನ್ನು ಎದುರು ಹಾಕ್ಕೊಂಡು ನಾವು ಈ ಊರ್ನಲ್ಲಿ ಬದುಕಲಿಕ್ಕಿಲ್ಲ. ಡಿಕ್ಲರೇಶನ್ ಕೊಡಿ ಎಂದವರ ತಲೆ ಒಡೆದುಹಾಕ್ತೇವೆ!" ಎಂದರು ಎಲ್ಲರೂ ಒಕ್ಕೊರಲಿನಿಂದ.

ಅವರೆಲ್ಲರ ಅಪಾರ ವಿಶ್ವಾಸ, ಅಭಿಮಾನಗಳ ಮಹಾಪೂರದಲ್ಲಿ ಇನ್ನಷ್ಟು ಎತ್ತರಕ್ಕೆ ಬೆಳೆದ.

ಗೋಕರ್ಣದಿಂದ ಮೂರು ದಿನಗಳ ನಂತರ ಹಿಂದಿರುಗಿ ಬಂದರು ಸದಾನಂದ, ನಾಗಮ್ಮ. ಜೊತೆಯಲ್ಲಿ ವಿಶ್ವಂಭರನ ಬದಲಿಗೆ ಶಶಿಧರ! ಅನಗತ್ಯವಾಗಿ ಬಂದ ಶಶಿಧರ ನನ್ನು ನೋಡಿದಾಕ್ಷಣ ಕೋಪದಿಂದ ಬುಸುಗುಟ್ಟಿದ ದೇವ. ಅವನೂ ತೀಕ್ಷ್ಣವಾಗಿ ನೋಡಿದ ದೇವನನ್ನು. ಉರಿಯುವ ಕೆಂಡದಂತಿತ್ತು ಅವರಿಬ್ಬರ ಮುಖಗಳು. ಈ ಬಾರಿ ದೇವ ಹೆದರಲಿಲ್ಲ ಯಾರಿಗೂ. ಹೆದರಿಕೆಗೆ ಅವರೇನು ಇವನನ್ನು ಗುಲಾಮನೆಂದು ತಿಳಿದಿದ್ದಾರೆಯೇ? 'ಸ್ವತಂತ್ರವಾದ ನನ್ನ ಮನೆಯಲ್ಲಿ ನಿಮ್ಮದೇನು ಅಧಿಕಾರ? ಅಧಿಕಾರ ನನ್ನದು!' ಎನ್ನುವವನಂತೆ ಗರ್ವದಿಂದ ಎದೆಯುಬ್ಬಿಸಿ, ಯಾರ ಅಂಕೆಗೂ ಒಳಪಡದೆ, ಹೆದರದೆ ವರ್ತಿಸಿದ. ಅಡಿಗೆಕೋಣೆಯಲ್ಲಿ ಅವನದೇ ಪಾಕ. ಪೂಜಾಗೃಹದಲ್ಲಿ ಅವನದೇ ಪೂಜೆ. ಒಳ-ಹೊರಗೆ ಅವನದೇ ಸಾಮ್ರಾಜ್ಯ. ಈ ಬಾರಿ ನಿಜವಾಗಿಯೂ ಹೆದರಿದರು ಮನೆಯವರು. ಸದಾನಂದ ಹಾರಿಬಿದ್ದ. ಶಶಿಧರ ಬುದ್ಧಿಗೆಟ್ಟವನಂತೆ ಕೂಗಾಡಿದ.

ನಾಗಮ್ಮನಿಂದ ಇನ್ನು ತಡೆದುಕೊಳ್ಳಲಾಗಲಿಲ್ಲ. ಎರಡೇ ದಿನಗಳಲ್ಲಿ ಗಂಟುಮೂಟೆ ಕಟ್ಟಿದರು. ದೇವನೊಂದಿಗೆ ಒಟ್ಟಾಗಿ ವಾಸಿಸುವುದು ಸಾಧ್ಯವಿಲ್ಲ ಎಂದೆನಿಸಿದೆ ಅವರಿಗೆ. ಅವನ ಆಶ್ರಯದಲ್ಲಿ, ಅವನ ಮಕ್ಕಳ ಲಾಲನೆ-ಪಾಲನೆಯಲ್ಲಿ ತಮ್ಮದಿನ್ನು ಸುಖೀ ಬದುಕು ಎಂದು ನಂಬಿದ್ದ ಆಸೆ ನುಚ್ಚುನೂರು. ಮುಪ್ಪಿನಲ್ಲಿ ಸೋಲುತ್ತಿರುವ ಜೀವಕ್ಕೆ ಇನ್ನೇನು ಕಾಣುವ ಯೋಗವಿದೆಯೋ. ಯಾವ ಋಣದಿಂದಲೋ ಇವನನ್ನು ಸಾಕಿದ್ದಾಯ್ತು ಇಷ್ಟು ವರ್ಷಗಳು. ಆಸ್ತಿಯೆಲ್ಲಾ ಅವನಿಗೇ ಧಾರೆ ಎರೆದೆವು. ಎಲ್ಲಾ ಅವನಿಗೇ ಇದ್ದುಕೊಳ್ಳಲಿ. ತನಗೆ ಸದಾನಂದನಲ್ಲಿ ಒಂದು ತುತ್ತು ಅನ್ನ ಸಿಗಲಾರದೇ?

ಆದರೆ ಸದಾನಂದ ಬರಿಗೈಯಲ್ಲಿ ಹೊರಡಲು ಸಿದ್ಧನಿರಲಿಲ್ಲ. ಅಕ್ಕನ ಕಿವಿಯೂದುತ್ತ "ನಿನ್ನ ಹೆಸರಿಗೆ ಆಸ್ತಿ ಬರೆಯಿಸಿಕೋ" ಎಂದ. ಅವನ ಮಾತು ಕೇಳದವರಂತೆ ಆಸ್ತಿಯ ಚಕಾರವೆತ್ತದೆ ನಾಗಮ್ಮ ಕುಳಿತಾಗ ದೇವನ ಮೇಲೆ ತಿರುಗಿಬಿದ್ದ. ಕೊನೆಗೆ ಅರ್ಧಭಾಗ ವನ್ನಾದರೂ ನಾಗಮ್ಮನ ಹೆಸರಿಗೆ ಬರೆಯಬೇಕೆಂದು ಅವನ ಹಟ.

ದೇವ ಒಂದಂಗುಲ ಭೂಮಿಯನ್ನೂ ಯಾರ ಹೆಸರಿಗೂ ಬರೆಯಲು ಸಿದ್ಧನಿರಲಿಲ್ಲ. "ಹೊಟ್ಟೆಯಲ್ಲಿ ಹುಟ್ಟಿದ ಮಗನಿಗಿಂತಲೂ ಸರಿಯಾಗಿ ನಾನು ಅಮ್ಮನನ್ನು ನೋಡಿ ಕೊಳ್ತಾ ಇದ್ದೇನೆ. ಅಮ್ಮ ಇಲ್ಲೇ ಇರಲಿ."

"ಅಕ್ಕ ನಿನ್ನ ಸಂಗಡ ಉಳೀತಾಳೇನು? ನೀನು ಧರ್ಮಬುದ್ಧಿಯವನಂತೆ. ತ್ಶೂತ್... ನರಿ ಬುದ್ಧಿಯವನೇ." ಸದಾನಂದ ಇರಿಯುವಂತೆ ನೋಡಿದ. "ಸಾಕುತಾಯಿಯನ್ನು ಕಣ್ಣೀರಿನಲ್ಲಿ ಕೈತೊಳೆಯುವಂತೆ ಮಾಡಿದ ದುಷ್ಟ... ಕೃತಘ್ನ."

"ಎಲುಬಿಲ್ಲದ ನಾಲಿಗೆ ಹೇಗೆ ಬೇಕಾದರೂ ಹೊರಳಲಿ. ನನ್ನದಾದ ಸೊತ್ತಿನಲ್ಲಿ ನಿಮಗೆ ಕಿಲುಬು ಕಾಸು ದಕ್ಕಲಾರದು. ಹೊರಡಿ ಇಲ್ಲಿಂದ!"

"ಹೋಗುವ ಮುಂಚೆ ನಾಗಮ್ಮನ ವಿಷಯ ಇತ್ಯರ್ಥವಾಗಲಿ."

"ಹೇಳಿದೆನಲ್ಲ, ಇದು ನನ್ನ ಮತ್ತು ಅಮ್ಮನ ಮನೆ. ಇನ್ನೊಂದು ತಾಸಿನಲ್ಲಿ ನೀವೂ, ಶಶಿಧರನೂ ಇಲ್ಲಿಂದ ಹೊರಡದಿದ್ದರೆ ನಾನೇ ಬಲಪ್ರಯೋಗ ಮಾಡಿ ನಿಮ್ಮಿಬ್ಬರ ಕುತ್ತಿಗೆ ಹಿಡಿದು ನೂಕಿ ಹೊರಹಾಕಬೇಕಾದೀತು. ಹುಷಾರ್..."

ಶಶಿಧರ ಲಘುವಾಗಿ ಕಂಪಿಸಿ, ಬಾಗಿಲಿನ ಹೊರಗೆ ಹೆಜ್ಜೆಯಿರಿಸಿ ಫೂತ್ಕರಿಸಿದ, "ಹೋಗ್ತೇವೆ. ಆದರೆ ನಿನ್ನನ್ನು ಈ ಭೂಮಿಯಲ್ಲಿ ಖುಷಿಯಿಂದ ಬದುಕಲು ಬಿಡುವವರಲ್ಲ..."

"ಅಧಿಕಪ್ರಸಂಗಿ... ನನ್ನ ಮನೆಯಲ್ಲಿ ನಿನ್ನ ಮಾತು ಅನಗತ್ಯ. ಹೊರಡಿ ಇಲ್ಲಿಂದ." ಮುಷ್ಟಿ ಬಿಗಿದು ಎರಡು ಹೆಜ್ಜೆ ಮುಂದಿಟ್ಟಾಗ ಅವನ ಮುಖ ನೋಡಿಯೇ ಓಿಮ್ಮೆಟ್ಟಿದರು ತಂದೆ ಮತ್ತು ಮಗ.

ಮತ್ತೆ ಅರ್ಧಗಂಟೆಯಲ್ಲಿ ಹೊರಟು ಸಿದ್ಧರಾದರು ನಾಗಮ್ಮ. ಅವರ ಬಾಡಿಹೋದ ಮುಖ, ಅತ್ತು ಕೆಂಪಾದ ಕಣ್ಣುಗಳನ್ನು ನೋಡಿದಾಗ ದೇವನ ರೋಷ, ಸಿಟ್ಟು ಕರಗಿ ನೀರಾಗಿ ಕಸಿವಿಸಿಗೊಂಡ. ಮಧ್ಯಾಹ್ನದ ಊಟವನ್ನೂ ಮಾಡದೆ ಹಾಗೇ ಹೋಗುತ್ತಿರುವ ಅವರೆದುರು ತಾನೇ ಬಿಸಿ ಹಾಲು ತಂದಿಟ್ಟರೂ ಸ್ವೀಕರಿಸಲಿಲ್ಲ.

"ತಮ್ಮನ ಮನೆಗೆ ಹೋಗಿ ಏನ್ಮಾಡ್ತೀ? ಯಾರಿದ್ದಾರೆ ನಿನ್ನನ್ನು ನೋಡಿಕೊಳ್ಳಲು?" ಕೇಳಿದ ಕಳಕಳಿಯಲ್ಲಿ. "ನನ್ನ ಮೇಲೆ ವಿಶ್ವಾಸವಿಲ್ಲವೇ?"

ನಾಗಮ್ಮ ಉತ್ತರಿಸುವ ಸ್ಥಿತಿಯಲ್ಲಿರಲಿಲ್ಲ.

"ಸದಾನಂದ ನಮ್ಮ ಆಸ್ತಿಗೆ ಹೊಂಚುಹಾಕ್ತಾ ಇದ್ದಾನೆ ನರಿಯಂತೆ. ನಿನಗಿಂತ ಮಿಗಿಲಾಗಿ ಅವನಿಗೆ ಬೇಕಾದದ್ದು ಆಸ್ತಿ. ಇಡೀ ದಿನವೆಲ್ಲ ನನ್ನ ಮೈ ಬೆವರು ಸುರಿಸಿ ಯಾರಿಗಾಗಿ ಈ ಆಸ್ತಿ ಮಾಡಿದೆ? ನನ್ನಲ್ಲಿ ನೀನು ಕಂಡ ದೋಷವಾದರೂ ಏನು?"

ದೇವನ ಸ್ವರ ಮತ್ತಷ್ಟು ತಗ್ಗಿತು. "ಈ ಮಗನ ಮೇಲೆ ನಿನಗಿರುವ ಪ್ರೀತಿ-ವ್ಯಾಮೋಹ ಕೇವಲ ಒಂದು ಸಣ್ಣ ವಿಷಯದಿಂದ ಮರಗಟ್ಟಿಹೋಯ್ತಲ್ಲ. ನಿನ್ನ ತೊಡೆಯ ಮೇಲೆ ಆಡಿ, ನಿನ್ನ ಹಾಡು ಕೇಳಿ, ನೀನು ನಡೆಸಿದ ಹಾದಿಯಲ್ಲಿ ಬೆಳೆದವ ನಾನು. ನನ್ನ ಕೈ ಕಟುಕನ ಕತ್ತಿಯಲ್ಲ, ದಾನದ ಕೈ! ನನ್ನ ಈ ದೇಹ ಇನ್ನೊಬ್ಬರಿಗೆ ದಾಸನಾಗಿ ಬಾಳಿದುದಲ್ಲ. ಪರೋಪಕಾರಕ್ಕಾಗಿ ತೇಯ್ದದ್ದು. ಈ ಹೃದಯ ಕಟುಕನದಲ್ಲ. ರಾಕ್ಷಸೀ ಪ್ರವೃತ್ತಿಯದಲ್ಲ. ಎಲ್ಲರಿಗೂ ಒಳಿತು ಹಾರೈಸಿದೆ. ಆದರೂ ಇನ್ನೂ ನೀನು ಅರಿತುಕೊಂಡಿಲ್ಲ ನನ್ನನ್ನು".

ನಾಗಮ್ಮನ ಕಣ್ಣುಗಳಲ್ಲಿ ಅನಿರೀಕ್ಷಿತ ಮಿಂಚೊಂದು ಮಿಂಚಿ ಮಾಯವಾಗಿ ತುಟಿಯಂಚಿನಲ್ಲಿ ಮೂಡಿತು ಕಿರುನಗೆ.

"ನನ್ನೊಳಗಿನ ವ್ಯಕ್ತಿಯನ್ನು ನೋಡು. ಈ ಹೊರತೊಗಲಿನ ರಕ್ತ ಮಾಂಸದ ಶರೀರವನ್ನಲ್ಲ. ನಿನ್ನ ಸೊತ್ತಿಗೆ ನಾನು ಅಧಿಕಾರಿಯಾಗಿ ನಿನ್ನನ್ನು ಈ ಇಳಿವಯಸ್ಸಿನಲ್ಲಿ ಭಿಕಾರಿಯಂತೆ ಹೊರಗೆ ಕಳುಹಿಸಿದರೆ ಜನ ಸುಮ್ಮನಿರುತ್ತಾರೆಯೇ? ನನ್ನ ಮನ ಮೆಚ್ಚಿತೇ? ಇಲ್ಲಮ್ಮ, ಇಲ್ಲ". ಸರ್ರನೆ ತಾಯಿಯ ಕಾಲಿನತ್ತ ಬಗ್ಗಿದ. "ನನ್ನಿಂದ ನೀನು ಸದಾ ದುಃಖಿಸುತ್ತ ಕೊರಗಬಾರದು, ಅಳಬಾರದು. ಈ ತನಕ ಪ್ರೀತಿಯ ತುತ್ತು ತಿನ್ನಿಸಿದ್ದೀಯಲ್ಲ. ಅಷ್ಟು ಸಾಕು. ಅದೇ ನನಗೆ ತೃಪ್ತಿ. ನೀನು ಎಲ್ಲಿಗೂ ಹೋಗ ಬೇಡಮ್ಮಾ. ಇರು ಇಲ್ಲೇ. ನಿನ್ನ ಹೆಸರಿಗೆ ಈ ಎಲ್ಲ ಭೂಮಿ, ತೋಟ ಸಮಸ್ತ ಆಸ್ತಿ ಬರೆದುಹಾಕಿ ಸಂಸಾರ ಸಮೇತ ನಾನೇ ಹೊರಟುಹೋಗ್ತೇನೆ. ನಿನ್ನ ಸುಖವೇ ನನ್ನ ಸುಖ!"

ಗದ್ಗದಿತವಾದ ಅವನ ಸ್ವರದಿಂದ ಚಕಿತರಾದ ನಾಗಮ್ಮ ನೀರವವಾಗಿ ನೋಡಿದರು. ಆದರೇನು, ಆ ಗಳಿಗೆಯಲ್ಲಿ ಅವರ ಬುದ್ಧಿಯೂ ಶೂನ್ಯವಾದುದರಿಂದ, ಹೊರಗೆ ಸದಾನಂದ ಅವಸರಪಡಿಸಿದ್ದರಿಂದ ಬೇರೇನೂ ಹೇಳಲಾರದೆ, ಅಲ್ಲೇ ಇರಲಾರದೆ ಸರಸರನೆ ಹೊರಟುಹೋದರು ಅವನೆದುರಿನಿಂದ.

ಹಾಲಿನ ಲೋಟ ಉಳಿಯಿತು ಅಲ್ಲೇ. ಹೊರಗೆ ಸೋನೆ ಮಳೆ ಪ್ರಾರಂಭ. ದೇವ ಗೋಡೆಗೊರಗಿ ನಿಟ್ಟುಸಿರು ತೆಗೆದ. ಓ... ನಿರ್ಗತಿಕನಾಗಬೇಕಿದ್ದ ತನಗೆ ಈ ಮನೆ ಸಕಲವನ್ನೂ ಕೊಟ್ಟಿದೆ. ಆದರೂ ತಾನು ತಾಯಿಯನ್ನು ಹೊರಗೆ ಹಾಕಿದೆನೇ? ಹೋದವಳು ಹಿಂದಿರುಗಿ ಬರುವಳೆಂಬ ಭರವಸೆಯಿಲ್ಲ. ತನಗೆ ಭೂಮಿ, ಮನೆ, ಹಣ-ಸಂಪತ್ತು ಯಾವುದೂ ಬೇಡ. ಬೇಕಾದವಳು ವಾತ್ಸಲ್ಯದ ನೀರೆರೆದ ತಾಯಿ ಒಬ್ಬಳೇ. ಅವಳಿಲ್ಲದ ಮನೆಯಲ್ಲಿ ತಾನು ಯಾರಿಗಾಗಿ ಇರಬೇಕು?

ಆ ಗಳಿಗೆಯಲ್ಲಿ ಸುನೀತಿಗೆ ಕಾಗದ ಬರೆಯುತ್ತ, "ಖಾಲಿಯಾಗಿದೆ ಮನೆ. ನೀನು ಮಕ್ಕಳೊಡನೆ ಕೂಡಲೆ ಹೊರಟು ಬಾ" ಎಂದು ತಿಳಿಸಿ ಕವರಿನಲ್ಲಿರಿಸಿ 'ಇವತ್ತೆಲ್ಲ ಮಳೆ, ನಾಳೆ ಅಂಚೆಗೆ ಹಾಕೋಣ' ಎಂದುಕೊಂಡು ಬೇಸರದಲ್ಲೇ ಗೋಡೆಯ ಗೂಡಿನಲ್ಲಿಟ್ಟ. ಹೊರಗೆ ಮಳೆಯ ಶ್ರುತಿ ಹೆಚ್ಚುತ್ತಲೇ ಇತ್ತು.

## ೧೭

ನಾಲ್ಕಾರು ದಿನಗಳು ಕಳೆದವು. ಮನೆಯ ನೀರವ ವಾತಾವರಣದಲ್ಲಿ ಅಸಹನೀಯ ಮೌನದಲ್ಲಿ ದೇವ ತನ್ನನ್ನು ನಿಯಂತ್ರಿಸಿಕೊಳ್ಳಲು ಬಹಳಷ್ಟು ಪ್ರಯತ್ನಿಸಿದ. ಎಲ್ಲಿಯೋ ತಾನು ಸೋಲುತ್ತಿದ್ದೇನೆ ಎಂದು ಒಮ್ಮೆ ಅನಿಸಿದರೆ ಮತ್ತೊಮ್ಮೆ ವಿಜಯದ ಅಟ್ಟಹಾಸ ಮಾಡಬೇಕೆನಿಸುತ್ತದೆ. ಒಂದು ದಿನವೆಲ್ಲ ಹನಿ ನೀರು ಮುಟ್ಟದೆ ಉಪವಾಸ ಮಾಡಿ ತನ್ನನ್ನೇ ಶಿಕ್ಷಿಸಿಕೊಂಡ. ಮತ್ತೊಂದು ದಿನ ದೇವರ ತಲೆ ಮೇಲಿನ ನಿರ್ಮಾಲ್ಯ ತೆಗೆದು ಪೂಜೆಮಾಡುವ ಗೋಜಿಗೂ ಹೋಗಲಿಲ್ಲ. ತನ್ನೊಳಗಿನ ದೇವನಿಗಾಗಿ ಹುಡುಕಾಟ. ತಾನು ಯಾರು? ತಾನೆಲ್ಲಿಂದ ಬಂದೆ? ಯಾಕೆ ಇಲ್ಲಿದ್ದೇನೆ? ಇನ್ನೆಲ್ಲಿಗೆ ಹೋಗುತ್ತೇನೆ?

ಮನುಷ್ಯ ಸಂಬಂಧಗಳ ಅರ್ಥವೇನು? ವ್ಯಾಪ್ತಿಯೇನು? ಇತ್ಯಾದಿ ಪ್ರಶ್ನೆಗಳ ಮೇಲೆ ಪ್ರಶ್ನೆಗಳು.

ಅವನು ಮನೆ ಒಳ-ಹೊರಗೆಲ್ಲಾ ಓಡಾಡಿದ. ಗದ್ದೆ-ತೋಟಗಳನ್ನೂ ಸುತ್ತಿದ. ತಾನೇ ಕೈಯ್ಯಾರೆ ಮೇಲೆ ತಂದ, ತನ್ನದೇ ಪರಿಶ್ರಮದಲ್ಲಿ ಬೆಳೆಸಿದ ಫಲವತ್ತಾದ ಗಿಡ-ಮರ ಗಳನ್ನು ನೋಡಿದ. 'ಇವೆಲ್ಲ ನನ್ನದೇ? ನಾನು ಯಾರು?' ಅವನ ಹೃದಯದಲ್ಲೆಲ್ಲೋ ಅಸಹನೀಯ ನೋವು. ತನಗೆ ಈ ಮನೆಯಲ್ಲಿ ಉಳಿಯುವ ಅಧಿಕಾರವಿಲ್ಲ. ಈ ಆಸ್ತಿ ಯನ್ನು ಅನುಭೋಗಿಸುವ ಹಕ್ಕು ಇಲ್ಲ. ಅವನಿಗೆ ನಿಂತಲ್ಲಿ ಕುಳಿತಲ್ಲಿ ಸಾಕು ತಾಯಿಯ ನೆನಪಾಗುತ್ತಿದೆ. ವಾತ್ಸಲ್ಯದ ಧಾರೆಯೆರೆದ ತಾಯಿಯ ಜರ್ಜರಿತ ಹೃದಯದಲ್ಲಿ ಇನ್ನು ತನಗಿರುವ ಸ್ಥಾನ ಎಂತಹದು? ಊರವರನ್ನೆಲ್ಲ ತಾನು ಎದುರಿಸಬಲ್ಲೆ. ಸದಾನಂದನನ್ನೂ ಗದರಿಸಿ ಕಳುಹಿಸಿದ್ದೆ. ಆದರೆ ತಾಯಿ ಏನು ತಪ್ಪು ಮಾಡಿದ್ದಾಳೆ? ಯಾರಿಗೂ ನೋವು ಕೊಡದ ತನ್ನ ಜೀವ ಒಂದು ಸಣ್ಣ ತ್ಯಾಗ ಮಾಡಲು ಹಿಂದೇಟು ಹಾಕಬೇಕೇ? ತ್ಯಾಗವೆಂದರೆ ಆಸ್ತಿಯನ್ನು ನಾಗಮ್ಮನ ಹೆಸರಿಗೆ ಬರೆದುಹಾಕಬೇಕು. ಆದರೆ ಆಮೇಲೆ ತಾನು ಸಂಸಾರ ಸಮೇತ ಎಲ್ಲಿಗೆ ಹೋಗಲಿ? ಈ ತನಕ ಕೃಷಿ ಮಣ್ಣಿನಲ್ಲಿ ಬೆರೆತ ಜೀವಕ್ಕೆ ಹೊಸ ಪರಿಸರ ಹೊಂದಿಕೆಯಾದೀತೇ?

ಅವನು ಮುಂದೆ ಏನನ್ನೂ ಯೋಚಿಸದಾದ. ಇತ್ತ ಸುನೀತಿಯೂ ಮಕ್ಕಳೊಡನೆ ಹಿಂದಿರುಗಿರಲಿಲ್ಲ. ಅವಳೂ ಮನಸ್ಸು ಬದಲಾಯಿಸಿ ಅಲ್ಲೇ ಉಳಿದುಬಿಟ್ಟಳೇ ಎಂಬ ಭೀತಿಯಾಗಿ ತಾನೇ ಕರೆತರಬೇಕು ಎಂದುಕೊಳ್ಳುವಾಗಲೆ ಗೋಡೆ ಗೂಡಿನಲ್ಲಿ ಬರೆದಿರಿಸಿದ, ಅಂಚೆಗೆ ಹಾಕಲು ಮರೆತ ತನ್ನದೇ ಕಾಗದದ ಕವರು ದೊರೆಯಿತು. 'ಹಾಳು ಮರೆವು' ತನ್ನನ್ನೇ ಶಪಿಸಿ ಕರಿಯನನ್ನು ಕರೆದು ಅಂಚೆಗೆ ಹಾಕಿ ಬರಲು ತಿಳಿಸಿದ.

ಅಂಚೆಪೆಟ್ಟಿಗೆಗೆ ಕವರು ಹಾಕಿ ಹಿಂತಿರುಗಿದ ಕರಿಯ, "ಅಯ್ಯ ಶಶಿಧರಪ್ಪನೋರು ನಾಲ್ಕಾರು ಜನರ ಸಂಗಡ ಇಲ್ಲೇ ಪೇಟೆಲಿದ್ದಾರಂತೆ. ನನ್ಮಗ ಹೇಳ್ದ. ಸ್ವಲ್ಪ ಎಚ್ಚರಿಕೆಯಿರಲಿ" ಎಂದ.

ಅವನೆಲ್ಲಿದ್ದರೂ ತನಗೇನಂತೆ? ತನ್ನ ಎದುರಿನಲ್ಲಿ ಸಿಕ್ಕಿದರೆ ಸುಮ್ಮನಿರುವವನಲ್ಲ. ನಿರ್ಲಕ್ಷ್ಯದಲ್ಲಿ ಕರಿಯನ ಮಾತನ್ನು ತಳ್ಳಿಹಾಕಿದ. ಆದರೆ ಅದೇ ಅವನಿಗೆ ಮರುದಿನ ಮುಳುವಾಯಿತು. ಆ ದಿನ ಎಡೆಬಿಡದೆ ಗಳಿಗೆ ಪುರುಸೊತ್ತಿಲ್ಲದೆ ಸುರಿಯುವ ಮಳೆ ಸಾಯಂಕಾಲ ಸ್ವಲ್ಪ ಕಡಿಮೆಯಾಗಿತ್ತು. ಒಮ್ಮೆ ತೋಟ-ಗದ್ದೆ ಸುತ್ತಿ ಬರೋಣವೆಂದು ಹೊರಗೆ ಕಾಲಿರಿಸಿದಾಗ, "ಅಯ್ಯ, ನಾನೂ ಬರಲೇ ನಿಮ್ಮ ಜೊತೆ" ಕೇಳಿದ ಕರಿಯ. ಅವನಿಗೇಕೋ ಈ ಮಳೆಯಲ್ಲಿ ದೇವ ಒಬ್ಬನೇ ಹೊರಹೋಗುವ ಇಷ್ಟವಿಲ್ಲ.

"ಮನೆಯಲ್ಲಿ ಯಾರೂ ಇಲ್ಲ ಕರಿಯ. ನೀನು ದನ-ಕರುಗಳಿಗೆ ನೀರು-ಹುಲ್ಲು ಕೊಟ್ಟು ಇಲ್ಲೇ ಜಗಲಿಯಲ್ಲಿ ಕುಳಿತಿರು. ನಾನೀಗ ಬಂದೆ" ಎಂದವನೆ ಕೊಡೆ ಬಿಡಿಸಿ ಅಂಗಳಕ್ಕಿಳಿದ.

ಮಳೆಗಾಲದಲ್ಲಿ ಕಲ್ಯಾಣಪುರ ಹೊಳೆಯ ಅಬ್ಬರ ನೋಡುವುದೇ ಒಂದು ಚೆಂದ. ಎಲ್ಲೆಲ್ಲೂ ತುಂಬಿದ ಜಲರಾಶಿಯಲ್ಲಿ ಸಮುದ್ರದಂತೆ ಭೋರ್ಗರೆವ ಹೊಳೆ ಇಂದು ಪೂರ್ತಿ ಗದ್ದೆಯನ್ನು ಕಬಳಿಸಿ ಅಟ್ಟಹಾಸಗೈಯ್ಯುತ್ತಿದೆ. ಅಡಿಕೆ ತೋಟದ ಒಂದು ಭಾಗಕ್ಕೆ ಬಂದ ದೇವನಿಗೆ ಇನ್ನು ಒಂದು ಹೆಜ್ಜೆ ಮುಂದಿಡಲಾಗಲಿಲ್ಲ. ಒಂದೆರಡು ತಾಸು ಮತ್ತೆ ಜಡಿಮಳೆ ಸುರಿದರೆ ತೋಟವೂ, ಹೊಳೆಯೂ ಒಂದಾಗುವುದು ದಿಟ. ಪ್ರಕೃತಿಗೆ ಸವಾಲು ಹಾಕುವುದು ಯಾರಿಂದ ಸಾಧ್ಯ?

ಹೊಳೆಯಿಂದೀಚೆ ಕಾಡಿನ ಬದಿಗೆ ಸರಿಯುತ್ತಿದ್ದಂತೆ ತೋಟದ ಕೆಸರಿನಲ್ಲಿ ಯಾರದೋ ಹೆಜ್ಜೆಯ ಸದ್ದು. ಹೊರಳಿ ನೋಡಿದರೆ ಇಬ್ಬರು ಅಪರಿಚಿತರು ಅವನತ್ತ ಬರುತ್ತಿದ್ದಾರೆ. "ಯಾರು ಬೇಕಿತ್ತು?" ಕೇಳಿದ ಅವರು ಹತ್ತಿರ ಬಂದಾಗ. ಅಷ್ಟರಲ್ಲಿ ಕಾಡಿನಿಂದಲೂ ಇಬ್ಬರು ದೊಣ್ಣೆ ಹಿಡಿದು ಬರುವುದು ಕಾಣಿಸಿತು. ಅವರೂ ಅಪರಿಚಿತರು. ಇಬ್ಬರ ತಲೆ ಮೇಲೆ ಮಳೆಗಾಗಿ ಗೋಣಿ ಮುಸುಕು. 'ಇವರೇನು ಕಳ್ಳರೇ?' ದೇವನಿಗೆ ಅನುಮಾನ. ಕಳ್ಳರಾದರೆ ಹೀಗೆ ಕಾಣಿಸಿಕೊಳ್ಳಲಾರರು. ತನ್ನ ಎದುರು ಬರುವ ಧೈರ್ಯವೂ ಇರಲಾರದು. ಎಲ್ಲರಿಗೂ ಗೊತ್ತು, ದೇವನ ಶಕ್ತಿ ಹತ್ತು ವ್ಯಕ್ತಿಗಳಿಗೆ ಸಮ ಎಂದು. ಕೊಡೆ ಮೇಲೆತ್ತಿ "ಯಾರ್‍ರೋ ನೀವು. ಏನು ಬಂದಿರಿ?" ಕೇಳಿದ ಗಡಸು ಸ್ವರದಲ್ಲಿ.

"ನಿನ್ನ ಸೇವೆಗೆಂದು ಬಂದವರು" ಅಷ್ಟೇ ಗಡಸು ಸ್ವರ ಹೊರಡಿಸಿದ ಒಬ್ಬ ದೊಣ್ಣೆ ಎತ್ತಿ ಬೀಸಿದ ಅವನತ್ತ. ಇನ್ನೊಬ್ಬನ ದೊಣ್ಣೆಯೂ ಮುಂದೆ ಬಂದಿತು. ಮತ್ತಿಬ್ಬರು ಅವನ ಮೇಲೆರಗಿ ಅವನು ಕಕ್ಕಾಬಿಕ್ಕಿಯಾಗಿ ಮುಂಜಾಗ್ರತೆ ಮಾಡುವ ಮೊದಲೇ ಕೈಬಾಯಿ ಕಟ್ಟಿ ಅಲುಗಾಡದಂತೆ ಮಾಡಿಬಿಟ್ಟರು. ದೇವ ಬಿಡಿಸಿಕೊಳ್ಳಲು ಹೆಣಗಾಡಿದ್ದು ವ್ಯರ್ಥ. ಫಕ್ಕನೆ ಅವನಿಗೆ ಶಶಿಧರ ಇಲ್ಲೇ ಪೇಟೆಯಲ್ಲಿ ಇದ್ದಾನೆಂದೂ ನೆನಪಾಯಿತು. ಅವನ ಕಡೆಯ ಜನರೇ ಇವರೆಲ್ಲರೂ? ಹಾಗಾದರೆ ಶಶಿಧರ ಎಲ್ಲಿ? ಮೂರ್ಖ, ತನ್ನೆದುರು ಬರಲಾರದ ಹೇಡಿ. ರಟ್ಟೆಯಲ್ಲಿ ಬಲವಿಲ್ಲದವ ಮರೆಯಿಂದ ಬಾಣ ಹೂಡುತ್ತಿದ್ದಾನೆ. ಎದುರು ಬಂದಿದ್ದರೆ ಸಿಗಿದು ತೋರಣ ಮಾಡುತ್ತಿರಲಿಲ್ಲವೇ.

ನಿಸ್ಸಹಾಯಕನಾದ ಅವನ ಮೇಲೆ ಏಟಿನ ಮೇಲೆ ಏಟುಗಳು ಬಿದ್ದವು. ಝಿಲ್ಲನೆ ಚಿಮ್ಮಿತು ನೆತ್ತರು. ನಡುನೆತ್ತಿಯ ಮೇಲೆ ಬಂದಪ್ಪಳಿಸಿದ ದೊಣ್ಣೆ ಏಟಿನಿಂದ ತತ್ತರಿಸಿ ಕಣ್ಣುಕತ್ತಲೆಯಿಟ್ಟು ಕೆಳಗೆ ಕುಸಿದವನಿಗೆ ಮುಂದೇನಾಯಿತೆಂದು ತಿಳಿಯಲಿಲ್ಲ.

ಯಾರ ಹೆದರಿಕೆಯಿಲ್ಲದೆ ಸುರಿಯುತ್ತಿರುವ ಮಳೆಯಲ್ಲಿ ಸೂರ್ಯ ನಿಧಾನವಾಗಿ ಮುಳುಗಿ ಸುತ್ತಲೂ ಆವರಿಸಿತು ಕತ್ತಲೆ.

ಮನೆ ಬಾಗಿಲಲ್ಲಿ ಕಾದುಕುಳಿತ ಕರಿಯ ಕತ್ತಲೆ ಕಪ್ಪಿಟ್ಟಿದ್ದನ್ನು ಗಮನಿಸಿದ. ತೋಟಕ್ಕೆ ಹೋದವರಿಗೆ ಹಿಂದಿರುಗಲು ಇಷ್ಟು ಹೊತ್ತು ಬೇಕೇ? ಕತ್ತಲೆಯಲ್ಲಿ ಬರುವುದಾದರೂ ಹೇಗೆ? ದೇವನಿಗಾಗಿ ಕಾಯುವ ತಾಳ್ಮೆ ಅವನಲ್ಲಿರಲಿಲ್ಲ. ಕೂಡಲೆ ಲಾಂದ್ರ ಬೆಳಗಿಸಿ ಕೊಂಡು ದೇವನ ಸಹಾಯಕ್ಕೆ ಹೊರಟುಬಿಟ್ಟ. ತೋಟದಲ್ಲಿ ಮುಂದುವರಿಯಲು ಲಾಂದ್ರದ ಮಂದಪ್ರಕಾಶ ಸಾಲುತ್ತಿರಲಿಲ್ಲ. ಮಳೆಗಾಳಿ ಬೇರೆ. ತೋಟದಲ್ಲಿ ಅವನನ್ನು

ಹುಡುಕುವುದಾದರೂ ಎಲ್ಲಿ? ಹೇಗೋ ಸಾವರಿಸಿಕೊಳ್ಳುತ್ತ ನಡೆದರೆ ತೋಟದ ಒಂದು ಪಾರ್ಶ್ವ ಗದ್ದೆ, ಹೊಳೆ ಎಲ್ಲಾ ಒಂದಾದುದನ್ನು ಕಂಡು ದಿಗಿಲುಬಿದ್ದ. ದೇವ ಹೊಳೆದಾಟಿ ಬಾಳೆತೋಟಕ್ಕೆ ಹೋಗಿರಬಹುದೇ? ತೋಟದ ಬದಿಯಲ್ಲಿ ನಿಂತಾಗ ಪ್ರವಾಹ ಸೆಳೆದೊಯ್ದಿತೇ?

ಕರಿಯ ಅನುಮಾನಿಸುತ್ತ, ಭೀತಿ ಪಡುತ್ತ ಮುಂದಕ್ಕೆ ಹೆಜ್ಜೆಯಿಡಲಾರದೆ ಕ್ಷಣಹೊತ್ತು ತೋಟದಲ್ಲೇ ಅತ್ತಿತ್ತ ನೋಡಿದ. ಮಳೆಯ ಅಬ್ಬರ ಮತ್ತೆ ಹೆಚ್ಚಿದಂತೆ ಚಳಿಗಾಳಿಗೆ ಮೈನಡುಗಿದಂತೆ ಇನ್ನೇನು ಮನೆಯತ್ತ ಹೊರಳಬೇಕು, ಅಷ್ಟರಲ್ಲಿ ಸ್ವಲ್ಪ ದೂರದಲ್ಲಿ ಯಾರೋ ಮುದ್ದೆಯಾಗಿ ಬಿದ್ದಿರುವುದು ಕಾಣಿಸಿತು. ನೋಡುತ್ತಾನೆ, ಅವನ ಯಜಮಾನ! "ಅಯ್ಯೋ ಅಯ್ಯ" ಜೋರಾಗಿ ಚೀತ್ಕರಿಸಿ ಲಾಂದ್ರವನ್ನು ಬದಿಗಿಟ್ಟು ಕೆಳಗೆ ಬಗ್ಗಿದ.

"ಯಾರು ನಿಮ್ಮನ್ನು ಹೊಡೆದುಹಾಕಿದ್ದಾರೆ? ಇದೇನಾಯಿತಪ್ಪೋ ನಿಮ್ಮ ಅವಸ್ಥೆ" ಎದೆ ಬಡಿದುಕೊಳ್ಳುತ್ತ ತನ್ನೆರಡೂ ಕೈಗಳಿಂದ ಅವನನ್ನು ಎತ್ತಿದ. ಕೆಸರು, ಮಣ್ಣು, ರಕ್ತದಿಂದ ವಿಕಾರವಾಗಿತ್ತು ದೇವನ ಮುಖ.

"ಅಯ್ಯಪ್ಪೋ, ಹ್ಯಾಗೆ ಹೊಡೆದು ಹಾಕಿದ್ದಾರಲ್ಲಪ್ಪೋ. ಇದ್ಯಾರ ಕೆಲಸ ನನಗ್ಗೊತ್ತು. ಆ ಮಗನ್ನ ನಾ ಜೀವಸಹಿತ ಇಡಲಾರೆ. ಅಯ್ಯೋ ನಮ್ಮಪ್ಪ" ಕರಿಯ ಹಲುಬುತ್ತ ದೇವನನ್ನು ತನ್ನ ಹೆಗಲ ಮೇಲೇರಿಸಿದ. ಅವನನ್ನು ಹೊತ್ತೊಯ್ಯುವುದು ಪ್ರಯಾಸದ ಕೆಲಸವೆಂದು ತಿಳಿದಿದ್ದರೂ ಈ ಗಳಿಗೆಯಲ್ಲಿ ಅವನಲ್ಲಿ ಅದಾವ ಭೀಮಶಕ್ತಿ ತುಂಬಿತ್ತೋ... ಅನಾಯಾಸವಾಗಿ ಹೊತ್ತು ಒಂದು ಕೈಯ್ಯಲ್ಲಿ ಲಾಂದ್ರ ಹಿಡಿದ. ತ್ವರೆಯಲ್ಲಿ ಮನೆ ಸೇರಬೇಕಿತ್ತು. ಆಮೇಲೆ ಮುಂದಿನ ಕೆಲಸ.

* * * * *

ಇತ್ತ ತಮ್ಮನ ಮನೆ ಸೇರಿದ ನಾಗಮ್ಮನಿಗೆ ಅಂದು ಬೆಳಗ್ಗೆಯಿಂದಲೆ ಏನೋ ಆತಂಕ, ಕಳವಳ. ಅದೇಕೋ ಕಲ್ಯಾಣಪುರ ಬಿಟ್ಟ ದಿನದಿಂದಲೂ ನೆಮ್ಮದಿಯಿಲ್ಲ ಅವರ ಮನಸ್ಸಿಗೆ. ನಿದ್ರೆಯಿಲ್ಲ ಶರೀರಕ್ಕೆ. ಸದಾನಂದನ ಚುಚ್ಚುನುಡಿ, ವ್ಯಂಗ್ಯ ಮಾತಿಗೆ ನೊಂದು ಬೆಂದಿದ್ದಾರೆ. "ಚಿನ್ನದಂತಹ ಮಗುವನ್ನು ಸಾಕಿ ಪುಣ್ಯ ಕಟ್ಟಿಕೊಂಡೆ ಬಿಡು. ನಿನ್ನನ್ನು ಈ ಇಳಿವಯಸ್ಸಿನಲ್ಲಿ ದಬ್ಬಿದ್ದಾನಲ್ಲ ಹೊರಗೆ. ನಾನಿಲ್ಲದಿದ್ದರೆ ನೀನು ದಾರಿ ಮೇಲೆ ಬೀಳಬೇಕಿತ್ತು. ಅವನಿಗೇನು, ಆಸ್ತಿ ನುಂಗಿ ನೀರು ಕುಡಿದ." ಒಮ್ಮೆ ಹೀಗೆ ಹೇಳಿದರೆ ಮತ್ತೊಮ್ಮೆ ನಾಗಮ್ಮ ಉಣಲೆಂದು ಕುಳಿತಾಗ ಬಡಿಸಲು ತಂದ ನೀರುಮಜ್ಜಿಗೆ ಕಂಡು ಸದಾನಂದ ಊಟದ ಮಧ್ಯೆ ಕ್ಯಾಕರಿಸಿದ್ದ, "ಅಷ್ಟೊಂದು ಜಾತಿದನಗಳು ಮನೆಯಲ್ಲಿದ್ದರೂ ನಿನಗೆ ನೀರುಮಜ್ಜಿಗೆಯೇ ಗತಿ ಅಕ್ಕ. ಉಣ್ಣು ಅದನ್ನೇ. ಸುದಾಮನಂತಹ ನನ್ನ ಮನೆಯಲ್ಲಿ ನುಚ್ಚಕ್ಕಿ ಅನ್ನಕ್ಕೂ ಗತಿಯಿಲ್ಲ ಅಂತ ನೆನಪಿರಲಿ."

ನಿಂತಲ್ಲಿ, ಕುಳಿತಲ್ಲಿ, ನಡೆದಲ್ಲಿ ದೇವನ ತೆಗಳಿಕೆ. ಊಟ ತಿಂಡಿಯ ಮಧ್ಯೆ ನಾಗಮ್ಮ ಕಣ್ಣೀರಿಟ್ಟರೂ ಅವನದು ಗಹಗಹಿಸುವ ನಗು. ಸ್ವಲ್ಪ ಜೊಂಪು ಹತ್ತಿದರೆ ಸಾಕು,

ದೇವನಿಗೆ ಸಾವಿರ ಶಾಪಗಳು. ತಮ್ಮನ ನೆರಳಿನಲ್ಲಿ ನೆಮ್ಮದಿ ಬಯಸಿ ಬಂದರೆ ಇಲ್ಲಿ ದೊರೆತದ್ದು ನಿಜವಾದ ನರಕಯಾತನೆ. ಸದಾನಂದ ಎಂತಹ ದುಷ್ಟನೆಂದು ತಿಳಿದದ್ದು ಈಗಲೇ. ಉರಿಯುವ ಬಾಣಲೆಗೆ ಬಿದ್ದಂತೆ ಚಡಪಡಿಸಿದರು.

ಪದೇ ಪದೇ ಬರುತ್ತಿದೆ ದೇವನ ನೆನಪು. ಅವನು ಒಂದು ದಿನವಾದರೂ ಅವರ ಮನ ನೋಯಿಸಿದ್ದುಂಟೇ? ಸ್ವರ ಏರಿಸಿ ಮಾತನಾಡಿದ್ದಾನೆಯೇ? ತಾಯಿಯೆಂಬ ಗೌರವ, ಕೃತಜ್ಞತೆಯಿದೆ ಅವನ ನಡೆ-ನುಡಿಗಳಲ್ಲಿ. "ನಿನ್ನ ಹೆಸರಿಗೆ ಎಲ್ಲಾ ಆಸ್ತಿ ಬರೆದು ಹಾಕಿ ನಾನೇ ಎಲ್ಲಿಗಾದರೂ ಹೊರಟು ಹೋಗುತ್ತೇನಮ್ಮಾ" ಎಂದಾಗ ಅವರ ಕಣ್ಣುಗಳಲ್ಲಿ ಬೆಳಕು ಮಿಂಚಿದರೂ ಅವನ ಕಣ್ಣುಗಳು ಹನಿಗೂಡಿದ್ದವು. ಅವರಿಗೆ ತಾವು ಎತ್ತಿ ಆಡಿಸಿದ, ಮುದ್ದಿಸಿ ನಲಿದ ಮಗುವಿನ ನೆನಪು ಬಾಧಿಸಿತು ಅಧಿಕವಾಗಿ. ಬಾರಿಬಾರಿಗೂ ಹೃದಯ ಅವನ ಒಳಿತನ್ನು ಹಾರೈಸಿತು ಮೌನವಾಗಿ.

"ದೇವನಿಂದ ನ್ಯಾಯವಾಗಿ ಅರ್ಧ ಆಸ್ತಿ ಬರೆಯಿಸಿಕೊಳ್ಳದ ನಿನ್ನನ್ನು ಹೇಗೆ ನೋಡಿಕೊಳ್ಳಲಿ?" ಎಂಬ ಮಾತನ್ನು ಸದಾನಂದ ಪ್ರತ್ಯಕ್ಷವಾಗಿ ಹೇಳದಿದ್ದರೂ, "ಅಕ್ಕ, ದೇವ ನಮ್ಮವನಲ್ಲವಲ್ಲ. ಅವನಿಂದ ನೀನು ಎಷ್ಟೊಂದು ಕಷ್ಟ, ಚಿಂತೆ ಪಡುವಂತಾಯಿತು. ಅವನೇ ಇಲ್ಲವಾದರೆ ಯಾವ ತೊಂದರೆಯೂ ಇಲ್ಲ. ನಿನ್ನನ್ನು, ನಿನ್ನ ಆಸ್ತಿಯನ್ನು ನೋಡಿಕೊಳ್ಳಲು ಶಶಿಧರ, ವಿಶ್ವಂಭರ ಇದ್ದಾರೆ. ಚಿಂತೆ ಬೇಡ" ಎಂದಾಗ ಬೆಚ್ಚಿದರು.

"ಏನು? ದೇವ ನಿಮಗೀಗ ಏನು ಅನ್ಯಾಯ ಮಾಡಿದ್ದಾನೆ?" ರೇಗಿದರು ತಮ್ಮನ ಮೇಲೆ. ಇವನು ತನಗೆ ಒಡಹುಟ್ಟಿದ ಸಹೋದರನಲ್ಲ, ತನ್ನ ಶತ್ರು!

"ಅಕ್ಕ", ಜಾಹ್ನವಿ ಗುಟ್ಟಾಗಿ ಅಂದಳು, "ಶಶಿಧರನನ್ನು ಬೇರೆ ನಾಲ್ಕು ಜನರ ಜೊತೆಯಲ್ಲಿ ಕಲ್ಯಾಣಪುರಕ್ಕೆ ಕಳುಹಿಸಿದ್ದಾನೆ ಸದಾನಂದ. ನನಗ್ಯಾಕೋ ಹೆದರಿಕೆ, ದೇವನಿಗೆ ಇದರಿಂದ ಖಂಡಿತ ಅಪಾಯ."

ತಲ್ಲಣಿಸಿ ಹೋದರು ನಾಗಮ್ಮ. ಸದಾನಂದ ಇಂತಹ ಕೀಳುಮಟ್ಟಕ್ಕೆ ಇಳಿದನೇ? ಅವನಿಗೆ ಬೇಕಾದದ್ದು ಜನರಲ್ಲ, ಕೇವಲ ಹಣ-ಸಂಪತ್ತು ಒಂದೇ. ತಾನೆಂತಹ ಮೋಸಕ್ಕೆ ಬಲಿಯಾಗಿಹೋದೆ. ಇಲ್ಲ, ದೇವ ಎಂಥವನೇ ಆಗಿರಲಿ, ಅವನನ್ನು ಕಳೆದುಕೊಳ್ಳಲು ತಾವು ಸಿದ್ಧರಿಲ್ಲ. ಅವನ ನರನಾಡಿಗಳಲ್ಲಿ ಹರಿಯುತ್ತಿರುವುದು ತಮ್ಮ ಪತಿಯ ಚೈತನ್ಯ, ಉತ್ಸಾಹ, ಶಕ್ತಿ, ಅವರದೇ ಧೀಮಂತ ವ್ಯಕ್ತಿತ್ವ!

ತಡಮಾಡದೆ ಆ ಬೆಳಗ್ಗೆಯೇ ಸದಾನಂದನಿಗೆ ತಿಳಿಸದೆ ಹೊರಟುಬಿಟ್ಟರು. ಮುಂದೇನು ಅನಿಷ್ಟ ಗಳಿಗೆ ತಮಗಾಗಿ ಕಾದಿದೆಯೋ... ವಿಧವೆಯಾದ ಸುನೀತಿ, ತಂದೆಯನ್ನು ಕಳೆದುಕೊಂಡ ಕೃಷ್ಣ-ವಿಷ್ಣುವನ್ನು ತಾವು ನೋಡಬಾರದು. ತಾವಾಗಿಯೇ ಮನೆ ತುಂಬಿಸಿಕೊಂಡ ಹುಡುಗಿಗೆ ಅನ್ಯಾಯವಾಗಬಾರದು. ಅದಕ್ಕಿಂತ ಮಿಗಿಲಾಗಿ ದೇವರಂತಿದ್ದ ದೇವ, ತನ್ನ ವಾಸುದೇವ... ಅಮ್ಮಾ ಎಂದು ಗಳಿಗೆ ಗಳಿಗೆಗೂ ಕರೆಯುವ ತನ್ನ ವಾಸುದೇವನನ್ನು ತಾನೆಂದೂ ಕಳೆದುಕೊಳ್ಳಬಾರದು...

ಮನೆಯಿಂದ ಹೊರಟವರು ನೇರವಾಗಿ ಉಪ್ಪಿನಂಗಡಿಗೆ ಬಂದು ಸುನೀತಿ ಮತ್ತು ಮಕ್ಕಳನ್ನು ಹೊರಡಿಸಿಕೊಂಡು ಸುರಿಯುವ ಮಳೆಯನ್ನೂ ಲೆಕ್ಕಿಸದೆ ಬಂದು ತಲುಪಿದರು ಕಲ್ಯಾಣಪುರಕ್ಕೆ. ಸುನೀತಿಗೆ ಎಲ್ಲಿಲ್ಲದ ವಿಸ್ಮಯ. ದೇವ ತನ್ನನ್ನು ಕರೆದೊಯ್ಯಲು ಬರುತ್ತಾನೆಂದು ನಿರೀಕ್ಷಿಸುತ್ತಿದ್ದರೆ ಬಂದವರು ಅವಳ ಅತ್ತೆ! ಅವರ ಕಳೆಗುಂದಿದ ಮುಖದಲ್ಲಿ ಉತ್ಸಾಹ ಬತ್ತಿಹೋಗಿತ್ತು. ಆದರೆ ತನ್ನ ಬಗ್ಗೆ ಅಸಮಾಧಾನವಿಲ್ಲದ್ದನ್ನೂ ಗಮನಿಸಿದಳು ಸೂಕ್ಷ್ಮವಾಗಿ. ದಾರಿಯುದ್ದಕ್ಕೂ ಅವಳು ಏನನ್ನೂ ಕೇಳಲಿಲ್ಲ. ಅವರೂ ಮೌನವಾಗಿದ್ದರು.

ಮನೆ ತಲುಪಿದಾಗ ಈ ಹೊತ್ತಿನಲ್ಲಿ ದೇವ ಮನೆಯಲ್ಲಿರುತ್ತಾನೆ ಎಂದೇ ಅವರ ಎಣಿಕೆ. ಆದರೆ ನಿಶ್ಶಬ್ದ ಮನೆ ಸ್ವಾಗತಿಸಿತು. ಅತ್ತೆ-ಸೊಸೆ ಮೌನವಾಗಿ ಕಾಲಿರಿಸಿದರು ಒಳಗೆ. ಕತ್ತಲೆ ತುಂಬಿದ ಮನೆಯಲ್ಲಿ ಬೆಳಗಿತು ದೀಪ. ಬಟ್ಟೆ ಬದಲಿಸಿ ಮಕ್ಕಳಿಗಾಗಿ ಹಾಲು ಕಾಯಿಸಲು ಸುನೀತಿ ಅಡಿಗೆಕೋಣೆ ಸೇರಿದಳು. ನಾಗಮ್ಮ ನಿರೀಕ್ಷಿಸುತ್ತ ಕುಳಿತರು ಮಗನಿಗಾಗಿ. ಇನ್ನೇನು ಸ್ವಲ್ಪ ಹೊತ್ತಿನಲ್ಲಿ ದೇವ ಬರುತ್ತಾನೆ, ತಮ್ಮನ್ನು ನೋಡಿ ಅಚ್ಚರಿಪಡುವ ಸರದಿ ಅವನದು. ಆಗ ಅವನ ನಗುತುಂಬಿದ ಕಣ್ಣುಗಳಲ್ಲಿ ತಾವು ಕರಗಿಹೋಗಬೇಕು.

ಅರ್ಧಗಂಟೆ ಕಳೆದಿರಬಹುದು. ಹೊರಗೆ ಕೇಳಿಸಿತು ಕರಿಯನ ಸ್ವರ. ನಾಗಮ್ಮ ಬಂದು ನೋಡುತ್ತಾರೆ. ಕರಿಯ ಕತ್ತಲೆಯಲ್ಲಿ ಬಗ್ಗಿಕೊಂಡು ಬರುತ್ತಿದ್ದಾನೆ. ಅವನ ಒಂದು ಕೈಯಲ್ಲಿ ಬೆಳಗುತ್ತಿರುವ ಲಾಂದ್ರ. ಅರೆ, ಅದೇನು ಅವನ ಮೈಮೇಲೆ? ದೇವನನ್ನು ಹೊತ್ತುತರುತ್ತಿದ್ದಾನೆಯೆ? ಕರಿಯ ಲಾಂದ್ರವನ್ನು ಕೆಳಗಿರಿಸಿ ಹೊರಜಗಲಿಯ ಮೇಲೆ ದೇವನನ್ನು ಇಳಿಸಿ ಮೆಲ್ಲನೆ ಮಲಗಿಸಿದ. ಅವನ ರಕ್ತಸಿಕ್ತ ಶರೀರವನ್ನು ನೋಡಿದ ನಾಗಮ್ಮ ಚಿಟ್ಟನೆ ಚೀರಿದರು. ಸುನೀತಿ ಧಾವಿಸಿ ಓಡಿಬಂದಳು ಹೊರಗೆ.

"ಸಮಯಕ್ಕೆ ಸರಿಯಾಗಿ ಬಂದಿರಿ ಅಮ್ಮಾ. ಯಾರೋ ಕೇಡಿಗಳು ಹೊಡೆದು ಹಾಕಿದ್ದಾರೆ" ಏದುಸಿರು ಬಿಡುತ್ತ ಅಂದ ಕರಿಯ, "ನಾನು ತೋಟಕ್ಕೆ ಹೋಗದಿದ್ದರೆ ಏನಾಗ್ತಿತ್ತೋ ಇವರ ಅವಸ್ಥೆ. ಒಳಗೆ ಮಲಗಿಸಿ. ಈಗಲೇ ಕೆಳಮನೆ ಅರ್ಚಕರಿಗೆ ಸುದ್ದಿ ತಿಳಿಸಿ ಡಾಕ್ಟರ್‌ರನ್ನು ಕರೆದು ತರ್‍ತೇನೆ" ಎಂದು ಉತ್ತರಕ್ಕೂ ಕಾಯದೆ ಲಾಂದ್ರ ಎತ್ತಿಕೊಂಡು ಓಡಿದ ಮಳೆಯಲ್ಲಿ.

## ೧೮

ದೇವನಿಗೆ ಈ ಸಮಯದಲ್ಲಿ ಬೇಕಾದದ್ದು ವೈದ್ಯಕೀಯ ಸಹಾಯ. ಕಲ್ಯಾಣಪುರದ ಪೇಟೆಯ ಮಧ್ಯೆ ಡಾ। ಮಧುಸೂಧನ, ಡಾ। ಪ್ರಸಾದ್ ಇಬ್ಬರಿದ್ದಾರೆ ಸುರಿತಹಸ್ತದ ವೈದ್ಯರು. ಈ ಹೊತ್ತಿನಲ್ಲಿ ಯಾರು ಬಂದರೂ ಆದೀತು. ಆದರೆ ಕರೆತರುವವರು ಬೇಕಲ್ಲ. ಕರಿಯ ಕೆಳಮನೆ ಅರ್ಚಕರಲ್ಲಿ ಓಡಿಬಂದ.

"ಸಣ್ಣಯ್ಯನವರನ್ನು ಯಾರೋ ಹೊಡೆದುಹಾಕಿದ್ದಾರೆ. ಬೇಗ ಹೋಗಿ ಡಾಕ್ಟರ್‌ರನ್ನು ಕರ್‍ಕೊಂಡು ಬರ್ತೀರಾ?" ನಡುಗುತ್ತ ಕೇಳಿದ ಅರ್ಚಕರನ್ನು.

"ಸತ್ತಿದ್ದಾನೋ, ಬದುಕಿದ್ದಾನೋ?" ಅರ್ಚಕರ ಪ್ರಶ್ನೆ.

"ಪ್ರಜ್ಞೆ ಇಲ್ಲ. ಹ್ಯಾಗಾದರೂ ಅವರ ಜೀವ ಉಳಿಸಿಕೊಡಿ."

"ವಿಪರೀತ ಮಳೆ. ನಮ್ಮಿಂದ ಸಾಧ್ಯವಿಲ್ಲ" ರಪ್ಪನೆ ಮುಚ್ಚಿತು ಅವರ ಮನೆಬಾಗಿಲು. ನಿಜವಾಗಿಯೂ ಹೆದರಿದ್ದರು. ಅರ್ಚಕರು. ಯಾರೋ ಹೊಡೆದು ಸತ್ತುಹೋಗಿದ್ದರೆ ತಮಗೆಲ್ಲಿ ಗ್ರಹಚಾರ ಅಂಟಿಕೊಳ್ಳುತ್ತದೋ ಎಂದುಕೊಂಡಿರಬೇಕು. ಬೇರೇನೂ ಕೇಳುವ ಪಾಪಕ್ಕೆ ಹೋಗಲಿಲ್ಲ.

ಕರಿಯ ಅಲ್ಲಿಂದ ಓಡಿದ ಬಾಬಣ್ಣನ ಮನೆಗೆ. ಬಾಬಣ್ಣ ಎಲ್ಲಾ ತನಿಖೆ ಮಾಡುತ್ತ, "ಹೊಡೆದು ಕೊಂದುಬಿಟ್ಟಿದ್ದಾರಾ? ಇನ್ನು ಹತ್ತಿರ ಹೋದರೆ ಪೊಲೀಸರು ನಮ್ಮನ್ನು ಗಬಕ್ಕನೆ ಹಿಡ್ಕೋತಾರೆ. ನೀನೇ ಹೋಗು ಡಾಕ್ಟರರ ಮನೆಗೆ" ಎಂದವ ಬಾಗಿಲನ್ನು ಮುಚ್ಚಿಕೊಂಡ.

ಕರಿಯನಿಗೇ ಹೋಗಬಹುದಿತ್ತು. ಪಾಪ, ದೊಡ್ಡವರೆದುರು ನಾಲ್ಕು ಅಕ್ಷರ ಉಚ್ಚರಿಸದ ಪೆದ್ದ. ಸೀದಾ ಓಡಿದ ರಾಮ ನಾಯ್ಕನ ಮನೆಗೆ. ಕಳೆದ ವರ್ಷ ದೇವನಿಂದ ಹಲವು ಸಹಾಯ ಪಡೆದ ರಾಮ ನಾಯ್ಕ ಮುಖ ತಿರುಗಿಸಿದ, "ನಮಗ್ಯಾಕೆ ಅವನ ಚಿಂತೆ. ಹೋಗಪ್ಪ ಹೋಗು."

ರೇಗಿದ ಕರಿಯ ಶ್ರೀನಿವಾಸಾಚಾರಿ ಮನೆಗೆ ಬಂದರೆ ಅಲ್ಲಿಯೂ ಅದೇ ಹಾಡು. "ಅವನಿಗೆ ತಕ್ಕ ಶಾಸ್ತಿಯಾಯ್ತು ಬಿಡು. ಹೋದರೆ ಹೋಗಲಿ."

ಕರಿಯ ಕ್ರೋಧದಿಂದ ಉರಿದುಹೋದ. ಸಮಯದಲ್ಲಿ ಸಹಾಯ ಮಾಡದ ಕೃತಘ್ನರು ಎಲ್ಲರೂ. ದೇವನಿಂದ ಹಲವು ಸಹಾಯ ಪಡೆದು, ಅವನ ಬಗ್ಗೆ ಹೆಮ್ಮೆ ತಳೆದ ಜನರೆಲ್ಲ ಇವತ್ತೇಕೋ ಮುಖ ತಿರುಗಿಸಿದ್ದಾರೆ. ಅವನ ಮೈಯೆಲ್ಲ ಮರಗಟ್ಟಿದಂತಾಗಿ ಓಡುತ್ತ ತನ್ನ ಗುಡಿಸಲಿಗೆ ಬಂದು ತನ್ನ ಪ್ರಾಯದ ಮಗ ಬೊದ್ದಣ್ಣನನ್ನು ಎಬ್ಬಿಸಿದ.

"ಬೇಗ ಹೋಗಿ ಡಾಕ್ಟರರನ್ನು ಕರ್‍ಕೊಂಡು ಬಾ ಬೊದ್ದೂ. ಯಾರೋ ಹೊಡೆದು ನಮ್ಮ ಸಣ್ಣಯ್ಯನವರು ಮೈಯೆಲ್ಲ ರಕ್ತವಾಗಿ ಬಿದ್ದಿದ್ದಾರೆ. ಬೇಗ ಹೋಗಿ ಬಾ."

ಬೊದ್ದಣ್ಣನ ನಿದ್ರೆ ಹಾರಿಹೋಯಿತು. ಅಂಗಿಯನ್ನು ತಿರುಗಿಸಿ ಹಾಕಿಕೊಳ್ಳುತ್ತ ಡಾ। ಮಧುಸೂಧನರನ್ನು ಕರೆತರಲು ಧಾವಿಸಿದ. ಕರಿಯ ಕತ್ತಲೆಯಲ್ಲಿ ಏಳುತ್ತ ಬೀಳುತ್ತ ದೇವನ ಮನೆಗೆ ಬಂದಾಗ ಅಲ್ಲಿ ಆಗಲೇ ಎಂಟು-ಹತ್ತು ಜನ ಸೇರಿಬಿಟ್ಟಿದ್ದಾರೆ. ತಾವು ಯಾರೂ ಬರುವುದಿಲ್ಲವೆಂದ ಅರ್ಚಕರು, ರಾಮನಾಯ್ಕ, ಶ್ರೀನಿವಾಸಾಚಾರಿ, ಬಾಬಣ್ಣ ಇನ್ನೂ ಅನೇಕರಿದ್ದಾರೆ. ಎಲ್ಲರ ಮುಖದ ಮೇಲೆ ಆತಂಕದ ಭಾವ.

ಅಷ್ಟರಲ್ಲಿ ಮಳೆಯನ್ನು ಸೀಳಿಕೊಂಡು ಬಂದಿತು ಒಂದು ಕಾರು. ಅದರಲ್ಲಿ ಬಂದವರು ಡಾ। ಪ್ರಸಾದ. ಅವರ ಜೊತೆ ಕೆಳಮನೆ ಅರ್ಚಕರ ಮಗನಿದ್ದ. ಮತ್ತೆ ಐದು ನಿಮಿಷದಲ್ಲಿ ಇನ್ನೊಂದು ಕಾರಿನಲ್ಲಿ ಬಂದಿಳಿದರು ಡಾ। ಮಧುಸೂಧನ. ಜೊದ್ದಣ್ಣ ಬಂದು ಹೇಳಿದಾಕ್ಷಣ ಹೊರಟು ಬಂದಿದ್ದಾರೆ. ಇಬ್ಬರು ವೈದ್ಯರನ್ನು ಏಕಕಾಲದಲ್ಲಿ ನೋಡಿದ ಎಲ್ಲರ ಮುಖಗಳೂ ಅರಳಿದವು. ಅವರ ಚಿಕಿತ್ಸೆಯ ಸಿದ್ಧತೆಗಳೂ ನಡೆದವು. ನಾಗಮ್ಮ ದೇವರಿಗೆ ತುಪ್ಪದ ದೀಪ ಹಚ್ಚಿಡುತ್ತ, "ದೇವ ಮೊದಲಿನಂತೆ ಸರಿಯಾದರೆ ಊರ ಬಡಬಗ್ಗರಿಗೆ, ಹರಿಜನರಿಗೆ ಅನ್ನಸಂತರ್ಪಣೆ ಮಾಡಿಸುತ್ತೇನೆ" ಎಂದೂ ಬೇಡಿಕೊಂಡರು.

ಇಬ್ಬರು ವೈದ್ಯರು ಸೇರಿ ಚಿಕಿತ್ಸೆ ಪ್ರಾರಂಭಿಸಿದರು. ಶರೀರದ ಎಲ್ಲ ಭಾಗಗಳಿಗೆ ಏಟು ಬಿದ್ದಿದ್ದರೂ ಮೂಳೆಗಳು ಮುರಿದಂತೆ ಕಾಣಲಿಲ್ಲ. ಅದು ಅವನ ಪುಣ್ಯ. ಶರೀರಕ್ಕೆ ಬಿದ್ದ ಏಟಿನಿಂದಲೂ, ತಲೆಗೆ ಬಿದ್ದ ಹೊಡೆತದಿಂದಲೂ ಪ್ರಜ್ಞೆ ತಪ್ಪಿತ್ತು. "ಪ್ರಜ್ಞೆ ಬಾರದ ಹೊರತು ನಾವೇನೂ ಹೇಳಲಾರೆವು" ಎಂದರು ಡಾ। ಮಧುಸೂಧನ. ಹಲವು ಚುಚ್ಚುಮದ್ದುಗಳನ್ನೂ ಕೊಡಲಾಯಿತು.

ಸುಮಾರು ಒಂದೂವರೆ ತಾಸುಗಳ ನಂತರ ದೇವನಿಗೆ ಪ್ರಜ್ಞೆ ಮರಳಿತು. ನಿಧಾನವಾಗಿ ಕಣ್ತೆರೆದ. ಮೈಕೈ ತಲೆ ಎಲ್ಲಾ ಅಸಹನೀಯ ನೋವು. ನೋವಿನಿಂದ ಮುಲುಗುತ್ತ ಸುತ್ತಲೂ ನೋಡಿದ.

ಗಾಯಗಳಿಗೆ ಬ್ಯಾಂಡೇಜ್ ಮಾಡಲು ಸಿದ್ಧರಾದ ಡಾ। ಪ್ರಸಾದರು ಡಾ। ಮಧುಸೂಧನರ ಕೈಕುಲುಕಿದರು, "ಇನ್ನೇನು ತೊಂದರೆ ಇಲ್ಲವಲ್ಲ."

"ಇಲ್ಲ ಎನಿಸುತ್ತೆ. ಆದರೂ ಒಂದು ಡೋಸ್ ಔಷಧಿ ಕೊಡೋಣ. ಚೆನ್ನಾಗಿ ನಿದ್ದೆ ಮಾಡಲಿ."

ಔಷಧಿಯಾಯಿತು. ತಲೆಗೆ, ಶರೀರದ ಗಾಯಗಳಿಗೆ ಬ್ಯಾಂಡೇಜ್ ಬಿಗಿಯಲಾಯಿತು. ಇಬ್ಬರು ವೈದ್ಯರೂ ದೇವನಿಗೆ ಶುಭಕೋರುತ್ತ "ನಾಳೆ ಬೆಳಗ್ಗೆ ಬಂದು ನೋಡುತ್ತೇವೆ" ಎಂದಂದು ಹೊರಟುಹೋದರು. ಅರ್ಚಕರ ಹೊರತಾಗಿ ಉಳಿದವರು ನೆಮ್ಮದಿಯ ನಿಟ್ಟುಸಿರು ತೆಗೆದು ತೆರಳಿದರು ಅಲ್ಲಿಂದ.

ಮರುದಿನ ಬೆಳಗ್ಗೆ ಕಲ್ಯಾಣಪುರದಲ್ಲೆಲ್ಲ ಗುಲ್ಲೋ ಗುಲ್ಲು. ಜನರು ನಾನು ತಾನು ಎನ್ನುತ್ತ ಧಾವಿಸಿ ಬರಲಾರಂಭಿಸಿದರು ದೇವನ ಮನೆಯತ್ತ. ಮೈತುಂಬ ಪಟ್ಟಿ ಕಟ್ಟಿಸಿಕೊಂಡು ನೋವಿನಿಂದ ನರಳುತ್ತಿದ್ದವನನ್ನು ಕಂಡು ಕನಿಕರದ ಮಹಾಪೂರ ಉಕ್ಕಿ ಹರಿಯಿತು. ಹರಿಜನ ಸಂಘದಲ್ಲಿ ನಸುಕಿನಿಂದಲೇ ವಿಶೇಷ ಭಜನೆ.

ಹತ್ತು ಗಂಟೆಯ ಹೊತ್ತಿಗೆ ಡಾ। ಮಧುಸೂಧನ, ಡಾ। ಪ್ರಸಾದ ಬಂದಾಗ ನಾಗಮ್ಮ ಅವರನ್ನು ತಾವೇ ಎದುರುಗೊಂಡು ಗುಟ್ಟಾಗಿ ಏನನ್ನೋ ಹೇಳುತ್ತ, "ಅವನನ್ನು ಹಾಗೇ ಬಿಟ್ಟರೆ ಇನ್ನೇನಾದರೂ ಅನಾಹುತ ಆದೀತು. ನೀವು ಪೊಲೀಸರಿಗೆ ದೂರುಕೊಡಿ. ಸಾಕ್ಷಿಗೆ

ನಾನಿದ್ದೇನೆ. ಅವನು ಇಲ್ಲಿಂದ ಹೊರಟುಹೋಗುವ ಮುನ್ನ ಬಂಧಿಸುವುದು ಒಳಿತು" ಎಂದರು.

ಅಲ್ಲೇ ನಿಂತಿದ್ದ ಸುನೀತಿ ವಿಸ್ಮಿತಳಾಗಿಹೋದಳು. ಇಷ್ಟು ಬೇಗ ಅತ್ತೆ ಬದಲಾಗಿ ಹೋದರೇ? ದೇವನ ಮೇಲಿನ ಅಸಮಾಧಾನ ಪಶ್ಚಾತ್ತಾಪಕ್ಕೆ ತಿರುಗಿ ಹಿಂದಿರುಗಿ ಬಂದಿದ್ದಾರೆ! ಅವಳ ಕಣ್ಣುಗಳು ಮಂಜಾಗಿ ಹಾಸಿಗೆಯೊರಗಿದ ದೇವನನ್ನು ನೋಡಿದವು. ಜಾತಿ-ಮತ ನೋಡದೆ ನಿನ್ನೆ ರಾತ್ರೆ ಎಷ್ಟೆಲ್ಲ ಜನರು ದೇವನ ಸಹಾಯಕ್ಕೆ ಬಂದಿದ್ದರು. ಈ ದಿನವೂ ಎಲ್ಲೆಲ್ಲಿಂದಲೋ ಬರುತ್ತಿದ್ದಾರೆ ಅವನನ್ನು ನೋಡಲು. ಎಲ್ಲರ ಮುಖದ ಮೇಲೆ ವಿಷಾದದ ಛಾಯೆ. ಕಳಕಳಿ, ಸಹಾನುಭೂತಿಯ ನುಡಿಗಳು. ನಿಜ, ಪರಿಶುದ್ಧ ವ್ಯಕ್ತಿತ್ವಕ್ಕೆ, ಪರೋಪಕಾರಿ ಜೀವಕ್ಕೆ ನಿಸ್ವಾರ್ಥ ದುಡಿಮೆಗೆ ಎಣೆಯಿಲ್ಲದಷ್ಟು ಬೆಲೆ!

ಡಾ। ಮಧುಸೂಧನ ದೇವನನ್ನು ಪರೀಕ್ಷಿಸಿ ಚುಚ್ಚುಮದ್ದನ್ನೂ ಕೊಟ್ಟು 'ನಾಲ್ಕು ದಿನ ಹಾಸಿಗೆ ಬಿಟ್ಟು ಏಳಬೇಡಿ' ಎಂದರು. ಡಾ। ಪ್ರಸಾದರು ಹಾಸಿಗೆ ಬದಿಯಲ್ಲಿ ಕುಳಿತು ಬಹಳ ಹೊತ್ತು ಅವನ ತಲೆಯ ಹಿಂಭಾಗ ಪರೀಕ್ಷಿಸಿದರು. ಏಟು ಜೋರಾಗಿ ಬಿದ್ದು ದೊಡ್ಡ ಗಾಯವಾಗಿದ್ದರೂ ಬೇರೇನೂ ಅಪಾಯವಾಗದಿದ್ದದ್ದು ಅವನ ಪುಣ್ಯ. ಆದರೂ ಒಮ್ಮೆ ತಮ್ಮ ಕ್ಲಿನಿಕ್‌ನಲ್ಲಿ ಎಕ್ಸರೆ ತೆಗೆಯುವುದು ಒಳಿತು ಎಂದೂ ತಿಳಿಸಿದರು ಡಾ। ಮಧುಸೂಧನರಿಗೆ. ಮತ್ತೊಮ್ಮೆ ಬ್ಯಾಂಡೇಜ್‌ಗಳನ್ನು ಸರಿಯಾಗಿ ಕಟ್ಟಿ, ಔಷಧಿಯನ್ನೂ ಕೊಟ್ಟು "ಸಾಯಂಕಾಲ ಇನ್ನೊಮ್ಮೆ ಬಂದು ನೋಡುತ್ತೇವೆ" ಎಂದು ಹೊರಟು ಹೋದರು.

"ಔಷಧಿ ಕುಡಿಯುವ ಮೊದಲು ಒಂದಷ್ಟು ಹಾಲು, ಗಂಜಿ ಕುಡಿ. ಹಾಯಾಗಿರುತ್ತದೆ." ವೈದ್ಯರಿಬ್ಬರೂ ಹೋದ ಮೇಲೆ ನಾಗಮ್ಮ ತಾವೇ ಸಿದ್ಧಪಡಿಸಿಟ್ಟ ಅವನ ಆಹಾರ ತರಲು ಒಳಗೆ ಹೋದಾಗ ದೇವ ಸುನೀತಿಯತ್ತ ಹೊರಳಿದ,

"ಅಮ್ಮ ಬಂದದ್ದು ಯಾವಾಗ?"

"ನಿನ್ನೆ ನಾವೆಲ್ಲರೂ ಒಟ್ಟಿಗೇ ಬಂದೆವು. ಅತ್ತೆ ರಾತ್ರೆಯೆಲ್ಲ ನಿಮ್ಮ ಹಾಸಿಗೆ ಬದಿಯಿಂದ ಆಚೆ ಈಚೆ ಸರಿದಿಲ್ಲ. ಬಹಳ ಕಂಗಾಲಾಗಿಹೋಗಿದ್ದಾರೆ. ಇನ್ಮೇಲೆ ಇಲ್ಲೇ ಇರುತ್ತಾರಂತೆ."

ದೇವನ ಕಣ್ಣುಗಳಲ್ಲಿ ಸಹಸ್ರ ಮಿಂಚುಗಳ ಬೆಳಕು.

"ನಿಮ್ಮನ್ನು ಈ ಅವಸ್ಥೆಗೆ ತಂದ ಶಶಿಧರನನ್ನು ಹಿಡಿಯಲು ಪೊಲೀಸರಿಗೆ ದೂರು ಕೊಡಿ ಎಂದಿದ್ದಾರೆ ಅತ್ತೆ. ಡಾಕ್ಟರರಿಬ್ಬರೂ ಒಪ್ಪಿದ್ದಾರೆ. ಈಗ ನೀವು ಹೇಗಿದ್ದೀರಿ?" ಕೇಳಿದಳು ಬದಿಯ ಮುಚ್ಚಿದ ಕಿಟಕಿಯ ಬಾಗಿಲನ್ನು ಸಂಪೂರ್ಣ ತೆರೆಯುತ್ತ.

ಮಂದಹಾಸ ಬೀರಿದವನು ಸುನೀತಿಯ ಬಲಗೈ ಹಿಡಿದು ಕಣ್ಣಿಗೊತ್ತಿಕೊಂಡ. ಕಟ್ಟಿದ ಬ್ಯಾಂಡೇಜ್‌ನಲ್ಲಿ ಮೈಯೆಲ್ಲ ಅಸಾಧ್ಯ ನೋವು. ತಲೆಯೆಲ್ಲ ಸಿಡಿತ, ಭಾರ. ಈ ದೇಹ

ತನ್ನದಲ್ಲ ಎಂಬ ಅನಿಸಿಕೆ. ಆದರೆ ಹೂವಿಗಿಂತಲೂ ಹಗುರವಾಗಿದೆ ಹೃದಯ. ದೇಹದ ನೋವು ಮರೆಯಾಗುತ್ತಿದೆ. ಏನಿದು ಸಂತೋಷ, ಉಲ್ಲಾಸ! ಎಲ್ಲ ಕಡೆಗೂ ಸುಗಂಧದ ಹೂಗಳ ರಾಶಿಯೇ ಚೆಲ್ಲಿಹೋಗಿದೆ.

ಅಷ್ಟರಲ್ಲಿ ಹಾಲುಗಂಜಿ ತಂದ ನಾಗಮ್ಮ ಅದನ್ನು ಚಮಚದಲ್ಲಿ ತಾವೇ ತಿನ್ನಿಸಲು ಅವನ ಬದಿಯಲ್ಲಿ ಕುಳಿತಾಗ ದೇವನಿಗೆ ಬಹಳ ವರ್ಷಗಳ ಹಿಂದಿನ ಮಧುರವಾದ ಹಾಡು ನೆನಪಾಯಿತು.

*"ಆಡಿಸಿದಳು ಯಶೋದಾ, ಜಗದೋದ್ಧಾರನಾ..."*

ಅವನ ಮನದ ಭಾವ ಅರಿತವರಂತೆ ನಾಗಮ್ಮನೂ ಅದೇ ಹಾಡನ್ನು ಗುನುಗುಟ್ಟಿದರು. ಹತ್ತಿರ ಕುಳಿತ ಕೃಷ್ಣನ ಕೆನ್ನೆ ತಟ್ಟಿ ನಕ್ಕರು.

ರಾತ್ರಿಯೆಲ್ಲ ಮಳೆ ಸುರಿದಿದ್ದರೂ ಇಂದು ಬೆಳಿಗ್ಗೆ ಮೋಡಗಳೆಲ್ಲ ಚದುರಿ ಬಿಸಿಲು ಬಹಳ ಮೋಹಕವಾಗಿ ಮೋಡಿಹಾಕುತ್ತಿತ್ತು. ಕೊಳೆ ತೊಳೆದಂತೆ ಶುಭ್ರವಾದ ಪ್ರಕೃತಿ ಹೊಸ ಚೇತನ ಪಡೆದಿತ್ತು.

# ಈ ಕೃತಿಯನ್ನು ಕುರಿತು

ನಮ್ಮ ದೇಶವನ್ನು ಕಾಡುತ್ತಿರುವ ಜಾತೀಯ ಸಮಸ್ಯೆ, ಮೇಲು-ಕೀಳು, ಬ್ರಾಹ್ಮಣ-ಶೂದ್ರ ಮುಂತಾದ ಅಂತರದ ಗೋಡೆಗಳನ್ನು ಕೆಡವಿ ಮಾನವೀಯತೆಯ ಸರ್ವಶ್ರೇಷ್ಠತೆಯನ್ನು ಎತ್ತಿ ತೋರುವ ಪ್ರಯತ್ನ ಈ ಕಾದಂಬರಿಯಲ್ಲಿದೆ. ಕಾದಂಬರಿಯ ಕೇಂದ್ರಪಾತ್ರವಾದ ವಾಸುದೇವನ ಮಾನಸಿಕ ತುಮುಲ, ಸಂಪ್ರದಾಯನಿಷ್ಠರ ಔದಾಸೀನ್ಯ-ತಿರಸ್ಕಾರಗಳು, ಸ್ವಾರ್ಥಲಾಲಸೆಯ ಹೀನ ಬುದ್ಧಿ, ಹಳ್ಳಿಯ ಜನಜೀವನದ ಒಳಸುಳಿಗಳು, ರಚನಾತ್ಮಕ ಉದ್ಧಾರಕಾರ್ಯ ಇತ್ಯಾದಿ ಇಲ್ಲಿ ಮಾರ್ಮಿಕವಾಗಿ ತೆರೆದುಕೊಳ್ಳುತ್ತವೆ.

ರೂಢಮೂಲವಾದ ಸಂಪ್ರದಾಯಬದ್ಧ ಸಮಾಜದಲ್ಲಿ ಕಂಡುಬರುವ ಸಮಸ್ಯೆಗಳಿಗೆ ಗಾಂಧೀಜಿಯವರು ಕಂಡುಕೊಂಡ ಆದರ್ಶದ ಕಲ್ಪನೆಯನ್ನು ಸಮಾಜಜೀವನದಲ್ಲಿ ಅಳವಡಿಸಿಕೊಂಡಾಗ ಸಂಪ್ರದಾಯಬದ್ಧ ಸಮಾಜ ಮತ್ತು ಸಂಸಾರಗಳಲ್ಲಿ ಉದ್ಭವಿಸಬಹುದಾದ ಸಂಘರ್ಷಗಳಿಗೆ ಪರಿಹಾರವನ್ನು ಕಂಡುಕೊಳ್ಳುವಲ್ಲಿ ಲೇಖಕಿ ಈ ಕೃತಿಯಲ್ಲಿ ಹೊಸ ಕಲ್ಪನೆಯನ್ನು ನೀಡಿದ್ದಾರೆ. ಕಾದಂಬರಿಯ ಗ್ರಾಮೀಣ ಪರಿಸರದ ಚಿತ್ರಣ, ಚಿಂತನೆಗಳು ಓದುಗರನ್ನು ಹೊಸ ನಿಟ್ಟಿನಲ್ಲಿ ಯೋಚಿಸುವಂತೆ ಮಾಡಬಲ್ಲುದೆಂದು ನಾನು ನಂಬಿದ್ದೇನೆ.

-ಪ್ರೊ। ವಿ. ಬಿ. ಮೊಳೆಯಾರ